ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 18 ಸಂಚಿಕೆ 1-2

(ಸಂಯುಕ್ತ ಸಂಚಿಕೆ)

ಜನವರಿ-ಜೂನ್ 1989

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore UniversityBangalore
Vol. 18. Nos. 1 & 2, January to June 1989

೪. ೧. ೯೦

ವಾರ್ಷಿಕ ಚಂದಾ : ರೂ. 8–00
ರೂ. 5–00 (ವಿದ್ಯಾರ್ಥಿಗಳಿಗೆ)

ಆಜೀವ ಸದಸ್ಯತ್ವ : ರೂ. 100–00

ಪ್ರಕಾಶಕರು : ಡಾ. ಕೆ. ವಿ. ನಾರಾಯಣ
ನಿರ್ದೇಶಕ, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಮುದ್ರಣ : ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560 056

ಪರಿವಿಡಿ

ಮಂಥನ

ಗೋವೆಯ ಕದಂಬ ಶಿವಚಿತ್ತ ಪೆರ್ಮಾಡಿದೇವನ ಹಾಳಸೀಗಿಕಟ್ಟೆಯ ಅಪ್ರಕಟಿತ ಶಾಸನ

ಡಾ. ಬಿ. ಆರ್. ಹಿರೇಮಠ್
ಡಾ. ಎಸ್. ಪಿ. ಪಾಟೀಲ

ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಮುತ್ತಗಿ ಗ್ರಾಮದಿಂದ ಪಶ್ಚಿಮಕ್ಕೆ ಸುಮಾರು 2 ಕಿಲೋಮೀಟರ್ ಅಂತರದಲ್ಲಿ ಹಾಳಸೀಗಿಕಟ್ಟೆ ಗ್ರಾಮವಿದೆ. ಈಗ ಇಲ್ಲಿ ಜನವಸತಿ ಇರುವುದಿಲ್ಲ. ಇಲ್ಲಿಯ ಬಸವಣ್ಣದೇವರ ಗುಡಿಯ ಮಗ್ಗುಲಲ್ಲಿ ಪ್ರಸ್ತುತ ಶಿಲಾಶಾಸನವಿದೆ. ಈ ಶಾಸನ ಇಲ್ಲಿಯವರೆಗೂ ಪ್ರಕಟವಾಗಿಲ್ಲ. 27-7-1987 ರಂದು ನಾವು ಈ ಗ್ರಾಮಕ್ಕೆ ಹೋಗಿ, ತೆಗೆದುಕೊಂಡು ಬಂದ ಪಡಿಯಚ್ಚಿ (Estampage) ನಿಂದ ಇಲ್ಲಿಯ ಶಾಸನಪಠ್ಯ ಸಿದ್ಧಪಡಿಸಿದ್ದೇವೆ.

ಈ ಶಿಲಾಶಾಸನ ಅತ್ಯಂತ ಸಂರಕ್ಷಿತವೂ ಸುಸ್ಪಷ್ಟವೂ ಆದುದಾಗಿದೆ. ಕ್ರಮೇಣ ಬಿಸಿಲು, ಮಳೆಗಳಿಂದ ಆಘಾತಕ್ಕೊಳಗಾಗುವ ಸಾಧ್ಯತೆಯೂ ಇದೆ. ಅಕ್ಷರ ಅಂದವಾಗಿದ್ದು, ಕೆಲವು ಕಡೆ ಮಾತ್ರ ತ್ರುಟಿತವಾಗಿವೆ. ಕನ್ನಡ ಲಿಪಿ ಹಾಗೂ ಕನ್ನಡ ಭಾಷೆಯಲ್ಲಿ ಬರೆಯಲಾದ ಪ್ರಸ್ತುತ ಶಾಸನದಲ್ಲಿ ಕಂದ, ಮತ್ತೇಭ ವಿಕ್ರೀಡಿತ, ಉತ್ಪಲಮಾಲಾ, ಚಂಪಕಮಾಲಾ, ಮಹಾಸ್ರಗ್ಧರಾ ವೃತ್ತಗಳಿರುತ್ತವೆ. ಹೀಗೆ ಗದ್ಯ, ಪದ್ಯಗಳಿಂದ ಕೂಡಿದ ಈ ಶಾಸನ, ಪುಟ್ಟ ಚಂಪೂಕಾವ್ಯದಂತಿದೆ. ಶಾಸನದ ಆರಂಭ ಮತ್ತು ಅಂತ್ಯಗಳಲ್ಲಿ ಮಾತ್ರ ಸಂಸ್ಕೃತ ಶ್ಲೋಕಗಳಿರುತ್ತವೆ. ಶಾಸನದಲ್ಲಿ ಸಾಂಪ್ರದಾಯಿಕ ವರ್ಣನೆಗಳೇ ಎಡೆ ಪಡೆದಿರುತ್ತವೆ.

ಗೋವೆಯ ಕದಂಬ ಇಮ್ಮಡಿ ಜಯಕೇಶಿಯ ಕುಲವಧು ಮೈಳಲದೇವಿ. ಈ ರಾಜದಂಪತಿಗಳಿಗೆ ಶಿವಚಿತ್ತ ಪೆರ್ಮಾಡಿದೇವ ಮತ್ತು ವಿಷ್ಣುಚಿತ್ತ ವಿಜಯಾದಿತ್ಯರು ಮಕ್ಕಳು. ಹಿರಿಯವನಾದ ಈ ಶಿವಚಿತ್ತ ವೀರಪೆರ್ಮಾಡಿ ದೇವನು ಸರ್ವಜ್ಞಾವತಾರ, ತ್ಯಾಗಸಿಂಹಾಸನ, ಪಶ್ಚಿಮ ಸಮುದ್ರಾಧೀಶ್ವರ, ಕೊಂಕಣ ಚಕ್ರವರ್ತಿ ಎಂದು ಪ್ರಖ್ಯಾತನಾಗಿದ್ದನು. ಈತ ನಿಜರಾಜಧಾನಿ ಚಂದ್ರಾಪುರದ ನೆಲೆವೀಡಿನಿಂದ ಹಲಸಿಗೆ ಹನ್ನಿಚ್ಛಾಸಿರ, ಕೊಂಕಣ ಒಂಬಯ್ನೂರ್ಱು ಹಾಗೂ ಕವಡೆದ್ವೀಪ ಸವಲಕ್ಷ ಪ್ರದೇಶಗಳನ್ನು ಆಳುತ್ತಿದ್ದನು.

ಗೋವೆಯ ಕದಂಬರ ಸಾಮ್ರಾಜ್ಯದಲ್ಲಿ ಮಾರಜವಾಡಿ ಸಮಾವೇಶವಾಗಿದ್ದಿತು. ಈ ಮಾರಜವಾಡಿ ರಾಜಕೀಯ ವಿಭಾಗದಲ್ಲಿ ಹುಲ್ಲಂಬಿ–70 ಇದ್ದಿತು. ಈ ಹುಲ್ಲಂಬಿ

-70 ರಲ್ಲಿ ಹಗಡಗೆ (ಹಾಳಸೀಗಿಕಟ್ಟೆ) ಗ್ರಾಮವಿದ್ದಿತು. ವೀರಪೆರ್ಮಾಡಿ ದೇವನ ಪಾದಪದ್ಮೋಪಜೀವಿಯಾಗಿ ಜಕ್ಕಗೌಡನು ಈ ಪ್ರದೇಶವನ್ನಾಳುತ್ತಿದ್ದನು. ಬಾಗಿಗೌಡಿ ಈತನ ಸತಿ. ಈ ಗೌಡದಂಪತಿಗಳ ಪುತ್ರನೇ ಬರ್ಮಗೌಡ. ಬರ್ಮಗೌಡನ ಹೆಂಡತಿ ಬಲ್ಲವ್ವೆ. ಹೀಗೆ ಗೌಡ ಮನೆತನದವರ ವರ್ಣನೆ ಪ್ರಸ್ತುತ ಶಾಸನದಲ್ಲಿ ಪ್ರವೇಶ ಪಡೆದಿದೆ.

ದೇರನೂರುಮಠದ ಸ್ಥಾನಾಚಾರ್ಯ ದೇವಶಕ್ತಿಮುನಿ ಶಾರದಾದೇವಿಯ ವಿಗ್ರಹವನ್ನು ಹಗಡಗೆ (ಹಾಳಸೀಗಿಕಟ್ಟೆ) ಯಲ್ಲಿ ಪ್ರತಿಷ್ಠೆ ಮಾಡಿದ. ಶಾರದಾ ದೇವಿಯ ಈ ವಿಗ್ರಹ ಹಾಳಸೀಗಿಕಟ್ಟೆ ಗ್ರಾಮದ ಬಸವಣ್ಣನ ಗುಡಿಯ ಹತ್ತಿರ ಈಗಲೂ ಕಾಣಸಿಗುತ್ತದೆ. ಇಲ್ಲಿಯ ಸಿದ್ಧನಾಥ ದೇವಾಲಯಕ್ಕಾಗಿ ಮೈತರ ಜಕ್ಕಗೌಡನು ಸ್ಥಾನಾಚಾರ್ಯ ಗೋಣಿಯ ಸೂಳಪಾಣಿ ದೇವರಿಗೆ ಗದ್ದೆ ಹಾಗೂ ಹಕ್ಕಲು ಭೂಮಿಯನ್ನು ದಾನವಾಗಿ ನೀಡಿದ್ದಾನೆ. ಇದಲ್ಲದೆ ಸೀಗಿಕಟ್ಟೆ (ಹಗಡಗೆ)ಯ ಸಿದ್ಧೇಶ್ವರ ದೇವಾಲಯದ ಖಂಡಸ್ಫುಟಿತ ಜೀರ್ಣೋದ್ಧಾರ, ಚೈತ್ರ-ಪವಿತ್ರ ಪರ್ವ, ನೈವೇದ್ಯ ಹಾಗೂ ತಪೋಧನರ ಆಹಾರಕ್ಕಾಗಿ ಹಣದಾನ ಮಾಡಿದ್ದಾನೆ.

ಗೋವೆಯ ಕದಂಬ ವೀರಪೆರ್ಮಾಡಿ ದೇವನ ಪಾದಪದ್ಮೋಪಜೀವಿಯಾದ ಮಹಾಪ್ರಧಾನ, ಸಂಧಿವಿಗ್ರಹಿ ಮಾವಣಯ್ಯ ನಾಯಕನು ಪರಹಿತೋಪಾಧ್ಯಾಯ ನೆನಿಸಿದ್ದನು. ಈತನು ಸಿದ್ಧೇಶ್ವರ ದೇವಾಲಯದ ನಂದಾದೀವಿಗೆಗೆ ಕುಂಬಾರ ಮತ್ತು ತೆಲ್ಲಿಗರ 'ತಳಸಾರಿಗೆಯ ಬೀರವಣ' ತೆರಿಗೆಯನ್ನು ದಾನವಾಗಿ ನೀಡಿದ್ದಾನೆ.

ಇದಲ್ಲದೆ ಈ ಗ್ರಾಮದ ಐನೂರ್ವರು (ಅಯ್ಯಾವೊಳೆ ಐನೂರ್ವರು) ಆಯಂದಾನವನ್ನೂ ತೆಲ್ಲಿಗರು ಎಣ್ಣೆಯನ್ನೂ ಕುಂಬಾರರು ಗಲನು (?)ವನ್ನೂ ಸಿದ್ಧೇಶ್ವರ ದೇವಾಲಯಕ್ಕೆ ದಾನ ಮಾಡಿದ್ದಾರೆ. ಹೀಗೆ ಈ ಶಾಸನದಲ್ಲಿ ಹಲವಾರು ದತ್ತಿಗಳು ಕಂಡುಬರುತ್ತವೆ. ಅರಸನ ದತ್ತಿಯ ತರುವಾಯ ಗ್ರಾಮದ ವಿವಿಧ ವೃತ್ತಿಯವರು ದೇವಾಲಯಕ್ಕೆ ದಾನ ನೀಡಿದುದು ಗಮನಿಸುವ ಅಂಶವಾಗಿದೆ ಇದು ವಿವಿಧ ವೃತ್ತಿಯವರ ಧಾರ್ಮಿಕ ಭಾವನೆಯನ್ನು ತಿಳಿಸಿ ಕೊಡುತ್ತದೆ.

ಈ ದತ್ತಿ ಶಾಸನದಲ್ಲಿ ಒಟ್ಟು ೫೨ ಸಾಲುಗಳಿದ್ದು, ಕೊನೆಯ ಎರಡು ಸಾಲು ಗಳನ್ನು ಮಾತ್ರ, ನಂತರ ಕಂಡರಿಸಲಾಗಿದೆ. ಸಾಲು ೩೮-೩೯ರಲ್ಲಿ ಬರುವ "ಶ್ರೀ ಕಾದಂಬ ಶಿವಚಿತ್ತ ಶ್ರೀ ವೀರಪೆರ್ಮಾಡಿದೇವ ವರ್ಷದ ೧೬ನೆಯ [ಚೈತ್ರ] ಭಾನು ಸಂವತ್ಸರದ ಪುಷ್ಯ ಬಹುಳ ಬಿದಿಗೆ ಮಂಗಳವಾರ ವ್ಯತೀಪಾತ ಉತ್ತರಾಯಣ ಸಂಕ್ರಾಂತಿ ದಿವ್ಯತಿಥಿ" ಎಂಬ ಮಿತಿ, ಕ್ರಿ. ಶ. ೧೧೯೨ ಡಿಸೆಂಬರ ೨೫ ಮಂಗಳವಾರಕ್ಕೆ ಸಮಾನವಾಗಿರುತ್ತದೆ.

ಸೀಗಿಕಟ್ಟೆ ಗ್ರಾಮದ ಪ್ರಾಚೀನ ಹೆಸರು, ಹಗಡಗೆ (ಕ್ರಿ.ಶ. ೧೧೯೨). ಇಲ್ಲಿಯ ಸಿದ್ಧನಾಥ (ಸಿದ್ಧೇಶ್ವರ) ದೇವಾಲಯ ಹದಿನೆಂಟು ಮಠಗಳಲ್ಲಿ ಅತ್ಯಂತ ಪ್ರಖ್ಯಾತಿ

ಪಡೆದಿದ್ದಿತು. ಅಂದರೆ ಸಿದ್ಧೇಶ್ವರ ದೇವಾಲಯದಲ್ಲಿದ್ದ ಅಥವಾ ಅದಕ್ಕೆ ಹೊಂದಿಕೊಂಡಿದ್ದ ಮಠವೇ ದೇವನೂರ ಮಠ. ಈ ದೇವನೂರ ಮಠ ಹದಿನೆಂಟು ಮಠಗಳಲ್ಲಿ ಒಂದಾಗಿದ್ದಿತು.

'ಬೀರವಣ' ಸೈನ್ಯಕ್ಕೆ ಸಲ್ಲಿಸುತ್ತಿದ್ದ ತೆರಿಗೆ. ಈ ಶಾಸನದಲ್ಲಿ ಇದನ್ನು 'ತಳಸಾರಿಗೆ ಬೀರವಣ' ಎಂದು ಕರೆಯಲಾಗಿದೆ. ಗದಗ ತಾಲೂಕಿನ ಕಳಸಾಪುರದ ಇಮ್ಮಡಿ ಜಗದೇಕಮಲ್ಲನ ಶಾಸನದಲ್ಲಿ 'ಎಲೆಯ ಬೀರವಣ' ಹಾಗೂ ಬೇರೆ ಶಾಸನಗಳಲ್ಲಿ 'ಸಾರಿಗೆಯ ಬೀರವಣ'ಗಳ ಪ್ರಸ್ತಾಪ ಕಂಡುಬರುತ್ತವೆ.

ಮೈತರ ಜಕ್ಕಗೌಡ, ಗೋಣಿಯ ಸೂಳಪಾಣಿದೇವ, ಎರಡೊಕ್ಕಲು ಮೊದಲಾದವು ಇಲ್ಲಿ ಗಮನಿಸಬೇಕಾದ ಪದಗಳಾಗಿರುತ್ತವೆ. ಹೀಗೆ ಅನೇಕ ಮಹತ್ವದ ಸಂಗತಿಗಳನ್ನು ತಿಳಿಸುವ ಈ ಶಾಸನ ಇಲ್ಲಿಯವರೆಗೆ ಅಪ್ರಕಟಿತವಾಗಿಯೇ ಇದ್ದಿತು. ಈಗ ಈ ಮೂಲಕ ಪ್ರಥಮ ಸಲ ಪ್ರಕಟವಾಗುತ್ತಿದೆ. ಪಡಿಯಚ್ಚಿನ ಸಹಾಯದಿಂದ ಪರಿಷ್ಕರಿಸಿದ ಈ ಶಾಸನದ ಪೂರ್ಣಪಾಠ ಹೀಗಿರುತ್ತದೆ.

೧ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ। ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ ॥ [೧*]

೨ ವಿಶುದ್ಧಜ್ಞಾನ ದೇಹಾಯ ತ್ರಿವೇದಿ ದಿವ್ಯಚಕ್ಷುಷೇ। ಶ್ರೇಯಃಪ್ರಾಪ್ತ ನಿಮಿತ್ತಾಯ ನಮಃ ಸೋಮಾರ್ದ್ಧ ಧಾರಿಣೇ ॥ [೨*]

೩ ಅರಿ ಭೂಪಾಳರನಾಹವಾಜಿರದೊಳಾರ್ದ್ದೆಬ(ಬ್ಬ)ಟ್ಟಿ ಬೆಂಕೊಂಡು ತನ್ನರಪಾಳರ್ಕ್ಕಳ ವಸ್ತುವಾಹನ ಪತಾಕಾ ತೂ—

೪ ರ್ಯ್ಯ ಷು (ಸು)ಭ್ರಾತಪತ್ರರಣಚ್ಚಂಖನಿಕಾಯಮಂ ಕವರ್ದ್ದು ಕೊಂಡಾಶ್ಚರ್ಯ್ಯದಿಂ ವಿಕ್ರಮ ಭರಣಂ ಶ್ರೀ ಜಯಕೇಸಿದೇ—

೫ ವನೆಸೆದಂ ಕಾದಂಬ ಕಣ್ಠೀರವ [೦*] ॥ [೩*] ಆ ನರಪಾಳನಗ್ರಮಹಿಶಿ(ಷಿ) ವರೆ ಕುಂತಳರಾಜ ಪುತ್ರಿ ಚಂದ್ರಾನನೆ ಯಾಚಕ ಪ್ರಕರ ಕಲ್ಪ ಲತೋಪಮೆ-

೬ ಯದ್ರಿಜಾತೆಗಂ ಜಾನಕಿಗಂ ಸಮಾನಮೆನಿಪುಂನ್ನತ ಶೀಳ ವಿಳಾಸ ರೂಪ ದುದ್ದಾನಿ ನೆಗರ್ತ್ತೆಯಂ ತಳೆದಳುರ್ವ್ವಿಗೆ ಮೈಳಲದೇವಿ ಪೆರ್ಮ್ಮಾಳಿಂ (ಯಿಂ) ॥ [೪*]

೭ ಅಂತವರ್ಗ್ಗೆ ತನಯರಾದರ್ಕ್ಕಂ ತಳದೇಶಾಧಿನಾಥ ದೌರ್ಹಿತ್ಯಬರ್ಭ ಕಾಂನ್ತೇಶರೆನ್ಸಿ ನಿಜವಿಕ್ರಾಂನ್ತಪೆರ್ಮ್ಮಾಡಿದೇವ ವಿಜಯಾದಿತ್ಯ [ರ್] ।
[೫*]

೮ ವುದೆಯಾಚಳದೊಳಂ ದಿನಕರನುದಯಿಸುವನ್ತಿರೆ ಕದಂಬ ವಂಶೋದಯ ಮೆಂಬುದೆಯಗಿರಿ ಸಿಖರಿಸಿ ಖರದೊಳುದಯಿಸಿದ

೯ ವಿಶದ ಕೀರ್ತ್ತಿ ಪೆರ್ಮ್ಮಾಡಿ ನ್ರಿಪ [೦*] ॥ [೬*] ಕಡುಪಿಂಪ್ಪೆರ್ಮ್ಮಾಡಿ ದೇವ ನಿಜ ವಿಜಯ ಗಜಾರೂಢನಾಗಲ್ಕೆ ಲಾಳಂ ಗುಡಿಗಿತ್ತಾ ಗಣ್ಡ ಗರ್ವ್ವಂ ದ್ರವಿಳನಡಗಿದಂ ಮಾ—

೧೦ ಮಾಳವಂ ಭೀತನಾದಂ ಸೆಡದಂ ನೇಪಾಳನಮ್ಮಂ (ಅಣ್ಮಂ) ತೆಱಿದಂ ಕಳದನಾ ಗೂರ್ಜ್ಜರಂ ಪಾರಿಯಾತ್ರ[೦*]ವಿಡುಕಲುಂ ತಾಂನಜ್ಜಿ ನಿಂದ[೦*] ಮಲಪನಳಿದಂ ಮಾಘ (ಮಗ)—

೧೧ ದಂ ಸೆಡೆಗೆಟ್ಟ [೦*] ॥ [೭*] ತತ್ತನುಜ ॥ ಅರಿಭೂಭೃತ್ಪವಿ ದಂಡನರ್ತ್ರಿಜನ ಕಲ್ಪೋರ್ವ್ವೀಜನತ್ಯಂತ ವಿಸ್ತರ ಕೀರ್ತ್ತಿ ಪ್ರಮಂದಾ ಮನೋರಮಣನುದ್ಧ್ಯದ್ಭೂರಿ ಧಾತ್ರೀ ದು—

೧೨ ರಂಧರನತ್ಯೂರ್ಜ್ಜಿತ ವೈಭವಂ ವಿನುತ ಧಾತ್ರೀಪಾಳ ಚೂಡಾಮಣಿಪ್ರ್ರಿತಾಂಘ್ರಿದ್ವಯುಗಂ ಜಿಗೀಷು ವಿಜಯಾದಿತ್ಯಾವನೀಪಾಳಕ [೦*] ॥ [೮*] ಸ್ವಸ್ತಿ ಸಮ—

೧೩ ಧಿಗತ ಪಂಚ ಮಹಾಸ(ಶ)ಬ್ದ ಮಹಾಮಂಣ್ಡಳೇಸ್ವ(ಶ್ವ)ರಂ ಬನವಾಸೀ ಪುರವರಾಧೀಸ್ವ (ಶ್ವ)ರಂ ಸಮಸ್ತ ಭುವನ ಸಂಸ್ತೂಯ ಮಾನಂ ಹರ ಧರಣೀ—

೧೪ ಸೂತ ತ್ರಿಲೋಚನ ಕದಂಬ ವಂಶ ಮಹೋದಯಂ ಶಿಖರಾಭ್ಯುದಯ ಮಾನಂ ಮಹಾಪ್ರಚಣ್ಡ ಮಾರ್ತ್ತಣ್ಡಂ ಕರಾತಿ ತೀಬ್ರನಿಜಪ್ರತಾ—

೧೫ ಪವಶೀಕ್ರಿತ ಸಕಳ ಮಹೀಮಂಣ್ಡನನುತ್ತುಂಗ ಸಿಂಹಲಾಂಚ್ಛನಂ ವಾನರ ಮಹಾಧ್ವಜಂ ಪೆರ್ಮ್ಮಟ್ಟಿತೂರ್ಯ್ಯ ನಿರ್ಗ್ಘೋಷಣಂ ಚತುರಾಸೀತಿ[ನ]—

೧೬ ಗರಾಧಿಷ್ಟಿತೋಪ್ಪದಶಾಸ್ವ (ಶ್ವ) ಮೇಧ ದೀಕ್ಷಾದೀಕ್ಷಿತ ಕುಳಪ್ರಸೂತ ಹಿಮವದ್ಗಿರೀಂದ್ರರುಂದ್ರ ಶಿಖರ ಸ್ತಾ(ಸ್ಥಾ)ಪಿತ ಮಹಾಸ(ಶ)ಕ್ತಿ ಪ್ರ—

೧೭ ಭಾವಂ ತ್ಯಾಗ ಜಗಝಂಪ ಝಂಪಳಾಚಾರ್ಯ್ಯ ನಿಸ್ಸಂಖ (ಶ್ಯಂಕ) ರಾಮ ಸುಭಟ ಕನಕ ನಿಕಶೋಪಣಂ ಸ(ಶ)ರಣಾಗತ ವಜ್ರ ಪ್ರಾಕಾರಂ ಲೋಕೈಕ

೧೮ ಕಲ್ಪದ್ರುಮಂ ಸಂಕ್ರಾಂತಿ ಧವಳಂ ಮೂರ್ತ್ತಿನಾರಾಯಣಂ ಕೀರ್ತ್ತಿ ಮಾರ್ತ್ತಣ್ಡಂ ಮಂಣ್ಡಳಿಕ ಲಲಾಟಪಟ್ಟಂ ವೈರಿಘರಟ್ಟಂ ಸುಭಟರಾಜ ಶಿಖಾಮ[ಣಿ]

೧೯ ಕಾದಂಬ ಚೂಡಾಮಣೀತ್ಯಖಿಳ ರಾಜಾವಳೀ ವಿರಾಜಿತರಪ್ಪ ಶ್ರೀಮತ್ಸ ರ್ವ್ವಜ್ಞಾವತಾರಂ ತ್ಯಾಗ ಸಿಂಹಾಸನಂ ರಾಯ ಪಿತಾಮ [ಹಂ]

೨೦ ಪಶ್ಚಿಮ ಸಮುದ್ರಾಧೀಶ್ವರಂ ಕೊಂಕಣ ಚಕ್ರವರ್ತ್ತಿ ಶ್ರೀ ಸಿ (ಶಿ) ವಚಿತ್ತಂ ಶ್ರೀ ವೀರಪೆರ್ಮ್ಮಾಡಿದೇವರಸರು ಹಲಸಿಗೆ ಪನ್ನಿಚ್ಛಾಸಿ [ರ]—

೨೧ ಮುಮಾ ಕೊಂಕಣವೊಂಭೈಸೂಱುಮಂ ಕಪಡೆದ್ವೀಪ ಸಮುಲಕ್ಷ್ಯಮುಮ
ನೇಕಚ್ಛತ್ರದಿ ನಿಜ ರಾಜಧಾನಿ ಚಂದ್ರಾಪುರದ ನೆಲವೀ [ಡಿನೊ]—

೨೨ ಳು ದುಷ್ಟನಿಗ್ರಹ ಶಿಸಿ (ಶಿ) ಷ್ಟ ಪ್ರತಿಪಾಳನೆಯಿಂ ಸುಖ ಸಂಕಥಾ ವಿನೋ
ದದಿಂ ರಾಜ್ಯಂಗೆಯ್ಯುತಮಿರೆ॥ ಸಾರಂ ವಿಚಾರಿಪಾಗಳು ಮಾರಜವಾ[ಡಿ]-

೨೩ ಯು(ಯೆ) ಸಮಸ್ತ ದೇಶಂಗಳೊಳಾ ಮಾರಜವಾಡಿಯೊಳನ್ತಿದೆ ಸಾರಂ
ಪಲ್ಲಂಬಿಯೆಪ್ಪತ್ತಾ ನಾಡೂರೊಳ್ ॥ [೯*] ತಳೆದುದು ಚೆಲ್ವಿನಾದರ್ಶ
ಹಗಡಗೆ [ದಿ]—

೨೪ ಪಯಾಂತರಾಳದೊಳು ಬಳಸಿದ ಗಂಧಸಾಳಿಯ ಮುಡಿಬ್ರ (ಧ್ರ) ಕುಳಗಳ
ದೇವತಾಶ್ರೆಯಂಗಳ ಪುಣ್ಯಸ್ತ (ಸ್ಥ)ಳಂಗಳ ತಟಾಕ ತಟಾಕಂಗಳ [ಪು]-

೨೫ ತಂ ನಂದನಂಗಳ ಪುದಿಪಿಂದೆಸದ ಗಂಣ್ಯನೇಪುಗಳಿಂ ನೆಱೆ ಧೂತಳಾಗ್ರ
ದೊಳು । [೧೦*] ತತ್ಪಾದ ಪದ್ಮೋಪಜೀವಿ ॥ ಶ್ರೀನಿಳಯಂ ವಿವೇಕನಿಧಿ
ಗೋ [ತ್ರಪ]-

೨೬ ವಿತ್ರನಪಾರ ಪೌರುಷಂ ದಾನಿ ದಯಾಪರಂ ಸುಜನನೊಳ್ಪುರ್ಗತ ತೇಜನುದಾರ
ನುತ್ತಮ ಮಾನಧನ ಗುಣಾಂಬುಧಿ ಮಹೇಸ್ವ(ಶ್ವ)ರ ಪಾದಪಯೋ [ಜ]-

೨೭ ಭ್ರಿಂಗನುದ್ವಿರ್ಣನಂತನೆಂಬ ಪೆಂಪು ಮಹಿಮಾಬ್ಧಿದಮಾದುದು ಜಕ್ಕಗೌಂಡ
ನೊಳು ॥ [೧೧*]ತತ್ಪತ್ನಿ ॥ ಪತಿಹಿತದೊಳು ಸೀತೆಗೆ ಸರಿ ರತಿಗೆ ಸಮಾನಂ
ವಿ[ಲಾಸ]-

೨೮ ದೆಸೆವ್ರೋನತಿಯೊಳು ಸತಿಯರೊಳಾದರ್ಶೆತನಗೀ ಕ್ಷಿತಿಯೊಳೆನಲು ಬಾಗಿಗೌಡಿ
ಜನಮುಂ ತಳೆದಳು ॥ [೧೨*] ತತ್ಪುತ್ರ ॥ ಬಮ್ಮಗೌಂಡನ ದೆಮ್ಮರ್

೨೯ ನಮ್ಮಳವೆ ಬಣ್ಣಿಸಲ್ಕೆ ತಂದೆಯ ಹೆಸರಂ ನೂಮ್ಮರ್ಡಿ ಮಾಡಿಯೆ ನಿಲ್ಸಿದ
ಕೂಮ್ಮರ್ಯ ಪುತ್ರಂ ಪರೋಕ್ಷದೊಳು ಜಕ್ಕಣನ ॥ (೧೩*) ಸುದರೊಳ
[ಗೆಂತು]

೩೦ ವಾಸವ ನಗಂಗಳೊಳೆಂತಮರೇಂದ್ರ ಮಂದಿರ[ಂ*] ನರರೊಳಗೆಂನ್ತು ಚಕ್ರಿ
ವಿಹಗಂಗದೊಳ(ಳೆ)ಂತಹಿವೈರಿ ತಾರಕೋತ್ಕರದೊಳಗೆನ್ತು ಸಿತಕರನೋ
[ಜ್ವಳ]-

೩೧ ವನ್ತೆ ನಿಜಾನ್ವಯಕ್ಕೀಪಂ ಧರೆಯೊಳಗೆಂದು ಬಂಣ್ಣಿಪುದು ಬಮ್ಮರ್
ಗೌಂಡನನತ್ಥಿರ್(ತ್ತಿರ್)ಯಿಂ ಜನ ॥ [೧೪*] ತತ್ಪತ್ನಿ ॥ ರಾಮನ ರಾಮೆಗೆ
ಸದ್ರಿಸಂ ಸೋಮ[ನ ಕಾ]-

೩೨ ವಿಂಸಿಗೆ ತಾನೆ ವಾಸಟಿಯೆನಿಪಳು ಕಾಮಳೆ ಬಸ್ತಿಪ್ಪೆ ಎನಲ್ಕೀ ಮಹಿಯೊಳು
ಸಂದಳನ್ತು ಪತಿಹಿತದೆಡೆಯೊಳು ॥ [೧೫*] ಅಲ್ಲಿ [ಯಾಚಾ]-

೩೩ ಯ್ಯರೆಂತೆನೆ ॥ ಧರೆಯೊಳಗೊಪ್ಪುವ ದೇವನೂರಮಠ ಅಸ್ತಾಸ್ಥಾನ
ದಾಚಾಯ್ಯ್ಯಂನಂತೆಸೆವೆಕೊರ್‍ಕೀಟಿ ಮುನೀಂದ್ರರೊಳು ನೆಗಳ್ದ ಹನುಮಂ-
ನ್ತ[ನ್ನೈ]–

೩೪ ಷ್ಟಿಕಂ ಹದಿನೆಂಟಾ ಮಠದೊಳು ನೆಗತ್ರ್ತೆವಡೆದೀ ಶ್ರೀ ಸಿದ್ಧನಾಥಂಗೆ ತಾಂ
ಹಿರಿದುಂ ಭಕ್ತಿಯನುಂಟುಮಾಡಿ ಮುದದಿಂ ಶ್ರೀ ಸಾ(ಶಾ)ರದಾದೇವಿಯ
... —

೩೫ ವಂ ಮಾಡ್ಸಿ ದೇವಸ(ಶ)ಕ್ತಿಮುನಿಪ ತಾಂ ಖ್ಯಾತಿಯಂ ಮಾಡಿದಂ ಧರೆ
ಯೊಳು ಗೋಣಿಯದೇವನೀಗಳೆಸೆದಂ ಲೋಕೈಕ ಕಲ್ಪದ್ರುಮಂ ಶ್ರೀ
[ತ್ರಿಭು]–

೩೬ ವನ ಶ್ವಾ(ಸ್ವಾ)ಮಿ ಎನ್ಸಿದ ಸಿದ್ಧೇಸ್ವ(ಶ್ವ)ರ ದೇವರ್ಗ್ಗೆ ಮೈತರ ಜಕ್ಕ
ಗಾವುಂಡಂ ಸ್ತಾನಮಾನ್ಯವುಂಬಳಿ ಸಹಿತಂ ಸಿನ್ದಾಹಿಂ ಪರಿಚ್ಛೇದವಾಗಿ
ಬಳಿಕ್ಕ ದೇವರತ್ಥ್ರಕ್ಕಳಿ...

೩೭ ಯುರ ಧರ್ಮ್ಮವಂ ಪುರೋವ್ರಿದ್ಧಿಗೆ ಸಲ್ಸಿ ಗೋಣಿಯ ಸೂಳಪಾಣಿ
ದೇವರಿಗೆ ಧಾರಾಪೂರ್ವ್ವಕಂ ಮಾಡಿಕೊಟ್ಟ ಕೆಯಿ ಮೂಗಿಸೇರಿಯಿಂ ಬಡಗದೆ
[ಸೆ ಕೆಱೆ³]

೩೮ ಕೆಳಗಣ ಗದ್ದೆಯುಂ ಬಡಗಣ ಹಕ್ಕಲಮಂ ಕೊಟ್ಟು ನಡವುತ್ತಿರಲು ॥ ಸ್ವಸ್ತಿ
ಶ್ರೀ ಕಾದಂಬ ಶಿವಚಿತ್ತ ಶ್ರೀ ವೀರ ಪೆರ್ಮ್ಮಾಡಿದೇವ ವರ್ಷದ ೧೬ ನೆಯ
[ಚೈತ್ರ]

೩೯ ಭಾನು ಸಂವತ್ಸರದ ಪುಷ್ಯ ಬಹುಳ ಬಿದಿಗೆ ಮಂಗಳವಾರ ವ್ಯತೀಪಾತ
ಉತ್ತರಾಯಣ ಸಂಕ್ರಾಂತಿ ದಿವ್ಯ ತಿಥಿಯಂದು ಶ್ರೀ ವೀರ [ಪೆರ್ಮ್ಮಾ]

೪೦ ಡಿ ದೇವರಸರು ಹಗಡಗೆಯ ಶ್ರೀ ಸಿದ್ಧೇಶ್ವರ ದೇವರಿಗೆ ಪ್ರಸರ್ದ್ದತ್ತಿ
ಯಾಗಿಂಬಱವಣಮುಮೆಂಟು ಸರ್ವ್ವ ಬಾಧ ಪರಿಹಾರ ಸರ್ವ್ವ ನ...

೪೧ ತಪೋಧನರಾಹಾರದಾನಕ್ಕಂ ಖಂಡ್ಡಸ್ಫುಟಿತ ಜೀರ್ಣ್ಣೋದ್ಧಾರಕ್ಕಂ ಚೈತ್ರ
ಪವಿತ್ರ ನಿವೇದ್ಯಕ್ಕಂ ಬಿಟ್ಟರೀ ಧರ್ಮ್ಮವಂ ಅರಸುಗಳುಂ ಗೌಡುಂ ಪ್ರತಿ
ಪಾಳಿ[ಸುವರು] ॥

೪೨ ತತ್ಪಾದ ಪದ್ಮೋಪಜೀವಿ ಪ್ರಧಾನನೆನ್ತೆನೆ ಸುಕವೀಂದ್ರಸರ್ಕವೀಂದ
ನೆಂದು ಸುಜನಃಸೌರ್ಜನ್ಯಸಂಪನ್ನನೆಂದುಂ ಕಳಾಕೋವಿದರೆಲ್ಲರುಂ ಖಳ್ರಿ
ಗಳೊಳ...

೪೩ ...ದಾದಿಯ ಗಾಯಕರೊಳು ಗಾಯಕನೆಂದು ಶಿಷ್ಟಜನ ಸೇವ್ಯ ಸೇವ್ಯ
ನೆಂದಿಂನ್ತು ಬಣ್ಣಿಪೆನಾನಂದದಿನಾಗಳುಂ ಪರಹಿತೋಪಾಧ್ಯಾಯಂನಂ
ರಾಯನಂ ॥ [೧೬*]...—

೪೪ ರೂಪಿನೊಳು ಮದನನಾ ಮದನಂಗೆಣೆ ನೀಂ ಪರಾರ್ತ್ಥದೊಳು ನಿನಗೆಣೆ
ಖೇಚರ ಖಚರ ಸೂನುಗೆ ನೀನೆಣೆ ಗುಂಣ್ಪನಿಂದೆಂದಲು ನಿನಗೆಣೆ...

೪೫ ಗೆಣೆ ನೀನೆನೆ ಪೆರ್ಗ್ಗಡೆ ರಾಯ ನಿನ್ನೊಳಾವನೊ ಸರಿ ಸಾಟಿ ಪಾಸಟಿ
ಎನುತ ಜಗಜ್ಜನವ್ರೊಲ್ದು ಬಣ್ಣಿಕುಂ ॥ [೧೭*] ಮಹಾಪ್ರಧಾನಂ ಸಂನ್ಧಿ
ವಿಗ್ರಹಿ [ವಾವ]–

೪೬ ಣಯ್ಯ ನಾಯಕಂ ಸಿದ್ಧೇಸ್ವ(ಶ್ವ)ರದ ನಂದಾದೀವಿಗೆಗೆ ಕುಂಬಾರ ತೆಲ್ಲಿಗ
ರೆರಡೊಕ್ಕಲ ತಳಸಾರಿ[ಗೆ*] ಬೀರವಣಮಂ ಧಾರಾಪೂರ್ವ್ವಕ ಮಾ...—

೪೭ ಯಿದನೀಯುನ್ದದಿನೆಯ್ದ ಪಾಳಿಸಿದವರ್ಗ್ಗಿಷ್ಟಾರ್ತ್ಥ ಸಂಸಿದ್ಧಿ ಸಂಭವಿಕುಂ
ಕೊಂಣ್ಟಳಿದಂಗೆ ಗಂಗೆ ಗಯೆ ಕೇದಾರ ಕುರುಕ್ಷೇತ್ರಮೆಂಬಿವಱೊಳು
[ಪೇಸದೆ ಪಾ]—

೪೮ ರ್ವ್ವರಂ ಗೊರವರಂ ಗೋಬೃಂದಮಂ ಪೆಣ್ಡಿರಂ ತವೆ ಕೊಂನ್ದಿಕ್ಕಿದ
ದೋಷವೆಯ್ದುಂ ಗೆವಲಂ ಬೀಳ್ಗುನಿಗೋದಂಗಳೊಳು ॥ [೧೮*] ಸ್ವದತ್ತಂ
ಪರದತ್ತಂ ವಾಯೋ ಹರೇತಿ(ತ) ವಸು[ನ್ಧರಾಂ । ಷಷ್ಟಿ]—

೪೯ ರ್ವ್ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿ ॥ [೧೯*] ಅಯಿಂ
ನೂರ್ವ್ವರು ಸಿದ್ಧೇಸ್ವ(ಶ್ವ)ರ ದೇವರಿಗೆ ಹೊಂಗೆ ಅರವೀಸದ ಆಯಮಂ
ಬಿಟ್ಟರು ತೆಲ್ಲಿ[ಗ]...—

೫೦ ದೇವರ್ಗ್ಗೆ ಗಾಣಕ್ಕೆ ಸೊಳಸಿಗೆಯೆಣ್ಣೆಯುಂ ದೀವಿಗೆಗೆ ಬಿಟ್ಟರು ॥ ಇಂತೀ
ಧರ್ಮ್ಮಮಂ ಅರಸುಂ ಗೌಡುಂ ಪ್ರತಿಪಾಳಿಸುವರು ॥ ಓಂ ನಮಃ ಶಿವಾಯ ॥

೫೧ ಒಂದು ಗಾಣಕ್ಕೆ ಮಾನೆಣ್ಣೆ ಒಬ್ಬ ಕುಂಬಾರರ(ನ) ಆವಿಗೆ ಗಲನುಮಂ
ಇಂತೀಯೆರಡೊಕ್ಕಲುಮಂ ಸರ್ವ್ವನಮಸ್ಯವಾಗಿ ಸಿದ್ಧೇ[ಶ್ವರ]

೫೨ ದೇವರ ನನ್ದಾದೀವಿಗೆಗಂ ಬಿಟ್ಟರು ॥

ಕನ್ನಡದ ಮೊತ್ತಮೊದಲ "ಷಟ್ಪದ" ("ಅಂಶಷಟ್ಪದಿ") ಕಾವ್ಯ

ಡಾ|| ಎಂ. ಚಿದಾನಂದಮೂರ್ತಿ

ಸೊಲ್ಲಾಪುರ ಜಿಲ್ಲೆಯ ನಲವತ್ತು ಶಾಸನಗಳು (ಸಂಸ್ಕೃತ 1+ಕನ್ನಡ 39) ಈಗ ಪ್ರಕಟವಾಗಿವೆ.[1] ಅವುಗಳಲ್ಲಿ ಸೊಲ್ಲಾಪುರದ (ಸಂಖ್ಯೆ 40) ಶಾಸನವು "ವಿವಾಹ ಪುರಾಣ" ವೆಂಬ ಶಿವ ಪಾರ್ವತಿಯರ ವಿವಾಹದ ವರ್ಣನೆಯಿರುವ ಒಂದು ಚಿಕ್ಕ ಸುಂದರ ಕಾವ್ಯವನ್ನೊಳಗೊಂಡಿದೆ. ಇದು ಯಾವುದೇ ರಾಜನ, ರಾಜ ವಂಶದ, ದಾನದ ವಿಷಯವೂ ಪ್ರಸ್ತಾಪವಾಗದ, ತೇದಿಯ ಉಲ್ಲೇಖವೂ ಇರದ (ಅಥವಾ ಆ ಭಾಗ ಹಾಳಾಗಿ ಹೋಗಿರುವ) ಒಂದು ಶುದ್ಧ ಕಾವ್ಯ. ಲಿಪಿಯ ಆಧಾರದ ಮೇಲೆ ಅದರ ಕಾಲ ಹನ್ನೆರಡನೆಯ ಶತಮಾನವೆಂದು (ಪು. 167), ಹದಿಮೂರನೆಯ ಶತಮಾನವೆಂದು (ಪ್ರಸ್ತಾವನೆ. Liii) ಸಂಪಾದಕರು ಊಹಿಸಿದ್ದಾರೆ. ಎಂದರೆ ಕಾಲ ಸುಮಾರು ಕ್ರಿ.ಶ. 1200. ನನ್ನ ಪತ್ರವೊಂದಕ್ಕೆ ಡಾ. ಶ್ರೀನಿವಾಸ ರಿತ್ತಿಯವರು ಬರೆದ ಉತ್ತರದಲ್ಲಿ 'ಶಾಸನದ ಪ್ರತಿಯನ್ನು ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲಿಸಿರುವುದಾಗಿಯೂ, ಸು. 1200 ಕ್ಕಿಂತ 15-20 ವರ್ಷದಷ್ಟು ಹಿಂದಿನದೇ ಹೊರತು ಈಚಿನದಲ್ಲವೆಂದೂ ಸು.ಕ್ರಿ.ಶ. 1200 ಎಂದು ಭಾವಿಸುವುದರಲ್ಲಿ ತಪ್ಪೇನೂ ಇಲ್ಲ' ವೆಂದು ಖಚಿತೋಕ್ತಿಗಳಲ್ಲಿ ತಿಳಿಸಿದ್ದಾರೆ (ಪತ್ರ : 25-4-89) ಈ ಅಪೂರ್ವ ಕೃತಿಯ ಬಗ್ಗೆ ಸಂಪಾದಕರು ಸಹಜವಾಗಿಯೇ ವಿಶೇಷ ಗಮನವನ್ನು ಹರಿಸಿ, ಕರ್ನಾಟಕದ ಹೊರಗೆ ಇಂತಹ ಕಾವ್ಯಗಳು ಕಲ್ಲ ಮೇಲೆ ಕಂಡರಣೆಯಾಗಿರುವುದನ್ನು ಉಲ್ಲೇಖಿಸಿ, ಕನ್ನಡದಲ್ಲಿ ಸುಂದರ ಕಾವ್ಯ ಶೈಲಿಯ ಶಾಸನಗಳು ದೊರಕಿವೆಯೇ ಹೊರತು ಈ ಬಗೆಯ "ಶುದ್ಧ ಕಾವ್ಯ ಕೃತಿ" ದೊರಕಿರುವುದು ಇದೇ ಮೊದಲು ಎಂದು ಹೇಳಿರುವುದು (ಪ್ರಸ್ತಾವನೆ. ಪು. LVI) ಸರಿಯಲ್ಲ. ಏಕೆಂದರೆ ಶ್ರವಣಬೆಳ್ಗೊಳದಲ್ಲಿ ದೊರಕಿರುವ ಬೊಪ್ಪಣನ "ಗೊಮ್ಮಟಸ್ತುತಿ"ಯು ಈ ಬಗೆಯ ಶುದ್ಧ ಶಿಲಾ ಕಾವ್ಯವೇ ಆಗಿದೆ. "ವಿವಾಹ ಪುರಾಣ"ವು ಗದ್ಯದಲ್ಲಿದೆಯೆಂಬ ಅವರ ಮಾತೂ ಕೂಡ (ಪ್ರಸ್ತಾವನೆ. ಪು. LIII) ಸರಿಯಲ್ಲ. ಮುಂದೆ ತೋರಿಸಿಕೊಡುವಂತೆ ಅದರಲ್ಲಿ ಕೊನೆಯ ಪಕ್ಷ ಹದಿನಾರು "ಷಟ್ಪದ"ಗಳಿವೆ[2].

---

1. Inscriptions from Solapur District Ed : Srinivasa Ritti and Anand Kumbhar. Dharwar. 1988.
2. 'ಷಟ್ಪದ'ವು ಅಂಶ ಘಟಿತ ಷಟ್ಪದಿಯನ್ನು ಸೂಚಿಸುತ್ತದೆಯೆಂಬ ಪ್ರೊ. ತೀ.ನಂ. ಶ್ರೀಕಂಠಯ್ಯನವರ ಸೂಚನೆ ಈಗ ಬಹುಮಟ್ಟಿಗೆ ಅಂಗೀಕೃತವಾಗಿದೆ.

ಹರಿಹರನ "ಗಿರಿಜಾ ಕಲ್ಯಾಣ"ಕ್ಕೂ ಪ್ರಸ್ತುತ ಶಾಸನದ ವಸ್ತುವಿಗೂ ಇರುವ ಸಾಮ್ಯವನ್ನು ಸಂಪಾದಕರು ಗುರುತಿಸಿ ಎರಡೂ ಒಂದೇ ಕಾಲಕ್ಕೆ ಸೇರಿದ ಕೃತಿಗಳಾಗಿದ್ದು, "ಯಾವುದರಿಂದ ಯಾವುದು ಪ್ರಭಾವಿತವಾಗಿದೆಯೆಂದು ಹೇಳುವುದು ಕಷ್ಟ" ವೆಂದು ಸರಿಯಾಗಿ ಹೇಳಿದ್ದಾರೆ. ಶಾಸನದ ಲಭ್ಯ ಪಾಠವು ಅಶುದ್ಧ ಭಾಷೆಯಿಂದ ಕೂಡಿದೆ; ಮತ್ತು ಅಲ್ಲಲ್ಲಿ ಹಾಳಾಗಿ ಹೋಗಿದೆ. ಅಶುದ್ಧ ಭಾಷೆಗೆ ಲಿಪಿಕಾರನ ಅಜ್ಞತೆಯೂ ಕಾರಣವಿರಬಹುದು. ಶಾಸನದ ಉತ್ತರಾರ್ಧ ಸಂಪೂರ್ಣವಾಗಿ ನಾಶವಾಗಿದೆ.

ಶಾಸನದ ಆರಂಭದಲ್ಲಿ ವರ್ತಕ ವರ್ಗದ ಮುಖಂಡರನ್ನು ಉದ್ದೇಶಿಸಿ "ನಮ್ಮದೊಂದು ಕುಲ ಪುಟ್ಟಿದ ವಿವಾಹಪುರಾಣಮನವಧಾರಿಸಿ ಸ್ವಾಮಿಗಳ" ಎಂದು ಕೇಳಿಕೊಂಡಿದೆ. "ಸ್ವಯಂಭುಸೆಟ್ಟಿ", "ಪಸುಂಡಿ ಸೆಟ್ಟಿ", "ಪಟ್ಟಣಾಧಿಪಸ್ವಾಮಿ" (ಪಟ್ಟಣ ಶೆಟ್ಟಿ) ಇವರೇ ಮೊದಲಾದವರು ಶಿವ ಗೌರಿಯರ "ನಿಮಿತ್ತ"ವಾಗಿ ಹುಟ್ಟಿದವರೆಂದು ಹೇಳಿರುವುದರಿಂದ ಇವರ ಮೂಲ ಪುರುಷ ಅಥವಾ ಮೂಲಪುರುಷರು ಶಿವಪಾರ್ವತಿಯರ ಮಗ ಅಥವಾ ಮಕ್ಕಳೆಂಬ ಕಲ್ಪನೆ ಶಾಸನದಲ್ಲಿ ಬಂದಂತಿದೆ. ಸೃಷ್ಟಿಯ ಆರಂಭದ ಕೃತ ಯುಗದಲ್ಲಿ "ಮದುವೆ ಮಾಣಿಗಳಿಲ್ಲ, ಹಜಿಹಂದರಿಲ್ಲ, ಹೂ ಬಾಸಿಗವಿಲ್ಲ, ಹೂಜೆ ಸೊನ್ನಲಿಗೆಯಿಲ್ಲ", ಮದುವೆ ಮಕ್ಕಳೂ ಇಲ್ಲ, ಸೃಷ್ಟಿಯೇ ಇಲ್ಲ. ಆಗ ಭಗವಂತನಿಂದ ಪ್ರಕೃತಿಯನ್ನು ನಿರ್ಮಾಣ ಮಾಡಿಸಬೇಕೆಂದು, "ಆದಿಶಕ್ತಿ" ಯಾದ ಗೌರಿ ಗಿರಿರಾಜನಿಗೂ ಮೇನಕಾ ಮಹಾದೇವಿಗೂ ಹುಟ್ಟಿ *ಒಂದು ಪರ್ವತವನ್ನೇರಿ ತಪಸ್ಸು ಮಾಡುತ್ತಾಳೆ. ಅವಳ ಉದ್ದೇಶ ತನಗೆ 'ಸಾಸ್ವತನಪ್ಪ ಪುರುಷ' ದೊರೆಯಬೇಕೆಂಬುದೇ ಆಗಿತ್ತು. ಆ ಸುಂದರ ಗಿರಿಯ ತಪ್ಪಲಿನಲ್ಲಿ ಜೇನುವೆ ಶಬರಿಯರು ಹಾಡುತ್ತಿರುತ್ತಾರೆ. ಹಲವು ಬಗೆಯ ಪ್ರಾಣಿಗಳು ಅಲ್ಲಿ ತಮ್ಮ ಬದುಕಿನಲ್ಲಿ ತೊಡಗಿರುತ್ತವೆ. ಅಂತಹ ಕಾಡಿನಲ್ಲಿ ಗಿರಿಜೆ ಉಗ್ರ ತಪಸ್ಸನ್ನು ಮಾಡುತ್ತಿರುವಾಗ ಶಿವನು ಬ್ರಹ್ಮ, ವಿಷ್ಣು, ಇಂದ್ರ, "ಕಾಮ" (ಮನ್ಮಥ) ಇವರಾದಿಯಾಗಿ ಹಲವು ದೇವತೆಗಳ ಸಹಿತ ಬಂದು ಅವಳನ್ನು ನುಡಿಸುತ್ತಾನೆ.[3] ಅವಳು ಮಾತನಾಡುವುದಿಲ್ಲ. ಆಗ ಶಿವನು ತನ್ನ "ಅವಿರೂಪ"

---

3 ಶಾಸನದಲ್ಲಿನ ಕತೆ ನಿಶ್ಚಿತವಾಗಿಯೂ ದೇಸಿ ಸಂಪ್ರದಾಯದ ಗಿರಿಜಾಕಲ್ಯಾಣದ ಕತೆ. ಶಾಸನದಲ್ಲಿ ಕಾಮದಹನದ ಪ್ರಸಂಗವಿಲ್ಲ. ಉಳಿದ ದೇವತೆಗಳ ಜೊತೆ ಕಾಮನೂ ಬಂದನೆಂದಿದೆಯಾದ್ದರಿಂದ, 12–13ನೇ ಶತಮಾನಗಳಲ್ಲಿ ವರ್ತಕ ಸಮೂಹದವರಲ್ಲಿ ಪ್ರಚಲಿತವಿದ್ದ ಒಂದು ಪ್ರಾದೇಶಿಕ ಜಾನಪದ ಕಥಾ ಪ್ರಭೇದವು ಇಲ್ಲಿದೆಯೆಂದು ಹೇಳಬೇಕಾಗುತ್ತದೆ. ಹರಿಹರನಲ್ಲಿ ಗಿರಿಜೆಯು ಶಿವನ ಒಲವನ್ನು ಗಳಿಸಲು ಅವನ ಪೂಜೆಯಲ್ಲಿ ನಿರತಳಾದಾಗ ಕಾಮನು ಶಿವನ ಮೇಲೆ ಹೂ ಬಾಣವನ್ನು ಬಿಡುತ್ತಾನೆ. ಶಿವನು ತನ್ನ ಉರಿಗಣ್ಣಿಂದ ಕಾಮನನ್ನು ಸುಟ್ಟು ಭಸ್ಮವಾಗಿ ಮಾಡಿದ ಮೇಲೆ ಗಿರಿಜೆಯು ತಾನು ಇರುವಲ್ಲಿಗೆ ಶಿವನೇ ಬರುವಂತೆ ಮಾಡುತ್ತೇನೆಂದು ತಪಸ್ಸಿಗೆ ತೊಡಗುತ್ತಾಳೆ. ಶಿವ ಅವಳಲ್ಲಿಗೆ ಆ ಬಳಿಕ ಬರುತ್ತಾನೆ. ಶಾಸನದ ಕತೆ ಮತ್ತು ಹರಿಹರನ ಕತೆ ಸ್ಪಷ್ಟವಾಗಿ ಬೇರೆ ಬೇರೆ.

* ಪಾಠ ಹೀಗಿದೆ– "ಗಿರಿರಾಜಂ[ಗ]ಮಾನಾ ... ಕದ ಮಹಾದೇವಿಗಂ ಪುಟ್ಟಿ". 'ಮೇನಕಾ ಮಹಾದೇವಿ' ಎಂಬುದು ನನ್ನ ಊಹೆ.

ದಲ್ಲಿ ಅವಳ ಮುಂದೆ ನಿಂತಾಗ ಅವಳು ದಿವ್ಯಸ್ತುತಿಗಳಿಂದ ಶಿವನನ್ನು ಸ್ತೋತ್ರ ಮಾಡುತ್ತಾಳೆ. ಬಳಿಕ ಶಿವನು ಎಲ್ಲ ತನ್ನ ಪರಿವಾರದೊಡನೆ ಹೊರಟು 'ನಗರ' ವೆಂಬ ಪಟ್ಟಣದಲ್ಲಿ ಬೀಡು ಬಿಡುತ್ತಾನೆ.[4] ಅತ್ತ ಗಿರಿಜೆಯು ತನ್ನ ತಂದೆಯ ಬಳಿ ಹೋಗಿ ಎಲ್ಲವನ್ನು ತಿಳಿಸಿದಾಗ ಗಿರಿರಾಜನು "ಈಗಳೆ ಮದುವೆಯಂ ಮಾಟ್ಪೆನೆಂದು" ತನ್ನವರನ್ನು ಕರೆದು ಶಿವನ ಬಳಗವನ್ನು ಎದುರುಗೊಳ್ಳಿ ಎನ್ನುತ್ತಾನೆ. ಅವರೆಲ್ಲ ಮಾಲೆ ಹಿಡಿದು ಶಿವನಿದ್ದ ನಂದನವನಕ್ಕೆ ಹೋಗಿ ಆಗಲೇ ಮದುವೆಗೆ ಸಿದ್ಧವಾಗಿ ಹೊರಡಲು ಪ್ರಾರ್ಥಿಸುತ್ತಾರೆ. ಆಗ, "ದೇವರ ನಿಂದ ನಿಲವೇ ಶೃಂಗಾರ" ವಾಯಿತು. ಚಂದ್ರ ಮುಂಡಿದ ಮಲ್ಲಿಗೆ ಆದ ; ಹಾವು ಮುತ್ತಿನ ಸರ ಆಯ್ತು ; ನರಶಿರೋಮಾಲೆಯೇ ಚಿನ್ನದ ಹಾರವಾಯ್ತು ; ಹುಲಿದೊಗಲೇ ರೇಷ್ಮೆ ವಸ್ತ್ರವಾಯ್ತು ; ಭಸ್ಮವೇ ಶ್ರೀಗಂಧವಾಯಿತು. ಸುರರೆಲ್ಲ ಕೈಯಲ್ಲಿ ಕರಿಯ ಕಬ್ಬು ಹಿಡಿದು (ಅಥವಾ ಕೊಡೆ ಹಿಡಿದು?) ನಿಂತರು. ಮಹಾದೇವನು ನಂದಿಯನ್ನೇರಿ ಗಿರಿರಾಜನ ಪಟ್ಟಣಕ್ಕೆ ಬಂದನು. ಅಲ್ಲಿ ಇಂದ್ರ ಚಪ್ಪರವನ್ನು ನಿರ್ಮಿಸಿದ ; ಬ್ರಹ್ಮ ಮಂತ್ರವನ್ನು ಹೇಳಿದ ; ವಿಷ್ಣು ಹಸೆಯನ್ನು ಹಾಸಿದ. ಲಗ್ನವು ಪೂರೈಸಿತು ಎಂದು ಮಾತ್ರ ಶಾಸನದಿಂದ ಗೊತ್ತಾಗುತ್ತದೆ. ಅದರ ಮುಂದಿನ ಭಾಗ ಸಂಪೂರ್ಣವಾಗಿ ನಾಶವಾಗಿದೆ. ಶಿವ ಗಿರಿಜೆಯರಿಗೆ ಷಣ್ಮುಖ ಹುಟ್ಟಿದ ವಿಷಯವಾಗಲಿ ತಾರಕಾಸುರನ ಸಂಹಾರದ ವಿಷಯವಾಗಲಿ ಶಾಸನ ದಲ್ಲಿತ್ತೋ ಇಲ್ಲವೋ ತಿಳಿಯದು. ಅಲ್ಲಿ ವರ್ತಕ ಸಮೂಹದ ಅಥವಾ ಬಣಜಿಗ ಜಾತಿಯ ಮೂಲ ಪುರುಷನ (ರ) ಜನನದ ಯಾವ ಕಥಾ ಪ್ರಭೇದವಿತ್ತೋ ತಿಳಿಯದು. ಕೆಲವು ಶಾಸನಗಳಲ್ಲಿ ವರ್ತಕರನ್ನು "ಭಗವತೀ ಲಬ್ಧ ವರಪ್ರಸಾದ" ರೆಂದು ಕರೆದಿದೆ.[5] ಇಲ್ಲಿ ಭಗವತಿಯೆಂದರೆ ಗೌರಿ ಅಥವಾ ಪಾರ್ವತಿ ಆಗಬಹುದು. ಅವರು "ವಾಸುದೇವ ಖಂ (ಕಂ)ಡಳಿ ಮೂಲಭದ್ರವಂಶೋದ್ಭವ" ರೆಂದೂ ಶಾಸನ ಗಳು ಅವರನ್ನು ವರ್ಣಿಸಿವೆ.[6] ವಾಸುದೇವ, ಖಂ(ಕಂ)ಡಳಿ, ಮೂಲಭದ್ರರು ವರ್ತಕರ ಮೂಲ ಪುರುಷರಾಗಿದ್ದರೆಂದು ಇಲ್ಲಿ ಧ್ವನಿತವಾಗುವುದರಿಂದ, ಶಿವ ಗೌರಿಯರ ವಿವಾಹದ ವರ್ಣನೆಯಿರುವ ಮೇಲಿನ ಶಾಸನದ ಉತ್ತರಾರ್ಧದ ಹಾಳಾ

---

4. 'ನಕರ'. 'ನಗರ' ವೆಂದರೆ ವರ್ತಕ ಸಮೂಹವೆಂಬುದನ್ನು ಸ್ಮರಿಸಿಕೊಳ್ಳಬೇಕು. ಶಾಸನದ ಕತೆ ವರ್ತಕ ಸಮೂಹದ ಉಗಮದ ಕತೆಯನ್ನು ಹೇಳುತ್ತದೆಯೆಂಬುದೂ ಗಮನಾರ್ಹ.

5. ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಮೈಸೂರು, 1979)ಪು.38।.

6. ಅದೇ.

ಗಿರುವ ಭಾಗದಲ್ಲಿ ಅವರ ಹುಟ್ಟಿನ ವಿಷಯಕವಾದ ಕತೆ ಇದ್ದಿರಲು ಸಾಧ್ಯ. ಇದಕ್ಕಿಂತ ಹೆಚ್ಚಿನ ಊಹೆ ಸದ್ಯಕ್ಕೆ ಸಾಧ್ಯವಿಲ್ಲ. ವೈಶ್ಯರ ಕನ್ನಿಕಾಪರಮೇಶ್ವರಿಯ ಕತೆಯಂತಹ ಕತೆಗಳ ಜೊತೆ ಶಾಸನ ಕಾವ್ಯದ ಕತೆಯನ್ನೂ ಹೋಲಿಸಿ ನೋಡುವ ಅಗತ್ಯವಿದೆ. ಎರಡಕ್ಕೂ ಯಾವುದೇ ಸಂಬಂಧವಿಲ್ಲವೆಂಬುದೂ ಸ್ಪಷ್ಟವಾಗಿದೆ. ಒಟ್ಟಾರೆ, ಇದೊಂದು ಅಪೂರ್ವ ಶಾಸನವೆಂಬಲ್ಲಿ ಅನುಮಾನವಿಲ್ಲ.

ಹೆಚ್ಚಿನ ಸ್ವಾರಸ್ಯದ ಸಂಗತಿಯೆಂದರೆ ಇದರಲ್ಲಿನ ಪದ್ಯಗಳು. ಆಗಲೇ ಸೂಚಿಸಿರುವಂತೆ ಶಾಸನದ ಭಾಷೆ ದೋಷಯುಕ್ತ ಮತ್ತು ಅಲ್ಲಲ್ಲಿ ಶಾಸನದ ಅಕ್ಷರಗಳು ನಾಶವಾಗಿರುವುದರಿಂದ ಕೆಲವು ಭಾಗಗಳು ಅರ್ಥವಾಗುವುದೂ ಕಷ್ಟವಾಗಿದೆ. ಪದ್ಯಗಳನ್ನು ಗದ್ಯದಂತೆ ಉದ್ದಕ್ಕೂ ಬರೆದುಕೊಂಡು ಹೋಗಿದೆಯಾದರೂ ಪ್ರಾಸಾಕ್ಷರಗಳ ಸಹಾಯದಿಂದ ಕೆಲವನ್ನು ಗುರುತಿಸಬಹುದು.

ಪದ್ಯ–1

ಶಾಸನ ಪಾಠ ಹೀಗಿದೆ – "ಅಡಕೆಯು ಸಸಿಗೆ ನೂರ್ಮಡಿ ಚೆಲ್ವೆ ಕೊರಬು ಸೋರ್ಮೂಡಿ ಹೆರೆನೊಸಲು ದೋಟಗುರುಳು ಕಡು ತೋರಮಲೆಯು । ಹೊದುಗೆಯು ಸಜರಿಯುರುಂ। ಗಡದೊಂದೊಂದಾಗಿ ಗಿರಿಯಲ್ಲಿ"

ಇದನ್ನು ಅರ್ಥ ಬರುವಂತೆ ಸುಮಾರಾಗಿ ತಿದ್ದಿ ಕೆಳಗಿನಂತೆ ಪದ್ಯವಾಗಿ ಜೋಡಿಸಬಹುದು.

ವಿ ವಿ
ಅಡಕೆಯ । ಸಸಿಗೆ ನೂ ।
ವಿ ವಿ
ರ್ಮಡಿ ಚೆಲ್ವು । ಕೊರಳು ಸೋ
ವಿ ವಿ ರು
ರ್ಮುಡಿ ಹೆರೆ । ನೊಸಲು ದಾಂ । ಟುಂಗುರುಳು ।
ವಿ ವಿ
ಕಡು ತೋರ । ಮೊಲೆಯ ಹೊಂ
ವಿ ವಿ
ದುಡುಗೆಯ । ಸಬರಿಯರ್ ।
ವಿ ವಿ ರು
ಗಡಣದ । ಲೊಂದೊಂದಾ । ಗಿ ಗಿರಿಯಲ್ಲಿ ।

ಇಲ್ಲಿ ಮತ್ತು ಮುಂದೆ ಮಾಡಿರುವ ತಿದ್ದುಪಾಟಗಳಲ್ಲಿ ಅಭಿಪ್ರಾಯಭೇದಗಳು ಬರುವುದು ಸಾಧ್ಯವಾದರೂ ಒಂದು 'ಷಟ್ಪದ' (ಅಂಶಗಣ ಘಟಿತ ಷಟ್ಪದಿ) ಇಲ್ಲಿದೆಯೆಂಬುದು ಮಾತ್ರ ಸ್ಪಷ್ಟ.

ಪದ್ಯ 2

ಶಾಸನ ಪಾಠ ಹೀಗಿದೆ – "ಕು... ಪಾಗಿ ಮರಗಳ್ಳಂ ಕುಡಿದು ...ರಿದ ಮರಗಳಲಂಕ್ಕಿ ಸೋರಿಮತ್ತ್ತಂ ಹಿರಿದೊಂದು ...ರವೆತ್ತಿ ಹಾಡಿದರಡವಿಯಲ್ಲಿ". ಇದನ್ನು ತಿದ್ದಿ ಹೀಗೆ ಪದ್ಯವಾಗಿ ಬರೆಯಬಹುದು.

ಕು......ಪಾಗಿ
ವಿ ವಿ
ಮರಗಳ್ಳಂ। ಕೃಡಿದುದು। [ಮರಗಳಂ। ಕಡಿದುದು।]
ವಿ ವಿ ರು
ರಿರೆ ವೊರ। ಗಳಲಕ್ಕಿ। ಸೋವಿ ಮತ್ತ್ತಂ।
ಹಿರಿದೊಂದು ...
... ...
ವಿ ವಿ ರು
ಸ್ವರವೆತ್ತಿ। ಹಾಡಿದ। ರಡವಿಯಲ್ಲಿ॥

ಅನುಕೂಲಕ್ಕೆ ಬೇಕಾದರೆ, "ಹಿರಿದೊಂದು ಒನಕೆಯು। ನೊರಳೊಳಂ ಕುಟ್ಟುತ। ಸ್ವರವೆತ್ತಿ ಹಾಡಿದರಡವಿಯಲ್ಲಿ" ಎಂದು ಉತ್ತರಾರ್ಧವನ್ನು ಕಲ್ಪಿಸಿಕೊಳ್ಳಬಹುದು.

ಪದ್ಯ 3

ಶಾಸನ ಪಾಠ ಹೀಗಿದೆ – "ಗುಂಜೆಯು ತುಡುಗೆಯುಂ ರಂಜಿಸಿ ಲೊಟ್ಟು ಕರಂಜದ ...ಸುತ್ತಿಕೊಂಡು ಕಂಜಕಿ ಸಬರಿಯುರು ಬಿಂಜದಲೊಂದಾಗಿ ಮಂಜಗ ರಾಗದಿಂ ಹಾಡುತಿಪ್ಪರು".

ಇದರಲ್ಲಿ ಕನಿಷ್ಠ ತಿದ್ದು ಪಾಟುಗಳನ್ನು ಮಾಡಿ ಹೀಗೆ ಪದ್ಯವಾಗಿ ಬರೆಯಬಹುದು,

ವಿ ವಿ
ಗುಂಜೆಯು। ತುಡುಗೆಯುಂ।
ವಿ ವಿ
ರಂಜಿಸಿ। ತೊಟ್ಟು ಕ।
ವಿ ವಿ ರು
ರಂಜದ। ಗೊಂಚಲ। ಸುತ್ತಿಕೊಂಡು।
ವಿ ವಿ
ಕಂಜಕಿ। ಸಬರಿಯರ್।
ವಿ ವಿ
ಬಿಂಜದ। ಲೊಂದಾಗಿ।
ವಿ ವಿ ರು
ಮಂಜರಿ। ರಾಗದಿಂ। ಹಾಡುತಿಪ್ಪರ್॥

ಗುಂಜೆ=ಗುಲಗಂಜಿ; ಕರಂಜಿ=ಹುಲಿಗಿಲ (ಹೊಂಗೆ) ಮರ; 'ಗೊಂಚಲ' ಎಂಬುದನ್ನು ಕೇವಲ ಊಹೆಯ ಮೇಲೆ ಸೇರಿಸಿದೆ; ಕಂಜಕಿ=ಕಂಜಾಕ್ಷಿ; ಬಿಂಜ=ವಿಂಧ್ಯ, ಕಾಡು; ಮಂಜರಿ=ರಾಗ-ಮಂಜರಿ. ಮೇಲಿನದು ಒಂದು ಸಲಕ್ಷಣ ಷಟ್ಪದ.

ಪದ್ಯ 4

ಶಾಸನ ಪಾಠ ಹೀಗಿದೆ "... ಪದಗೊರಲಿಂದಂ ಪಾಡೆ ಮದಗಜಂ ಎರಳೆ ಸಾರಂಗ ಹುಲ್ಲೆ ಪದಪಿ... ಸೋಲುಗೆಯುದೊಂದೊಂದು ಗಣ. ಚಿತ್ರದದೊಂದು ಬಂದುದ ಮ್ರಿಗದಂತಿದುರ್ಗವಲ್ಲಿ"

ಇದನ್ನು ಹೀಗೆ ಬರೆಯುಲು ಸಾಧ್ಯ.

... ...
ಪದಗೊರಲಿಂ ಪಾಡೆ
ಮದಗಜಂ ಎರಳೆ ಸಾರಂಗ ಹುಲ್ಲೆ ।
ಪದಪಿಂದ ಸೋಲುತ
ಲೊಂದು ಗಣ ಚಿತ್ರದ
ಲೊಂದು ಬರೆದ ಮ್ರಿಗದಂತಿದುರ್ಗವು॥

ತಿದ್ದುಪಾಟು ಸಮಾಧಾನ ತರುವಂತಹುದಲ್ಲವಾದರೂ, ಇದೂ ಒಂದು ಷಟ್ಪದವೆಂಬುದಷ್ಟೇ ಸಮಾಧಾನ.

ಪದ್ಯ 5

ಶಾಸನ ಪಾಠ ಹೀಗಿದೆ – "...ಬಿನವಂಗಳ ...ದಂತಿ ...ಚೆನ್ನಂ ...ನ ಭಂಗಿದಾವೆನೆ ಮೆಚ್ಚಿದಂತಾವಗಂ ನೆರೆದಿಹ ಆ ವನದೊಳಗಿರ್ಪ ಪ್ರಾಣವೆಲ್ಲ"
ಇದನ್ನು ಸುಮಾರಾಗಿ ಹೀಗೆ ತಿದ್ದಿ ತೋರಿಸಬಹುದು.

... ಬಿನವಂಗಳ
... ದಂತಿ ...
... ಚೆನ್ನಂ ... ವ ಭಂಗಿ ।
ದಾವನೆ ಮೆಚ್ಚಿದಂ
ತಾವಗಂ ನೆರೆದಿಹ
ವಾ ವನದೊಳಗಿರ್ಪ ಪ್ರಾಣಿಯೆಲ್ಲ॥

ತಿದ್ದುಪಾಟು ಸಮಾಧಾನಕರವಾಗಿಲ್ಲವಾದರೂ, ಇಲ್ಲೂ ಒಂದು ಷಟ್ಪದವಿದೆಯೆಂಬುದಷ್ಟೇ ಸಮಾಧಾನ.

ಪದ್ಯ 6

ಶಾಸನ ಪಾಠ ಹೀಗಿದೆ –"...ನಾಲ್ಕು [ಕಂಚಿ] ಗಟು ಕೊಡಲಾಳೆಯಂ ಕುಡಿದುಂ ಕೋಡಗ ಮುಸುಡುಂ ಕಿಣಿ... ನಾಡೆಯಂ ...ಮಾಡಿದಂ ಮರುಳಾಗಿ ಬೇಡಿತಿಯಿಗಾ ವಗ್ಗ್ದಂತಿತೆಂದು"

ಇದನ್ನು ಸ್ಥೂಲವಾಗಿ ಹೀಗೆ ಬರೆಯಬಹುದು.

... ನಾಲ್ಕು [ಕಂಚಿ]
ಗಡುಕೊಡಲಾಳೆಯು
ಕುಡಿದು ಕೋಡಗ ಮುಸುಡುಂ ಕಿಣಿ... ।
ನಾಡೆಯು...
ಮಾಡಿದಂ ಮರುಳಾಗಿ
ಬೇಡಿತಿಯರಿಗದುವಂದಿತಂದು ॥

ಆದರೂ ಸರಿಯಾಗಿ ಅರ್ಥವಾಗುವುದಿಲ್ಲ.

ಪದ್ಯ 7 : ಶಾಸನ ಪಾಠ ಹೀಗಿದೆ–" ದೆಸೆಯಾನೇಕರುಂ ಪಱಿದು ಮಿಸಕದೆ...ನ್ತರ ಪರ್ಬ್ಬತ ಹಂದಿ ರೂಪುಗೊಂಡು ತಿಸುವೆಯಂ ನೋಡಲು ಕೆಯ...ಳಂ ಬಂದಂತೆ... ತಪ್ಪಲಲಿಕ್ಕು ಹಿಂಡಗೊಂಡು". ಆದನ್ನು ಹೀಗೆ ಪದ್ಯವಾಗಿ ಜೋಡಿಸಬಹುದು –

ದೆಸೆಯನೇಕರ್ ಪಱಿದು
ಮಿಸುಕದೆ......
...ನ್ತರೆ ಪರ್ಬ್ಬತ ಹಂದಿ ರೂಪುಗೊಂಡು ।
ತಿಸುವೆಯಂ ನೋಡಲು
ಕೆಸರೊಳಂ ಬಂದಂತೆ
...ತಪ್ಪಲೊಳಿಕ್ಕು ಹಿಂಡುಗೊಂಡು ॥

ಪದ್ಯ 8 ಮತ್ತು 9

ಶಾಸನ ಪಾಠ ಹೀಗಿದೆ– "ಹಿಡಿಯಾಡನೆ ಮದದಾನೆ ಮುಂದದಿಂದಿರಲು ಯಿಂದ್ರ ಕಾಂತದಲು ತನ್ನಂದವಮಂ ನೋಡಿ ಕಂಡು ಮದದಾನೆ ತಾನೆನಗಿದಿರಾದುದೆಂದು ಪೊದ್ದು...ಭರದಿಂ ನುಗ್ಗುವಂನ್ನಾ॥ ಕೋಡುಳಿದು ಮದದಾನೆ ನೋಡಿ ತನ್ನಂದವಮಂ ನಾಡೆಯುಂ ಹಿಡಿಯುದಂ...ದ್ದನೆಂದು ಕುಡುವಂದಾಸೆಯಂ ಮಾಡುವೆನುಂ ಕೈಯ್ಯ ನೀಡುತ್ತಿದ್ದುದು ಮುಗ್ಧಭಾವದಿಂದ "

ಪದ್ಯಗಳನ್ನು ಹೀಗೆ ಬಿಡಿಸಬಹುದು :

ಹಿಡಿಯೊಡನೆ ಮದದಾನೆ
[ಮದದಾನೆ ಹಿಡಿಯೊಡನೆ]

ಮುದದಿಂದಿರಲು ಇಂದ್ರ
ಕಾಂತದಿ ತನ್ನಂದ ನೋಡಿಕಂಡು ।
ಮದದಾನೆ ತಾನೆನ
ಗಿದಿರಾದುದೆಂದು ಪೊ
ದ್ದು...ಭರದಿಂ ನುಗ್ಗುವಂನ್ನಾ ॥

ಕೋಡುಳಿದು ಮದದಾನೆ
ನೋಡಿ ತನ್ನಂದಮಂ
ನಾಡೆಯುಂ ಹಿಡಿಯುದಂ ಗೆದ್ದೆನೆಂದು ।
ಕೂಡುವೊಂದಾಸೆಯಿಂ
ಮಾಡುವೆನುಂ ಕೈಯು
ನೀಡುತಿದ್ದುದು ಮುಗ್ಧಭಾವದಿಂದ ॥

ಈ ಪದ್ಯಗಳಲ್ಲಿ ಒಂದು ಸುಂದರ ಕಾಲ್ಪನಿಕ ಘಟನೆಯಿದೆ. ಒಂದು ಗಂಡಾನೆಯು ಹಿಡಿಯ (ಹೆಣ್ಣಾನೆಯು) ಜೊತೆ ಮುದದಿಂದಿರುವಾಗ, ಇಂದ್ರಕಾಂತ ಶಿಲೆಯಲ್ಲಿ ತನ್ನ ರೂಪವನ್ನು ನೋಡಿ, ಇನ್ನೊಂದು ಗಂಡಾನೆ ತನ್ನ ಹೆಣ್ಣಾನೆಯನ್ನು ಬಯಸಿ ಬಂದಿದೆಯೆಂದು ಭ್ರಮಿಸಿ ಆ ಪಡಿ ಬಿಂಬವನ್ನು ಇರಿದು ತನ್ನ ಕೋಡನ್ನು ಮುರಿದು ಕೊಳ್ಳುತ್ತದೆ. ಮತ್ತೆ ಅದೇ ಇಂದ್ರಕಾಂತ ಶಿಲೆಯಲ್ಲಿ ನೋಡಿದಾಗ ಅಲ್ಲಿ ಕೋಡು ಮುರಿದ ಮದ್ದಾನೆಯನ್ನು, (ಎಂದರೆ ತನ್ನ ಬಿಂಬವನ್ನೇ) ಕಂಡು, ತಾನು ತನ್ನ ಪ್ರತಿಸ್ಪರ್ಧಿಯನ್ನು ಸೋಲಿಸಿದೆನೆಂದೂ, ಹೆಣ್ಣಾನೆಯನ್ನು ಗೆದ್ದುಕೊಂಡೆನೆಂದೂ ಭ್ರಮಿಸಿ ಅದರ ಜೊತೆ ಕೂಡಲು ಏಳಲು ಹೋಗುತ್ತದೆ; ಆದರೆ ಏಳಲಾರದೆ, ತನ್ನ ಸೊಂಡಿಲನ್ನು ಹೆಣ್ಣಾನೆಯ ಕಡೆ ಮುಗ್ಧಭಾವದಿಂದ ಚಾಚುತ್ತದೆ.

ಪದ್ಯ 10

ಶಾಸನ ಪಾಠ ಹೀಗಿದೆ– ''ಗಿರಿರಾಜ ತಾಂ ನಿಗವ ಕರೆಸಿ ಸ್ತ್ರೀಯುರಂ ಕರೆ [ದು] ನುಡಿದ ಅನ್ತವರ್ಗ್ಗೆ ವಿನಯದಿಂದ ಪರಮನಂ ಬರಿಸಿ ಗಿರಿಜೆಯೊಳು ನೆರಪುವಂ ಚರಿತದಿಂ ನೀವಿದಿಗ್ಗೊರ್ಳ್ಳಿ [ಬೇಗ]ವೆಂದು ''

ಅದರಲ್ಲಿನ ಪದ್ಯ ಹೀಗಿರಬಹುದು;

ಗಿರಿರಾಜ ತಾನಾಗಳ್
ಕರೆಸಿ ಸ್ತ್ರೀಯರ ಕರೆದು
ನುಡಿದನಂತವರಿಗೆ ವಿನಯದಿಂದ ।
ಪರಮನಂ ಬರಿಸಿ (ಬರಿಯಿಸಿ)
ಗಿರಿಜೆಯೊಳ್ ನೆರಪುವಂ
ಚರಿತದಿಂ ನೀವಿದಿಗ್ಗೊರ್ಳ್ಳಿಯೆ ಂದು ॥

ಪದ್ಯ 11

ಶಾಸನ ಪಾಠ ಹೀಗಿದೆ–" ...ಸ್ಮಿತದಿಂದ ದೇವರುಂ ದಾಚಿಯಿಂದ ಅವಗಂ ಗುಡಿ ಘಳಂ ಕನ್ನಡಿಗಳಿಂ ದೇವಾಧಿದೇವನ...ಖಿಯುರಂ ತಾ ಮಾಲೆವಿಡಿದಿದಿರ್ಗೊಳಲು ನಡೆದರಾಗಳು "

ಇಲ್ಲಿನ ಪದ್ಯ ಹೀಗಿರಬಹುದು–

ಕಡುಸ್ಮಿತದಿಂ ದೇವರ್
ಕೊಡೆಯಿಂದಲಾವಗಂ
ಗುಡಿ ಘಳಂ ಕಳಶ ಕನ್ನಡಿಗಳಿಂ ದೇ।
ವಾಧಿದೇವನೆಡೆಗೆ
ಮಡದಿಯರ್ ತಾ ಮಾಲೆ
ವಿಡಿದಿದಿರ್ಗ್ಗೊಳ್ಳಲು ನಡೆದರಾಗಳ್ ॥

ಪುನಾರಚನೆ ತೀರ ಅಸಮರ್ಪಕ.

ಪದ್ಯ 12 : ಶಾಸನ ಪಾಠ ಹೀಗಿದೆ– "ನಡೆದೆಯ್ದೆ ದೇವರಿದ್ದೆಡೆಯುಂ ನಂದನವನಕ್ಕೆ ಮಡದಿಯರೆಯ್ದೆ ಬಿನ್ನಪವೆಂಬುದು ತಡವಿಲ್ಲ ದೇವ ನಿಮ್ಮಡಿ ಬಿಜಯುಂಗೆಯೆ ತಡವಿಲ್ಲ ಲಗ್ನ...ಕಾಲ"

ಪದ್ಯ ಹೀಗಿರಬಹುದು :

ನಡೆದೆಯ್ದೆ ದೇವರಿ
ದ್ದೆಡೆಯು ನಂದನವನಕೆ
ಮಡದಿಯರೆಯ್ದೆ ಬಿನ್ನಪವೆಂಬುದು ।
ತಡವಿಲ್ಲ ದೇವ ನಿ
ಮ್ಮಡಿ ಬಿಜಯುಂಗೆಯ್ಯೆ
ತಡವಿಲ್ಲ ಲಗ್ನಕೆ ಯಿದುವೆ ಕಾಲ॥

ಪದ್ಯ 13 : ಶಾಸನ ಪಾಠ ಹೀಗಿದೆ– "...ಕರ್ಣ ತಿಳಕ ಆ...ರ...ಗಳಸೆವ ಬಾಸಿಗಗಟ್ಟಿದಂತಿರಿರ್ಕ್ಕು। ಸಸಿಮೌಳಿ ಮುಡಿವ ಮಲ್ಲಿಗೆ ಮಿಸುಪ ವಾಸುಕಿ [ಮು] ತ್ತಿನ [ಸರ] ದ ಮಾಳ್ಕೆಯಿಂತಿರಿರ್ಕ್ಕು" ॥

ಪದ್ಯ ಹೀಗಿರಬಹುದು :

...ಕರ್ಣ ತಿಳಕ
ಆ...ರ...ಗ
ಳಸೆವ ಬಾಸಿಗಗಟ್ಟಿದಂತಿರಿರ್ಕ್ಕು ।
ಸಸಿ ಮುಡಿದ ಮಲ್ಲಿಗೆ
ಮಿಸುಪ ವಾಸುಕಿ ಮುತ್ತಿ-
ನ ಸರದ ಮಾಳ್ಕೆಯಂತಿರಿರ್ಕ್ಕು ॥

ಪದ್ಯ 14 : ಶಾಸನ ಪಾಠ ಹೀಗಿದೆ–''ಕೊರಲ ನರಸಿರಮಾಲೆ [ವ]ರ ಹೊನ್ನ ಸಂಕಲೆ। ಕರವ ಸುತ್ತಿದ ಫಳನಿಗಳರಾಗೆ॥ ಕರಿಮು [ಗ] ... ಕೆಯುಂತಿರೆ ಪುಲಿದೊಗಲು ಬಿತ್ತರಿಸಲು ದೇವಾಂಗವಸ್ತ್ರದಂತೆ "॥

ಪದ್ಯ ಹೀಗಿರಬಹುದಂ :

ಕೊರಲ ನರಸಿರಮಾಲೆ
ವರಹೊನ್ನ ಸಂಕಲೆ
ಕರವ ಸುತ್ತಿದ ಫಣಿ ನಿಗಳವಾಗೆ ।
ಕರಿದೊಗಲ್ ಹೊದಕೆಯುಂ
ತಿರೆ ಪುಲಿದೊಗಲು ಬಿ
ತ್ತರಿಸಲು ದೇವಾಂಗ ವಸ್ತ್ರದಂತೆ ॥

ಪದ್ಯ 15 : ಶಾಸನ ಪಾಠ ಹೀಗಿದೆ— ''ಮಿಸುಪ ಪಿಂಗಳ ಜೆಡೆ ... ತಂ ಜೂಹಾಗೆ। ಅಸದಳ ಪೂಸಿದ ಭಸ್ಮರೊಪ್ಪ ಸಸಿ ಭೂಸ (ಷ) ಣಂಗೆ ತಾನೆಸೆವ ಶ್ರೀಗಂಧ ಮಣಿ...ಪೂಸಿದ ಮಾಳ್ಕೆಯೆಂತಿರಿರ್ಕ್ಕು ॥

ಇಲ್ಲಿನ ಪದ್ಯ ಹೀಗಿರಬಹುದು–

ಮಿಸುಪ ಪಿಂಗಳ ಜಡೆ
ಮಸಗುಶಂ ರೂಹಾಗೆ
ಅಸದಳ ಪೂಸಿದ ಭಸ್ಮರೂಪ
ಸಸಿಭೂಷಣಂಗೆ ತಾ
ನೆಸೆವ ಶ್ರೀಗಂಧಮಣಿ
ಪೂಸಿದ ಮಾಳ್ಕೆಯುಂತಿರಿರ್ಕ್ಕು ।

ಪದ್ಯ 16 : ಶಾಸನ ಪಾಠ ಹೀಗಿದೆ– ''ಕರಿಯು ಕಬ್ಬುಗಳನೆ ಸುರರೆಲ್ಲಂ ಪಿಡಿದರು ಅಮರೇಂದ್ರಂ ಬು...ದಂ ಪಟ್ಟಾವಳಿಯು ತಳಿಯು ಬೆಡಗಪ್ಪ ನಂದಿಯಂ ಮೃಡದೇವನೇಱಿದಂ ನಡೆತಂದರು ಗಿರಿಪುರು. ಯುಲು ನಿಲಲು''

ಇಲ್ಲಿನ ಪದ್ಯ ಹೀಗಿರಬಹುದಂ :

ಕಡಿಗಬ್ಬ ಸುರರೆಲ್ಲರ್
ಪಿಡಿದರಮರೇಂದ್ರಂ
ಬಡಿದಂ ಪಟ್ಟಾವಳಿಯು ತಳಿಯ
ಬೆಡಗಪ್ಪ ನಂದಿಯು
ಮೃಡದೇವನೇಱಿದಂ
ನಡೆತಂದರ್ ಗಿರಿಪುರಿಯುಲು ನಿಲಲು ॥

ಇಲ್ಲಿನ ಹದಿನಾರು ಪದ್ಯಗಳೂ ನಿಶ್ಚಿತವಾಗಿ ಷಟ್ಪದಗಳೇ ಆಗಿವೆ. ಈ ಪದ್ಯಗಳನ್ನು ಪುನಾರಚಿಸುವಾಗ ಕೆಲವೆಡೆ ಸ್ವಾತಂತ್ರ್ಯವನ್ನು ವಹಿಸಿದ್ದರೂ, ಶಾಸನದ ಮೂಲಪಾಠವನ್ನೂ ಅಲ್ಲೇ ಕೊಟ್ಟಿರುವುದರಿಂದ ಓದುಗರು ಎರಡನ್ನೂ ಹೋಲಿಸಬಹುದು. ಶಾಸನಪಾಠ ಪುನಾರಚನೆಯಲ್ಲಿ ಇನ್ನೂ ಸಾಕಷ್ಟು ಕೆಲಸಮಾಡಲವಕಾಶವಿದೆ. ಆ ಕೆಲಸವನ್ನು ಮುಂದೊಮ್ಮೆ ನಾನೇ ಮಾಡಬಹುದು.

ಈಗಾಗಲೇ ಸೂಚಿಸಿರುವಂತೆ, ಇಲ್ಲಿಯ ಷಟ್ಪದಗಳು ವಿ+ವಿ। ವಿ+ವಿ। ವಿ+ವಿ+ರು। ವಿ+ವಿ। ವಿ + ವಿ। ವಿ+ವಿ+ರು ॥ ಎಂಬ ಲಕ್ಷಣದ ಅಂಶ ಷಟ್ಪದಿಗಳೇ ಆಗಿವೆ. ಉದಾಹರಣೆಗೆ ಪದ್ಯ 1, 3, ನೋಡಿ. ಉಳಿದ ಎಲ್ಲ ಪದ್ಯಗಳಲ್ಲೂ ಇರುವುದೆಲ್ಲ ಬಹುತೇಕ ಅಂಶಗಣಗಳೇ. ಕೆಲವೆಡೆ, ಶೀರ ವಿರಳವಾಗಿ ವಿಷ್ಣುವಿನ ಬದಲು ಬ್ರಹ್ಮ ಬಂದಿದೆ. ಉದಾಹರಣೆಗೆ 15 ನೇ ಪದ್ಯದ 6 ನೇ ಸಾಲು ನೋಡಿ. ಅದನ್ನೂ 'ಮಾಳಿಕೆ'ಯೆಂದು ಓದಲು ಸಾಧ್ಯ. ಮೂರು ಆರನೇ ಪಾದಗಳ ಪಾದಾಂತಗಣ ನಿಯತವಾಗಿ ರುದ್ರ. ಸ್ವಾರಸ್ಯವೆಂದರೆ ವಿಷ್ಣುವಿನ ಜಾಗದಲ್ಲಿ ಐದು ಮಾತ್ರೆಯ ಗಣಗಳು ಬಂದಿರುವುದು. ಉದಾಹರಣೆಗೆ ಪದ್ಯ 14 ರ "ಕೊರಲನರ"ವನ್ನೂ, ಪದ್ಯ 8 ರ 'ಹಿಡಿಯೊಡನೆ', ಪದ್ಯ 9 ರ 'ಕೋಡಳಿದು', ಪದ್ಯ 10 ರ 'ಯರಕರೆದು' ಇವುಗಳನ್ನೂ ನೋಡಿ. ಪದ್ಯ 14 ರಲ್ಲಿ 'ಕೊರಲನರ' ಎಂಬ ಐದು ಮಾತ್ರೆಯ ಗಣದ ಜೊತೆ 'ಸಂಕಲೆ'ಎಂಬ ವಿಷ್ಣುಗಣ ಬಂದಿರುವುದನ್ನು ಗಮನಿಸಬೇಕು. 'ವಿವಾಹ ಪುರಾಣ'ವು ಛಂದಸ್ಸಿನ ದೃಷ್ಟಿಯಿಂದ ಷಟ್ಪದದ ವಿಷ್ಣುಗಣಗಳು ಮಾತ್ರಾ ಷಟ್ಪದಿಯ ಪಂಚಮಾತ್ರಾಗಣಗಳಾಗುವ ಸಂಕ್ರಮಣ ಕಾಲದ ಸ್ಥಿತಿಗೆ ಸಂಕೇತವಾಗುತ್ತದೆ. ಅಂಶ ಷಟ್ಪದಿಯು ಮೊದಲು ಪಂಚಮಾತ್ರಾಗಣಗಳ ಕುಸುಮ ಷಟ್ಪದಿಯಾಯಿತೆಂದೂ ಬಳಿಕ ಕುಸುಮ ಷಟ್ಪದಿಯ ಮಾದರಿಯಲ್ಲಿ ಪರ ಮತ್ತು ಇತರ ಮಾತ್ರಾ ಷಟ್ಪದಿಗಳು ರೂಪುಗೊಂಡುವೆಂದೂ ಈಗಾಗಲೇ ಮಾಡಿರುವ ವಿದ್ವಾಂಸರ ಊಹೆಯನ್ನು ಈ ಶಾಸನವು ಸಮರ್ಥಿಸುತ್ತದೆ. ಈ ಹಿನ್ನೆಲೆಯಲ್ಲಿ ಇದು ಒಂದು ಮಹತ್ವದ ದಾಖಲೆಯಾಗುತ್ತದೆ.

ನಮಗೆ ತಿಳಿದಮಟ್ಟಿಗೆ ರಾಘವಾಂಕನ (ಸು.ಕ್ರಿ.ಶ. 1230) ಷಟ್ಪದಿ ಕಾವ್ಯಗಳೇ ಆ ಪ್ರಕಾರದ ಕನ್ನಡದ ಮೊದಲ ಲಭ್ಯ ಕಾವ್ಯಗಳು. ಕ್ರಿ.ಶ. 1224ರಲ್ಲಿ ಹುಟ್ಟಿರುವ ಹರಿಹರದ ಶಾಸನವು ಪೋಲಾಳ್ವ ದಂಡನಾಥನಿಂದ ರಚಿತವಾದ "ಹರಿ ಚಾರಿತ್ರ"ವೆಂಬ ಷಟ್ಪದೀ ಕಾವ್ಯದ ಹೆಸರು ಹೇಳಿದ್ದರೂ ಅದಿನ್ನೂ ನಮಗೆ ಲಭ್ಯವಾಗಿಲ್ಲ. ಸೋಮೇಶ್ವರ ಚಕ್ರವರ್ತಿಯ (ಕ್ರಿ.ಶ.1129) "ಮಾನಸೋಲ್ಲಾಸ"ದಲ್ಲಿ ಅಂಶ ಷಟ್ಪದಿಯ ಲಕ್ಷ್ಯ ಪದ್ಯವಿದೆಯಲ್ಲದೆ, ಅದು "ಕಥಾತ್ಮಕ"ವೆಂದೂ ಮತ್ತು "ಚಿತ್ರಕಥಕ"ರು ಅದನ್ನು ಪಠಿಸುತ್ತಿದ್ದರೆಂದೂ ಹೇಳಲಾಗಿದೆ. ಸೋಮೇಶ್ವರನ ಅಭಿಪ್ರಾಯದಲ್ಲಿ, ಷಟ್ಪದದಲ್ಲಿ (ಅಂಶಷಟ್ಪದಿಯಲ್ಲಿ) ಕಥನಕಾವ್ಯಗಳು ರಚನೆ

ಯಾಗಿದ್ದುವೆಂದೂ, ಅವನ್ನು ಚಿತ್ರಕಥಕರು ಹಾಡುತ್ತ, ಅದಕ್ಕೆ ಕಥೆಗನುಗುಣವಾದ ವರ್ಣ ಚಿತ್ರಗಳನ್ನು ತೋರಿಸುತ್ತಿದ್ದರೆಂದು ಸೂಚಿತವಾಗುತ್ತದೆ. ಷಟ್ಪದ ರೂಪವಾದ ಯಾವುದೇ ಕಥನಕಾವ್ಯವೂ ನಮಗೆ ಲಭ್ಯವಾಗಿಲ್ಲದಿರುವಾಗ "ವಿವಾಹ ಪುರಾಣವು" ಅತ್ಯಂತ ಮಹತ್ವದ ಸ್ಥಾನವನ್ನು ಪಡೆಯುತ್ತದೆ. "ವಿವಾಹ ಪುರಾಣ"ವು ಕನ್ನಡದ ಲಭ್ಯ ಮೊತ್ತಮೊದಲ ಷಟ್ಪದೀ ರೂಪವಾದ ಕಾವ್ಯವಾಗಿ ರವುದಲ್ಲದೆ, ಏಕೈಕ "ಷಟ್ಪದ" (ಅಂಶಷಟ್ಪದಿ) ಕಾವ್ಯವೂ ಆಗಿದೆ.

ಇಲ್ಲಿ ಒಂದು ಚಿಕ್ಕ ಊಹೆಯನ್ನು ಮಾಡಲವಕಾಶವಿದೆ. ಸಿದ್ಧರಾಮನ(ಸು.ಕ್ರಿ.ಶ. 1160) ವಚನ ಕೃತಿಗಳಲ್ಲಿ ಕುಸುಮಷಟ್ಪದಿಯನ್ನು ಸುಲಭವಾಗಿ ಗುರುತಿಸಬಹುದು.

ಉದಾ :-

ಚಿನ್ನೆಯರ ಬಲೆಯಲ್ಲಿ
ಎನ್ನನಿರಿಸಿದೆ ಪ್ರಭುವೆ
ಇನ್ನಿದಕೆ ಭಾವಜನು ಬೇಂಟೆಕಾರ
ಕಣ್ಣಿಗಳು ತಾವೈದು
ಎನ್ನ ಗ್ರಹಿಸದ ಮುನ್ನ
ಚಿನ್ಮಯ ಪ್ರಭು ಸಲಹೊ ಯೋಗಿನಾಥ ॥

ಅಂಶಷಟ್ಪದಿ ದೃಢವಾಗಿದ್ದ ಸೋಮೇಶ್ವರನ ಕಾಲಕ್ಕೂ (ಕ್ರಿ.ಶ. 1126) ಅಂಶ ಷಟ್ಪದಿಯು ಆಗಲೇ ಕುಸುಮಷಟ್ಪದಿಯಾಗಿರುವ ಸಿದ್ಧರಾಮನ ಕಾಲಕ್ಕೂ (ಕ್ರಿ.ಶ. 1160) ಮಧ್ಯದ ಅವಧಿಯಲ್ಲಿ "ವಿವಾಹ ಪುರಾಣ"ವು ರಚಿತವಾಗಿರುವ ಸಾಧ್ಯತೆಯೂ ಇದೆ. ಅದರ ಕಾಲ ಸುಮಾರು ಕ್ರಿ.ಶ. 1140-50 ಇರಬಹುದು. ಡಾ. ಶ್ರೀನಿವಾಸರಿತ್ತಿಯವರ ಪ್ರಕಾರ (ಅವರ ಪತ್ರ 25-4-89) ಲಿಪಿಯ ದೃಷ್ಟಿಯಿಂದ "ಕಲ್ಯಾಣ ಚಾಳುಕ್ಯರ 6ನೇ ವಿಕ್ರಮಾದಿತ್ಯನ ನಂತರದ ಅರಸರ ಕಾಲದ ಶಾಸನಗಳನ್ನು" ಇದು ಹೋಲುತ್ತದೆ. ಅವರ ಪ್ರಕಾರ, ಶಾಸನದ ಕಾಲ ಕ್ರಿ.ಶ. 1140-1180ರ ಅವಧಿಯದು. ಹೆಚ್ಚೆಂದರೆ ಅದರ ಕಾಲ ಸು. ಕ್ರಿ.ಶ. 1200. ಅಥವಾ ಒಂದು ವೇಳೆ ಸು. ಕ್ರಿ.ಶ. 1200 ಎಂದಿಟ್ಟುಕೊಂಡರೂ, ಅದು ಕನ್ನಡದ ಪ್ರಪ್ರಥಮ ಷಟ್ಪದ ಛಂದಸ್ಸಿನ ಕಾವ್ಯವೆಂಬ ಅಗ್ಗಳಿಕೆಯನ್ನು ಉಳಿಸಿಕೊಂಡೇ ಇರುತ್ತದೆ.

ಈ ಕಾವ್ಯವು ಶಾಸನ ಶೈಲಿಯನ್ನನುಸರಿಸಿ, ಪದ್ಯ ಗದ್ಯ ರೂಪದಲ್ಲಿದೆ. ಇಂತಹ ಶಾಸನ ದೊರಕಿರುವುದು ಇದೇ ಮೊದಲು; ಇದೇ ಕೊನೆ. ಏಕೆಂದರೆ ಗದ್ಯದ ಜೊತೆ ಮಿಶ್ರಗೊಂಡು ಕಂದ ವೃತ್ತಗಳು ಬರುವ ಶಾಸನಗಳವೆಯೇ ಹೊರತು, ಬರಿಯ ಷಟ್ಪದ ಪದ್ಯಗಳೇ ಬರುವ ಶಾಸನಗಳು ಇಲ್ಲವೇ ಇಲ್ಲ ಚಿತ್ರಕಥಕರು ಹಾಡುತ್ತಿದ್ದರೆಂದು ಹೇಳಲಾದ ಮೊದಲ ಷಟ್ಪದ ಕಾವ್ಯಗಳು.

ಚಂಪೂ ರೀತಿಯಲ್ಲಿ, ಎಂದರೆ ಗದ್ಯ ಮತ್ತು ಷಟ್ಪದ ಪದ್ಯಗಳನ್ನೊಳಗೊಂಡ ಪ್ರಕಾರದಲ್ಲಿದ್ದುವೋ ಏನೋ! ಇದಕ್ಕಿಂತ ಹೆಚ್ಚಿನ ಊಹೆಗೆ ಸದ್ಯಕ್ಕೆ ಅವಕಾಶವಿಲ್ಲ. ಈಗಿರುವಂತೆ 'ವಿವಾಹ ಪುರಾಣ'ದ ಬಂಧ ಹೀಗಿದೆ— ಆರಂಭದಲ್ಲಿ ಹದಿಮೂರು ಸಾಲುಗಳ ಗದ್ಯವಿದೆ; ಮುಂದೆ ಹದಿನೈದು ಸಾಲುಗಳಲ್ಲಿ ಒಂಬತ್ತು ಷಟ್ಪದಿ ಪದ್ಯಗಳಿವೆ; ಮುಂದೆ ಒಂಬತ್ತು ಸಾಲಂಗಳ ಗದ್ಯವಿದೆ; ಅದರ ಮುಂದೆ ಹನ್ನೆರಡು ಸಾಲುಗಳಲ್ಲಿ ಏಳು ಷಟ್ಪದಿಗಳಿವೆ; ಮುಂದೆ ಹತ್ತೊಂಬತ್ತು ತ್ರುಟಿತ ಸಾಲುಗಳಲ್ಲಿ ಗದ್ಯವಿದೆ; ಅದರ ಮುಂದಿನ ಭಾಗ ಪೂರ್ತಿ ಹಾಳಾಗಿದೆ. ಚಂಪೂ ರೀತಿಯಲ್ಲಿ ಗದ್ಯಸಮೇತವಾದ ಷಟ್ಪದಿ ರಚನೆಗಳು ಆರಂಭ ಕಾಲದಲ್ಲಿ ಕಾಣಿಸಿಕೊಂಡು, ಕ್ರಮೇಣ—ರಾಘವಾಂಕನ ಕಾಲಕ್ಕೆ—ಗದ್ಯವನ್ನು ಬಿಟ್ಟು ಕೇವಲ ಪದ್ಯರೂಪದ ರಚನೆಗಳೇ ಕಾಣಿಸಿಕೊಂಡಿರಬಹುದೆಂಬ ಊಹೆಯನ್ನು ಮಾಡಲವಕಾಶವಿದೆ. ಚಂಪೂ ಪ್ರಕಾರದಿಂದ ಷಟ್ಪದಿ ಪ್ರಕಾರಕ್ಕೆ ಕನ್ನಡ ಕಾವ್ಯವು ಹೊರಳಿದುದರ ಸಂಕ್ರಮಣ ಸ್ಥಿತಿಯನ್ನು ಈ 'ವಿವಾಹ ಪುರಾಣ' ಒಳಗೊಂಡಿರುವಂತಿದೆ.

ಕೊನೆಯದಾಗಿ–ಅತ್ಯಂತ ಸ್ವಾರಸ್ಯಕರ ವಿಷಯವೊಂದರೆ "ವಿವಾಹ ಪುರಾಣ"ವು ಚಿತ್ರಕಥಕರು ಹಾಡುತ್ತಿದ್ದ ಷಟ್ಪದ ಕಥನಗೀತವೇ ಆಗಿದ್ದಿರಬಹುದು. ಇದನ್ನು ಸ್ವಲ್ಪ ವಿಸ್ತರಿಸುವುದು ಅಗತ್ಯ. "ಮಾನಸೋಲ್ಲಾಸ"ದಲ್ಲಿ ಷಟ್ಪದಿಯನ್ನು ಕುರಿತಂತೆ, ಈ ಮಾತಿದೆ–

> ಕರ್ಣಾಟಭಾಷಯಾ ಗೇಯಾ ಪ್ರಾಣಾಕ್ಷರಸಮನ್ವಿತಾ
> ಷಟ್ಪದೀ ತಾಲರಹಿತಾ ಸಾನುಪ್ರಾಸಾ ಕಥಾತ್ಮಿಕಾ ॥

ಅದೇ ಕೃತಿಯಲ್ಲಿ "ಕಥಾಸು ಷಟ್ಪದೀ ಯೋಜ್ಯಾ" ಎಂದು ಹೇಳಿರುವುದಲ್ಲದೆ, 'ಚಿತ್ರಕಥಕ'ನ ಲಕ್ಷಣವನ್ನು ಹೇಳುವಾಗ "ಕರ್ಣಾಟಭಾಷಯಾ ಯಸ್ತು ಷಟ್ಪದೀ–ಪಠನೋದ್ಯತಃ" ಎಂದೂ ಹೇಳಲಾಗಿದೆ. ಈ ಮಾತುಗಳ ಅರ್ಥವಿಷ್ಟು– "ಇದು ಕರ್ಣಾಟಭಾಷೆಯಲ್ಲಿ ಹಾಡತಕ್ಕದ್ದು; ಪ್ರಾಣಾಕ್ಷರ(ಪ್ರಾಸ)ಗಳನ್ನು ಉಳ್ಳದ್ದು; ತಾಳ ರಹಿತವಾದದ್ದು; ಅನುಪ್ರಾಸಾತ್ಮಕವಾದದ್ದು; ಕಥೆಯನ್ನು ಒಳಗೊಂಡಿರುವುದು".[7] ಜೊತೆಗೆ, "ಸೋಮೇಶ್ವರನ ಕಾಲಕ್ಕಾಗಲೇ (1126-39) ಕನ್ನಡದಲ್ಲಿ ಷಟ್ಪದೀ ನಿಬದ್ಧವಾದ ಕಥನ ಕಾವ್ಯಗಳು ರಚಿತವಾಗಿದ್ದುವೆಂಬ ಅಮೂಲ್ಯವಾದ ಸಂಗತಿಯೂ ಚಿತ್ರಕಥಕರು ಕನ್ನಡ ಭಾಷೆಯ ಆ ಷಟ್ಪದಿಗಳನ್ನು ಹಾಡುತ್ತಿದ್ದುದರಿಂದ ಅವು ಜನ ಸಾಮಾನ್ಯರಲ್ಲಿ ಪ್ರಿಯವಾಗಿದ್ದುವೆಂಬ ಸ್ವಾರಸ್ಯವಾದ ಸಂಗತಿಯೂ"[8] ಸ್ಪಷ್ಟವಾಗಿದೆ.

---

7. ಟಿ. ವಿ ವೆಂಕಟಾಚಲಶಾಸ್ತ್ರೀ: ಕನ್ನಡ ಛಂದಃಸ್ವರೂಪ(1978. ಮೈಸೂರು,ಪು.491
8 ಅದೇ. ಪು. 492.

ಚಿತ್ರಕಥನವೆಂಬುದು ಪ್ರಾಚೀನ ಕರ್ನಾಟಕದಲ್ಲಿದ್ದ ಒಂದು ಜಾನಪದ ಪ್ರಕಾರ. "ವಡ್ಡಾರಾಧನೆ"ಯಿಂದ ಅದರ ಸ್ವರೂಪವೇನೆಂಬುವ ವಿಶದವಾಗುತ್ತದೆ. "ವೈನಯಿಕನೆಂಬೊನೊರ್ವ ಪುರುಷಂ ಕನ್ನೆಯುಂ ಬಂಟನ ವೃದ್ಧಸ್ತ್ರೀಯುಂ ಮೂವರ ಚಿತ್ರಕಥೆಗಳಂ ಪಟದೊಳ್ ತೋಱಿ ಪೇೞ್ದು ಲೋಗರಂ ಡಂಬಿಸಿ ಮಾೞುಗೊಳ್ವ ಬತ್ತಮಂ ಕೞ್ವೊನ್"[9] ಎಂಬುದು, ಕಥೆ ಹೇಳುವವನು ಕಥೆಯಲ್ಲಿ ಬರುವ ಬೇರೆ ಬೇರೆ ದೃಶ್ಯಗಳನ್ನು ಚಿತ್ರಗಳಲ್ಲಿ ತೋರಿಸುತ್ತ ಹೇಳುವುದೇ ಚಿತ್ರಕಥನವೆಂಬುದನ್ನು ಸ್ಪಷ್ಟಪಡಿಸುತ್ತದೆ. ಸುಕುಮಾರಚರಿತದಲ್ಲೂ 'ಚಿತ್ರಕಥೆ' ಹೇಳುವ ಪ್ರಸ್ತಾಪವಿದೆ (7.16. ವಚನ). ಚಿತ್ರಕಥನ ಕಲೆ ಇಂದಿಗೂ ದಕ್ಷಿಣ ಮಹಾರಾಷ್ಟ್ರದಲ್ಲಿ ಜೀವಂತವಾಗಿದೆ. ಚಿತ್ರಕಥಕರು ಗದ್ಯದಲ್ಲಿ ಕತೆಯನ್ನು ಹೇಳುತ್ತ, ಪದ್ಯಗಳನ್ನು ಹಾಡುತ್ತ, ಜೊತೆಗೇ ಚಿತ್ರಗಳನ್ನೂ ತೋರಿಸುತ್ತ ಒಟ್ಟಾರೆ ಕಥಾನಿರೂಪಣೆ ಮಾಡುತ್ತಿದ್ದರು. 'ಚಿತ್ರಕಥನ'ಗಳಲ್ಲಿ ಷಟ್ಪದಗಳ ಬಳಕೆಯಾಗುತ್ತಿತ್ತು ಎಂಬುದು ಬಹು ಮುಖ್ಯ ಸಂಗತಿ.

ಹಾಗೆ ನೋಡಿದರೆ, 'ವಿವಾಹಪುರಾಣ'ವೇ ಒಂದು ಷಟ್ಪದೀ ರೂಪದ ಚಿತ್ರಕಥನವಾಗಿರಬಹುದು. ಶಾಸನದ ಆರಂಭವನ್ನು ಗಮನಿಸಿ– "ಶ್ರೀಮತ್ ಶಂಕರಾಯ ನಮಃ ಗುರುಭ್ಯಾಯ ನಮಃ ಶ್ರೀ ಗಣಪತ್ಯಾಯ ನಮಃ ಅವಧಾರಿಸಿ... ಕೊಂಡಾಡುವ ಸ್ವಾಮಿಗಳಿರ ಕುಲಮಂ ಕೊಂಡಾಡುವ ಸ್ವಾಮಿಗಳವಧಾರಿಸಿ ಬಲುಹದ ಕೊಂಡಾಡುವ ಸ್ವಾಮಿಗಳವಧಾರಿಸಿ ಸ್ವಯಂಭು ಸೆಟ್ಟಿ ಸ್ವಾಮಿಗಳವಧಾರಿಸಿ ಪಸುಂಬೆಸೆಟ್ಟಿ [ಸ್ವಾಮಿಗಳವಧಾರಿಸಿ] ಕೊಂಕಣಸ... ಸಂತುಷ್ಟ ಸ್ವಾಮಿಗಳವಧಾರಿಸಿ। ಮೇಲ್ಪಟ್ಟ ಪಟ್ಟಣಾಧಿ [ಪ] ಸ್ವಾಮಿಗಳವಧಾರಿಸಿ। ಶ್ರೀಮನುಮಹಾದೇವರ ಗೌರೀದೇವಿಯ ನಿಮಿತ್ತವಾಗಿ ಹುಟ್ಟಿ [ದ] ಸ್ವಾಮಿಗಳವಧಾರಿಸಿ ನಂಮದೊಂದು[10] ಕುಲ ಹುಟ್ಟಿದ ವಿವಾಹ ಪುರಾಣಮನವಧಾರಿಸಿ ಸ್ವಾಮಿಗಳ... ಕಚಿತ್ತದಿಂ ಕೇಳಿ ಸ್ವಾಮಿಗಳಿರ। ಶ್ರೀ ಸಕಳ ದೇವಾಧಿದೇವನುಂ ಕೈಲಾಸ...ದ ಲೀಲೆಯಿಂದಿರಲು"– ಇದು ವರ್ತಕ ಸಮೂಹವನ್ನು ಕುರಿತು, ಅವರ ಕುಲೋತ್ಪತ್ತಿಯ ಕತೆಯನ್ನು ಹೇಳುವ ರೀತಿ. "ಅವಧಾರಿಸಿ" ಎಂಬ ಮಾತು ಕಥಾನಿರೂಪಕನ ಮಾತೇ ಆಗಿದೆ. ಆರಂಭದಲ್ಲಿ ನಿರೂಪಕನು ತನ್ನ ಪ್ರೇಕ್ಷಕ ವರ್ಗವನ್ನುದ್ದೇಶಿಸಿ ಮಾತನಾಡಿ, "ಶ್ರೀ ಸಕಳ ದೇವಾಧಿದೇವನುಂ" ಕೈಲಾಸದಲ್ಲಿರುವ

---

9 ವಡ್ಡಾರಾಧನೆ (ಸಂ : ಡಿ. ಎಲ್. ನರಸಿಂಹಾಚಾರ್, ಮೈಸೂರು, 1970). ಪು. 4, 17, 20

10 ಇದು "ನಿಮ್ಮದೊಂದು" ಎಂದು ಇದ್ದಿರಬಹುದೇ? ಆಗ ಕಥಕನು ವರ್ತಕರಿಗೆ ಕತೆ ಹೇಳುವ ಶೈಲಿಯಲ್ಲಿದೆಯೆಂಬ ಸ್ವಾಭಾವಿಕ ನಿರ್ಣಯಕ್ಕೆ ಬರಬಹುದು. "ನಮ್ಮದೊಂದು" ಎಂಬ ಪಾಠವನ್ನಿಟ್ಟುಕೊಂಡರೆ ಶಾಸನ ಬರೆದಾತ ವರ್ತಕವರ್ಗಕ್ಕೆ ಸೇರಿದವನೆಂಬುದು ಸಿದ್ಧವಾಗುತ್ತದೆ. ಇದು ಸ್ವಲ್ಪಮಟ್ಟಿಗೆ ಅಸಂಭವ.

ಘಟ್ಟದಿಂದ ಕತೆಯನ್ನು ಆರಂಭಿಸಿದ್ದಾನೆ. ಗಿರಿ, ಕಾಡು, ಕಾಡಿನ ಶಬರಿಯರು, ಅವರ ಹಾಡು ಕುಣಿತ, ಕಾಡಿನ ಪ್ರಾಣಿಗಳು ಇವುಗಳ ವರ್ಣನೆ ಪದ್ಯರೂಪದಲ್ಲಿದೆ (ಷಟ್ಪದ ರೂಪವಾಗಿದೆ). ಮುಂದೆ ವಿವಾಹದ ಏರ್ಪಾಟಿನ ಸಂದರ್ಭದ ವರ್ಣನೆಯು ಗದ್ಯಭಾಗವೂ ಕಥಾ ನಿರೂಪಕನ ಶೈಲಿಯಲ್ಲೇ ಇದೆ. ಇದೊಂದು ಚಿತ್ರಕಥನವೇ ಆಗಿದ್ದು ಅಲ್ಲಲ್ಲಿ ನಿರೂಪಕನು ಚಿತ್ರಗಳನ್ನು ತೋರಿಸುತ್ತಿದ್ದಿರಬಹುದು. ಸೃಷ್ಟಿ ಪೂರ್ವದ ಕೈಲಾಸ, ಅಲ್ಲಿ ಶಿವ, ಅಷ್ಟಲೋಕ ಪಾಲಕರು, ನವಗ್ರಹಗಳು, ಸ್ತೋತ್ರ ಮಾಡುತ್ತಿರುವ ಬ್ರಹ್ಮ, ವಿಷ್ಣು, ಚಂದ್ರ ಸೂರ್ಯರು, ಧ್ಯಾನಸ್ಥರಾಗಿರುವ ಸಪ್ತರ್ಷಿಗಳು ಇದು ಒಂದು ಚಿತ್ರವಾಗಬಹುದು. ಗಿರಿಯನ್ನು ಏರಿ ತಪಸ್ಸುಮಾಡುತ್ತಿರುವ ಗೌರಿಯ ಚಿತ್ರದ ಜೊತೆ ಆ ಕಾಡಿನ ಶಬರಿಯರ, ಮೃಗಗಳ ಚಿತ್ರವು ಇನ್ನೊಂದಾಗಬಹುದು. ಹೆಣ್ಣಾನೆಯೊಡನೆ ಸುಖಿಸುತ್ತಿದ್ದ ಗಂಡಾನೆ ಚಂದ್ರಕಾಂತ ಶಿಲೆಯಲ್ಲಿ ಪ್ರತಿಫಲಿತವಾಗಿದ್ದ ತನ್ನ ಬಿಂಬವನ್ನೇ ಇರಿದು ಕೋಡು ಮುರಿದುಕೊಂಡ ಚಿತ್ರ ಹಾಸ್ಯವನ್ನು ಉಕ್ಕಿಸುವಂತಹುದಾಗಬಹುದು. ಹಾವು, ಆನೆಚರ್ಮ, ಹುಲಿಚರ್ಮ, ಜಡೆಗಳನ್ನೊಳಗೊಂಡ ಶಿವನು ವರನಾಗುವ ಚಿತ್ರವೇ ಇನ್ನೊಂದಾಗಬಹುದು. ಶಿವ–ಗಿರಿಜೆಯರ ಮದುವೆಯ ಮಂಟಪದ ವರ್ಣನೆಗೇ ಒಂದು ವರ್ಣ ಚಿತ್ರ ಮೀಸಲಾಗಬಹುದು. ಹೀಗೆ 'ವಿವಾಹ ಪುರಾಣ'ವು ಒಂದು ಷಟ್ಪದ ರೂಪದ 'ಚಿತ್ರಕಥನ ಕಾವ್ಯ'ವಾಗಿರುವ ಸಾಧ್ಯತೆ ಇದೆ. ಚಿತ್ರಕಥಕರು ಒಂದು ವೇಳೆ ಇದನ್ನು ಹಾಡುತ್ತಿದ್ದರೆಂದು ಹೇಳಲು ಆಧಾರಗಳಿಲ್ಲದಿದ್ದರೂ, ಶೈಲಿಯ ದೃಷ್ಟಿಯಿಂದಂತೂ ಅದೇ ಆಗಿದೆ. ಕೊನೆಯ ಪಕ್ಷ, ತನ್ನ ಕಾಲದಲ್ಲಿ ಪ್ರಚಲಿತವಾಗಿದ್ದ ಚಿತ್ರಕಥನ ಶೈಲಿಯಲ್ಲಿ 'ವಿವಾಹಪುರಾಣ'ವು ರಚಿತವಾಗಿದೆಯೆಂದು ದೃಢವಾಗಿ ಹೇಳಬಹುದು. ಈ ಶಾಸನದ ಪಾಠ ಮತ್ತು ಮಹತ್ವಗಳು ಬಹು ಚರ್ಚೆಯ ವಸ್ತುವಾಗಲಿವೆ.

'ವಿವಾಹಪುರಾಣ' ಕಾವ್ಯದ ಮಹತ್ವವನ್ನು ಹೀಗೆ ಸಂಗ್ರಹಿಸಬಹುದು–

(1) ಅತಿ ಹೆಚ್ಚು ಸಂಖ್ಯೆಯ ಷಟ್ಪದಗಳನ್ನು ಹೊಂದಿರುವ ಶಾಸನವಿದು. ಇಂದಿನ ಕರ್ನಾಟಕದ ಹೊರಗೆ ಷಟ್ಪದಗಳು ಸಿಕ್ಕಿರುವ ಮೂರನೆಯ ಶಾಸನವಿದು. ಮೊದಲನೆಯದು ಆಂಧ್ರದ ಮೆಹಬೂಬ್ ನಗರ್ ಜಿಲ್ಲೆಯ ಗಂಗಾಪುರ ಶಾಸನ– ಅದನ್ನು ನಾನು ಗುರುತಿಸಿದ್ದೇನೆ. ಎರಡನೆಯದು ಮಹಬೂಬ್ ನಗರ ಜಿಲ್ಲೆಯ ಪಾಡೂರಿನ ಶಾಸನವು (ಕನ್ನಡನುಡಿ. 52 : 3–4, 5-6. 1989) ಅದನ್ನು ಶ್ರೀ ಸೀತಾರಾಮ ಜಾಗೀರದಾರರು ಗುರುತಿಸಿದ್ದಾರೆ.

(2) ಕ್ರಿ.ಶ. 1150ಕ್ಕೆ ಹಿಂದಿನ ಬೇರೆ ಬೇರೆ ಶಾಸನಗಳಲ್ಲೂ ಕಾವ್ಯಗಳಲ್ಲೂ ಷಟ್ಪದಗಳು ಬಳಕೆಯಾಗಿದ್ದರೂ ಅವು ವೃತ್ತ ಕಂದಗಳ ಮಧ್ಯೆ ವೈವಿಧ್ಯಕ್ಕಾಗಿ ಮಾತ್ರ ಬಳಕೆಯಾಗಿದ್ದವು. 'ವಿವಾಹಪುರಾಣ' ಶಾಸನಕಾವ್ಯದಲ್ಲಿ ಷಟ್ಪದವು ಕಥನಕ್ಕಾಗಿ ಬಳಕೆಯಾಗಿದೆ.

(3) ಗದ್ಯ ಮತ್ತು ಷಟ್ಪದ ಪದ್ಯಗಳನ್ನು ಮಾತ್ರ ಹೊಂದಿರುವ ಏಕೈಕ ಶಾಸನ.

(4) ಶಿಲೆಯ ಮೇಲೆ ಇರುವುದರಿಂದ ಮಾತ್ರ ಇದು 'ಶಾಸನ'ವೆನ್ನಿಸಿಕೊಳ್ಳುತ್ತದೆಯೇ ಹೊರತು, ವಾಸ್ತವವಾಗಿ ಇದೊಂದು ಸ್ವತಂತ್ರ ಕಾವ್ಯ ('ಗೊಮ್ಮಟಸ್ತುತಿ'ಯಂತೆ).

(5) ಇದು ರಾಘವಾಂಕನಿಗಿಂತ ಹಿಂದಿನದಾಗಿದ್ದು, ಕನ್ನಡದ ಲಭ್ಯ ಪ್ರಪ್ರಥಮ ಷಟ್ಪದ ಕಾವ್ಯವಾಗಿದೆ. ಷಟ್ಪದೀಕಾವ್ಯಗಳ ಚರಿತ್ರೆಯನ್ನು ಈ ಕಾವ್ಯದಿಂದ ನಾವು ಆರಂಭಿಸಬೇಕು.

(6) ಬಹುಶಃ 'ಮಾನಸೋಲ್ಲಾಸ' ಹೇಳುವ ಚಿತ್ರಕಥನ ಮಾದರಿಯ ಕೃತಿ ಇದು.

(7) ಅಂಶಗಣದ ಷಟ್ಪದವು ಮಾತ್ರಾಗಣದ ಷಟ್ಪದಿಯಾಗುವ ಕುರುಹು 'ವಿವಾಹಪುರಾಣ'ದಲ್ಲಿದೆ. ಷಟ್ಪದವು ಮೊದಲು ಕುಸುಮಷಟ್ಪದಿಯಾಯಿತೆಂದು ಇಲ್ಲಿನ ಛಂದಸ್ಸು ತೋರಿಸಿಕೊಡುತ್ತದೆ. ಷಟ್ಪದವು ಮೂಲತಃ ಜಾನಪದಛಂದಸ್ಸು ಎಂಬುದಕ್ಕೆ ಇಲ್ಲೊಂದು ನಿದರ್ಶನ ದೊರಕಿದಂತಾಗಿದೆ.

(8) ಶಿವ–ಗಿರಿಜೆಯರ ವಿವಾಹದ ಕತೆಯ ಒಂದು ಪ್ರಭೇದ ಇಲ್ಲಿದೆ. (ಈ ಪುರಾಣ–myth- ವರ್ತಕ ವರ್ಗದಲ್ಲಿ ಪ್ರಚಲಿತವಾಗಿತ್ತು). ಈ ದೃಷ್ಟಿಯಿಂದ ಜಾನಪದ ಶಾಸ್ತ್ರದ ವಿದ್ಯಾರ್ಥಿಗಳೂ ಗಮನಿಸಬೇಕಾದ ಸಂಗತಿ ಇದು. ಶಾಸನದ ಪೂರ್ತಿ ಪಾಠ ದೊರಕಿದ್ದರೆ, ಕರ್ನಾಟಕದ ವರ್ತಕ ಶ್ರೇಣಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಬೆಳಕು ಲಭ್ಯವಾಗುತ್ತಿತ್ತು.

(9) ಈ ಶಾಸನದ ಜಾನಪದ ಶೈಲಿ ಗಮನಾರ್ಹ. ಇದು ಇಂದು ಲಭ್ಯವಿರುವ ಪ್ರಪ್ರಥಮ ಕುಲೋತ್ಪತ್ತಿ ಪುರಾಣ. ಇದನ್ನು ವರ್ತಕರಿಗಾಗಿ ರಚಿಸಿದ ವ್ಯಕ್ತಿ ಮಾರ್ಗೀಯ ಪದ್ಧತಿಯ ಪಾಂಡಿತ್ಯದಲ್ಲಿ ಪ್ರವೇಶವಿದ್ದವನಾಗಿದ್ದರೂ ಜಾನಪದದಲ್ಲಿ ಆಳವಾಗಿ ಬೇರು ಬಿಟ್ಟವನು. ಅವನು ರಚಿಸಿದ ಈ 'ಚಿತ್ರಕಥನವು' (?) ತಾಳೆಗರಿಯಂತಹ ಸಾಮಗ್ರಿಯ ಮೇಲಿದ್ದು ಅದನ್ನು ವರ್ತಕರು ಶಾಶ್ವತಗೊಳಿಸಲು ಕಲ್ಲಿನಮೇಲೆ ಬರೆಸಿರುವ ಸಾಧ್ಯತೆ ಇದೆ. "ಅವಧಾರಿಸಿ" "ಕೇಳಿರಿ" ಎಂಬ ಮಾತು ಆರಂಭದಲ್ಲಿ ಮತ್ತೆ ಮತ್ತೆ ಬಂದಿರುವುದು ಇದು ಓದುಗಬ್ಬಕ್ಕಿಂತ ಹಾಡುಗಬ್ಬ-ಕೇಳುಗಬ್ಬವೆಂಬುದನ್ನು ಸೂಚಿಸುತ್ತದೆ. ನಿರೂಪಕ ಕತೆಯನ್ನು ನೇರವಾಗಿ ಶ್ರೋತೃಗಳಿಗೆ ಹೇಳುವ ಶೈಲಿ ಇದು. ಇಂದಿನ ಚೌಡಿಕೆ ಪದಗಳಲ್ಲಿ ಬರುವಂತೆ ಗದ್ಯ ಮತ್ತು ಪದ್ಯ (ಷಟ್ಪದ) ಗಳಿದ್ದ ರಚನೆಗಳಲ್ಲಿ ಕ್ರಮೇಣ ಗದ್ಯ ಮರೆಯಾಗಿ, ಷಟ್ಪದವು ಷಟ್ಪದಿಯಾಗಿ ಪರಿವರ್ತನೆ ಹೊಂದಿರುವುದನ್ನು ರಾಘವಾಂಕನಲ್ಲಿ ಕಾಣುತ್ತೇವೆ. ವಿವಾಹಪುರಾಣವು ಒಂದು ಬಗೆಯ ಷಟ್ಪದ ಚಂಪೂ ಎನ್ನಬಹುದು.

(10) ಕನ್ನಡ ಸಾಹಿತ್ಯದ ಅಧ್ಯಯನದ ದೃಷ್ಟಿಯಿಂದ, ಪಂಪನ ತಮ್ಮ ಜಿನವಲ್ಲಭನ ಕುರಿಕ್ಯಾಲ ಶಾಸನದ ಶೋಧದ (ಕ್ರಿ.ಶ. 1967) ಬಳಿಕ ಇಷ್ಟು ಮಹತ್ವದ ಶಾಸನ ಲಭ್ಯವಾಗಿರಲಿಲ್ಲ.[11]

ಶಾಸನ ಪಾಠ

೧ ಶ್ರೀಮ [ತ್] ಶಂಕರಾಯ ನಮಃ ಗುರುಭ್ಯಾಯ [ಭ್ಯೋ] ನಮಃ ಸ್ರೀ ಗಣಪತ್ಯಾಯ (ಪತಯೇ) ನಮಃ ಅವಧಾರಿಸಿ.........

೨ ಕೊಣ್ಡಾಡುವ ಸ್ವಾಮಿಂಗಳಿಂ ಕುಲಮಂ ಕೊಣ್ಡಾಡುವ ಸ್ವಾಮಿಂಗಳವಧಾರಿಸಿ। ಬಲುಂಹದ ಕೊಣ್ಡಾಡುವ

---

11 ''ವಿವಾಹಪುರಾಣ''ದ ಉತ್ತರಾರ್ಧದ ಬಹುಭಾಗ ಹಾಳಾಗಿ ಹೋಗಿದೆ. 51ನೇ ಸಾಲಿನಿಂದ 68ನೇ ಸಾಲಿನವರೆಗೆ ಬಹಳ ಅಕ್ಷರಗಳು ನಾಶವಾಗಿ ಹೋಗಿವೆ. 68ನೇ ಸಾಲಿನಿಂದ ಮುಂದೆ ಕಲ್ಲು ಒಡೆದುಹೋಗಿರುವುದರಿಂದ ಆ ಬಗ್ಗೆ ಏನೂ ಹೇಳು ವಂತಿಲ್ಲ. ಶಾಸನದ ಉತ್ತರಾರ್ಧದಲ್ಲಿನ ತ್ರುಟಿತ ಪಾಠದಲ್ಲಿನ ವಿಷಯವನ್ನು ಸರಿ ಯಾಗಿ ಗ್ರಹಿಸಲಿಕ್ಕಾಗುತ್ತಿಲ್ಲ. ಸುಮಾರಾಗಿ ಸಾರಾಂಶವನ್ನು ಹೀಗೆ ಕೊಡಬಹುದು:– ಶಿವ ಗಿರಿಜೆಯರ ಮದುವೆಗೆ ಇಂದ್ರ ಚಪ್ಪರವನ್ನು ನೈರುತ್ಯ ಜಗಲಿಯನ್ನು ನಿರ್ಮಿಸಿದ. ಬ್ರಹ್ಮ ಮಂತ್ರವನ್ನು ಹೇಳಿದ ; ವಿಷ್ಣು ಹಸೆಯನ್ನು ಹಾಸಿದ. ಯಮ ಬಾಗಿಲು ಕಾವಲುಗಾರನಾದ. ವಾಯು ಪರಿಚಾರಕನಾದ. ಸಪ್ತರ್ಷಿಯರು ಚಾಮರ ಹಾಕಿದರು. ಮದುವೆಗೆ ಬೇಕಾಗಿದ್ದ "ಹೂಜೆ ಸೊನ್ನಲಿಗೆ ಚಿಂಗಾರಿ''ಗಳು ಸಿದ್ಧ ವಾಗಿರಲಿಲ್ಲ. (ಚಿಂಗಾರಿ-'ಬಿಂಗಾರಿ' ಇರಬಹುದು. ಹೂಜೆ, ಸೊನ್ನಲಿಗೆ, ಬಿಂಗಾರಿ ಗಳು ಬೇರೆ ಬೇರೆ ಆಕಾರದ-ವಸ್ತುವಿನ ಪಾತ್ರೆಗಳಿರಬಹು). ಆಗಲೇ ವಿಷ್ಣುವಿನ ಚಕ್ರ ಕುಂಬಾರನ ಚಕ್ರವಾಯಿತು ; ಯಮನ ಕೋಣನ ಮೇಲೆ ಮಣ್ಣನ್ನು ತರಿಸ ಲಾಯಿತು. ವೃಷಭನಿಂದ ಯಾವುದೋ ಕೆಲಸ ಮಾಡಿಸಲಾಯ್ತು ; ಜಡೆಯ ತುರುಬಿನ ಸೂತ್ರವನ್ನು ಬಳಸಲಾಯ್ತು ; ಬ್ರಹ್ಮನ ಕೃಷ್ಣಾಜಿನವನ್ನೂ ಬಳಸ ಲಾಯ್ತು. ಹೂಜೆ, ಸೊನ್ನಲಿಗೆ, ಚಿಂ (ಬಿಂ) ಗಾರಿಗಳು ಸಿದ್ಧವಾದುವು. ಲಗ್ನ ಕಾಲವು ಸಮಿಪಿಸಿತು. ದೇವಕನ್ಯೆಯರು ಭಾಗವಹಿಸಿದರು. 'ಹೂಜೆ'ಯನ್ನು ಹೊತ್ತರು. ಬ್ರಹ್ಮ ''ಪುಣ್ಯಾಹ''ವನ್ನು ಹೇಳಿದ. ಲಗ್ನ ಮುಗಿಯಿತು ; ಶಿವ ಗಿರಿಜೆಯರು ಕೈಲಾಸಕ್ಕೆ ಹೋದರು. ಅಲ್ಲಿ ಗಿರಿರಾಜನನ್ನು ಶಿವ ಸತ್ಕರಿಸಿದ.– ಇಷ್ಟು ಅರ್ಥವನ್ನು ತೀರ ಕಷ್ಟಪಟ್ಟು ಹೊರಡಿಸಬಹುದು. ವರ್ತಕ ವರ್ಗದ ಕುಲೋತ್ಪತ್ತಿಯ ವಿಷಯದ ಭಾಗ ಪೂರ್ತಿ ನಾಶವಾಗಿದೆ. ನಾಶವಾದ ಭಾಗದಲ್ಲಿಯೂ ಷಟ್ಪದ ಪದ್ಯಗಳು ಇದ್ದಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. 'ವಿವಾಹ ಪುರಾಣ'ವಿರುವ ಶಿಲಾ ಫಲಕವು ಸೊಲ್ಲಾಪುರದ ''ಮಧಲಾ ಮಾರುತಿ''ದೇವಾಲಯ ದಲ್ಲಿದೆ. ಅದರ ಇನ್ನೊಂದು ಮುಖದ ಮೇಲೆ ಹನುಮಾನ್ ವಿಗ್ರಹವನ್ನು ಈಚೆಗೆ ಕೆತ್ತಲಾಗಿದೆ. ಶಾಸನವನ್ನು ಪ್ರತಿಮಾಡಿಕೊಂಡಾಗ ಶಿಲೆಯು ಗೋಡೆಯಿಂದ ಸ್ವಲ್ಪ ದೂರದಲ್ಲಿತ್ತು. ಈಗ ಅದನ್ನು ಗೋಡೆಗೆ ತೀರ ಹತ್ತಿರವಾಗಿ ನಿಲ್ಲಿಸಿರುವುದರಿಂದ, ಶಿಲಾಫಲಕದ ಹಿಂಭಾಗದಲ್ಲಿರುವ ಶಾಸನವನ್ನು ಅಧ್ಯಯನ ಮಾಡುವುದು ಅಸಾಧ್ಯ ವಾಗಿದೆಯೆಂದು ಸಂಪಾದಕರು ತಿಳಿಸುತ್ತಾರೆ (ಪ್ರಸ್ತಾವನೆ, LXIV).

೩ ....ಗಳವಧಾರಿಸಿ । ಸ್ವಯಂಭು ಸಟ್ಟಿ ಸ್ವಾಮಿಗಳವಧಾರಿಸಿ । ಪಸುಂಬೆ ಸೆಟ್ಟಿ.........

೪ ಕೊಂಕಣ ಸ.........ಸಂತುಷ್ಟ ಸ್ವಾಮಿಗಳವಧಾರಿಸಿ । ಮೇಲ್ಪಟ್ಟ ಪಟ್ಟಿಣಾಧಿ [ಪ] ಸ್ವಾಮಿಗಳವಧಾ

೫ ರಿಸಿ । ಶ್ರೀಮನ:ಮಹಾದೇವರ ಗೌರಿ ದೇವಿಯ । ನಿಮಿತ್ತವಾಗಿ ಹುಟ್ಟಿ [ದ] ಸ್ವಾಮಿಗಳ

೬ ವಧಾರಿಸಿ ನಂಮ್ಮದೊಂದು ಕುಲ ಹುಟ್ಟಿದ ವಿವಾಹ ಪುರಾಣಮನವಧಾರಿಸಿ ಸ್ವಾಮಿಗಳ.........

೭ ...ಕ ಚಿತ್ತದಿಂ ಕೇಳಿ ಸ್ವಾಮಿಗಳಿರ । ಶ್ರೀ ಸಕಳ ದೇವಾಧಿ ದೇವನುಂ ಕೈಳಾಸ.........ಡು

೮ ...ಲೆಯಿಂದಿರಲು । ಅಷ್ಟಲೋಕಪಾಲಕರುಂ । ಮೋಟ್ಟು ದಿಕ್ಕುಗಳಲಿರಲು । ನವಗ್ರಹಂಗಳು ಏಕಾದಸ...ಲ್ಲಿ

೯ ರಲು । ಬ್ರಹ್ಮವಿಷ್ಣುಗಳು ಸ್ತುತಿಯಿಸುತ್ತಲಿರಲು । ಚಂದ್ರ ಸೂರ್ಯರು ದಿವರಾತ್ರಿಗಳಂ ನಡಿಯಿಸುತ್ತ

೧೦ ವಿರಲು । ಸಪ್ತರಿಸಿಯರು ದಿವ್ಯ ಧ್ಯಾನದಲಿರಲು । ಕ್ರಿತಯುಗಮೆಂಬ ಮಹಾಯುಗದಂದು

೧೧ ಮದುವೆ ಮಾಣಗಳಿಲ್ಲ । ಹಜಿಹಂದರಿಲ್ಲ । ಪೂ ಬಾಸಿಗವಿಲ್ಲ । ಹೂಜೆ ಸೊನ್ನಲಿಗೆಯಿಲ್ಲ । ದೇವಗ್ಗೆ

೧೨ ಪ್ರಕ್ರಿತಿ ಹುಟ್ಟ [ವೇ]ಳ್ಕುಮೆಂದು । ಆದಿಸಕ್ತಿಯಪ್ಪ ಗೌರೀದೇವಿ ಗಿರಿರಾಜಂ[ಗ]ವಾ ನಾ...ಕದ ಮಹಾ

೧೩ ದೇವಿಗಂ ಪುಟ್ಟಿ ಸಾಸ್ವತನಪ್ಪ ಪುರುಷನಾಗವೇಳ್ಕುಮೆಂದು ಗಿಜಿಯ ನೇರಿ ತಪಂ ಮಾಡೆ ಆ ಗಿರಿಯ

೧೪ ತಪ್ಪಲೊಳು ಅಡಕೆಯು ಸಸಿಗೆ ನೂರ್ಮ್ಮಡಿ ಚೆಲ್ವ ಕೊರಬು ನೋರ್ಮ್ಮಡಿ ಹೆರೆನೊಸಲು ದೋ

೧೫ ಟಗುರುಳು ಕದು ತೋರಮಾಲೆಯು । ಪೆಂಮಗೆಯು ಸಬರಿಯುದುಂ । ಗದದೊಂದೊಂದಾಗಿ ಗಿರಿಯಂಲ್ಲಿ ಕು

೧೬ ......ಪಾಗಿ ಮರಗಳ್ಳಂ ಕುಡಿದು...ರಿದ ಮರಗಳಲುಕ್ಕಿ ಸೋರಿ ಮುತ್ತಂ ಓರಿದೊಂದು.........

೧೭ ರಪೆತ್ತಿ ಹಾಡಿದರಡವಿಯಲ್ಲಿ॥ ಗುಂಜೆಯು ತಂಡುಗೆಯುಂ ರಂಜಿಸಿ ಲೊಟ್ಟುಕರಂಜದ.........

೧೮ ...ಸುತ್ತಿಕೊಂಡು ಕಂಜಕಿ ಸಬರಿಯರು ಬಿಂಜದಲೊಂದಾಗಿ ಮಂಜಗ
ರಾಗದಿಂ ಹಾಡುತಿಪ್ಪರು ॥

೧೯ ....ಪದಗೊರಲಿಂದಂ ಪಾಡೆ ಮದಗಜಂ ಎರಳೆ ಸಾರಂಗ
ಹುಲ್ಲೆ ಪದಪಿ...ಸೋಲುಗೆಯು

೨೦ ದೊಂದೊಂದು-ಗಣ. ಚಿತ್ರದ ದೊಂದು ಬಂದುದ ವಿೃಗದಂತ್ತಿರ್ದ್ದ
ವಲ್ಲಿ ॥...ಬಿನಪಂಗಳ...ದಂತಿ...

೨೧ ......ಬೆಂನ್ನಂ...ನ ಭಂಗಿದಾವೆನೆ ಮೆಚ್ಚಿ ದಂತಾವಗಂ ಸೆರೆದೆಹ
ಆ ವನದೊಳಗಿರ್ಪ್ಪ ಪಂಣವೆಲ್ಲ

೨೨ ...ನಾಲ್ಕು [ಕಂಚಿ]ಗಟು ಕೊಡಲಾಳಿಯು ಕುಡಿದು ಕೋಡಗ
ಮುಂಸುಡುಂ ಕಿಣಿ...ನಾಡೆಯುಂ

೨೩ ...ಮಾಡಿದಂ ಮರುಳಾಗಿ ಬೇಡಿತಿಯಿಗಾವಗ್ಗ್ರದಂತಿತೆಂದು ॥
ದೆಸೆಯಾನೇಕರುಂ ಪಱಿದು ವಿಸಕದೆ

೨೪ ...ನ್ತರ ಪರ್ಬ್ಬತ ಹಂದಿ ರೂಪುಗೊಂಡು ತಿಸುವೆಯುಂ ನೋಡ
ಲು ಕೆಯು...ಳಂ ಬಂದಂತೆ.

೨೫ ...ತಪ್ಪಲಲಿಕ್ಕು ಹಿಂಡಗೊಂಡು । ಹಿಡಿಯೊಡನೆ ಮದದಾನೆ
ಮುಂದದಿಂದಿರಲು ಯಿಂದ್ರ

೨೬ ಕಾಂತದಲು ತನ್ನಂದವುಂ ನೋಡಿ ಕಂಡು ಮದದಾನೆ ತಾನೆನಗಿದಿರಾ
ದುದೆಂದು ಪೊದ್ದ...

೨೭ ಭರದಿಂ ನುಗ್ಗ್ಗವಂನ್ನಾ ॥ ಕೋಡುಳಿದು ಮದದಾನೆ ನೋಡಿ ತನ್ನಂದ
ಮುಂ । ನಾಡೆಯುಂ ಹಿಡಿಯುದಂ

೨೮ ...ದ್ದನೆಂದು । ಕುಡುವಂದಾಸೆಯುಂ ಮಾಡುವೆನುಂ ಕೈಯ್ಯ ನೀಡು
ತ್ತಿದ್ದುದು ಮುಂಗ್ಧಭಾವದಿಂದ

೨೯ ...ಮುಹಾರಂಣದೊಳು । ಸ್ರೀ ಗೌರೀದೇವಿ ಕನ್ಯಾವಸ್ತೆಯಲು ಸ್ರೀ
ಮ [ಹಾ] ದೇವರುಂ ತನಗೆ ಪುರು

೩೦ [ಷನಾಗ]ವೇಳ್ಕುವೆಂದುಗ್ರೋಗ್ರ ಪಪ್ಪ ತಪಂ ಮಾಡುತ್ತಮಿರಲು ।
ದೇವಿಗನುಗ್ರಹ...ಮಾ

೩೧ [ಡಿ]...ದಿಬ್ಯಜ್ನಾನದಿಂದಱಿದು ಬ್ರಂಹ್ಮ ವಿಷ್ಣು ಇಂದ್ರನಾ[ದಿ]
ಯಾಗಿ ಅಷ್ಟಲೋಕಪಾಳಕ

೩೨ ರಿಂ ಕ ಮದೇವನೊಳಗಾಗಿ ಸಮಸ್ತ ದೇವಕೋಟಿಸಹಿತಂ ಬಂದು ।
ಆ ಗಿರಿಯನೇಱಿ [ದೆ]

೩೩ ರೂಪಾಗಿ ಕುಮಾರಿಯಂ ನುಡಿಸೆ । ನುಡಿಯುದುದಂ ಕಂಡು
ದೇವರು ತಂನ್ನಾದಿರೂಪಂ

೩೪ ...ದೇವಿ ಕರಕಮಳಮು[ಕು]ಳಿತಹಸ್ತೆಯಾಗಿ ದಿವ್ಯಸ್ತುತಿಗಳಿಂ(೪೦)
ಸ್ತುತಿಯಿಸೆ । ಪಂಚಮಹಾ[ಸಬ್ದ]

೩೫ ...ಯೊಳಗೆ ನಡೆತಂದು ಬೀಡಂ ಬಿಟ್ಟರು ನಗರವೆಂಬ ಪಟ್ಟಣ
ದಲ್ಲಿ ವ್ರಿತ್ತಾಂಡವಂ...ಯು

೩೬ ...ತ್ತಪಿರಿದುಂ ಸಂತೋಸಂಬಟ್ಟು ಪರಿತಂದು ದೇವರ್ಗ್ಗೆ ಪೊಡ
ದೇವಿ ತಂಮ್ಮಯ್ಯನಪ್ಪ ಗಿರಿರಾಜಂಗೆ ವ್ರಿತ್ತಾ

೩೭ ನ್ತಮಂ ಪೇಳಲೀಗಬಿ ಮದುವೆಯುಂ ಮಾಳ್ಪೆನೆಂದು ॥ ಗಿರಿರಾಜ ತಾಂ
ನಿಗವ ಕರೆಸಿ ಸ್ತ್ರೀಯರುಂ ಕರ್ದ್ದು ನುಡಿದ

೩೮ ಅನ್ಯವರ್ಗ್ಗೆ ವಿನಯದಿಂದ । ಪರಮನಂ ಬರಿಸಿ ಗಿರಿಜೆಯೊಳು ನೆರಪ್ಪ
ವಂ ಚರಿತದಿಂ ನೀವಿದಿಗೊರ್ಗ್ಗೆಳ್ [ವೇಗ]ದೇದು ॥

೩೯ ...ಸ್ಮಿತದಿಂದ ದೇವರುಂ ದಾಚಿಯಿಂದ ಅವಗಂ ಗುಡಿ ಫಳಂ
ಕನ್ನಡಿಗಳಿಂ ದೇವಾಧಿದೇವನ . . . . . .

೪೦ ಬಿದುರು ತಾ ಮಾಲೆವಿಡಿದಿದಿಗೊರ್ಗ್ಗೆಳಲು ನಡೆದರಾಗಳು ॥ ವಡೆದೆ
ಯ್ದೆ ದೇವರಿದ್ದೆಡೆಯುಂ ನಂದನವನಕ್ಕೆ

೪೧ ಮಡದಿಯರೆಯ್ದೆ ಬಿನ್ನಪಮೆಂಬುದು ತಡವಿಲ್ಲ ದೇವ ನಿಮ್ಮಡಿ
ಬಿಜಯಂಗೆಯೆ ತಡವಿಲ್ಲ ಲಗ್ನ . .

೪೨ ಕಾಲ ॥ ಅಂತು ಪಸವನಂ ಬೇಳ್ಕುಮೆಂದು ದೇವರ ಸಿಂದ ನಿಲವೇ
ಶ್ರಿಂಗಾರವಾಗಲು . . . ಕರ್ಣ ತಿಳಕ

೪೩ ಅ . . ರ . . ಗಳೆಸವ ಬಾಸಿಗಟ್ಟಿದಂತಿರಿಕ್ಕೆ । ಸಸಿಮೌಳಿ
ಮುಡಿದ ಮಲ್ಲಿಗೆ ಮಿಸುಪ ವಾಸುಕಿ [ಮು]ತ್ತಿನ [ಸರ]

೪೪ ವಮಾಳ್ಕೆಯೆಂತಿರಿಕ್ಕೆ ॥ ಕೊರಲ ನರಶಿರಮಾಲೆ [ವ]ರ ಪೊನ್ನ
ಸಂಕಲೆ । ಕರವ ಸುತ್ತಿದ ಫಣಿಗಳರಾಗೆ ॥ ಕಟಿ ನಾ[ಗ]

೪೫ . ಕೆಯುಂತಿರೆ ಪುಲಿದೊಗಲು ಬಿತ್ತರಿಸಲು ದೇವಾಂಗವಸ್ತ್ರದಂತೆ ॥
ಮಿಸಂಪ ಪಿಂಗಳ ಜಿಡೆ

೪೬ . . ತಂ ಜಿಡಿವಾಗೆ। ಆಸದಳ ... ಭಸ್ಮರೇಪ್ಪ ಸಸಿ ಭೂಸ (ವ)
ಣಂಗೆ ತಾನೆಸೆವ ಶ್ರೀಗಂಧ ವಂಣೆ

೪೭ ಪೂಸಿದ ಮಾಳ್ಕೆಯೆಂತಿರಿಕ್ಕೆ ॥ ಕರಿದು ಕಟ್ಟುಗಳನೆ ಸುರರೆಲ್ಲಂ
ಪಿಡಿದರು ಅಮರೇಂದ್ರಂ ಬು . .

೪೮ ದಂ ಪಟ್ಟಾವಳಿಯ ತಳಿಯ ಬೆಡಗಪ್ಪ ನಂದಿಯ ವೃಡದೇವನೇಱಿದಂ
ನಡೆತಂದರಂ ಗಿರಿ ಪುರು ಕ . .

೪೯ ಯಲು ನಿಲಲು ॥ ಆ ವಿವಾದೋ(ಹೋ) ಥಾ(ತ್ಸಾ)ಹಕೆ ಯಿಂದ್ರಂ
ಹಂದರನಿಕ್ಕಲು ನೈರಿತ್ಯಂ ಜಗತಿಯಿಕ್ಕಲಂ ಬ್ರಂಹ್ಮ . . .

೫೦ ಮನ್ತ್ರವಂ ಹೇಳಲು ನಾರಾಯಣದೇವರು ಹಸೆಯಂ ಹಾಸಲು
ಯುಮಂ ಬಾಗಲ ಕಾಯಲು ಕಂಬೇರಂ......

೫೧ ......ದೇವಾ[ಲ್ಯ]ದ ಬಳಸಾಗಲಂ ! ವಾಯುಬ್ಯಂ ಪರಿಚಾರಕ
ನಾಗಲು । ಸಪ್ತಷಿ[ರ್]ಯರಂ ಚಾಮರ......

೫೨ ...ರಿದ್ದುರ್ . . ಹೂಜೆ ಸೊನ್ನಲಿಗೆ ಚಿಂಗಾರಿ...
ಯೆಂದುಂದೆ . ದೇವನಂ ಬೆಸ......

೫೩ .... ರಾಜ .... ದೇವಾ ಎನಲಂ । ನಿಮಗೆ
ಮನ ಬುದ್ಧಿಯಾಗಲ್ಕೆವ ....

೫೪ .... ದಿಬ್ಯಙ್ಞಾನದಿಂ ನೋಡಿ [ಕಂಡು] ನಾರಾಯಣ
ದೇವರ ಕಯ್ಯ ಚಕ್ರಮಂ ಗ ....

೫೫ ....ಗೆಯಂ [ಹಿಂ]ಬ ಕಂಬಿಯಂ ಮಾಡಿ । ವೃಷ
ದೇವರ ಕಯ್ಯಲಾತ......

೫೬ ....ಸರೆಯಂ ಮಾಡಿ । ಜೆಡೆಯ ಸುತ್ತರಿಗೆಯಂ
ಸುತ್ತುಂ ಮಾಡಿ ತನ್ನ.........

೫೭ ....ಯಮುನ ಕೋಣನಲು ಮಣ್ಣ ತಂದು ॥
ಬ್ರಹ್ಮರ ಕೃಷ್ಣಾಜಿನಮಂ ಮಂ.........

೫೮ ...... ಸೊಂನ್ನಲಿಗೆ ಚಿಂಗಾರಿಗಳ.........ನವಂ
ಮಾಡಿ............

೫೯ ....ಣ್ಕಿಕೊಂಡಿರಲು । ಲಗ್ನವಾಸಂ[ನ್ನ]ಕಾಲ
ವಾಗೆ । ದೇವಕನ್ನೆಯರು.........

೬೦ ....ಗಳಂ ಕೊಟ್ಟು । ತೋರ ಮಂ...ಗುತ್ತಿ
ಯಾಯಂಮಃ ಕೊಟ್ಟು

೬೧ ....ಮಂ ಹೂಜೆಯಂ ಹೊತ್ತುಕೊಂಡಾಗಳೆ
ದೇವರ ಮುಂದೆ............

೬೨ ....ಡಿ । ಬ್ರಹ್ಮಮೆ ಪುಣ್ಯಾಹವೆನಲು ।
ನಾರಾಯಣ............

೬೩ ....ನೆರದು ...ಗ... ಯುಂ ಮಾಡಿ । ದೇವರು
ಕವಿಳಾಸ............

೬೪ ....ಬೆರಸು ನಿಂದಿರ್ದ್ದ ಗಿರಿರಾಜನಂ
ಕರದಿ.........

೬೫ ....ಲ್ಲಿ ಸಾಸಿರ್ಬರೆಂಬ ಸಮಯಂ......
......

೬೬ ....ಡೆಂದು ॥ [ಶ್ರೀಮ]

೬೭ ....ಮಂಗಳ...........

೬೮ ....ಮಂ ಪುಟ್ಟಿ..........

1. The continuation is broken and lost.

ದಲಿತ ಬದುಕಿನ ಮೂರು ದಾಖಲೆಗಳು

ಡಾ. ಬಸವರಾಜ ಸಬರದ

1975 ರಿಂದೀಚೆಗೆ ದಲಿತ–ಬಂಡಾಯದ ಆಶಯಗಳನ್ನು ಹೊಂದಿದ ಸಾಹಿತ್ಯ ವಿಪುಲವಾಗಿ ಬಂದಿದೆ. ಒಂದು ಕೃತಿಯನ್ನು ಇದು ದಲಿತ ಲೇಖಕ ಬರೆದ ಕೃತಿ, ಇದು ಮುಸ್ಲಿಂ ಲೇಖಕ ಬರೆದ ಕೃತಿ ಎಂದು ನೋಡುವುದಕ್ಕಿಂತ ಇದು ಕನ್ನಡದ ಲೇಖಕನೊಬ್ಬನ ಕೃತಿ ಎಂದು ನೋಡುವುದು ಹೆಚ್ಚು ಸೂಕ್ತ ನಿಜ. ಆದರೆ ಜಾತ್ಯತೀತ ದೇಶವೆಂದು ಹಣೆಪಟ್ಟಿ ಹಚ್ಚಿಕೊಂಡು ಬರೀ ಜಾತಿಯ ಗೋಡೆಗಳನ್ನೇ ಕಟ್ಟಿದ ಈ ಸಮಾಜ ವ್ಯವಸ್ಥೆಯ ಸೋಗಲಾಡಿತನದ ಸಂಸ್ಕೃತಿಯಲ್ಲಿ ಹಾಗೆ ನೋಡಲಿಕ್ಕಾಗುವುದಿಲ್ಲ. ಒಬ್ಬ ದಲಿತನ ನೋವನ್ನು, ಒಬ್ಬ ಮುಸ್ಲಿಂನ ಭಯವನ್ನು ಬೇರೆಯವರು ಎಷ್ಟೇ ಅರ್ಥ ಮಾಡಿಕೊಂಡರೂ, ಸುಂದರವಾಗಿ ಅಭಿವ್ಯಕ್ತಿಸಿದರೂ ಅಲ್ಲಿ ಆ ನೋವಿನ ನಿಜವಾದ ಕಳಕಳಿ ಸ್ಪಷ್ಟವಾಗುವುದಿಲ್ಲ. ಹಾಗೆಯೇ ಮಹಿಳಾ ಸಮಸ್ಯೆಗಳೂ ಕೂಡ. ಮಹಿಳೆಯೊಬ್ಬಳ ಹೆರಿಗೆಯ ನೋವಿನ ಬಗೆಗೆ ಇತರ ಪುರುಷರು ಅದನ್ನು ತಿಳಿದುಕೊಂಡು ಬರೆಯಬಹುದು; ಆದರೆ ಅದು ಆ ಮಹಿಳೆ ಬರೆದಷ್ಟೇ ನೈಜವಾಗುವುದಿಲ್ಲ. ಹೀಗೆಂದಾಕ್ಷಣ ಕನ್ನಡದಲ್ಲಿ ದಲಿತ ಲೇಖಕರು, ಮುಸ್ಲಿಂ ಲೇಖಕರು, ಮಹಿಳಾ ಲೇಖಕರು ಎಂದು ಬೇರೆ ಬೇರೆ ರೀತಿಯಿಂದ ವಿಭಜಿಸಬೇಕು ಎಂಬುದು ನನ್ನ ವಾದವಲ್ಲ. ಕನ್ನಡ ಸಾಹಿತ್ಯ ಚರಿತ್ರೆಯನ್ನೇ ತೆಗೆದು ನೋಡಿದಾಗ ಕಣ್ಣಿಗೆ ಹೊಡೆದು ಕಾಣುವಂತೆ ಇರುವ ಜೈನಯುಗ, ವೀರಶೈವಯುಗ, ಬ್ರಾಹ್ಮಣ ಯುಗ ಇರುವಂತೆ ನವ್ಯೋತ್ತರ ಕನ್ನಡ ಸಾಹಿತ್ಯವನ್ನು ದಲಿತ ಬಂಡಾಯ ಸಾಹಿತ್ಯ, ಮುಸ್ಲಿಂ ಸಾಹಿತ್ಯ, ಮಹಿಳಾ ಸಾಹಿತ್ಯ ಎಂದು ವಿಭಜಿಸಿ ಗೋಡೆ ಕಟ್ಟುವುದೂ ಕೂಡಾ ನನ್ನ ಉದ್ದೇಶವಲ್ಲ.

ಒಂದು ಕೃತಿಯನ್ನು ಓದುತ್ತಿರುವಾಗ ಅದು ಯಾರೇ ಬರೆದ ಕೃತಿಯಾಗಲಿ ಮೊದಲು ಅದು ಸಾಹಿತ್ಯಕೃತಿಯಾಗಿದೆಯೋ ಇಲ್ಲವೋ ಎಂಬುದು ಮುಖ್ಯ. ಅಲ್ಲಿಯ ಲೇಖಕ ತನ್ನ ಅನುಭವಗಳಿಗೆ ಎಷ್ಟು ಪ್ರಾಮಾಣಿಕನಾಗಿದ್ದಾನೆ, ಆಕೃತಿ ಸಾಹಿತ್ಯ ಕೃತಿಯಾಗಿಯೂ ಪ್ರಸ್ತುತ ಬದುಕಿಗೆ ಎಷ್ಟರ ಮಟ್ಟಿಗೆ ಸ್ಪಂದಿಸುತ್ತದೆ. ಎಂಬುದು ಕೂಡಾ ಮುಖ್ಯ. ಇದರ ಜತೆಗೆ ಆಕೃತಿ ಇದುವರೆಗೆ ಇದ್ದ ಕೃತಿಗಳಿಗಿಂತ ಭಿನ್ನವಾದ ಅನುಭವ ಕೊಟ್ಟಾಗ ಕನ್ನಡ ಸಾಹಿತ್ಯಕ್ಕೆ ಅಪರಿಚಿತವಾಗಿದ್ದ ಅನೇಕ

ಹೊಸ ಸಂಗತಿಗಳನ್ನು ತಿಳಿಸಿದಾಗ, ಆ ಲೇಖಕ ಬೆಳೆದು ಬಂದ ಪರಿಸರ ಮತ್ತು ಸಂಸ್ಕೃತಿ; ಆತ ನಂಬಿರುವ ವಿಚಾರ, ಸಿದ್ಧಾಂತ ಇವೂ ಕೂಡಾ ಮುಖ್ಯವಾಗುತ್ತವೆ.

ಇಂತಹ ಸಂದರ್ಭದಲ್ಲಿ ಸಂಸ್ಕೃತಿ-ಸಂಸ್ಕೃತಿಗಳ ನಡುವೆ ಸಂಘರ್ಷ ನಡೆಯುತ್ತದೆ. ಆಗ ಆ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವಾಗ ಇದು ದಲಿತ-ಬಂಡಾಯ ಲೇಖಕರ ಆಶಯ; ಇದು ಮುಸ್ಲಿಂ ಲೇಖಕರ ಅಭಿವ್ಯಕ್ತಿ, ಇದು ಮಹಿಳೆಯೊಬ್ಬಳು ಅನುಭವಿಸಿದ ನೋವಿನ ಕತೆ ಎಂದೆಲ್ಲ ಅರ್ಥೈಸಿಕೊಳ್ಳಬೇಕಾಗುತ್ತದೆ. ಆಗ ದಲಿತ ಬದುಕಿನ ಅನೇಕ ಒಳನೋಟಗಳು, ಮುಸ್ಲಿಂ ಸಂಸ್ಕೃತಿಯ ಸಂವೇದನೆಗಳು ಮಹಿಳಾ ಶೋಷಣೆಯ ಒಳಗುಟ್ಟುಗಳು ನಮಗೆ ಸ್ಪಷ್ಟವಾಗುತ್ತವೆ. ಹೀಗೆ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವಾಗ ಇದು ದಲಿತ-ಬಂಡಾಯ ಲೇಖಕರ ಆಶಯ; ಇದು ಮುಸ್ಲಿಂ ಲೇಖಕರ ಅಭಿವ್ಯಕ್ತಿ, ಇದು ಮಹಿಳೆಯೊಬ್ಬಳು ಅನುಭವಿಸಿದ ನೋವಿನ ಕತೆ ಎಂದೆಲ್ಲ ಅರ್ಥೈಸಿಕೊಳ್ಳಬೇಕಾಗುತ್ತದೆ. ಹೀಗೆ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದಾಗ ಅಲ್ಲಿ ಜಾತಿ–ಗುಂಪುಗಳನ್ನು ನಿರ್ಮಿಸುವ ಪ್ರಶ್ನೆಯೇ ಬರುವುದಿಲ್ಲ.

ಈ ಮಾತನ್ನು ಒಂದು ಉದಾಹರಣೆಯ ಮೂಲಕ ಸ್ಪಷ್ಟಪಡಿಸಬಹುದು. ಕನ್ನಡದಲ್ಲಿ ದಲಿತರನ್ನೇ ನಾಯಕರನ್ನಾಗಿ ಮಾಡಿ ದಲಿತರ ಬಗೆಗೆ ಮೊಟ್ಟ ಮೊದಲು ಸಾಹಿತ್ಯ ರಚಿಸಿದವರು ಕುವೆಂಪು ಅವರು. ಕುವೆಂಪು ಅವರ ಶೂದ್ರ ತಪಸ್ವಿ, ಜಲಗಾರ ಬೆರಳ್‌ಗೆ ಕೊರಳ್ ಈ ಮೂರೂ ನಾಟಕಗಳಲ್ಲಿ ದಲಿತರೇ ನಾಯಕರು. ಆ ಕೃತಿಗಳು ಬಂದ ಸಂದರ್ಭದಲ್ಲಿ ನಿಂತುಕೊಂಡು ಮೌಲ್ಯಮಾಪನ ಮಾಡಿದಾಗ ಆ ಕೃತಿಗಳಿಗೆ–ತನ್ನದೇ ಆದ ವಿಶಿಷ್ಟತೆ ಇದೆ. ಕುವೆಂಪು ಅವರು ದಲಿತರನ್ನು ನಾಯಕರನ್ನಾಗಿಸಿ ನಾಟಕಗಳನ್ನು ರಚಿಸಿದ್ದಾರೆ ಎಂಬುವುದು ಮುಖ್ಯವಾಗುವುದಿಲ್ಲ; ಕುವೆಂಪು ಆ ದಲಿತರ ಬಗೆಗೆ ಏನನ್ನು ಹೇಳಿದ್ದಾರೆ? ಅಲ್ಲಿ ದಲಿತ ಸಂಸ್ಕೃತಿಯ ಒಳನೋಟಗಳು ಹೇಗೆ ಬಿಚ್ಚಿಕೊಂಡಿವೆ ಎಂಬುದು ತೀರಾ ಮುಖ್ಯವಾಗುತ್ತದೆ. ಈ ಮೂರೂ ನಾಟಕಗಳು ವಸ್ತುವಿನ ದೃಷ್ಟಿಯಿಂದ ಅವತ್ತಿನ ಸಂದರ್ಭದಲ್ಲಿ ಎಷ್ಟೇ ಪ್ರಗತಿಪರ ಎನ್ನಿಸಿಕೊಂಡಿದ್ದರೂ ಪ್ರಸ್ತುತ ಸಂದರ್ಭದಲ್ಲಿ ನಿಂತು ನೋಡಿದಾಗ ಅವು ದಲಿತ ಪರ ನಿಲವುಗಳನ್ನು ಹೊಂದಿದ ಕೃತಿಗಳಾಗಿ ಕಾಣುವುದಿಲ್ಲ. ಶೂದ್ರ ತಪಸ್ವಿಯಲ್ಲಿಯ ಶಂಭೂಕನಿಗೆ ನ್ಯಾಯ ಮುಖ್ಯವೇ ವಿನಾ ತಪಸ್ಸಲ್ಲ; ಜಲಗಾರನಿಗೆ-ಜನರೊಂದಿಗಿನ ಸ್ಪರ್ಶದ ಬದುಕು ಮುಖ್ಯವೇ ವಿನಾ ಊರ ಹೊರಗಡೆ ಇರುವ ದೇವಾಲಯವಲ್ಲ. ಏಕಲವ್ಯನಿಗೆ ಪುರೋಹಿತಶಾಹಿ ವ್ಯವಸ್ಥೆಯ ಕಪಟತನದ ಅರಿವು ಮುಖ್ಯವೇ ಹೊರತು ಕರ್ಮ ತತ್ವದ ಸಿದ್ಧಾಂತವಲ್ಲ. ಹೀಗಾಗಿ ದಲಿತರ ಬದುಕಿನ ಬಗೆಗೆ ಕುವೆಂಪು ಬರೆಯುವುದಕ್ಕೂ ದೇವನೂರು ಮಹಾದೇವ ಬರೆಯುವುದಕ್ಕೂ ತುಂಬಾ ವ್ಯತ್ಯಾಸ ವಿದೆ. ಆದ್ದರಿಂದ ಕನ್ನಡ ಸಾಹಿತ್ಯದಲ್ಲಿ ದಲಿತ ಸಂಸ್ಕೃತಿಯ ಒಳನೋಟಗಳನ್ನು

ಅರ್ಥೈಸಿಕೊಳ್ಳುವ ಸಂದರ್ಭದಲ್ಲಿ ದೇವನೂರನಂತಹ ಲೇಖಕರು ಮುಖ್ಯವಾಗುತ್ತಾರೆ.

ಈ ಉದ್ದೇಶದ ಹಿನ್ನೆಲೆಯಲ್ಲಿ ಕನ್ನಡಕಾದಂಬರಿ ಸಾಹಿತ್ಯದಲ್ಲಿ ಬರುವ ದಲಿತ ಬದುಕಿನ ಮೂರು-ಮಹತ್ವದ ದಾಖಲೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ದೇವನೂರು ಮಹಾದೇವ ಅವರ 'ಒಡಲಾಳ', ಮ.ನ. ಜವರಯ್ಯ ಅವರ 'ಪಾಗಿ' ಮತ್ತು ಅರವಿಂದ ಮಾಲಗತ್ತಿಯವರ 'ಕಾರ್ಯ' ಈ ಮೂರೂ ಕಾದಂಬರಿಗಳಲ್ಲಿ ಬರುವ ದಲಿತ ಸಂಸ್ಕೃತಿಯ ಸಂವೇದನೆಗಳನ್ನು, ಆ ಬದುಕಿಗೆ ಸಂಬಂಧಿಸಿದ ಒಳ ನೋಟಗಳನ್ನು ಅವು ಸಾಹಿತ್ಯಕೃತಿಗಳಾಗಿ ಯಶಸ್ವಿಯಾಗಿರುವ ರೀತಿಯನ್ನು ಇಲ್ಲಿ ಗಮನಿಸಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ದಲಿತರ ಬದುಕಿಗೆ ಸಂಬಂಧಿಸಿದ ಅನೇಕ ಸಂಗತಿಗಳು–ಘಟನೆಗಳು ಕಾಣಸಿಗುತ್ತವೆ. ದಲಿತರಲ್ಲದ ಲೇಖಕರು ಬರೆದ ಆ ಕೃತಿಗಳಲ್ಲಿ ದಲಿತ ಬದುಕಿನ ಹೊರನೋಟಗಳನ್ನು ಮಾತ್ರ ತಿಳಿಯಲು ಸಾಧ್ಯವಾಗುತ್ತದೆ. ದಲಿತ ಬದುಕಿನ ಒಳನೋಟಗಳನ್ನು ದಲಿತರ ಮೌಢ್ಯ–ಅಂಧ ಸಂಪ್ರದಾಯ ಹಾಗೂ ಅವರ ಅನೇಕ ಮಿತಿಗಳನ್ನು ಆ ಪರಿಸರದಿಂದ ಬೆಳೆದು ಬಂದ ಲೇಖಕ ಮಾತ್ರ ಸ್ಪಷ್ಟವಾಗಿ ಮತ್ತು ಧೈರ್ಯದಿಂದ ಹೇಳಲು ಸಾಧ್ಯ. ದಲಿತರ ಬದುಕನ್ನು ಹೊರಗಿನಿಂದ ನೋಡಿ ಅಥವಾ ಊಹಿಸಿ–ಕಲ್ಪಿಸಿ ಸಾಹಿತ್ಯದಲ್ಲಿ ಆ ಅನುಭವಗಳನ್ನು ತರಬಹುದು. ಆದರೆ ಹೀಗೆ ಬರುವ ಸಾಹಿತ್ಯದಲ್ಲಿ ಕೃತ್ರಿಮತೆಯೇ ಹೆಚ್ಚಾಗಿರುತ್ತದೆಂಬುದನ್ನು ಮರೆಯುವಂತಿಲ್ಲ. ಒಮ್ಮೊಮ್ಮೆ ದಲಿತರ ಆಕ್ರೋಶ ಹಾಗು ಮೂಲ ಕಾಳಜಿಗಳು ಇಲ್ಲಿ ಕೇವಲ ಆವೇಶಗಳಾಗಿ ಬರೀ ಸಪ್ಪಳದ ರೂಪದಲ್ಲಿ ನಿಂತುಬಿಡಬಹುದು. ಇನ್ನೂ ಒಂದು ಮುಖ್ಯ ಅಂಶವೆಂದರೆ ದಲಿತರ ಮೌಢ್ಯವನ್ನು ಅವರ ಮಿತಿಗಳನ್ನು ವಿರೋಧಿಸಿ ಮಾತನಾಡುವ ಸ್ವಾತಂತ್ರ್ಯ ಹಾಗು ನಿರ್ಭಿಡೆ ದಲಿತ ಲೇಖಕನಿಗಿರುವಂತೆ ಇತರ ಲೇಖಕರಿಗೆ ಇರಲಾರದು. ಹಾಗೇನಾದರೂ ಅವರು ನಿರ್ಭಿಡೆಯಿಂದ ಬರೆಯಲು ಹೋದರೆ, ಆ ಸಂಸ್ಕೃತಿಯ ಅನೇಕ ಸೂಕ್ಷ್ಮ ಸಂಗತಿಗಳ ಅನುಭವವಿಲ್ಲದ ಅವರು ಕೆಲವರ ದೃಷ್ಟಿಯಲ್ಲಿ ದಲಿತ ವಿರೋಧಿಗಳೂ ಆಗುವ ಅಪಾಯ ಉಂಟು. ಆದ್ದರಿಂದ ಒಂದು ಜನಾಂಗದಿಂದ ಬಂದ ಲೇಖಕ ತನ್ನ ಜನಾಂಗದ ಬದುಕಿನ ಇತಿಮಿತಿಗಳನ್ನು ಅವರ ಪರವಾದ ಕಾಳಜಿಗಳನ್ನು ಪ್ರಕಟಿಸುವುದು ಎಷ್ಟು ಸುಲಭವೋ ಅಷ್ಟು ಇನ್ನೊಂದು ಜನಾಂಗದಿಂದ ಬಂದ ಲೇಖಕನಿಗೆ ಸಾಧ್ಯವಾಗುವುದಿಲ್ಲ. ಹೀಗೆಂದಾಕ್ಷಣ ಆತನಿಗೆ ಆ ಜನಾಂಗದ ಲೇಖಕನೆಂದು ಹಣೆಪಟ್ಟಿ ಹಚ್ಚುವ ಅಗತ್ಯವೂ ಇಲ್ಲ.

ಒಡಲಾಳ :

'ಒಡಲಾಳ' ಕನ್ನಡದ ವಿಶಿಷ್ಟ ಕಾದಂಬರಿ. ಈಗಾಗಲೇ ಈ ಚಿಕ್ಕ ಕೃತಿಯ ಬಗೆಗೆ ಅನೇಕ ರೀತಿಯ ವಿಶ್ಲೇಷಣೆ ವಿಮರ್ಶೆಗಳು ಬಂದಿವೆ. ಕನ್ನಡ

ಕಾದಂಬರಿ ಸಾಹಿತ್ಯದಲ್ಲಿ ದಲಿತ ಬದುಕಿನ ಮೊದಲ ದಾಖಲೆ ಒಡಲಾಳ. ದಲಿತರ ನೋವಿನ ಬಗೆಗೆ, ಅವರ ಶತಮಾನಗಳ ಶೋಷಣೆಯ ಬಗೆಗೆ ಕೇವಲ ಕೂಗಾಟದ ಘೋಷಣೆಗಳಿಲ್ಲ. ಹಾಗೆಂದು ಬಡಬಡಿಸುವ ಸಪ್ಪಳಗಳಿಲ್ಲ. ಈ ಕೃತಿ ದಲಿತರ ಬದುಕನ್ನು ಪ್ರಾಮಾಣಿಕವಾಗಿ ಮತ್ತು ವಸ್ತುನಿಷ್ಠವಾಗಿ ದಾಖಲಿಸುವುದರ ಮೂಲಕವೇ ಈ ಸಮಾಜ ವ್ಯವಸ್ಥೆಯ ಕ್ರೂರತನವನ್ನು ಧ್ವನಿಸುತ್ತದೆ. ಯಥಾಸ್ಥಿತಿಯನ್ನು ಬಿಚ್ಚಿ ತೋರಿಸುವುದರ ಮೂಲಕವೇ ಅಗಾಧ ಪರಿಣಾಮವನ್ನುಂಟು ಮಾಡುತ್ತದೆ. ಸಾವಿರ ಪುಟಗಳೊಳಗೆ ಹೇಳಲಾಗದ ಅನುಭವಗಳನ್ನು, ಸಾವಿರಾರು ವರ್ಷಗಳಿಂದ ನಡೆದ ಶೋಷಣೆಯ ಭೀಕರತೆಯನ್ನು, ನಲವತ್ತೇಳು ಪುಟಗಳ ಕೃತಿಯಲ್ಲಿ ಹೇಳಲಾಗಿದೆ. ಹೀಗಾಗಿ ಕೃತಿಯ ಆಕಾರಕ್ಕಿಂತ, ಕೃತಿಯ ಆಶಯ, ಧೋರಣೆ, ಅಭಿವ್ಯಕ್ತಿ ಇಲ್ಲಿ ತುಂಬಾ ಮುಖ್ಯವಾಗುತ್ತದೆ. ಶತಮಾನಗಳ ನೋವಿನ ಬದುಕನ್ನು ಕೆಲವೇ ಅನುಭವಗಳ ಮೂಲಕ ಕಟ್ಟಿಕೊಡುತ್ತ ಯಾವ ಸಪ್ಪಳ ಘೋಷಣೆಗಳಿಲ್ಲದೆಯೇ ಮಹಾದೇವ ಇಲ್ಲಿ ಮಹತ್ತರವಾದದ್ದನ್ನು ಸಾಧಿಸಿದ್ದಾರೆ. ವಸ್ತು-ಧೋರಣೆಯ ಜತೆಗೆ ಕಲಾತ್ಮಕ ಗುಣವೂ ಇರುವುದರಿಂದ ಕೃತಿ ಎಲ್ಲ ರೀತಿಯ ಓದುಗರ ಗಮನವನ್ನು ಸೆಳೆಯುತ್ತದೆ.

ಸಾಕವ್ವ ಹುಂಜ ಕಳೆದುಕೊಂಡ ಘಟನೆಯಿಂದ ಪ್ರಾರಂಭವಾಗುವ ಇಲ್ಲಿನ ಕತೆ ಆಕೆ ಮತ್ತೊಂದು ಹುಂಜವನ್ನು ಕಳೆದುಕೊಳ್ಳುವುದರ ಮೂಲಕ ಮುಕ್ತಾಯವಾಗುತ್ತದೆ. ಇಲ್ಲಿಯ 'ಹುಂಜ' ಸಾಕವ್ವನ ಬದುಕಿನ ಸಂಕೇತವಾಗಿ ಬಂದಿದೆ. ಈಗಾಗಲೇ ಬದುಕನ್ನು ಕಳೆದುಕೊಂಡ ದಲಿತರು, ಈ ಸಮಾಜ ವ್ಯವಸ್ಥೆಯ ಅಧಿಕಾರಶಾಹಿ ಆಡಳಿತದಲ್ಲಿ ಸಂಚುಗೆ ಇಟ್ಟಿದ್ದಾದರೆ ಉಳಿದಷ್ಟು ಬದುಕು ಕೂಡಾ ಕಳೆದುಹೋಗುತ್ತದೆ ಎಂಬ ದಟ್ಟ ಸತ್ಯವನ್ನು ಕಾದಂಬರಿ ತುಂಬಾ ಕಲಾತ್ಮಕವಾಗಿ ಬಿಂಬಿಸಿದೆ. ಕಳೆದುಹೋದ ಹುಂಜವನ್ನು ಪೋಲಿಸರು ಹುಡುಕಿಕೊಡುತ್ತಾರೆಂದು ನಂಬಿ, ಆ ಹುಂಜವನ್ನು ಹಿಡಿದುಕೊಂಡು ಬರಲು ಇದ್ದೊಂದು ಹುಂಜವನ್ನು ಪೋಲಿಸರಿಗೆ ಕೊಟ್ಟುಬಿಡುವುದು-ಸಾಕವ್ವನಂತಹ ಮುಗ್ಧ ಜೀವಿಗಳ ಅಸಹಾಯಕತೆಯನ್ನು ತೋರಿಸುತ್ತದೆ.

ಇಲ್ಲಿ ಬರುವ ಸಾಕವ್ವ, ಆಕೆಯ ಮೂರೂ ಗಂಡುಮಕ್ಕಳುಗಳಾದ ಕಾಳಣ್ಣ, ಸಣ್ಣಯ್ಯ, ಗುರುಸಿದ್ಧ ಇವರಾರಿಗೂ ಆ ಊರಿನ ಎತ್ತಪ್ಪ ಸಾಹುಕಾರರ ಬಗೆಗಾಗಲಿ, ಪೋಲಿಸರ ಬಗೆಗಾಗಲಿ ಸಿಟ್ಟು ಬರುವುದಿಲ್ಲ. ಇವರು ಎತ್ತಪ್ಪ ಸಾಹುಕಾರರನ್ನು-ಪೋಲಿಸ್ ವ್ಯವಸ್ಥೆಯನ್ನು ಏಕಕಾಲಕ್ಕೆ ನಂಬಿದವರು. ಇದು ಇವರ ಮುಗ್ಧತೆಯನ್ನು, ಅಜ್ಞಾನವನ್ನು ಎತ್ತಿತೋರಿಸುತ್ತದೆ. ಮತ್ತು ಇದು ವಾಸ್ತವ ಕೂಡಾ. ಆದರೆ ಇನ್ಸಪೆಕ್ಟರ್ ರೂಲಗೋಲು ಪುಟಗೌರಿ ಗಲ್ಲವನ್ನು

ಸವರತೊಡಗಿದಾಗ, ಪುಟಗೌರಿ ಮಾತುಗಳು ಹೊಟ್ಟೆಯೊಳಗೆ ಅವಿತುಕೊಂಡಾಗ, ಗುರುಸಿದ್ದು ಇನ್ಸಪೆಕ್ಟರನ್ನು ಗುರಗುಟ್ಟಿನೋಡುವುದು, ಗುರುಸಿದ್ದನ ಈ ತೀವ್ರ ನೋಟಕ್ಕೆ ಸಾಹೇಬರ ಒಂದೆರಡು ರೋಮಗಳು ಅಳುಕುವುದು ದಲಿತರ ಸ್ವಾಭಿಮಾನದ ಪ್ರತಿಭಟನೆಯು ಸಂಕೇತವಾಗುತ್ತದೆ. ವಸ್ತುಸ್ಥಿತಿಯನ್ನು ಸರಿಯಾಗಿ ಅರ್ಥೈಸಿಕೊಳ್ಳದ ಇವರು ಈ ಸಮಾಜ ವ್ಯವಸ್ಥೆಯ ಕ್ರೂರತನದ ಬಗೆಗೆ ಸರಿಯಾಗಿ ಪ್ರತಿಭಟಿಸಲಾರರು. ಈ ಪ್ರಸಂಗವನ್ನು ಪ್ರಸ್ತಾಪಿಸುವುದರ ಮೂಲಕ ಮಹಾದೇವ ದಲಿತರಲ್ಲಿ ನಿಜವಾದ ಜಾಗೃತಿಯನ್ನು ಮೂಡಿಸುತ್ತಾರೆ ಕಾದಂಬರಿಯಲ್ಲಿ ಹೊರ ನೋಟದ ಬಂಡಾಯ ಕಾಣದಿದ್ದರೂ, ನಿಜವಾದ ಬಂಡಾಯಕ್ಕೆ ಬೇಕಾಗಿರುವ ಸಿದ್ಧತೆಯನ್ನು ಮಹಾದೇವ ಇಲ್ಲಿ ಮಾಡಿಕೊಂಡಿದ್ದಾರೆ.

"ಹುಂಜನ ಕಾಲುಗೆ ಹಗ್ಗ ಬಿದ್ದು ಅದು ಜೀಪಿಗೆ ಬಿತ್ತು. ಆ ಜೀಪು ಧೂಳೆಬ್ಬಿಸುತ್ತಾ ಬರ್‍ರ್ರೋ ಅಂತ. ಜೀಪು ಬುಟ್ಟೋದ ಧೂಳು ಬೀದ ಒಳಗೆ ಆಡುತ್ತಿತ್ತು". ಎಂಬಂತಹ ಮಾತುಗಳನ್ನು ಕಾದಂಬರಿಯ ಕೊನೆಯಲ್ಲಿ ದಾಖಲಿಸು ವುದರ ಮೂಲಕ ಲೇಖಕ ಓದುಗರಲ್ಲಿ ಆಗಾಧ ಪರಿಣಾಮವನ್ನುಂಟು ಮಾಡುತ್ತಾನೆ. ಪೋಲಿಸರ ಜೀಪು ಎಬ್ಬಿಸಿದ ಧೂಳು ದಲಿತರ ಬೀದಿ ಒಳಗೆ ಆಡುವುದನ್ನು ಸಾಂಕೇತಿಕ ವಾಗಿಸುತ್ತಾ, ಧೂಳಿನ ಪರಿಸರದಿಂದ ಹೊರಬರುವ ಹೊಸ ಕಾಳಜಿಗಳನ್ನು ಮಹಾದೇವ ಇಲ್ಲಿ ಪ್ರಕಟಿಸಿದ್ದಾರೆ. ಇಲ್ಲಿನ ಕತೆ ದಲಿತರ ಒಡಲಾಳವನ್ನು ಬಿಚ್ಚಿ ತೋರಿಸುವುದರ ಜೊತೆಗೆ, ಈ ಸಮಾಜ ವ್ಯವಸ್ಥೆಯಲ್ಲಿ ನೊಂದ ಎಲ್ಲ ಶೋಷಿತರ ಪರವಾಗಿ ದನಿ ಎತ್ತುತ್ತದೆ. ಸಾಕವ್ವನ ನೋವು ಒಟ್ಟು ದಲಿತರ ನೋವಾಗಿ ಹೊರಹೊಮ್ಮಿದೆ.

ಶ್ರೀಮಂತನಾದ ಎತ್ತಪ್ಪ ಸಾಹುಕಾರರ ದನದ ಹಟ್ಟಿಯಲ್ಲಿರುವ ಎಮ್ಮೆಗಳನ್ನು ನೋಡಿ, ಅವರ ಮಗಳ ಮದುವೆಯಲ್ಲಿ ಕೈ ನೀಡಿದವರಿಗೆಲ್ಲ ಬೊಗಸೆ–ಬೊಗಸೆ ಬೋಂದಿ ಕಾಳು ಕೊಡುತ್ತಿದ್ದದನ್ನು ನೆನಪಿಸಿಕೊಂಡು ಸಾಕವ್ವ, ಕಾಳಣ್ಣ, ಸಣ್ಣಯ್ಯ, ಚೆಲುವಮ್ಮ ಇವರೆಲ್ಲ ಕಡಲೇ ಬೀಜ ತಿನ್ನುವ ಸಂದರ್ಭದಲ್ಲಿ ಮಾತನಾಡುವ ಮಾತುಗಳು ಕುತೂಹಲಕಾರಿಯಾಗಿವೆ. ಎತ್ತಪ್ಪನೋರ ದನದ ಹಟ್ಟಿಗಳಲ್ಲಿರುವ ಎಮ್ಮೆಗಳ ವರ್ಣನೆಯನ್ನು ಕಾಳಣ್ಣ ಸಣ್ಣಯ್ಯ ಮಾಡುತ್ತಿದ್ದಾಗ "ಅಂಥ ಒಂದು ಎಮ್ಮೆ ಸತ್ರೀಗಪ್ಪ...ನಮ್ಮ ಕೇರಿ ದರಿದ್ರನಾರು ಒಂಜಿನ ಹಿಂಗ್ತದ" ಎಂದು ಹೇಳುವ ಸಾಕವ್ವನ ಮಾತಿನಲ್ಲಿ ಶತಮಾನಗಳ ಹಸಿವಿನ ಕ್ರೌರ್ಯವಿದೆ. ಎತ್ತಪ್ಪ ಸಾಹುಕಾರರ ಎಮ್ಮೆ ಸತ್ತಾಗ ಮಾತ್ರ ಈ ಜನರ ಒಂದು ದಿನದ ಹಸಿವಾದರೂ ಹಿಂಗುತ್ತದೆ. ಹೀಗೆ ಇಲ್ಲಿ ಸಾಹುಕಾರರ ಎಮ್ಮೆಯ ಸಾವು ಈ ದಲಿತರ ಬದುಕಾಗು ತ್ತದೆ. ಒಬ್ಬರ ಸಾವು ಮತ್ತೊಬ್ಬರ ಬದುಕಾಗುವ ಕ್ರೂರ ವ್ಯವಸ್ಥೆಯಲ್ಲಿರುವ ಅಸಮಾನತೆಯನ್ನು ಕಾದಂಬರಿ ತುಂಬಾ ಅರ್ಥಪೂರ್ಣವಾಗಿ ಧ್ವನಿಸುತ್ತದೆ.

ಎತ್ತಪ್ಪನ ಹೊಲದಲ್ಲಿನ ಕಡಲೇಕಾಯಿ ಕಳುವಾದರೆ ಸ್ವಲ್ಪ ಸಮಯದ ಪರಿಹಾರ ಇವರಿಗೆ ಸಿಗುತ್ತದೆ. ಎತ್ತಪ್ಪನ ಆಸ್ತಿಯನ್ನು ಕಾಪಾಡಲು ಇರುವ ಪೋಲಿಸರೆದುರು ಈ ದಲಿತರು ಕಳ್ಳರಾಗಿ ಕಾಣುತ್ತಾರೆ. ಎತ್ತಪ್ಪನ ಸಿರಿವಂತಿಕೆಯ ಮೆರವಣಿಗೆಯಲ್ಲಿ ಪಾಲುದಾರರಾಗುವ ಉಚ್ಚ ವರ್ಗದ ಹಿತಾಸಕ್ತಿಗಳಿಗೆ ಈ ಬಡವರು ದ್ರೋಹಿಗಳಾಗಿ ಕಾಣುತ್ತಾರೆ. ಈ ಎರಡೂ ಕಡೆಯ ಸಂದರ್ಭಗಳನ್ನು ಮಹಾದೇವ ಇಲ್ಲಿ ಸೂಕ್ಷ್ಮವಾಗಿ ವಿಶ್ಲೇಷಿಸುವುದರ ಮೂಲಕ ವರ್ಗ ಸಂಘರ್ಷದ ಹೊಳಹುಗಳನ್ನು ಇಲ್ಲಿ ಕಾಣಿಸಿದ್ದಾರೆ.

ಎತ್ತಪ್ಪನೋರ ಮಗಳ ಮದುವೆಯನ್ನು ವಿಜೃಂಭಣೆಯಿಂದ ಮಾಡಿದ ಹಾಗೆ ಪುಟ್ಟಗೌರಿಯ ಮದುವೆಯನ್ನು ಮಾಡಬೇಕೆಂಬ ಕನಸು ಕಾಳಣ್ಣನ ಹೆಂಡತಿಯದು. ಇದು ಸಾಧ್ಯವಾಗದ ಮಾತು ಎಂಬುದು ಸಣ್ಣಯ್ಯನಿಗೆ ಗೊತ್ತು. ಇವರ ಮಾತುಗಳನ್ನು ಮೆಲುಕುಹಾಕುತ್ತಾ ಪುಟಗೌರಿ ಬೆಂಕಿಯ ಜಳಕ್ಕೆ ಕಿಳಿಯಾಗಿ ಬೆವರುತ್ತ ಕೂತಿರುವುದು ದಲಿತರ ಬದುಕಿನ ಜೀವನಪ್ರೀತಿಗೆ ಪ್ರಮುಖ ದಾಖಲೆಗಳಾಗುತ್ತವೆ

ಕಾದಂಬರಿಯ ಪ್ರಾರಂಭದ ಅಧ್ಯಾಯಗಳಲ್ಲಿ ದಲಿತರ ಬದುಕಿನಲ್ಲಿ ಬರುವ ಜಗಳ–ವೈಮನಸ್ಸು, ಸಣ್ಣತನಗಳ ಬಗೆಗೆ ಲೇಖಕರು ಬಹಳ ವಾಸ್ತವವಾಗಿ ಚಿತ್ರಿಸಿದ್ದಾರೆ. ಅವರ ಅನೇಕ ಮಿತಿಗಳನ್ನು ಇಲ್ಲಿ ವಿವರಿಸಿದ್ದಾರೆ. ಸಾಕವ್ವ ತನ್ನ ಮಗಳ ಪರವಾಗಿ ಮಾತನಾಡುತ್ತಾ ಆಕೆಯ ತಲೆ ಸವರುತ್ತಾ ತನ್ನ ಆಸ್ತಿಯನ್ನೆಲ್ಲಾ ಆಕೆಯ ಕಿರಿಯ ಮಗನಿಗೆ ಬರಸ್ತೀನಿ ಎಂದಾಗ ಸಣ್ಣಯ್ಯನಿಗೆ ಸಿಟ್ಟು ಬರುವುದು, ಪೀಜಲಾಗಿ ಕಡ್ಡಿಯಂತೆ ಒಣಗಿಕೊಂಡಿದ್ದ ಆತನಲ್ಲೂ ಆವೇಶಹೊಮ್ಮುವುದು. ಸಣ್ಣಯ್ಯನಿಗೆ ಸಪೋರ್ಟ್ ಮಾಡಲು ಆತನ ಹೆಂಡತಿ–ಚೆಲುವಮ್ಮ ಅತ್ತೆ, ಸಾಕವ್ವನ ವಿರುದ್ಧ ಹಲ್ಲು ಮಸೆಯುವುದು ಈ ಎಲ್ಲ ಪ್ರಸಂಗಗಳನ್ನು ಇಲ್ಲಿ ನೈಜವಾಗಿ ವಿವರಿಸಲಾಗಿದೆ. ಇವರೆಲ್ಲರ ಸಿಟ್ಟಿಗೆ–ವೈಮನಸ್ಸಿಗೆ ಜಗಳಕ್ಕೆ ಮತ್ತೆ ಬಡತನವೇ ಪ್ರಮುಖ ಕಾರಣ ಮೆಂಬುದನ್ನು ಲೇಖಕರು ಸೂಕ್ಷ್ಮವಾಗಿ ಹೇಳಿದ್ದಾರೆ. ಆರ್ಥಿಕ ಅಸಮಾನತೆ–ಬಡತನ–ಮೌಢ್ಯ ಅಜ್ಞಾನಗಳಲ್ಲಿಯೆ ಇವರ ಅನೇಕ ಮಿತಿಗಳು ಉಳಿದುಕೊಂಡದ್ದನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಇಂತಹ ಅಸಮಾನತೆಯ ಕ್ರೂರ ವ್ಯವಸ್ಥೆಯಲ್ಲಿ ದುಃಖವೇ ಬಾಯಿ ಬುಟಗೊಂಡು ಕುಳಿತ ಥರ ಸಾಕವ್ವ ಕಾಣುವುದು ಸಹಜವೆನಿಸುತ್ತದೆ. ಆದರೆ ಈ ಅಸಮಾನತೆಯ ವಿರುದ್ಧ ಇಲ್ಲಿ ನೇರ ಹೋರಾಟವಿಲ್ಲ. ಅಸಮಾನತೆಯಿಂದುಂಟಾಗುವ ತೀವ್ರತರವಾದ ನೇರ ಪರಿಣಾಮವಿದೆ.

"ದಲಿತ ಬದುಕಿನ ಅದಮ್ಯತೆಯನ್ನು ತನ್ನ 'ಒಡಲಾಳ'ದಲ್ಲಿ ಹುದುಗಿಸಿಕೊಂಡ ಸಾಕವ್ವ, ಜೀರ್ಣವಾದ ಹಟ್ಟಿಯ ಗೋಡೆಗಳ ಮೇಲೆ ನವಿಲುಗಳನ್ನು ಕುಣಿಸಬಲ್ಲ ಪುಟಗೌರಿ, ನಾಟಕದಪಾರ್ಟು ಮಾಡುವ ಭ್ರಮೆಯಲ್ಲೇ ಹಟ್ಟಿಯ ಬದುಕಿನ

ದಾರಿದ್ರ್ಯದಿಂದ ಓಡಲೆಳೆಸುವ ಗುರುಸಿದ್ದು, ವ್ಯವಸ್ಥೆಯಲ್ಲಿ ಒಂದು ಹಂತದಲ್ಲೇ ಗುಪ್ತವಾಗಿ ನಿಂತು ಹೋಗಬಹುದಾದ ದಲಿತ ಬದುಕಿನ ಸಮರ್ಥ ಸಂಕೇತವಾಗಬಲ್ಲ ದುಷ್ಟಿಕಮೀಶನರು ಇವರೆಲ್ಲ ಮಹಾದೇವರು ದಲಿತ ಬದುಕನ್ನು ಗ್ರಹಿಸುವ ಕಾಣ್ಕೆಗೆ ಅನಿವಾರ್ಯವಾದ ಮೋಟೊಫ್‌ಗಳು" ಎನ್ನುವ ರಾಜೇಂದ್ರ ಚೆನ್ನಿಯವರ ಮಾತುಗಳಲ್ಲಿ ಸತ್ಯವಿದೆ. ಪುಟಗೌರಿ ನವಿಲು ಬಿಡುವ ಪ್ರಸಂಗ ದಲಿತರ ಕಲಾ ಪ್ರತಿಭೆಗೆ ಸಾಕ್ಷಿಯಂತಿದೆ. ದಲಿತ ಬದುಕಿನ ಅನೇಕ ಒಳ ಮಗ್ಗಲುಗಳು ಈ ಕಾದಂಬರಿಯಿಂದ ಸ್ಪಷ್ಟವಾಗುತ್ತವೆ.

ಮಾಗಿ :

ಓದುಗರ ಗಮನ ಸೆಳೆಯುವ ಮತ್ತೊಂದು ಕಾದಂಬರಿ 'ಮಾಗಿ'. 'ಮನಜ' ಕಾವ್ಯನಾಮದಲ್ಲಿ ಬರೆಯುತ್ತಿರುವ ಡಾ. ಮ. ನ. ಜವರಯ್ಯನವರ ಈ ಕಾದಂಬರಿಯಲ್ಲಿ ದಲಿತ ಬದುಕಿನ ದಟ್ಟ ಚಿತ್ರಣವಿದೆ. ದಲಿತ ಸಂಸ್ಕೃತಿಯನ್ನು ತುಂಬಾ ವಿವರವಾಗಿ ಮತ್ತು ಅರ್ಥಪೂರ್ಣವಾಗಿ ಕಟ್ಟಿಕೊಡುವ ಈ ಕಾದಂಬರಿಗೆ ತುಂಬಾ ಮಹತ್ವವಾದ ಸ್ಥಾನವಿದೆ.

ಈ ಕಾದಂಬರಿಯಲ್ಲಿ ನಾಯಕಿ ಮಾಗಿ ಅಥವಾ ಮಾಗವ್ವನಲ್ಲಿ, ಉತ್ಕಟವಾದ ಜೀವನೋತ್ಸಾಹವಿದೆ. ಎಲ್ಲ ನೋವುಗಳನ್ನು ಸಹಿಸಿಕೊಂಡು ಬೆಳೆಯುವ ತಾಕತ್ತಿದೆ. ದಲಿತ ಶಕ್ತಿಯ ಅದಮ್ಯ ಚೇತನದಂತೆ ಇಲ್ಲಿ ಮಾಗಿ ಚಿತ್ರಿತವಾಗಿದ್ದಾಳೆ. ದಲಿತ ಬದುಕಿನ ಅನೇಕ ಒಳನೋಟಗಳನ್ನು, ಕನ್ನಡ ಸಾಹಿತ್ಯಕ್ಕೆ ಅಪರಿಚಿತವಾಗಿದ್ದ ಅನೇಕ ಸಂಗತಿಗಳನ್ನು ಈ ಕಾದಂಬರಿ ಬಿಚ್ಚಿ ತೋರಿಸುತ್ತದೆ.

ಇಲ್ಲಿ ಪ್ರತಿಭಟನೆಯಿಲ್ಲ, ಬದುಕಿನ ತೀವ್ರ ಹೋರಾಟವಿದೆ. ಪರಿಸರದ ಕಾರ್ಯವನ್ನೆಲ್ಲ ಅರಗಿಸಿಕೊಂಡು, ಗಂಡ. ಭಾವ ಮೈದುನರು, ಅತ್ತಿಗೆ, ನಾದಿನಿಯರು, ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಇವರೆಲ್ಲರು ಕೊಡುವ ಕಷ್ಟಗಳನ್ನು ಸಹಿಸಿಕೊಂಡು ದಿಟ್ಟತನದಿಂದ ಬದುಕುವ ಮಾಗಿಯ ಪಾತ್ರ ತುಂಬಾ ವಿಶಿಷ್ಟವಾಗಿದೆ. ಈ ಕಾದಂಬರಿಯ ಶೀರ್ಷಿಕೆ ಕೂಡಾ ತುಂಬಾ ಔಚಿತ್ಯಪೂರ್ಣವಾಗಿದೆ.

ಈ ಎಲ್ಲ ನೋವನ್ನು ಸಹಿಸಿಕೊಂಡಾಕ್ಷಣ ಮಾಗಿಯಲ್ಲಿ ಹೇಡಿತನವಿದೆಯೆಂದಲ್ಲ; ಬದುಕಿನ ಸಂಘರ್ಷದಲ್ಲಿ ಜಯಿಸಿಬಂದ ಗಟ್ಟಿತನವಿದೆ ಪೊಳ್ಳುತನದ ಚೀರಾಟ ವಿರದೆ ಸಾತ್ವಿಕತೆಯ ಹೋರಾಟವಿದೆ

ಈ ಕೃತಿಯ ಕಥೆಯು ಹರವಂತೂ ದಿಗ್ಭ್ರಮೆಹುಟ್ಟಿಸುವಷ್ಟು ವೈವಿಧ್ಯಮಯವಾಗಿದೆ ಮಾನೆ ಪೈಲ್ವಾನ ದಾಸಪ್ಪನವರ ಸಂಭ್ರಮದ ಬದುಕಿನಿಂದ ಪ್ರಾರಂಭವಾದ ಮಾಗಿಯ ಕತೆ ತನ್ನ ಮಗ ವಸಂತನ ಹೊಂಬೆಳಕಿನೊಂದಿಗೆ ಮುಕ್ತಾಯ

ವಾಗುತ್ತದೆ. ಪ್ರಾರಂಭ ಮತ್ತು ಮುಕ್ತಾಯ; ಸುಖದ ಮತ್ತು ಆಶಾದಾಯಕವಾದ ಘಟನೆಗಳನ್ನೊಳಗೊಂಡಿದ್ದರೆ, ಇವೆರಡರ ನಡುವೆ ಹಬ್ಬಿಕೊಂಡಿರುವ ಮಾಗಿಯ ಬದುಕು ತುಂಬಾ ಯಾತನೆಯಿಂದ ತುಂಬಿಕೊಂಡಿದೆ. ಈ ಯಾತನೆ ಶೋಷಣೆಗಳಲ್ಲಿ ಬೆಂದು-ನೊಂದು ಮಾಗಿ ಪುಟಕ್ಕಿಟ್ಟ ಚಿನ್ನದಂತೆ ವಿಜೃಂಭಿಸುತ್ತಾಳೆ. ಇದು ಕಾದಂಬರಿಯ ಅರ್ಥಪೂರ್ಣ ಆಶಯವೂ ಆಗಿದೆ.

ಮಾಗಿಯಂತಹ ಪಾತ್ರಗಳು ಕನ್ನಡ ಕಾದಂಬರಿಗಳಲ್ಲಿ ಕಾಣಸಿಗುವುದು; ಮೇಲ್ನೋಟಕ್ಕೆ ಇದೊಂದು ಸರಳ ಕತೆ ಎಂದೆನಿಸಬಹುದು. ಆದರೆ ಕಾದಂಬರಿಯ ಬಂತವಾಳದಲ್ಲಿ ಸಿಗಿ ಸಿಗಿಸುವ ಸಂಕೀರ್ಣತೆ ಇನ್ನೂ ಅನೇಕ ಮಹತ್ವದ ಸಂಗತಿಗಳಿಗೆ ಕಾರಣವಾಗುತ್ತದೆ. ಮಾಗಿ ಇಲ್ಲಿ ಭೂಮಿತಾಯಿಯಂತೆ ಕೇವಲ ಸಹನಾಮೂರ್ತಿಯಲ್ಲ; ಎಲ್ಲ ಎಡರು-ತೊಡರುಗಳನ್ನು ಎದುರಿಸಿ ಬದುಕಲೇಬೇಕೆಂಬ ಹಟ ತೊಟ್ಟವಳು. ಈ ಎಲ್ಲ ನೋವಿನ ನಡುವೆಯೂ ಬದುಕು ಎಷ್ಟು ಮುಖ್ಯ ಎಂಬ ಸಂಗತಿಯನ್ನು ಮಾಗಿ ಇಲ್ಲಿ ಸಾಧಿಸಿ ತೋರಿಸಿದ್ದಾಳೆ. ಹೀಗಾಗಿ ಮಾಗಿ ಇಲ್ಲಿ ಸಹನೆ-ತ್ಯಾಗದ ಸಂಕೇತವಾಗುತ್ತಲೇ-ಬದುಕಿನ ಅದಮ್ಯ ಚೇತನವಾಗುತ್ತಾಳೆ.

ಮಾಗಿಯ ಬದುಕಿನ ಹಿನ್ನೆಲೆಯಲ್ಲಿ ಎರಡು ಸಂಸ್ಕೃತಿಗಳ ಮಜಲುಗಳನ್ನು ಲೇಖಕರು ಓದುಗರಿಗೆ ಜತೆ ಜತೆಯಾಗಿಯೇ ಪರಿಚಯಿಸುತ್ತಾ ಹೋಗುತ್ತಾರೆ. ದಲಿತರ ಬದುಕಿನ ಚಟುವಟಿಕೆಗಳು, ಅವರ ಸಿಟ್ಟು, ಅಜ್ಞಾನ, ಮೂಢನಂಬಿಕೆ, ಸ್ವಾರ್ಥ, ಹುಂಬತನ ಹೊಟ್ಟೆಕಿಚ್ಚು, ಇವೆಲ್ಲ ಒಂದು ಕಡೆ ಬಿಚ್ಚಿಕೊಂಡರೆ; ಮತ್ತೊಂದುಕಡೆ ಸಮಾಜದ ಹಿರಿಯರ ಸಣ್ಣತನ, ಗೌಡರ ಕಚ್ಚೆಹರುಕತನ ಇವೂ ಬೆಳಕಿಗೆ ಬರುತ್ತವೆ.

ಆದರೆ ಇಲ್ಲಿ 'ಮಾಗಿ'ಗೆ ಹೊರಗಿನ ಶೋಷಣೆಗಿಂತ ಒಳಗಿನ ಶೋಷಣೆಯೇ ಹೆಚ್ಚು ನಡೆದಿರುವುದು ಸ್ಪಷ್ಟವಾಗುತ್ತದೆ. ಗಂಡ ಗಿರಿಯಪ್ಪನ ಚಿತ್ರಹಿಂಸೆ, ಅತ್ತಿಗೆ ನಾದಿನಿಯರ ಹೊಟ್ಟೆಕಿಚ್ಚು, ಭಾವ-ಮೈದುನರ ಹಿಂಸೆ, ಮಕ್ಕಳಿಂದ ಅವಮಾನ ಇವೆಲ್ಲದರ ನಡುವೆಯೂ ಬದುಕಿನ ಅದಮ್ಯ ಆಸೆಯನ್ನಿಟ್ಟುಕೊಂಡು ಬೆಳಗುವವಳು ಮಾಗಿ. 'ಮಾಗಿ'ಗೆ ತನ್ನ ಮನೆತನದವರಿಂದ ತನ್ನ ದಲಿತರಿಂದ ಆಗುವ ಯಮಯಾತನೆಯನ್ನು ಲೇಖಕರು ಸ್ಪಷ್ಟಪಡಿಸುವ ಮೂಲಕ ದಲಿತರ ಅಜ್ಞಾನ ಮತ್ತು ಮೌಢ್ಯತೆಯ ಕಡೆ ಹೆಚ್ಚು ಒತ್ತುಕೊಟ್ಟಿದ್ದಾರೆ. ಸಾಹಿತ್ಯದಲ್ಲಿ ಇಂತಹ ನಿಷ್ಠುರ ಹಾಗು ನಿರ್ಭಿಡೆಯ ಮಾತುಗಳನ್ನು ಹೇಳಲು ಕೇವಲ ಮನಜ ಅವನಿಂದ ಮಾತ್ರ ಸಾಧ್ಯ. ಇದೇ ವಸ್ತುವನ್ನಾಧರಿಸಿ ದಲಿತೇತರನೊಬ್ಬ ಬರೆದಿದ್ದರೆ ಅದು ಈ ಒಳಮಿಡಿತಗಳನ್ನು ಒಳಗೊಳ್ಳುತ್ತಿರಲಿಲ್ಲ ಮತ್ತು ದಲಿತ ವಿರೋಧಿ ಕೃತಿಯೆಂಬ ಅಪವಾದಕ್ಕೆ ಒಳಗಾಗುತ್ತಿತ್ತು.

ಗಿರಿಯಪ್ಪನಂತವರ ಕುಡುಕುತನದಿಂದ, ಹುಂಬತನದಿಂದ ಬದುಕು ಹೇಗೆ ನರಕವಾಗುತ್ತದೆಂಬುದನ್ನು ಇಲ್ಲಿ ವಿವರಿಸಲಾಗಿದೆ. ಗಿರಿಯಪ್ಪ ಕುಡಿದು ಬಂದು ಹೆಂಡತಿ ಮಾಗಿಯೊಂದಿಗೆ ವರ್ತಿಸುವ ರೀತಿ ತುಂಬಾ ಅಮಾನವೀಯವಾದುದು. ದಲಿತರಲ್ಲಿ ಎದ್ದು ಕಾಣುವ ಅವರ ಈ ವಿಕೃತಿಯನ್ನು ಲೇಖಕರು ಇಲ್ಲಿ ಸ್ಪಷ್ಟ ಪಡಿಸಿದ್ದಾರೆ.

"ಏೀ ಚಂಬೇರಿ ರಂಡೆ! ನಿಜಾಯೇಳು; ಇಲ್ದಿದ್ರೆ ನಿನ್ನ ಕುರಿ ಕೂದಂಗ್ ಕೂದಾಕ್ ಬಿಡ್ತಿನಿ. ಮೂರು ಜಿನ್‌ದಿಂದ ಯಾವನೊಂದಿಗೆ ಹೋಗಿದ್ದೆ? ಮಾತಾಡು! ಕೆಡೀಕೊಂಡು ನಸುಗೂನೀ ಕಾಯ್ ತಿಕ್ಕ ಬಿಡ್ತೀನಿ ಅದಿದ್ರೆ ತಾನೇ ನೀನು ಯಾವ ನೊಂದಗಾರೇ ಪೋಗಬೈದು; ಅದೇ ಕ್ವಳತೋದ್ರೆ ನೀ ಯಂಗೋದೆ? ಯೇಳು ನಿಜಾಯೇಳು! ನಿನ್ನ ಅಂವನ್ ತಾಂವ್‌ಕೇ ಕಳಿಸಿಬಿಡ್ತೀನಿ"[3]

ಗಂಡನ ಇಂತಹ ಮಾತುಗಳನ್ನು ಕೇಳಿಸಿಕೊಂಡು, ಹೊಡೆತಗಳನ್ನು ಸಹಿಸಿಕೊಂಡು, ಅವಮಾನವನ್ನು ತಾಳಿಕೊಂಡು, ದುಃಖವನ್ನು ನುಂಗಿಕೊಂಡು ಮತ್ತೆ ಬದುಕಲು ಹಾತೊರೆಯುತ್ತಿರುವ ಮಾಗಿ ದಲಿತ ಮಹಿಳೆಯರ ದೈತ್ಯ ಪ್ರತಿಭೆಯ ಹಾಗೆ ಬೆಳಕಿನ ಹಾಗೆ ಕಾಣುತ್ತಾಳೆ. ಯಜಮಾನ ಸಂಸ್ಕೃತಿಯ ಅಡಿಯಾಳಾದ ದಲಿತ ಪುರುಷರು ದಲಿತ ಮಹಿಳೆಯನ್ನು ಹಿಂಸಿಸುವ ಶೋಷಿಸುವ, ಅವಮಾನಿಸುವ ಎಲ್ಲ ಘಟನೆಗಳನ್ನು ಲೇಖಕರು ಇಲ್ಲಿ ನೈಜವಾಗಿ ಮೂಡಿಸಿದ್ದಾರೆ. ದಲಿತರ ನಿಜವಾದ ಉದ್ಧಾರವಾಗಬೇಕಾದರೆ ಅವರಿಗೆ ಮೇಲ್ವರ್ಗದ, ಮೇಲ್ಜಾತಿಯ ಕಪಟಿಗಳಷ್ಟೇ ವೈರಿಗಳಾಗುವುದಿಲ್ಲ; ಅವರ ಜೊತೆಗೆ ಅವರಲ್ಲಿಯೇ ಅಡಗಿರುವ ಸಿಟ್ಟು, ಅಜ್ಞಾನ, ಅಹಂಭಾವ, ಹಿಂಸೆ, ಸ್ವಾರ್ಥ ಇವೆಲ್ಲವೂ ವೈರಿಗಳಾಗುತ್ತವೆಂಬುದನ್ನು ಕಾದಂಬರಿ ಬಹಳ ಸೂಕ್ಷ್ಮವಾಗಿ ಧ್ವನಿಸುತ್ತದೆ.

ದಲಿತರ ಶೋಷಣೆಗೆ ಈ ಸಮಾಜ ವ್ಯವಸ್ಥೆಯೇ ಕಾರಣವಾದರೂ ಅವರ ಶೋಷಣೆಗೆ ಅವರೇ ಅನೇಕ ಸಲ ಕಾರಣರಾಗಿದ್ದಾರೆಂಬ ಅಂಶವನ್ನು ಮನಜ ಇಲ್ಲಿ ಸ್ಪಷ್ಟ ಪಡಿಸಿದ್ದಾರೆ. ಅನಂತಮೂರ್ತಿ 'ಸಂಸ್ಕಾರ'ದಂತಹ ಕಾದಂಬರಿಯಲ್ಲಿ ತಮ್ಮ ಜನಾಂಗದ ಕೊಳಕುತನವನ್ನು ಎತ್ತಿತೋರಿಸಿದ ಹಾಗೆ, ಬಸವರಾಜ ಕಟ್ಟೀಮನಿ ತಮ್ಮ 'ಜರತಾರಿ ಜಗದ್ಗುರು'ವಂತಹ ಕಾದಂಬರಿಯಲ್ಲಿ ತಾನು ಹುಟ್ಟಿ ಬಂದ ಸಮಾಜದ ಸೋಗಲಾಡಿತನವನ್ನು ಸ್ಪಷ್ಟಪಡಿಸಿದ ಹಾಗೆ ಇಲ್ಲಿ ಮನಜ 'ಮಾಗಿ'ಯ ಮೂಲಕ ದಲಿತರ ಎಲ್ಲ ಮಿತಿಗಳನ್ನು ಬಯಲಿಗೆಳೆದಿದ್ದಾರೆ.

ಯಜಮಾನ ಸಂಸ್ಕೃತಿಯಿಂದ ದಲಿತ ಸಂಸ್ಕೃತಿ ಪ್ರಭಾವಗೊಂಡಿದ್ದರೂ ಅಲ್ಲಿ ಅನೇಕ ಹೊಸ ಹೆಜ್ಜೆಯ ಗುರುತುಗಳಿವೆ. ಮಾಗಿಯ ಮಗ ಕರಿಯನ ಹೆಂಡತಿ ಕಮಲಿ ಕರಿಯನನ್ನು ತಿರಸ್ಕರಿಸಿ ರಾಜಪ್ಪನೊಂದಿಗೆ ಸಂಬಂಧ ಇಟ್ಟುಕೊಂಡಾಗ

ಊರಿನ ನ್ಯಾಯ ಮುಖಂಡರಾದ ಕೊಸಪ್ಪನವರ ಹಿರಿತನದಲ್ಲಿ ಹಟ್ಟಿಯ ಮುಖಂಡರ ನಡುವೆ ನ್ಯಾಯ ವಿಚಾರಣೆಯಾಗಿ, ಕಮಲಿ ಕರಿಯನನ್ನು ಬಿಟ್ಟು, ರಾಜಪ್ಪನೊಂದಿಗೆ ಬಾಳ್ವೆ ನಡೆಸಲು ಅವಕಾಶವನ್ನೀಯುವ ಈ ನ್ಯಾಯ ಪಂಚಾಯಿತಿಯ ನಡುವಳಿಕೆಗಳು, ವೈದಿಕ ಸಂಸ್ಕೃತಿಗೆ ಅಂದರೆ ಹಿಂದೂ ಸಂಸ್ಕೃತಿಗೆ ತುಂಬಾ ವಿರುದ್ಧವಾದವುಗಳು ಆದರೆ ದಲಿತ ಸಂಸ್ಕೃತಿ ವೈದಿಕ ಸಂಸ್ಕೃತಿಗಿಂತ ತುಂಬ ಭಿನ್ನವಾಗಿ ಮತ್ತು ವಿಶಿಷ್ಟವಾಗಿ ಕಾಣುತ್ತದೆ. ಇಂತಹ ಅನೇಕ ಸೂಕ್ಷ್ಮ ಸಂಗತಿಗಳನ್ನು ಮನಜ ಈ ಕಾದಂಬರಿಯ ಮೂಲಕ ದಾಖಲಿಸಿದ್ದಾರೆ.

ಕುಲದ ಕಾಣಿಕೆಯೆಂದು ಮದುವೆ ಲಾಗೋಡ್ ಹಣವನ್ನು ರಾಜಪ್ಪ ಕಟ್ಟಿ ಕುಲೇಸ್ತರ ಮುಂದೆ ಅಡ್ಡ ಬಿದ್ದಾಗ, ನ್ಯಾಯವಾಗಿ ಆ ಹಣ ಪಡೆಯಬೇಕಾದ ಕರಿಯನನ್ನು ತಡೆದು, ಮಾಗಿ ಅದೇ ಹಣವನ್ನು ಕುಲದವರಿಗೆ ಮರ್ಯಾದಿ ಮಾಡಿ ಬಿಡುವುದು ಮಾಗಿಯ ಸ್ವಾಭಿಮಾನವನ್ನು ಎತ್ತಿ ಹೇಳುತ್ತದೆ. ಮಾಗಿಯ ಈ ವ್ಯಕ್ತಿತ್ವಕ್ಕೆ ಸಂಬಂಧಿಸಿದ ಹಾಗೆ ಸುಜನಾ ಅವರು ಹೇಳುವ ಮಾತುಗಳು ಗಮನಿಸುವಂತಿವೆ.

"ಯಾವುದಕ್ಕೂ ಸೊಪ್ಪು ಹಾಕದೆ ಕಂಕುಳಲ್ಲಿ ಎಲೆಯ ಕುಕ್ಕೆ ಹೊತ್ತು ಕೈ ಬೀಸುತ್ತಾ, ದಾಪುಗಾಲಿಡುತ್ತ ಹೋಗುವ ಅವಳ ಗಾಳಿ ನಡೆಯ ನಡೆ ಪಶ್ಚಿಮ ಘಟ್ಟದ ನದೀ ಪಾತ್ರದ ಹೆಬ್ಬಂಡೆಯೊಂದು ಎಂಥ ಪ್ರವಾಹಕ್ಕೂ ಕೊಚ್ಚಿಹೋಗದೆ ರೂಪಗೊಳ್ಳುತ್ತ ನಯಗೊಳ್ಳುವ ಮಾಟವಿದೆ ಇಲ್ಲಿ. ಅವಳು ಪಟ್ಟ ಪಾಡಿಗೆ ಅವಳ ತಳಮನಸ್ಸಿನ ಹೊಂಗನಸು ಆಕೆಯ ಮಗ ವಸಂತನಲ್ಲಿ ಚಿಗುರೊಡೆಯುತ್ತದೆ ... ಮಾಗಿಯ ಪ್ರಾಕೃತಿಕ ಸಾಹಸದಲ್ಲಿ ವರಾಹ ಸಾಹಸವಿದೆ. ಇದೀ ದಲಿತ ವರ್ಗದ ಉದ್ಧಾರದ ಕ್ರಮ ಶಕ್ತಿಯ ರೀತಿಗೆ ಇದು ಪ್ರತೀಕವಾಗಿದೆ".[4]

ಕಾರ್ಯ :

ಕಾರ್ಯ ಕನ್ನಡದ ಕುತೂಹಲಕಾರಿ ಕಾದಂಬರಿ. ಅರವಿಂದ ಮಾಲಗತ್ತಿ ತಮ್ಮ ಈ ಮೊದಲ ಕಾದಂಬರಿಯಲ್ಲಿಯೇ ಗಮನ ಸೆಳೆದಿದ್ದಾರೆ. 'ಕಾರ್ಯ' ಅದರ ಶಿರೋನಾಮೆಯೇ ಸೂಚಿಸುವಂತೆ, ಮನುಷ್ಯ ಸತ್ತನಂತರದ ಶವಸಂಸ್ಕಾರ ಅಥವಾ ಮಣ್ಣು ಅದ ನಂತರ ಮೂರು ದಿನಕ್ಕೆ ಮಾಡುವ ಕಾರ್ಯಕ್ರಮ. ಬದುಕಿನ ಒಂದು ಭಾಗವಾದ ಸಾವು, ಸತ್ತಮೇಲೆಯೂ ಹೇಗೆ ಬದುಕನ್ನು ಕಿತ್ತು ತಿನ್ನುತ್ತದೆಂಬ ಸಂಗತಿಯನ್ನು ಮಾಲಗತ್ತಿ ಇಲ್ಲಿ ಅರ್ಥ ಪೂರ್ಣವಾಗಿ ಧ್ವನಿಸಿದ್ದಾರೆ.

ಮನುಷ್ಯ ಸತ್ತನಂತರ ಮಾಡುವ ಶವ ಸಂಸ್ಕಾರಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಈಗಾಗಲೇ ಕಥೆ-ಕಾದಂಬರಿಗಳು ಬಂದಿವೆ. ಅನಂತಮೂರ್ತಿಯವರ 'ಸಂಸ್ಕಾರ',

ಗಿರಡ್ಡಿ ಗೋವಿಂದರಾಜರ 'ಮಣ್ಣು' ಇವುಗಳನ್ನು ಉಲ್ಲೇಖಿಸಬಹುದು. ನೀರಸವಾಗಿ ಉದ್ದಕ್ಕೆ ಬೆಳೆದುಕೊಂಡು ಹೋಗುವ ಗಿರಡ್ಡಿಯವರ 'ಮಣ್ಣು' ನೀಳ್ಗತೆ ಅಂತಹ ಯಾವ ಪರಿಣಾಮವನ್ನುಂಟುಮಾಡುವುದಿಲ್ಲ. ಅನಂತಮೂರ್ತಿಯವರ 'ಸಂಸ್ಕಾರ' ಮಾತ್ರ ವೈದಿಕರ ಗೊಡ್ಡುತನವನ್ನು ಅಚ್ಚುಕಟ್ಟಾಗಿ ಪ್ರದರ್ಶಿಸುತ್ತದೆ. ಮಾಲಗತ್ತಿಯವರ 'ಕಾರ್ಯ' ವಸ್ತು ಮತ್ತು ಆಶಯದ ದೃಷ್ಟಿಯಿಂದ ಇವೆರಡಕ್ಕಿಂತ ಭಿನ್ನವಾಗಿದೆ.

ಇಲ್ಲಿ ದಲಿತ ಮನೆತನವೊಂದರ ಸುತ್ತ-ಮುತ್ತ ಹೆಣೆದುಕೊಂಡ ಕಥೆ ಬೆಳವಣಿಗೆಗೊಳ್ಳುತ್ತಾ ಹೋಗುತ್ತದೆ. ಆದರೆ ಅದು ಕೇವಲ ಕಥೆಯಾಗಿರದೆ ದಲಿತ ಬದುಕಿನ ವ್ಯಥೆಯೂ ಆಗಿದೆ. ಹೀಗಾಗಿ ಇಲ್ಲಿ ಮಾಲಗತ್ತಿ ದಲಿತ ಬದುಕಿನ ಅನೇಕ ಒಳಕ್ರಿಯೆಗಳನ್ನು ಎತ್ತಿ ತೋರಿಸುವಂತಾಗಿದೆ.

ಸತ್ತ ಬಂಗಾರೆವ್ವನ ವ್ಯಕ್ತಿತ್ವದ ವರ್ಣನೆಯ ಮೂಲಕ ಪ್ರಾರಂಭವಾಗುವ ಕಾರ್ಯ, ಕಾರ್ಯಕ್ಕೆ ಸಂಬಂಧಿಸಿದ ಅನೇಕ ಅಡೆತಡೆಗಳನ್ನು ಪರಿಹರಿಸಿಕೊಂಡು ಬಂಗಾರೆವ್ವನ ಹೆಣ ಕುಣಿಯಿಂದ ಹೊರಬಿದ್ದು ಕಾಗೆಗಳು ಅದನ್ನು ಕುಕ್ಕಿ ತಿನ್ನುವ ಪ್ರಸಂಗದೊಂದಿಗೆ ಮುಕ್ತಾಯವಾಗುತ್ತದೆ. ಘಟೇಗಾರಿಕೆ ಸ್ಥಾನಕ್ಕಾಗಿ ನಡೆದ ರಾಜಕೀಯ, ಶಾಂತಗೌಡರ ನಯ ವಂಚನೆ, ಕುಡಿತದ ಅಮಲಿನಲ್ಲೇ ಕೂಗಾಡುವ ಜೀವಂತ ಪ್ರೇತಗಳು, ಮುಂದ್ದೇನ ಹಳ್ಳಿಯ ಕಾಮ-ಸ್ವಾರ್ಥ, ದಲಿತರ ಅಸಹಾಯಕತೆ-ಇವೆಲ್ಲ ಅಂಶಗಳು 'ಕಾರ್ಯ'ದ ತುಂಬಾ ನಿಗಿಗುಡುತ್ತವೆ. 'ಮಾಗಿ' ಕಾದಂಬರಿಯಂತೆ ಇಲ್ಲಿಯೂ ಕೂಡಾ ದಲಿತರ ಬದುಕಿನ ಆಚರಣೆ-ನಂಬಿಕೆಗಳ ಕಡೆಗೆ ಹೆಚ್ಚು ಗಮನ ಹರಿಸಲಾಗಿದೆ.

ಬಂಗಾರೆವ್ವ ಸತ್ತು ಮೂರು ದಿನಗಳಾಗಿವೆ. ಆಕೆಯ-ಮಣ್ಣು ಮುಗಿದು ಮೂರು ದಿನಗಳ ನಂತರ ಮಾಡುವ 'ಕಾರ್ಯ'ಕ್ಕೆ ಎಲ್ಲರೂ ಸೇರಿದ್ದಾರೆ. ಈ ಕಾರ್ಯದ ಕಾರ್ಯಕ್ರಮಗಳನ್ನು ಕಾದಂಬರಿ ವಿವರಿಸುತ್ತಾ ಅದರೊಂದಿಗೆ ಬೆಸೆದುಕೊಂಡಿರುವ ದಲಿತರ ಮೌಢ್ಯತೆಯನ್ನು ಹೇಳುತ್ತಾ ಹೋಗುತ್ತದೆ. ಮಾಗ ದಶರಥ ಘಟೇಗಾರಿಕೆಯನ್ನು ಬಹಳ ವರ್ಷಗಳಿಂದ ಮಾಡಿಕೊಂಡು ಬಂದ ದಲಿತರ ಕೇರಿಯ ಹಿರಿಯ. ತನಗೆ ವಯಸ್ಸಾದಾಗ ಆತ ಘಟೇಗಾರ ಸ್ಥಾನಕ್ಕೆ ತನ್ನ ತಮ್ಮ ಚಂದಪ್ಪನ ಹೆಸರನ್ನು ಸೂಚಿಸುವುದೂ, ಚಂದಪ್ಪ ಕುಷ್ಠರೋಗಿಯಾದ್ದರಿಂದ ದೈವವೆಲ್ಲ ಈ ಮಾತನ್ನು ಒಪ್ಪದೇ ಇರುವುದು, ಕೊನೆಗೆ ದಶರಥನಿಗೆ ವಯಸ್ಸು ಹೆಚ್ಚಾಗಿ ಮುದುಕನಾದಾಗ ದಶರಥನ ಮಗ ಮಲ್ಲಪ್ಪ ಘಟೇಗಾರನಾಗಿ ಮುಂದುವರೆದ ಪ್ರಸಂಗ ಹೀಗೆ ಘಟೇಗಾರದ ಸ್ಥಾನ ಮತ್ತು ಅದರಿಂದ ಬರುವ ಆದಾಯದಿಂದ ವಂಚಿತನಾದ ಚಂದಪ್ಪ ಅಣ್ಣನ ಮೇಲೆ ಮತ್ತು ಅವನ ಮಗನ ಮೇಲೆ ಬೇಕಿ

ಉಗುಳುತ್ತಿದ್ದುದು ಊರಗೌಡರ ಮಾತು ಕೇಳಿ ಅಂತೆಯೇ ಉದ್ದೇಶ ಪೂರ್ವಕವಾಗಿ ಕುಳ್ಳುಗಳನ್ನು ತರದೆ, ಮಲ್ಲಪ್ಪನ ಕೈಸುಟ್ಟು ಕುಳ್ಳಿಗ್ಗಿಯನ್ನು ಕೆಳಗಿಟ್ಟಾಗ, ಆಗ ಬಾರದ್ದು ಆಗಿ ಹೋದಂತೆ ವರ್ತಿಸುತ್ತಾ ಎಲ್ಲರೂ ಮಲ್ಲಪ್ಪನ ಮೇಲೆ ಹರಿ ಹಾಯುತ್ತಾ ಇದರ ಪರಿಹಾರಕ್ಕಾಗಿ ಬುಟಾಳಿ ಐನೋರ ಹತ್ತಿರ ಹೋಗುವ ಪ್ರಸಂಗ ಮಚಗಾರ ಜನತೆಯಲ್ಲಿರುವ ಮೂಢನಂಬಿಕೆಗಳನ್ನು ಎತ್ತಿ ತೋರಿಸುತ್ತದೆ. ನಾಲ್ಕು ದಿನಕ್ಕೆ ಮಾಡಬೇಕಾದ ಕಾರ್ಯ ಐದನೇ ದಿನಕ್ಕೆ ಮುಂದಕ್ಕೆ ಹೋಗುವುದು, ಘಟೇಗಾರಿಕೆ ಸ್ಥಾನಕ್ಕಾಗಿ ಚಂದಪ್ಪನಂತವರ ಸ್ವಾರ್ಥ, ಮಲ್ಲಪ್ಪನಂತವರ ಅಸಹಾಯಕತೆ, ಕೌಳಮರ ಹಿಡಿದವ ನಿಂತುಕೊಂಡೇ ಇರಬೇಕೆಂಬ ನಿಯಮದಿಂದ ಫಕೀರಪ್ಪ ಅನುಭವಿಸಿದ ಯಮಯಾತನೆ ಇವೆಲ್ಲ ಸನ್ನಿವೇಶಗಳನ್ನು ವಿವರಿಸುತ್ತ ಲೇಖಕ ಮಚಗಾರ ಜನಾಂಗದ ಬದುಕಿನ ಅನೇಕ ಮಗ್ಗುಲುಗಳನ್ನು ಹೇಳುತ್ತಾ ಹೋಗುತ್ತಾರೆ.

ಕುಡಿತದ ಅಮಲಿನಲ್ಲಿ ಪಂಚಾಯತಿ ಮಾಡುತ್ತಿದ್ದಾಗ ಮಚಗಾರ ಜನಾಂಗದ ದೈವ; ಗೌಡನ ಹೆಂಡತಿ ಪದ್ಮಾವತಿಯನ್ನು ತಾವಿದ್ದಲ್ಲಿಗೆ ಕರೆಕಳಿಸುವ ಧೈರ್ಯ ಮಾಡುತ್ತದೆ. ಆದರೆ ಅದೇ ಗೌಡ ನಿಗಿ-ನಿಗಿ ಕೆಂಡದಂತೆ ಎದುರುಬದುರು ನಿಂತಾಗ ಮಾತುಗಳನ್ನೆಲ್ಲಾ ಕಳೆದುಕೊಂಡು ಮೂಕರಾಗುತ್ತಾರೆ. ಕೊನೆಗೆ ಗೌಡನ ಕಪಟತನ ಚಂದಪ್ಪನಂತಹ ದಲಿತನ ಸ್ವಾರ್ಥತನ ಗೆಲ್ಲುತ್ತವೆ. ಇದನ್ನೆಲ್ಲ ನೋಡುತ್ತ ಮೂಕ ಪ್ರೇಕ್ಷಕರಂತೆ ಈ ದಲಿತ ಸಮೂಹ ನರಳುತ್ತದೆ. ಹೀಗೆ ಲೇಖಕ ಇಲ್ಲಿ ನೇರವಾಗಿ ಬಂಡಾಯ–ಪ್ರತಿಭಟನೆಯನ್ನು ತಾರದೆ; ಅದರ ಪರಿಣಾಮದ ಮೂಲಕವೇ ಹೊಸ ಆಲೋಚನೆಗಳನ್ನು ಹುಟ್ಟಿಸುತ್ತಾರೆ.

ಇವರಿಗೆ ಕುಡಿತದ ಅಮಲಿನಲ್ಲಿ ಹುಟ್ಟುವ ಧೈರ್ಯ, ಎದೆಗಾರಿಕೆ ವಾಸ್ತವಜಗತ್ತಿನಲ್ಲಿ ಬರುವುದಿಲ್ಲ. ಹೀಗಾಗಿ ಕುಡಿತ,ದಲಿತರಿಗೆ ವರ ಮತ್ತು ಶಾಪ ಎರಡೂ ಆಗುವ ಸಾಧ್ಯತೆಯಿದೆ. ವಾಸ್ತವದಲ್ಲಿ ಕಾಣದ್ದನ್ನು ಅಮಲಿನಲ್ಲಿ ಕಾಣುತ್ತಾರೆ. ಕುಡಿಯದಿದ್ದಾಗ ಮೂಕರಂತೆ ಇರುವ ಇವರು, ಕುಡಿದಾಗ ಬಿಚ್ಚುಗತ್ತಿಗಳಾಗುತ್ತಾರೆ. ಒಂದರ್ಥದಲ್ಲಿ ಕುಡಿತ ಇವರಿಗೆ ದನಿ ಕೊಡುತ್ತದೆ. ಮಾತು ಕೊಡುತ್ತದೆ.

ಆದರೆ ಅವರಲ್ಲೇ ಇರುವ ಅಧಿಕಾರದ ಕಚ್ಚಾಟ, ಮೌಢ್ಯ, ಅಂಧ ಸಂಪ್ರದಾಯಗಳು ಅಜ್ಞಾನ, ಮುಗ್ಧತೆ ಇವುಗಳಿಂದಾಗಿ ಶತಮಾನಗಳಿಂದ ಗೌಡರಂತಹ ಉಳ್ಳವರ, ಮೇಲ್ವರ್ಗದವರ ದಾಳಗಳಾಗಿ ಬದುಕುತ್ತಿರುವ ದಟ್ಟ ಸತ್ಯವನ್ನು ಮಾಲಗತ್ತಿ ಇಲ್ಲಿ ನೈಜವಾಗಿ ಮೂಡಿಸಿದ್ದಾರೆ.

"ಸೂಳೆ ಮಕ್ಕಳ್ರಾ ಎಷ್ಟ್ರಲೇ ಸೊಕ್ಕು ನಿಮ್ದು? ನೀವು ಹೊಲ್ದು ತಂದ ಮಚ್ಚಿಗಿ ಕಿಮ್ಮತ್ತದ ನಿಮಗೆ ಕಿಮ್ಮತ್ತಿಲ್ಲ. ನಿಮ್ಮ ಪಂಚರ ನ್ಯಾಯದಾಗ ನಮ್ಮ ಹೆಸರ ಎತ್ತೋಷ್ಟು ಧೈರ್ಯಾಬಂತ ನಿಮಗೆ? ನಾವ್ಯಾರು? ನೀವ್ಯಾರು? ನಿಮ್ಮ ಕಿಮ್ಮತ್ತೆಷ್ಟು? ನಿಮ್ಮ ಮರ್ಯಾದೆಷ್ಟು? ತಿಳಿಲಿಲ್ಲ ನಿಮಗೆ...ತಾಯಿಗಂಡ್ರು ತಂದ

ನಡಮನ್ಯಾಗ...ಬಾದ-ಸೊಳೆ ಮಕ್ಕಾಳ್ಯಾ; ಸಮಗಾರದೇವ್ರಿಗಿ ಮಚ್ಚಿಪೆಟ್ಟಂತ. ನಿಮಗೆ ಹ್ಯಾಂಗ ಏನಮಾಡಬೇಕೆನ್ನೂದು ನನಗೊತ್ತದ ಹೋಗ ಸೂಳೇ ಮಗನೇ" ಎನ್ನುವ ಶಾಂತಗೌಡನ ಈ ಮಾತುಗಳು ಶತಮಾನಗಳಿಂದ ದಲಿತರನ್ನು ಅಜ್ಞಾನದಲ್ಲಿಟ್ಟು ಶೋಷಣೆ ಮಾಡುತ್ತ ಬಂದ ಈ ಸಮಾಜ ವ್ಯವಸ್ಥೆಯ ಕರಾಳ ಮುಖಗಳಂತಿವೆ. ಆದರೆ ಇಲ್ಲಿಯ ದಲಿತರು ಇದರ ವಿರುದ್ಧ ನೇರವಾದ ಬಂಡಾಯ ಹೂಡಲಾರರು. ಸಮಗಾರ ಜನಾಂಗದಲ್ಲೇ ಇರುವ ನಾಯಕರ ಕಚ್ಚಾಟದಿಂದ; ತಮ್ಮ ಅಜ್ಞಾನದಿಂದ ಅವರು ಹೊರಬರಬೇಕಾಗಿದೆಯೆಂಬ ಆಶಯವನ್ನು ಕಾದಂಬರಿಯ ಕೊನೆಯಲ್ಲಿ ಇರುವ 'ನಾವು ಕಾಯುತ್ತಿದ್ದೇವೆ' ಚಿತ್ರ ಸಾಂಕೇತಿಕವಾಗಿ ಹೇಳುತ್ತದೆ.

ಕಾರ್ಯದ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಮೌಢ್ಯತೆಯ ಮೇಲೆ ಮೌಢ್ಯತೆ–ಬೆಳೆದುಕೊಂಡು ಹೋಗುತ್ತದೆ. ಕುಳ್ಳಗ್ಗಿ ಕೈತಪ್ಪಿ ನೆಲಕ್ಕೆ ಬಿದ್ದದ್ದಕ್ಕೆ ಪ್ರಮುಖ ಕಾರಣ ಮಲ್ಲಪ್ಪ ಮುಡಚಟ್ಟ ಆದದ್ದು. ಮಲ್ಲಪ್ಪ ಮುಡಚಟ್ಟು ಆಗಲು ಕಾರಣ ಗೌಡರ ಹೆಂಡತಿ ಪದ್ಮಾವತಿ, ಹೀಗೆ ಒಂದರ ನಂತರ ಒಂದರ ಪ್ರಸ್ತಾಪ ಬಂದು ಮೂಲ ಸಮಸ್ಯೆಯೇ ಮರೆಯಾಗುತ್ತದೆ. ಈ ಅಂಶವನ್ನು ಲೇಖಕ ಇಲ್ಲಿ ಸೂಕ್ಷ್ಮವಾಗಿ ಹೇಳುತ್ತಲೇ ದಲಿತರಲ್ಲಿ ಎಚ್ಚರ ಹುಟ್ಟಿಸುವ ಪರಿಣಾಮವನ್ನುಂಟು ಮಾಡುತ್ತಾರೆ.

ಈ ಕಾದಂಬರಿ ಕುತೂಹಲದ ಮೇಲೆ ಕುತೂಹಲದ ಪ್ರಸಂಗಗಳನ್ನುಂಟು ಮಾಡುತ್ತ ಹೋಗುತ್ತದೆ. ಕಾರ್ಯಕ್ಕೆ ಸಂಬಂಧಿಸಿದಂತೆ ಹೇಳುತ್ತಿದ್ದ ಕಥೆ ಮೊದಲು ಚಂದಪ್ಪನ ಅಧಿಕಾರದ ಆಸೆಯನ್ನು, ಘಟೇಗಾರಿಕೆಗಾಗಿ ನಡೆಸುತ್ತಿರುವ ಮಸಲತ್ತನ್ನು ಸೂಚಿಸಿದರೆ ಮುಂದೆ ಅದರಲ್ಲಿ ಗೌಡರ ಕೈವಾಡವೂ ಇರುವುದು ತಿಳಿದು ಇನ್ನೂ ಕುತೂಹಲ ಹುಟ್ಟಿಸುತ್ತದೆ. ಕೊನೆಗೆ ಮಲ್ಲಪ್ಪ–ಪದಮಾವತಿ ಕೂಡಿಕೊಂಡು ಓಡಿ ಹೋಗುವುದು ಮತ್ತೂ ಕುತೂಹಲ ಕೆರಳಿಸುತ್ತದೆ. ಅಂತಿಮವಾಗಿ ರುದ್ರಗೌಡರು ಮತ್ತು ವರಗದಶರಥ ಕೆರೆಗೆ ಬಿದ್ದು ಸಾಯುವುದು ಶಾಂತಗೌಡನ ಕಾರ್ಯದ ಪರಮಾವಧಿಯೆಂಬಂತೆ ನಾಲ್ಕು ದಿನಗಳಿಂದ ಕುಣಿಯಲ್ಲಿದ್ದ ಹೆಣ ಐದನೆಯ ದಿನಕ್ಕೆ ಹೊರಗೆ ಎಸೆಯಲ್ಪಟ್ಟು ಅದರ ಮೇಲೆ ಕಾಗೆಗಳು ಹದ್ದುಗಳು ಹಾರಾಡುತ್ತಿರುವುದು ಹೀಗೆ ಇವೆಲ್ಲ ಕುತೂಹಲಗಳನ್ನು ಕಾಪಾಡಿಕೊಂಡು, ನೈಜತೆಯನ್ನು ಉಳಿಸಿಕೊಂಡು ಎಲ್ಲಿಯೂ ಘೋಷಣೆ ಸಂದೇಶಗಳನ್ನು ತರದೆ ಹೇಳಬೇಕಾದುದನ್ನು ತುಂಬಾ ಪರಿಣಾಮಕಾರಿಯಾಗಿ ಹೇಳಿದ್ದಾರೆ.

"ಗೋರಿಗಳ ಕಲ್ಲುದಾಟಿ ಬರುವಾಗ ಚಂದಪ್ಪ-ಗಕ್ಕನೇ ನಿಂತ. ಗಿಡ್ಡ ಬಸಪ್ಪನು ಮುಂದೆ ಹೆಜ್ಜೆ ಹಾಕಲಿಲ್ಲ. ಒಮ್ಮೆಲೆ ಕಾಗೆಗಳ ಹಿಂಡು ಭುರ್‌ನೇ ಹಾರಿದವು. ಎಲ್ಲರೂ ಚಂದಪ್ಪನ ಬಳಿಗೆ ಬಂದವರೇ ಒಂದು ಹೆಜ್ಜೆ ಮುಂದಿಡದೆ ಗಾಬರಿಯಾಗಿ ನಿಂತರು.

ಇವರಿಗಾಗಿ ಮುಂದೆ ಕಾದಿಟ್ಟ ಸಮಸ್ಯೆಯು ಜಾತಣ-ಬಂಗಾರೆವ್ವನ ಹೆಣ ಗೋರಿಯಿಂದ ಹೊರಬಿದ್ದಿದೆ! ಭಯದಲ್ಲಿ ಬಾಯಿ ಬತ್ತಿ ಹೋದಾಗ ಕರಳು ನಡುಗುತ್ತಿದ್ದವು. ಪ್ರತಿಯೊಬ್ಬರ ಮಿದುಳು ತನ್ನಷ್ಟಕ್ಕೆ ತಾನೇ ಕಾರ್ಯ ನಿರತವಾಗಿ ಮುಂದೇನು ಎಂದು ಪ್ರಶ್ನಿಸಿಕೊಳ್ಳುತ್ತಿತ್ತು. ಮೌನ ಮುರಿಯುವುದೇ ಒಂದು ಸಮಸ್ಯೆಯಾಯಿತು! ಹಾರುವ ಕಾಗೆಗಳೆಲ್ಲ ಗೂಗೆಗಳಂತೆ ಕಾಣತೊಡಗಿದವು. ಬರಬರುತ್ತ ಕಣ್ಣೆಲ್ಲ ಕತ್ತಲು ಕವಿದಂತೆ ಆಯಿತು"[6]

ಎಂದು ಹೇಳುವ ಲೇಖಕರು ಉತ್ತರಕ್ಕಾಗಿ ಓದುಗರನ್ನೇ ಪ್ರಶ್ನಿಸಿದ್ದಾರೆ. ಕೊನೆಯ ಈ ಮಾತುಗಳಂತೂ ತೀವ್ರವಾದ ಪರಿಣಾಮವನ್ನುಂಟು ಮಾಡುತ್ತವೆ. ಹುಗಿದ ಹೆಣ ಹೊರಬೀಳುವ ಪ್ರಸಂಗ ಕುಂ. ವೀರಭದ್ರಪ್ಪನವರ 'ಕೆಂಡದ ಮಳೆ' ಕಾದಂಬರಿಯಲ್ಲಿಯೂ ಬರುತ್ತದೆ. ಆದರೆ ಅದು ಅಲ್ಲಿ ಜಾತಿಯ ವೈಷಮ್ಯವಾಗಿ ಬಂದರೆ; ಇದು ಗೌಡರ ಸೇಡಿನ ಫಲವಾಗಿ–ಸಮಾಜ–ವ್ಯವಸ್ಥೆಯ ಕ್ರೂರತನದ ಸಂಕೇತವಾಗಿ ಬರುತ್ತದೆ. ಈ ಕಾದಂಬರಿಯ ಪುಟ ಸಂಖ್ಯೆಗಳು ಏರಿಕೆ ಕ್ರಮದಲ್ಲಿ ಬರದೆ ಇಳಿಕೆ ಕ್ರಮದಲ್ಲಿ ಬಂದಿವೆ. ತಮ್ಮ ಮೊದಲ ಕಾದಂಬರಿಯ ಮೂಲಕವೇ ಮಾಲಗತ್ತಿ ಸಾಕಷ್ಟು ಭರವಸೆ ಮೂಡಿಸಿದ್ದಾರೆ.

ಸಮಾರೋಪ :

ಈ ದಶಕದಲ್ಲಿ ಪ್ರಕಟವಾದ ಈ ಮೂರೂ ಕಾದಂಬರಿಗಳು ದಲಿತ ಬದುಕಿನ ಮಹತ್ವದ ದಾಖಲೆಗಳಾಗಿ ಇದುವರೆಗೆ ಕನ್ನಡ ಸಾಹಿತ್ಯಕ್ಕೆ ಅಪರಿಚಿತವಾಗಿದ್ದ ಅನೇಕ ಸಂಗತಿಗಳನ್ನು ಹೇಳುತ್ತವೆ. ದೇವನೂರು ಮಹಾದೇವ ಅವರ 'ಕುಸುಮ ಬಾಲೆ' ಇತ್ತೀಚಿನ ಪ್ರಕಟನೆಯಾಗಿದೆ. ಇಲ್ಲಿಯೂ ಕೂಡಾ ದಲಿತ ಸಂಸ್ಕೃತಿಗೆ ಸಂಬಂಧಿಸಿದ ಅನೇಕ ಹೊಸ ಹೆಜ್ಜೆಗಳಿವೆ. ಆದರೆ ಅಲ್ಲಿ ಸಂವಹನದ ಸಮಸ್ಯೆಯಿದೆ. ಕುಸುಮ ಬಾಲೆಗಿಂತ–ಒಡಲಾಳ ಹೆಚ್ಚು ಪರಿಣಾಮಕಾರಿಯಾಗಿರುವುದರಿಂದ ಇಲ್ಲಿಯ ಅಧ್ಯಯನಕ್ಕೆ ಒಡಲಾಳವನ್ನೇ ಆಯ್ಕೆ ಮಾಡಿಕೊಳ್ಳಲಾಗಿದೆ.

'ಒಡಲಾಳ'ದ ಸಾಕವ್ವ, 'ಮಾಗಿ'ಯ ಮಾಗವ್ವ 'ಕಾರ್ಯದ' ಬಂಗಾರವ್ವ ಈ ಪಾತ್ರಗಳು ಕನ್ನಡದ ಮಹತ್ವದ ಕೊಡುಗೆಗಳು ಎನಿಸುತ್ತವೆ. ಸಾಕವ್ವ-ಮಾಗವ್ವನಂತವರ ಇದ್ದ ಬದುಕಿನಲ್ಲಿ ನೋವು–ಶೋಷಣೆ ಇದ್ದರೆ; ಬಂಗಾರವ್ವ ಬದುಕಿ ಸತ್ತ ದಲಿತರ ಬದುಕಿನಲ್ಲಿಯೂ ನೋವು-ಶೋಷಣೆ ಕಾಣಿಸುತ್ತದೆ. ಸಾಕವ್ವ-ಮಾಗವ್ವ ಬದುಕುವುದರ ಮೂಲಕ ಈ ಕರಾಳ ವ್ಯವಸ್ಥೆಯನ್ನು ಪ್ರಶ್ನಿಸಿದರೆ ಬಂಗಾರವ್ವ ಸಾಯುವುದರ ಮೂಲಕ ಈ ಕ್ರೂರ ವ್ಯವಸ್ಥೆಗೆ ಸವಾಲಾಗುತ್ತಾಳೆ. ದಲಿತರ ಬದುಕಿನ ಸಾವು ಮತ್ತು ಬದುಕು ಇವೆರಡರಲ್ಲಿಯೂ ನಿರಂತರವಾಗಿ

ಕಾಡುವ ಶೋಷಣೆ ದುರಂತ-ಮೌಢ್ಯತೆ ಇವೆಲ್ಲ ಓದುಗರಿಗೆ ಉಳಿಯುತ್ತ ಗಾಢವಾದ ಪರಿಣಾಮವನ್ನುಂಟುಮಾಡುತ್ತವೆ.

ಈ ಮೂರೂ ಕಾದಂಬರಿಗಳಲ್ಲಿ ಘೋಷಿತ ನಿಲವುಗಳಿಲ್ಲ ; ಬದುಕಿನ ಸತ್ಯಗಳಿವೆ. ಬಂಡಾಯದ ಸಪ್ಪಳವಿಲ್ಲ; ಅದರ ಸತ್ವ ಇದೆ. ಆದರ್ಶ-ಸಂದೇಶ ಹೇಳುವ ಗೊಂದಲವಿಲ್ಲ. ವರ್ತಮಾನದ ವಾಸ್ತವತೆ ಇದೆ. ಹೀಗಾಗಿ ಈ ಕೃತಿಗಳು ಮಹತ್ತರವಾದದ್ದನ್ನು ಅಭಿವ್ಯಕ್ತಿಸುತ್ತಲೇ ಕಲಾತ್ಮಕವಾಗಿಯೂ ಆಕರ್ಷಿಸುತ್ತವೆ. ಸಾಹಿತ್ಯ ಕೃತಿಯೊಂದರ ಮೂಲಕ ಸಿಗಬಹುದಾದ ಸಂತೋಷ, ಕುತೂಹಲಗಳನ್ನುಳಿಸಿ ಕೊಂಡೇ ಈ ಕೃತಿಗಳು ಕ್ರೂರ ವ್ಯವಸ್ಥೆಗೆ ಸವಾಲಾಗಿ ನಿಲ್ಲುವ ತಾಕತ್ತು ಪಡೆದಿವೆ.

ಪುರುಷ ಪ್ರಧಾನ ಸಂಸ್ಕೃತಿಯನ್ನು ಒಪ್ಪಿಕೊಂಡು ಪುರುಷರನ್ನೆ ನಾಯಕರನ್ನಾಗಿ ಹೊಂದಿದ ಕಾದಂಬರಿಗಳೇ ಹೆಚ್ಚಾಗಿರುವ ಸಂದರ್ಭದಲ್ಲಿ ಈ ಮೂರು ಕಾದಂಬರಿಗಳು ಸಾಕವ್ವ-ಮಾಗವ್ವ-ಬಂಗಾರವ್ವನಂತಹ ಮಹಿಳಾ ಪಾತ್ರಗಳಿಗೆ ಪ್ರಾಧಾನ್ಯತೆಯನ್ನು ಕೊಡುವುದರ ಮೂಲಕ ಸಮಸಂಸ್ಕೃತಿಯನ್ನು ಬಿಂಬಿಸುತ್ತವೆ. 'ಮಾಗಿ'ಯಲ್ಲಿ ಬರುವ 'ಕಮಲಿ'ಯಂತವರಿಗೆ ಬದುಕನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವೂ ಇದೆ.

'ಒಡಲಾಳ' ಕಾದಂಬರಿಯ ಎತ್ತಪ್ಪ ಸಾಹುಕಾರರು, 'ಮಾಗಿ' ಕಾದಂಬರಿಯ ಸಿದ್ಧವೀರೇಗೌಡರು, 'ಕಾರ್ಯ' ಕಾದಂಬರಿಯ ಶಾಂತಗೌಡರು ಹೀಗೆ ಈ ಮೂರೂ ಕಾದಂಬರಿಗಳಲ್ಲಿ ಗೌಡರು ಸಾಹುಕಾರರು ಶೋಷಕ ಪ್ರತಿನಿಧಿಗಳಾಗಿ ಬರುತ್ತಾರೆ. ಒಂದು ಮುಖ್ಯ ಸಂಗತಿಯೆಂದರೆ ಈ ಮೂರೂ ಕಾದಂಬರಿಗಳಲ್ಲಿಯ ದಲಿತರು ಎರಡು ಕಾರಣಗಳಿಂದ ಶೋಷಣೆಗೆ ಒಳಗಾಗಿದ್ದಾರೆ. ಮೊದಲನೆಯ ಕಾರಣ ಅವರ ಅಜ್ಞಾನ-ಮೌಢ್ಯತೆ- ಹುಂಬತನ-ದಾರಿದ್ರ್ಯ ಅಸಹಾಯಕತೆಗಳಾದರೆ ; ಎರಡನೆಯ ಕಾರಣ-ಶ್ರೀಮಂತರು, ಮೇಲ್ಜಾತಿಯವರು-ಪೋಲಿಸರು ಇವರೆಲ್ಲ ಆಗಿದ್ದಾರೆ. ಒಂದು ಕುತೂಹಲಕಾರಿಯಾದ ಸಂಗತಿಯೆಂದರೆ, ಈ ಮೂರೂ ಕಾದಂಬರಿಗಳಲ್ಲಿ ಶೋಷಣೆಗೊಳಗಾದ ದಲಿತರು ಮಾನವೀಯ ಅನುಕಂಪಕ್ಕೆ ಒಳಗಾಗುತ್ತಲೇ ನಿಜವಾದ ಬಂಡಾಯ ಪ್ರಜ್ಞೆಯನ್ನು ಹುಟ್ಟು ಹಾಕುತ್ತಾರೆ.

'ಒಡಲಾಳ' ಮತ್ತು 'ಕಾರ್ಯ' ಕಾದಂಬರಿಗಳು ಅಂತ್ಯದಲ್ಲಿ ತೀವ್ರ ಪರಿಣಾಮ ಬೀರಿದರೆ 'ಮಾಗಿ' ಕಾದಂಬರಿ ನಡು-ನಡುವೆ ಪರಿಣಾಮವನ್ನುಂಟು ಮಾಡುತ್ತ ಹೋಗುತ್ತದೆ. ದಲಿತರ ನೋವಿಗೆ, ನಿರಂತರ ಶೋಷಣೆಗೆ ಮಹಾದೇವ ಮತ್ತು ಮೂಲಗತ್ತಿಯವರು ಸಮಾಜ ವ್ಯವಸ್ಥೆಯ ಕಡೆ ಕೈಮಾಡಿ ತೋರಿಸುತ್ತಲೇ ದಲಿತರ ಮಿತಿಗಳನ್ನು ಹೇಳುತ್ತಾರೆ. ಮನಜ ಅವರು ಒಂದು ದಲಿತ ಮನೆತನ ಒಡೆದು ಹೋಳಾಗುವ ಪ್ರಸಂಗವನ್ನು ಮುಖ್ಯವಾಗಿರಿಸಿಕೊಂಡು

ಮಾಗಿಯಂತಹ ದಲಿತ ಹೆಣ್ಣೊಬ್ಬಳ ಸಾಹಸವನ್ನು ಪ್ರಕಟಿಸುತ್ತ ದಲಿತರ ಮಿತಿಗಳನ್ನು ಗುರುತಿಸುತ್ತಾರೆ.

ಭಾಷೆ–ಶೈಲಿಯ ದೃಷ್ಟಿಯಿಂದಂತೂ ಈ ಮೂರು ಕಾದಂಬರಿಗಳು ಗಮನಾರ್ಹವಾಗಿವೆ. ಒಂದೊಂದು ಕೃತಿಯೂ ಭಾಷಿಕ ಅಧ್ಯಯನಕ್ಕೆ ಸಾಕಷ್ಟು ಸಾಮಗ್ರಿ ಒದಗಿಸುತ್ತದೆ. ಮಹಾದೇವ ಮತ್ತು ಮನಜ ಅವರು ಮೈಸೂರು ಪ್ರಾಂತದ ಪ್ರಾದೇಶಿಕ ದಲಿತ ಭಾಷೆಯನ್ನು ಬಳಸಿದ್ದರೆ ಮಾಲಗತ್ತಿಯವರು ಉತ್ತರ ಕರ್ನಾಟಕದ ಆಡುಭಾಷೆಯನ್ನು ಉಪಯೋಗಿಸಿದ್ದಾರೆ. ಅನೇಕ ಪದಗಳು ಬೇರೆ ಭಾಗದ ಕನ್ನಡಿಗರಿಗೆ ಅರ್ಥವಾಗುವುದಿಲ್ಲ. ಮೂರರೂ ಕಾದಂಬರಿಗಳಲ್ಲಿಯೂ ಕಠಿಣ ಪದದ ಶಬ್ದಾರ್ಥ ಸೂಚಿಯಿಲ್ಲ. ಭಾಷೆಯನ್ನು ಮೂವರೂ ಅರ್ಥಪೂರ್ಣವಾಗಿ ದುಡಿಸಿಕೊಂಡಿದ್ದಾರೆ. ಆದರೆ ಮಹಾದೇವ ಮತ್ತು ಮಾಲಗತ್ತಿಯವರು ತಾವೇ ಇಂಗ್ಲೀಷ್–ಸಂಸ್ಕೃತ ಪದಗಳನ್ನು ಬಳಸಿದ್ದಾರೆ.

"ಅವಳು ಕುಳಿತಿದ್ದರೂ ಸಪ್ಪೋರ್ಟಿಗಾಗಿ . . . 7 "ನೊಣಗಳು ಸಾಕವ್ವನನ್ನು ಕೇರುಮಾಡದೆ ದಾಳಿ ಮಾಡುತ್ತಿದ್ದವು"8 ಒಂದು ಮೂಲೆ ಹಿಡಿದು ಸ್ಟಾರ್ಟ್ ಮಾಡಿ..."9 "ಧರಿತ್ರಿಯನ್ನು ಅಪ್ಪಿಕೊಂಡ ನೆಲವಿಲ್ಲದ ಕುಡುಕರು..."10

ಇಲ್ಲಿ ಬರುವ ಸಪ್ಪೋರ್ಟ್, ಕೇರ್, ಸ್ಟಾರ್ಟ್ ಮತ್ತು ಧರಿತ್ರಿ–ಈ ಮುಂತಾದ ಇಂಗ್ಲೀಷ್–ಸಂಸ್ಕೃತಪದಗಳು ಲೇಖಕರ ನೈಜ ಧಾಟಿಗೆ ಆತಂಕವೆನಿಸುತ್ತವೆ. ಇಂತಹ ಕೆಲ ಮಿತಿಗಳನ್ನು ಬಿಟ್ಟರೆ ಕಾದಂಬರಿಗಳು ಒಟ್ಟಾರೆಯಾಗಿ ಎಲ್ಲಂದದ ರೀತಿಯಲ್ಲಿ ಯಶಸ್ವಿಯಾಗಿದೆ. ಇವರು ಬಳಸಿದ ಭಾಷೆಯ ಕಸುವು ಹಾಗೂ ತೀವ್ರತೆಯ ಬಗೆಗೆ ಮೂರು ಉದಾಹರಣೆಗಳನ್ನು ನೋಡಬಹುದು.

"ಕೇಳ್ದೇನೊ ಗ್ರಾಸ್ತ ನಿನ್ನೆಡ್ತಿಮಾತು...ನಿನ್ನ ಹೆಡ್ತಿ ಸುಮ್ಕಿರ್ಲ್ಸಕ ಆಗ್ದವ, ನನ್ನ ಸುಮ್ಕಿರ್ಲ್ಸಕ ಬಂದ್ಯಾ ನನ್ನ ಮಗ್ನೇ, ಸಭಾಸ್...ಸಭಾಸ್ ಅವ್ಳೇನಾರು ಈ ವತ್ತು ನಿನ್ನ ಹಟ್ಟೀಲಿ ಇದ್ರ ಅವಳು ಅವಳಪ್ಪನ್ಗೂ ಹುಟ್ದಮಗಳಲ್ಲ. ಅಷ್ಟೇಯಾ ನಾ ಹೇಳೋದು" ॥

"ಇಂತೇ ಮಾತು ಸಂತೆಲೆಷ್ಟು ಅಂತಾ, ಭಾಳಾ ಪೋರಲಾಸ್ ಕೊಟ್ಟಾ ಇದೆ . ಯಾರ್ ಮುಂದೆ ಇಂತೇ ಮಾತೆಲ್ಲಾ ? ಸುದ್ದಿ ತಂದ ಸುರಿಯಕ್ಕೆ ಮಾನಾ ತಂದ ಅಳಿಯಕ್ಕೆ ಏನ್ನ ಕರ್‌ದಿರ್‍ಲಿಲ್ಲಾ. ಒಂದ್ ಕೈಲಿ ಬಲವಾಗೆ ಅಂವ್ಕಿ ಇಡಕಂಡು, ಮರ್ಯಾದಿಯಾಗಿ ಮನೆಗೋಗು. ಒಳ್ಳೆಯ್‌ವ್‌ರೆಲ್ಲಾ ಬನ್ನಿ ಕಳ್‌ನನ್ ಸಂವ ತೀರೇ ಬನ್ನಿ ಕಳಸಾ ಎತ್ತಕ್ಕೆ ಅನ್ನೋ ಮಾತು ನಿಂಗೆ ಲಾಯಕ್ಕಲ್ಲಾ. ಹಮ್ಮಾಗಾರ್ ಅಣ್ಣೇ ಸೊಪ್ಪೆ ಸುಮ್ಮನ್‌ಬೆಯ್ ಒಲೆಮ್ಯಾಲೇ ಅಂದಂಗೆ. ಗಮ್ಮನೇ ಗಂಭೀರವಾಗಿರು"12.

"ಆಯಿಗಿ ಅಳ್ಳಿಚಿಂತಿ ಹತ್ತಿದ್ರ ಮಗಳಿಗಿ ಮಿಂಡಗಾರನ ಚಿಂತಿ ಹತ್ತಿತಂತ. ಹಾಗಂತ ಯಾರಿಗೇನಾದ್ರೆ ಅವರಿಗೇನಂತೆ? ಎಷ್ಟೇ ಅಂದ್ರು ತಿಳಿಲಾರದ ಮಕ್ಕಳಲ್ಲಾ? ದೊಡ್ಡ ಆದ್ರು ದೊಡ್ಡವ್ರೆ ದೊಡ್ಡ್ಯಾಂವ ತಿಂದ ದುಂಡಕ ಉಳ್ಯಾಡಾಗ ವಂಕ್ಕಳದೇನು ?13

ಈ ಮೇಲಿನ ಉಲ್ಲೇಖಗಳು ಕ್ರಮವಾಗಿ 'ಒಡಲಾಳ' 'ಮಾಗಿ' ಮತ್ತು 'ಕಾರ್ಯ' ಕಾದಂಬರಿಗಳಿಂದ ಆಯ್ದುಕೊಂಡ ತುಣುಕುಗಳು ದಲಿತಭಾಷೆಯ ಅದ್ಭುತ ಸಾಧ್ಯತೆಗಳನ್ನು ಈ ಲೇಖಕರು ಸಾಹಿತ್ಯಕೃತಿಗಳ ಮೂಲಕ ಪರಿಚಯಿಸಿ ದ್ದಾರೆ. ಹೀಗೆ ಭಾಷೆ–ವಸ್ತು–ಧೋರಣೆ–ಅಭಿವ್ಯಕ್ತಿ ಈ ಎಲ್ಲ ದೃಷ್ಟಿಯಿಂದಲೂ ಈ ಮೂರು ಕಾದಂಬರಿಗಳು ವಿಶಿಷ್ಟವಾಗಿವೆ. ಕತ್ತಲು ರಾಜ್ಯದ ಮನುಷ್ಯರು ಮಾತಾಡುವ ಸಂಭ್ರಮವನ್ನೊಳಗೊಂಡ ಈ ಕಾದಂಬರಿಗಳು ನಿಜಕ್ಕೂ ಅಧ್ಯಯನ ಯೋಗ್ಯವಾಗಿವೆ.

ಅಡಿ ಟಿಪ್ಪಣಿಗಳು

1. ದೇವನೂರು ಮಹಾದೇವ–'ಒಡಲಾಳ' ಪುಟ 47
2. ರಾಜೇಂದ್ರ ಚೆನ್ನಿ–'ಅಧ್ಯಯನ' ಪುಟ 117
3. ಡಾ. ಮನಜ–'ಮಾಗಿ' ಪುಟ 61
4. ಸುಜನಾ–'ಮನಜ ಅವರ ಮಾಗಿ' ಲೇಖನ ಸಂಕ್ರಮಣ ಪತ್ರಿಕೆ ಏಪ್ರಿಲ್ 1988
5. ಅರವಿಂದ ಮಾಲಗತ್ತಿ–'ಕಾರ್ಯ' ಪುಟ 13
6. ,, ,, ಪುಟ 2
7. ದೇವನೂರು ಮಹಾದೇವ 'ಒಡಲಾಳ' ಪುಟ 1
8. ,, ,, ಪುಟ 1
9. ,, ,, ಪುಟ 8
10. ಅರವಿಂದ ಮಾಲಗತ್ತಿ 'ಕಾರ್ಯ' ಪುಟ 28
11. ದೇವನೂರು ಮಹಾದೇವ–'ಒಡಲಾಳ' ಪುಟ 11
12. ಮನಜ 'ಮಾಗಿ' ಪುಟ 124
13. ಅರವಿಂದ ಮಾಲಗತ್ತಿ 'ಕಾರ್ಯ' ಪುಟ 31

ಪ್ರಾಚೀನ ಭಾರತದಲ್ಲಿ ಹೆಣ್ಣಿನ ವಿವಾಹ–ವಯಸ್ಸು ವಿಧಿ ವಿಧಾನಗಳು :

ಡಾ. ಕೆ ಕೇಶವಶರ್ಮ

1 : 1 'ವಿವಾಹ' ಎನ್ನುವುದಕ್ಕೆ ಕಿಟ್ಟೆಲ್ ಅವರು ಈ ರೀತಿಯ ಅರ್ಥವನ್ನು ಕೊಡುತ್ತಾರೆ.

1. Carrying off. 2. Leading away 3. conducting home 4. The taking a wife 5. Marriage 6. Matrimony.

(ಕಿಟ್ಟೆಲ್. ಎಫ್. 1894. ಪು. 1416)[1] ಇದರ ಪ್ರಕಾರ, ವಿವಾಹ ಅಂದರೆ ಹೊತ್ತುಕೊಂಡು ಹೋಗುವುದು ಎಂಬರ್ಥ ಬರುತ್ತದೆ. ಗಂಡು—ಹೆಣ್ಣಿನ ಸಂಬಂಧವನ್ನು ನೆಲೆಗೊಳಿಸುವಲ್ಲಿ ವಿವಾಹವು ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಈ ದೃಷ್ಟಿಯಿಂದ ಕುಟುಂಬದಂತಹ ಸ್ಥಿರ ಸಂಸ್ಥೆಯನ್ನು ಕಟ್ಟಲು ವಿವಾಹವು ಮುಖ್ಯವಾದ ಒಂದು ಆಚರಣೆಯಾಗಿದೆ.

ಒಂದು ಕಡೆ ನೆಲೆಯೂರದ ಜನಾಂಗಗಳಲ್ಲಿಗುಂಪು ವಿವಾಹವು ಸಹಜವಾದುದು. ಇಂತಹಕಡೆ ಗುಂಪಾಗಿ ಗಂಡು ಮತ್ತು ಹೆಣ್ಣುಗಳಿಗೆ ಮದುವೆಯು ನಡೆಯುತ್ತದೆ. (Chattopadhyaya Deviprasad 1981. p. 150)[2]

ಒಂದು ಗುಂಪಿನ ಅನೇಕ ಪುರುಷರೂ ಮತ್ತೊಂದು ಗುಂಪಿನ ಅನೇಕ ಸ್ತ್ರೀಯರೂ ದಾಂಪತ್ಯ ಜೀವನ ನಡೆಸುವಂತಿದ್ದರೆ ಅದಕ್ಕೆ 'ಸಾಮೂಹಿಕ ವಿವಾಹ' ವೆಂದು ಹೆಸರು. ಇದರಲ್ಲಿ ಒಂದು ತಲೆಮಾರಿಗೆ ಸೇರಿದ ಒಂದು ಗುಂಪಿನ ಪ್ರತಿಯೊಬ್ಬ ಸ್ತ್ರೀಯ ಪತಿಯೆನ್ನಿಸಿಕೊಳ್ಳುತ್ತಾನೆ. ಈ ಸಂಬಂಧದಿಂದ ಜನಿಸಿದ ಮಕ್ಕಳು ಗುಂಪಿನ ಯಾವನೇ ಒಬ್ಬ ವ್ಯಕ್ತಿಗೆ ಸಂಬಂಧಿಸಿರದೆ ಇಡೀ ಗುಂಪಿನ ಮಕ್ಕಳೆನ್ನಿಸಿಕೊಳ್ಳುತ್ತಾರೆ. ಸಾಮೂಹಿಕ ವಿವಾಹ ಮತ್ತು ಬಹುಪತಿತ್ವ ಜೊತೆಗೇ ಇರುತ್ತವೆ. ಎಂದು ವೆಸ್ಟರ್ ಮಾರ್ಕನು ಅಭಿಪ್ರಾಯ ಪಡುತ್ತಾನೆ (ನಂಜಮ್ಮಣ್ಣಿ. ಎಂ. 1971. ಪು. 78)[3]

ಈ ಆಧಾರಗಳ ಮೇಲೆ ವಿಶ್ಲೇಷಿಸಬಹುದಾದ ಸಂಗತಿಯೆಂದರೆ, ಅಲೆಮಾರಿ ಗುಂಪುಗಳು ನೆಲೆಯೂರದೆ, ಸದಾ ಸಂಚಾರದಲ್ಲಿ ತೊಡಗಿರುತ್ತವೆ. ಈ ಹೊತ್ತಿಗೆ

ಗುಂಪುಗಳ ಉತ್ಪಾದನೆಯೂ ಸಮಾನವಾಗಿ ಹಂಚಲಾಗುತ್ತದೆ. ಈ ಹೊತ್ತಿಗೆ ಸಾಮಾನ್ಯವಾಗಿ ಹೆಣ್ಣಿಗೆ ಸ್ವಾತಂತ್ರ್ಯವಿರುತ್ತದೆ. ಆದ್ದರಿಂದ ಹೆಣ್ಣಿನ ಮದುವೆಯ ಕುರಿತಾಗಿ ಇಂತಹ ಕಡೆ ಯಾವುದೇ ಸಂಪ್ರದಾಯಗಳು ಮತ್ತು ವಿವಾಹದ ವಯಸ್ಸಿನ ಕುರಿತಂತೆ ನಿಬಂಧನೆಗಳಿರುವುದಿಲ್ಲ. ಯಾಕೆಂದರೆ, ಇಲ್ಲಿ ಹೆಣ್ಣು ಬಹುಪತಿತ್ವವನ್ನು ಹೊಂದಿರುತ್ತಾಳೆ.

ಮಾನವ ಜನಾಂಗದ ಇತಿಹಾಸದಲ್ಲಿ ಎರಡನೆಯ ಹಂತವು ಜನಾಂಗವು ನೆಲೆಯೂರಿದ ಸ್ಥಿತಿಯಿಂದ ಪ್ರಾರಂಭವಾಗುತ್ತದೆ. ಈ ಸ್ಥಿತಿಯಲ್ಲಿ ಖಾಸಗಿ ಆಸ್ತಿಯ ಪರಿಕಲ್ಪನೆಯು ಒಡಮೂಡುತ್ತದೆ. ಹಿಂದೆ ಸಂಸ್ಕೃತಿಯಲ್ಲಿ ಆಸ್ತಿಯ ಕಲ್ಪನೆಯು ಭೂಮಿಯ ಒಡೆತನದೊಂದಿಗೆ ಮಿಳಿತವಾಗಿದೆ. (Thapar; Romila 1978 p. 32)[4] ಕ್ರಿ. ಪೂ. 2ನೇ ಶತಮಾನದ ಹೊತ್ತಿಗೆ ಸಿಂಧೂ ಕೊಳ್ಳದ ನಾಗರಿಕತೆಯು ಅವನತಿಯನ್ನು ಹೊಂದಿ, ಗಂಗಾ ಸಂಸ್ಕೃತಿಯು ಉದಯವಾಗಲು ಪ್ರಾರಂಭವಾಯಿತು. ಈ ಕಾಲದ ಮುಖ್ಯ ಜನಾಂಗಗಳೆಂದರೆ ಗಾಂಧಾರ, ಕುರು, ಪಾಂಚಾಲ, ಮತ್ಸ್ಯ, ಚೇದಿ, ಕಾಶಿ, ಕೋಸಲ, ಮಗಧ ಜನಾಂಗಗಳು. ಆ ಮೇಲೆಯೇ ಚಂದ್ರವಂಶ ಮತ್ತು ಸೂರ್ಯವಂಶಗಳೆಂಬ ಹೆಸರುಗಳು ಬಂದುವು. (ಅದೇ ಪು. 41–42)[5] ಮೇಲೆ ಉಕ್ತವಾದ ಜನಾಂಗಗಳಲ್ಲಿ ವಿವಾಹದ ಕ್ರಮ ಭಿನ್ನವಾಗಿರಬಹುದು ಎಂದು ಊಹಿಸಲು ಸಾಧ್ಯವಿದೆ.

ಋಗ್ವೇದದಲ್ಲಿ ಮದುವೆಯ ಬಗೆಗಿನ ಸೂಚನೆಗಳು ಅನೇಕ ಕಡೆ ಲಭ್ಯವಾಗುತ್ತವೆ. ಸಪತ್ನೀಕರಾದ ಇಂದ್ರಾದಿ ದೇವತೆಗಳನ್ನು ಯಜ್ಞಕ್ಕಾಗಿ ಆಹ್ವಾನಿಸುವ ಶ್ಲೋಕವು ಋಗ್ವೇದದಲ್ಲಿ ಉಕ್ತವಾಗಿದೆ. (ಋ. ಸಂ. ಮಂಡಲ 1; ಸೂ. 14; ಶ್ಲೋ. 2) (ರಾವ್; ವೆಂಕಟ, ಎಚ್. ಪಿ. 1949 ಪು. ಸಂ. ಭಾಗ 2. ಪು. 607)[6] ದೇವಪತ್ನಿಯರನ್ನು ಆಹ್ವಾನಿಸುವ ಋಗ್ವೇದದ ಅನೇಕ ಮಂತ್ರಗಳು ಸತಿ–ಪತಿ ಸಂಬಂಧವನ್ನು ಸೂಚಿಸುತ್ತವೆ. (ಋ.ಸಂ. ಮಂಡಲ 1 : ಸೂ. 22–29; 22–10; ಮಂ. 1 ಸೂ. 34) ಆದರೆ, ಕೆಲವೆಡೆಯಲ್ಲಿ ಯುವತಿಯನ್ನು ಅವಳಿಗೆ ಸಂಬಂಧಿಸಿದವರು ವರನಿಗೆ ಮದುವೆ ಮಾಡಿಕೊಟ್ಟ ವಿಚಾರಗಳು ಬರುತ್ತವೆ.[7]

ಋಗ್ವೇದದಲ್ಲಿಯೇ ಮತ್ತೊಂದು ಕಡೆ

> 'ಆ ಸಿತ್ಯಾಕ್ಷೀವತೀ ಘೋಷಾ ಪಾಪರೋಗೇಣ ದುರ್ಭಗಾ ।
> ಉವಾಸ ಷಷ್ಟಿಂ ವರ್ಷಾಣಿ ಪಿತುರೇವ ಗೃಹೇ ಪುರಾ ॥42॥

ಪೂರ್ವದಲ್ಲಿ ಕಕ್ಷೀವಾನ್ ಎಂಬ ಋಷಿಗೆ ಘೋಷಾ ಎಂಬ ಪುತ್ರಿಯಿದ್ದಳು. ಅವಳು ಚರ್ಮರೋಗದಿಂದ ನರಳುತ್ತಿದ್ದಳು. ಅವಳು ತನಗೆ ಅರುವತ್ತು ವರುಷವಾಗಿದ್ದರೂ ಮದುವೆಯಿಲ್ಲದ್ದರಿಂದ ತನ್ನ ತಂದೆಯ ಮನೆಯಲ್ಲಿಯೇ ವಾಸವಾಗಿದ್ದಳು. (ಋ.ಸಂ. ಭಾಗ–18, ಮಂ. 10, ಸೂ. 42) (ರಾವ್;

ವೆಂಕಟ; ಎಚ್. ಪಿ. 1952. ಪ್ರ. 959)[8] ಆಕೆಗೆ ಅಶ್ವಿನೀ ದೇವತೆಗಳು ಯೌವನ ವನ್ನು ಕರುಣಿಸಿ, ಅವಳಿಗೆ ಅನುರೂಪನಾದ ವರನನ್ನು ಕೊಟ್ಟ ಉಲ್ಲೇಖವು ಋಗ್ವೇದದಲ್ಲಿ ಬರುತ್ತದೆ, (ಅದೇ. ಪು. 961)[9] ಅಶ್ವೀನಿ ದೇವತೆಗಳು ಯೌವನ ವನ್ನು ಕರುಣಿಸಿದ ಕಾಲ್ಪನಿಕ ಅಂಶವನ್ನು ಬಿಟ್ಟರೆ ಮೇಲೆ ಉಕ್ತವಾದ ಮಾತಿನ ವಾಸ್ತವದ ಅಂಶವು ಹೀಗೆ ಸ್ಪಷ್ಟವಾಗುತ್ತದೆ: ಹೆಣ್ಣು ಪ್ರಾಯಕ್ಕೆ ಬಂದ ಮೇಲೆ ಅವಳಿಗೆ ಮಂದುವೆಯಾಗುತ್ತಿತ್ತು.

ಹಾಗೆಯೇ ಋಗ್ವೇದದಲ್ಲಿ ಸ್ವಯಂವರದ ಉಲ್ಲೇಖವು ಬರುತ್ತದೆ. ತ್ವಷ್ಟೃವು ತನ್ನ ಮಗಳ ಸ್ವಯಂವರವನ್ನು ಏರ್ಪಡಿಸುತ್ತಾನೆ. (ಪು. ಸಂ. 10-17-12) ಇನ್ನೂ ಕೆಲವು ಕಡೆ ಸ್ವಯಂವರದ ಉಲ್ಲೇಖವು ಬರುತ್ತದೆ. (ಪು. ಸಂ. 10-27, 11-12) ಒಬ್ಬನನ್ನು ವರಿಸಬೇಕೆಂದು ಒಬ್ಬಳು ತನ್ನ ಪ್ರತಿಸ್ಪರ್ಧಿಯನ್ನೋಡಿಸಿ ಪುರುಷನನ್ನು ಬಂಧಿಸುವ ವಿಚಾರವು ಬರುತ್ತದೆ. (ಪು. ಸಂ. 10-145)[10]

ಈ ಎಲ್ಲಾ ಸೂಕ್ತಗಳಿಂದ ತಿಳಿದುಬರುವ ಮುಖ್ಯವಾದ ಅಂಶಗಳೆಂದರೆ:

1. ಋಗ್ವೇದದ ಹೊತ್ತಿಗಾಗಲೇ ಕುಟುಂಬದ ಪದ್ಧತಿಯು ರೂಢಿಗೆ ಬಂತು.
2. ಪುರುಷನನ್ನು ಆಯ್ಕೆ ಮಾಡುವ ಅಥವಾ ವರಿಸುವ ಸ್ವಾತಂತ್ರ್ಯವು ಹೆಣ್ಣಿಗೆ ಇತ್ತು.
3. ಪುರುಷನನ್ನು ವರಿಸುವ ಹಕ್ಕು ಹೆಣ್ಣಿಗೆ ಇದ್ದರೂ, ಮದುವೆಯಲ್ಲಿ ಸಾಂಪ್ರದಾಯಿಕ ಆಚರಣೆಗಳು ರೂಢಿಗೆ ಬಂದವು.
4. ವಯಸ್ಸಿಗೆ ಬಂದ ಮೇಲೆಯೇ ಹೆಣ್ಣಿಗೆ ಮದುವೆ ಮಾಡುವ ಪರಿಪಾಠವಿತ್ತು.
5. ಋಗ್ವೇದದಲ್ಲಿ ಉಲ್ಲೇಖಿತವಾದ ಕೆಲವು ಪದಗಳನ್ನು ಗಮನಿಸಿದರೆ ಗಂಡು-ಹೆಣ್ಣಿನ ಸಂಬಂಧದ ರೂಪವನ್ನು ಕಂಡುಕೊಳ್ಳಬಹುದಾಗಿದೆ. ಉದಾ: ಇಂದ್ರಾಣೀ; ವರುಣಾನಿ; ಅಗ್ನಾಯಿ ಮುಂತಾದವುಗಳು (ಮಂಡಲ. 1; ಅಧ್ಯಾಯ. 5;)[11]
6. ಬಜೋಫೆನ್, ಮೋರ್ಗನ್ ಮೊದಲಾದವರು ಹೇಳುವ ಸರಳ ಸಾಮಾಜಿಕ ಸ್ಥಿತಿಯನ್ನೂ, ಹಾಗೆಯೇ ಮೊದಲ ಹಂತದ ಸಾಮಾಜಿಕ ಸ್ಥಿತಿಯನ್ನೂ ಇದು ಸೂಚಿಸುತ್ತದೆ.
(Rodney; Needham, 1974, p. 15)[12]
7. ಋಗ್ವೇದ ಕಾಲದಲ್ಲಿ ಪಿತೃಪ್ರಧಾನ ಸಾಮಾಜಿಕ ಸ್ಥಿತಿಯು ರೂಪುಗೊಂಡ ನೆಲೆಯನ್ನು ಕಾಣಬಹುದಾಗಿದೆ. ಕನ್ಯೆಯ ವರಣವು ಪಿತೃವರ್ಗದಿಂದ

ಪ್ರೇರಿತವಾದ ಸೂಚನೆಯೂ ಕಂಡುಬರುತ್ತದೆ. ತಂದೆಯ ಮೂಲಕ ಮಗಳನ್ನು ಗುರುತಿಸುವ (ಋ. ಸಂ. ಮಂ. 10, ಸೂ. 42-42)[13] ಶ್ಲೋಕದ ಮೂಲಕ ಇದನ್ನು ಅರ್ಥಮಾಡಿಕೊಳ್ಳಬಹುದು. ಮಾತೃ ಪ್ರಧಾನ ಸಮಾಜದ ಸ್ಥಿತಿಯಿಂದ ಪಿತೃಮೂಲ ಸಮಾಜದ ಕಡೆಗೆ ಈ ಸಮಾಜವು ವಾಲಿದ್ದರ ಸೂಚನೆಯಿದು.[14]

ಅಥರ್ವ ವೇದದಲ್ಲಿ ಗಂಡು-ಹೆಣ್ಣಿನ ಪ್ರಣಯ, ಪ್ರೇಮದ ಕುರಿತಂತೆ ಅನೇಕ ಉಲ್ಲೇಖಗಳು ಬರುತ್ತವೆಯೆಂದು ಅಳ್ತೇಕರರು ಹೇಳುತ್ತಾರೆ. (Altekar, A. S. 1962, p. 42)[15]

ಸೂತ್ರಗಳ ಕಾಲದಲ್ಲಿ ಇದು ಬದಲಾವಣೆಯಾಗಿರುವುದು ಕಂಡುಬರುತ್ತದೆ. ಯಮಸ್ಮೃತಿಯಲ್ಲಿ ಉಲ್ಲೇಖಿತವಾದದ್ದೆಂದು ಹೇಳಲಾಗಿರುವ ಈ ಕೆಳಗಿನ ವಾಕ್ಯವನ್ನು ಸ್ಮೃತಿ ಚಂದ್ರಿಕೆಯಲ್ಲಿ ಕೊಟ್ಟಿದ್ದಾರೆ:

ಅಷ್ಟವರ್ಷಾ ಭವೇದ್ಗೌರೀ ನವ ವರ್ಷಾ ಚ ರೋಹಿಣೀ ।
ದಶವರ್ಷಾ ಭವೇತ್ಕನ್ಯಾ ಅತ ಊರ್ಧ್ವಂ ರಜಸ್ವಲಾ ॥
ದ್ವಾದಶಕೇ ವರ್ಷೇ ಕನ್ಯಾಂ ಯೋ ನ ಪ್ರಯಚ್ಛತಿ ।
ಮಾಸಿ ಮಾಸಿ ರಜಸ್ತಸ್ಯಾಃ ಪಿತಾ ಪಿಬತಿ ಶೋಣಿತಮ್ ॥

(ಸ್ಮೃತಿ ಚಂದ್ರಿಕಾ—ಆಹ್ನಿಕಾ)[16]

ಜೀವಾನಂದನ ಸಂಗ್ರಹದಲ್ಲಿ ಎಂಟು ವರ್ಷದ ಹುಡುಗಿಯರ ವಿವಾಹವನ್ನು ಅನುಮೋದಿಸುತ್ತಾನೆ.[17]

ಧರ್ಮಶಾಸ್ತ್ರಕಾರರಾದ ನಾರದ ಮತ್ತು ಬೃಹಸ್ಪತಿಗಳು, ಕನ್ಯೆಯರು ಪ್ರೌಢದಶೆಯನ್ನು ಸಮೀಪಿಸಿರುವಂತೆಯೇ ಅವರಿಗೆ ಮದುವೆ ಮಾಡಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಕನ್ಯೆಯ ವಿವಾಹ ವಯಸ್ಸು ದಕ್ಷ, ಅಂಗೀರಸ, ಯಮ, ಪರಾಶರರಿಗೆ ಅನುಸಾರವಾಗಿ 8 ರಿಂದ 12 ರ ಒಳಗೆ ಉಯ್ಯಾಲೆ ಮಾಡುತ್ತದೆ. ಈ ನಿಯಮವನ್ನು ಅನುಸರಿಸದೆ ಹೋದ ತಂದೆಯರು ಮಹಾ ಪಾಪ ಮಾಡಿದವರೆಂದು ಅವರು ಭಾವಿಸುತ್ತಾರೆ. ಬಾಣಕವಿಯು ಸ್ಥಾನೇಶ್ವರದ ಅರಸ ಪ್ರಭಾಕರ ವರ್ಧನನು ಪ್ರಾಯಕ್ಕೆ ಬರುತ್ತಿದ್ದ ತನ್ನ ಮಗಳು ರಾಜ್ಯಶ್ರೀಯ ವಿವಾಹಕ್ಕಾಗಿ ಆತಂಕಪಡುತ್ತಿದ್ದನೆಂದು ವರ್ಣಿಸಿದ್ದಾನೆ. ಆದರೆ ಇನ್ನೂ ಪ್ರಾಯ ಪ್ರಬುದ್ಧ ರಾಜಯುವತಿಯರಿಗೆ ಮದುವೆ ಮಾಡಿದ ಉದಾಹರಣೆಗಳು ಸಿಕ್ಕದೇ ಇಲ್ಲ. ಕ್ರಿ.ಶ. 997 ರಲ್ಲಿ ಆಳುತ್ತಿದ್ದ ದಕ್ಷಿಣದ ಇಮ್ಮಡಿ ತೈಲಪನ ಸೋದರಿ ಮೃಣಾಲವತಿಯು ಪ್ರಾಯಸ್ಥೆಯಾದಾಗ್ಯೂ ಅವಿವಾಹಿತೆಯಾಗಿದ್ದಳು. ರಾಜಮನೆತನಗಳಲ್ಲಿ ಅರಸುಕುವರಿಗೆ ಎಷ್ಟೋ ವೇಳೆ ಸ್ವಯಂವರ ಮಂಟಪದಲ್ಲಿ ಸ್ವತಃ ತಮ್ಮ ಗಂಡಂದಿರನ್ನು ಆಯ್ದುಕೊಳ್ಳುವ ಅವಕಾಶ ಸಿಗುತ್ತಿತ್ತು. ಮೇವಾಡದ ನಡುಲದ ದೊರೆ ಚಾಹಮಾನ

ಮಹೇಂದ್ರನು ತನ್ನ ಕುವರಿಗೆ ಸ್ವಯಂವರ ಸಭೆಯನ್ನು ಏರ್ಪಡಿಸಿದ್ದನು. ಇಂಥ ಒಂದು ಸ್ವಯಂವರ ಸಭೆಯಲ್ಲಿ ಶಿಲಾಹಾರ ರಾಜಕುವರಿ ಚಂದ್ರಲೇಖೆಯು ದಕ್ಷಿಣದ ಚಾಲುಕ್ಯರ 6ನೇ ವಿಕ್ರಮಾದಿತ್ಯನನ್ನು ಆಪ್ಪಿ ವರಿಸಿದಳು. ಸಾಮಾನ್ಯವಾಗಿ ವಧುವಿನ ತಂದೆಯಾಗಲೀ ತಂದೆಯಿಂದ ಅಧಿಕಾರ ಹೊಂದಿದ ಅಣ್ಣನಾಗಲೀ ವರನನ್ನು ಆರಿಸುದ್ದ ಮದುವೆಯ ನಿಷ್ಕರ್ಷೆಯನ್ನು ಮಾಡುತ್ತಿದ್ದರು. ಅಲ್ಲದಿದ್ದರೆ ಪಿತಾಮಹನಾಗಲೀ ಸೋದರ ಮಾವನಾಗಲೀ ಸಗೋತ್ರದವರು ಅಥವಾ ಜ್ಞಾತಿಗಳಾಗಲೀ ಈ ಅಧಿಕಾರ ವನ್ನು ಹೊಂದಿರುತ್ತಾರೆ. ಇವರಾರೂ ಇಲ್ಲದಾಗ ತಾಯಿ ತನ್ನ ಮಗಳನ್ನು ಮದುವೆ ಮಾಡಿಕೊಡುತ್ತಿದ್ದಳು. ನಾರದನಿಗೆ ಅನುಸಾರವಾಗಿ ಹೇಳುವುದಾದರೆ, ಇಂತಹ ಯಾವ ಸಂಬಂಧಿಕರೂ ಇಲ್ಲದಿದ್ದರೆ ರಾಜನ ಅಪ್ಪಣೆಯನ್ನು ಪಡೆದು ವಧುವು ತನ್ನ ವರನನ್ನು ನಿರ್ಧರಿಸಿಕೊಳ್ಳಬಹುದಾಗಿದ್ದಿತು. (ಪುಟ್ಟಪ್ಪ. ಕೆ ವಿ. (ಸಂ:) 1971 ಸಂ: 2 ಪು. 452-453)[18]

ವಸಿಷ್ಠ ಧರ್ಮಸೂತ್ರದಲ್ಲಿ ವಯಸ್ಕಳಾದ ಅವರೆ ವಿವಾಹಿತಳಾದ ಹುಡುಗಿಯ ಬಗ್ಗೆ ನಿಯಮಗಳನ್ನು ಹೇಳಲಾಗಿದೆ.(xviii)

(ಕಾಣೆ, ಪಿ.ವಿ. (ಮೂ) 1980 ಸಂಪುಟ. 1)[19] ಅಥರ್ವವೇದದಲ್ಲಿಯೂ (vi;61;) ಹೆಣ್ಣುಮಗಳು ಪ್ರಾಯಕ್ಕೆ ಬಂದ ಮೇಲೆ ವಿವಾಹಕ್ಕೆ ಅರ್ಹಳು ಎಂಬ ಉಲ್ಲೇಖವಿದೆ. [Upadhyaya, Bhagwat saran 1974 p.58][20] ಪರಾಶರ ಸ್ಮೃತಿಯಲ್ಲಿ ಹೆಣ್ಣಿನ ವಿವಾಹದ ವಯಸ್ಸು ಎಂಟು ಇದ್ದಲ್ಲಿ; ಬ್ರಹ್ಮಪುರಾಣದಲ್ಲಿ ನಾಲ್ಕು ಎಂದಿದೆ. ಭವಿಷ್ಯಪುರಾಣದಲ್ಲಿ ಹೆಣ್ಣಿನ ವಿವಾಹದ ವಯಸ್ಸು ಐದಂ ವರ್ಷವಾಗಿದೆ. (Arora, Rajkumar 1972 p. 120)[21]

ಮಹಾಭಾರತದ ಕಾಲಕ್ಕೆ ಗಂಡಿನ ವಯಸ್ಸು ಮೂವತ್ತು ಇದ್ದು ಹೆಣ್ಣಿನ ವಯಸ್ಸು ಹತ್ತು ಇರಬೇಕು ಎಂಬ ನಿಯಮವು ಬಂತು. ಅಥವಾ ಗಂಡಿನ ವಯಸ್ಸು ಇಪ್ಪತ್ತೊಂದು ಇದ್ದು; ಹೆಣ್ಣಿನ ವಯಸ್ಸು ಏಳು ಇರಬೇಕಿತ್ತು. ಮಹಾಕಾವ್ಯಗಳಲ್ಲಿ ಬಾಲ್ಯವಿವಾಹ ಪದ್ಧತಿಯು ಇರಲಿಲ್ಲವೆಂದು ಜಾಕೋಬ್ ಮೇಯರ್ ಅವರು ಅಭಿಪ್ರಾಯ ಪಡುತ್ತಾರೆ. (Meyer, Johamn Jakob-1971 p.217)[22] ದ್ರೌಪದಿಗೆ ಮದುವೆಯಾದಾಗ ಆದ ವಯಸ್ಸು ಹದಿನಾರು. ಅಲ್ತೇಕರರ ಅಭಿಪ್ರಾಯದಂತೆ ಕ್ರಿ.ಶ. ಎರಡನೇ ಶತಮಾನದಿಂದ ಹೆಣ್ಣು ಋತುಮತಿಯಾಗುವ ಮೊದಲೇ ಹೆಣ್ಣಿಗೆ ಮದುವೆ ಮಾಡುವ ಪದ್ಧತಿಯು ಬಂದಿತು. ಯಾಜ್ಞವಲ್ಕ್ಯನು ಹೆಣ್ಣು ಋತುಮತಿಯಾಗುವ ಮೊದಲೇ ಮದುವೆ ಮಾಡಿಕೊಡಬೇಕೆನ್ನುತ್ತಾನೆ. ಇಲ್ಲದಿದ್ದರೆ, ಪ್ರತೀ ತಿಂಗಳಲ್ಲಿ ರಜೋದರ್ಶನದ ಸಮಯದಲ್ಲಿಯೂ ಅವಳ ತಂದೆಯು ಪಾಪಿಷ್ಠನಾಗುತ್ತಾನೆ. ಯಾಜ್ಞವಲ್ಕ್ಯನ ತರುವಾಯ (ಅಂದರೆ 400 ವರ್ಷಗಳ) ಬಂದ ಯಮನು ತನ್ನ ಸ್ಮೃತಿಯಲ್ಲಿ ಹೆಣ್ಣು ಋತುಮತಿಯಾಗುವ ಮೊದಲೇ ಮದುವೆ

ಮಾಡಬೇಕೆನ್ನುತ್ತಾನೆ. ಒಟ್ಟಾಗಿ ಸ್ಮೃತಿಕಾರರು (ಕ್ರಿ.ಶ. 500–1000) ಹೆಣ್ಣು ಋತುಮತಿಯಾಗುವ ಮೊದಲೇ ಮದುವೆ ಮಾಡಬೇಕೆಂಬ ನಿಲುವಿಗೆ ಬಂದಿದ್ದಾರೆ. (Altekar; A. S. 1962 p. 56-7)[23] ಆದರೆ, ಮಹಾಕಾವ್ಯಗಳಲ್ಲಿ ಮತ್ತು ಸಂಸ್ಕೃತ ನಾಟಕಗಳಲ್ಲಿ ಹೆಣ್ಣಿನ ವಿವಾಹದ ವಯಸ್ಸು ಯೌವನಕ್ಕೆ ಏರಿದೆ. ಕ್ರಿ.ಶ. 300–1200ರ ವರೆಗಿನ ಈ ಕಾವ್ಯಗಳಲ್ಲಿ ಹೆಣ್ಣಿನ ವಿವಾಹದ ವಯಸ್ಸು ಹದಿನಾರರ ವರೆಗೆ ಇದೆ. ರಾಮಾಯಣದಲ್ಲಿ ಸೀತೆಯ ವಿವಾಹವು ಅವಳು ಯುವತಿ ಯಾದಾಗ ಆಯಿತು. ಕೈಕೇಯಿ ಮತ್ತು ಮಂಡೋದರಿಯರ ವಿವಾಹವು ಕೂಡಾ ಅವರು ಪ್ರಾಯಕ್ಕೆ ಬಂದಾಗ ಆಯಿತೆಂಬುದು ಗಮನಾರ್ಹವಾಗಿದೆ. (ರಾಮಾಯಣ, II, 118, 34, VII. 9.7)[24] ವಯಸ್ಸಿಗೆ ಬಂದ ಕನ್ಯೆಯರನ್ನು ಮದುವೆ ಮಾಡು ತ್ತಿದ್ದರೆಂಬ ಸೂಚನೆಯನ್ನು ಮಹಾಭಾರತದ ಅನೇಕ ಪ್ರಸಂಗಗಳು ಹೇಳುತ್ತವೆ. ಅಂಬೆ, ಅಂಬಾಲಿಕೆ, ಅಂಬಿಕೆಯರ ಸ್ವಯಂವರ, ಕುಂತಿಯ ಸ್ವಯಂವರ, ದ್ರೌಪದಿಯ ಸ್ವಯಂವರ ಇತ್ಯಾದಿ. ಇದಕ್ಕೆ ಆಧಾರವಾಗಿ ಶಾಂತಿಪರ್ವದಲ್ಲಿ ಕೆಲವು ಮಾತುಗಳು ಹೀಗೆ ಬರುತ್ತವೆ :

> 'ಪ್ರದಾನಾಕಾಂಕ್ಷಿಣೀನಾಂ ಚ ಕನ್ಯಾನಾಂ ವಯಸಿ ಸ್ಥಿತೇ ।
> ಶ್ರುತ್ವಾ ಕಥಾಸ್ತಥಾ ಯುಕ್ತಾ: ಸಾಽಽಶಾ ಕೃಶತರೀ ಮಯಾ ॥ 18 ॥

ವಯಸ್ಸಿಗೆ ಬಂದ ಪ್ರದಾನಾಕಾಂಕ್ಷಿಣಿಯರಾದ (ತಮ್ಮನ್ನು ಒಳ್ಳೆಯ ವರನಿಗೆ ಕೊಟ್ಟು ಮದುವೆ ಮಾಡಲಿ–ಎಂಬ ಇಚ್ಛೆಯಿರುವ) ಕನ್ಯೆಯರಿಗೆ ಮನೆಯಲ್ಲಿ ವಿವಾಹ ಸಂಬಂಧವಾದ ಮಾತುಕತೆಗಳನ್ನು ಕೇಳಿದಾಗ ಯಾವ ವಿಧವಾದ ಆಶೆ ಯುಂಟಾಗುವುದೋ ಆ ಆಶೆಯು ನನಗಿಂತಲೂ ಕೃಶತರವಾಗಿರುತ್ತದೆ. (ರಾಮೇಶ್ವ ರಾವಧಾನಿ. 1981 ಸಂ : 77. ಪು.30)[25]

ಮತ್ತೊಂದು ಕಡೆ ಹೀಗೆ ಬರುತ್ತದೆ.

ವಿವಾಹ ಯೋಗ್ಯಳಾದ ಹೆಣ್ಣನ್ನು ಮದುವೆ ಮಾಡಿ ಕೊಡದಿರುವ ತಂದೆಯು ಬ್ರಹ್ಮಹತ್ಯಾಪಾಪಕ್ಕೆ ಗುರಿಯಾಗುತ್ತಾನೆ.[26] ಮಹಾಭಾರತದಲ್ಲಿ ಗಂಡು ಹೆಣ್ಣಿನ ಮದುವೆಯ ವಯಸ್ಸಿನ ಅಂತರವನ್ನು ಕಾಣಬಹುದಾಗಿದೆ. ಮೂವತ್ತು ವರ್ಷದ ಗಂಡಿಗೆ ಹತ್ತು ವರ್ಷ ಏಕವಸ್ತ್ರಧಾರಿಣಿಯಾದ ಹೆಣ್ಣು ಮತ್ತು ಇಪ್ಪತ್ತೊಂದು ವರ್ಷದ ಯುವಕನಿಗೆ ಏಳು ವರ್ಷದ ಕನ್ಯೆ ಎಂದು ಉಕ್ತವಾಗಿದೆ.[27] ಹಾಗೆಯೇ ಋತುಮತಿಯಾಗುವ ಪೂರ್ವದಲ್ಲಿ ಹೆಣ್ಣಿಗೆ ವಿವಾಹವನ್ನು ಮಾಡಬೇಕೆಂದು ಮಹಾ ಭಾರತದಲ್ಲಿ ಉಲ್ಲೇಖಿತವಾಗಿದೆ[28]

ಇದಕ್ಕೆ ಪೂರಕವಾಗಿ ಮೆಗಸ್ತನೀಸನು (ವಿದೇಶಪ್ರವಾಸಿ) ಹೇಳುವ ಮಾತು ಗಳನ್ನು ಗಮನಿಸಬಹುದು : "ಸ್ತ್ರೀಯರು ಬಳುವಳಿಯಿಲ್ಲದೆ ಮದುವೆಯಾಗುತ್ತಾರೆ. ಆದರೆ, ಪ್ರಾಪ್ತವಯಸ್ಕರಾದ ಹೆಣ್ಣುಮಕ್ಕಳನ್ನು ಅವರ ತಂದೆ ತಾಯಿಗಳು

ಬಹಿರಂಗ ಸ್ಥಳಕ್ಕೆ ಕರೆದು ತಂದು ಪಂದ್ಯಗಳನ್ನೇರ್ಪಡಿಸುತ್ತಾರೆ. ಕುಸ್ತಿ, ಓಟ ಮುಂತಾದ ಪಂದ್ಯಗಳಲ್ಲಿ ಗೆದ್ದವರು ಆಕೆಯ ಕೈಹಿಡಿಯಬಹುದು. (ನಾಗೇಗೌಡ ಎಚ್. ಎಲ್ (ಸಂ). 1964. ಸಂ : ಪು.31)[29] ಅಲ್ಬೇರೂನಿಯು ಕೂಡಾ ಇದೇ ಅಭಿಪ್ರಾಯವನ್ನು ಹೇಳುತ್ತಾನೆ.[30] ವಾತ್ಸಾಯನನು ಮಾತ್ರ ಗಂಡು ಹೆಣ್ಣಿನ ವಿವಾಹದ ವಯಸ್ಸಿನ ಅಂತರವು ಮೂರು ವರ್ಷವೆಂದು ಹೇಳುತ್ತಾನೆ. (ಭಸ್ಮೆ, ವೆಂಕಟ. ಜಿ. 1983. ಪು.130)[31]

ಈ ಮೊದಲಿನ ಅಂಶಗಳಿಂದ ತಿಳಿದು ಬರುವ ವಿಚಾರವೆಂದರೆ, ಹದಿನಾರು ವರುಷಗಳ ತರುವಾಯ ಮದುವೆಯೆನ್ನುವ ಕ್ರಮವು ಅನಂತರದ ಕಾಲದಲ್ಲಿ ಬದಲಾವಣೆ ಹೊಂದಿ, ಎಳೆಯ ಪ್ರಾಯದಲ್ಲಿ ಮದುವೆ ನಡೆಸುವ ಕ್ರಮ ಜಾರಿಗೆ ಬಂತು. ಸ್ಮೃತಿಗಳ ಕಾಲದಲ್ಲಿ ಕನ್ಯಾಶುಲ್ಕದ ಕ್ರಮವೂ ಜಾರಿಯಲ್ಲಿರುವುದನ್ನು ಗಮನಿಸಿದರೆ, ಆರ್ಥಿಕ ಭದ್ರತೆಗೂ ಮದುವೆಗೂ ಅಂತರ್ಗತ ಸಂಬಂಧ ಇರುವುದನ್ನು ಕಾಣಬಹುದಾಗಿದೆ. ಸಮಾಜಶಾಸ್ತ್ರಜ್ಞರ ಪ್ರಕಾರ 'ವರದಕ್ಷಿಣೆಯು ಹೆಣ್ಣಿನ ವಿವಾಹದ ವಯಸ್ಸನ್ನು ನಿಧಾನಗೊಳಿಸುತ್ತದೆ. ಮತ್ತು ಕನ್ಯಾಶುಲ್ಕದ ಅವಸ್ಥೆಯು ಹೆಣ್ಣಿಗೆ ಬೇಗನೆ ವಿವಾಹವನ್ನು ಮಾಡುವಂತೆ ಪ್ರೇರಿಸುತ್ತದೆ. ಇದಕ್ಕೆ ಕಾರಣವೆಂದರೆ, ಕನ್ಯಾಶುಲ್ಕವು ಇರುವೆಡೆಯಲ್ಲಿ ಆಕೆಯ ತಂದೆ-ತಾಯಿಗಳಿಗೆ ಆರ್ಥಿಕ ಭದ್ರತೆಯ ಆಸೆಯೂ ಕೂಡಾ ಇರುತ್ತದೆ. (Barnard ; Alan and Good, Antony 1984 p-117)[32] ಇದೊಂದು ಮುಖ್ಯ ಕಾರಣವಾಗಿದ್ದರೆ, ಮತ್ತೊಂದು ಬಹು ಮುಖ್ಯವಾದ ಸಂಗತಿಯೆಂದರೆ, ಬ್ರಾಹ್ಮಣಧರ್ಮದ ಪ್ರಬಲ ಪ್ರಾದುರ್ಭಾವ; ಬ್ರಾಹ್ಮಣಧರ್ಮದ ಅನುಷ್ಠಾನದಲ್ಲಿ ಸ್ಮೃತಿಕಾರರ ಪಾತ್ರವು ಮಹತ್ವಪೂರ್ಣವಾದ ಪ್ರಭಾವವನ್ನು ಬೀರಿರುವುದು. ಆಚರಣೆಯನ್ನೇ ಪ್ರಮುಖವೆಂದು ನಂಬಿರುವ ಹೆಚ್ಚಿನ ಸ್ಮೃತಿಕಾರರು ಹೆಣ್ಣಿನ ಪಾತಿವ್ರತ್ಯ, ವಿವಾಹಧರ್ಮದ ಮಹತ್ವ ಕುರಿತು ಸಾಕಷ್ಟು ಪ್ರಬಲವಾಗಿ ಕೆಲಸ ಮಾಡಿರುವುದು ಕಂಡುಬರುತ್ತದೆ. ಮೂಲತಃ ಇದು ಪುರುಷನ ಹಿತಾಸಕ್ತಿಯನ್ನು ಮತ್ತು ಖಾಸಗಿ ಆಸ್ತಿಯ ರಕ್ಷಣೆಯನ್ನು ಮಾಡುವ ರೀತಿಯಲ್ಲಿರುವುದನ್ನು ಕಾಣಬಹುದಾಗಿದೆ. ಈ ಕಾರಣದಿಂದ ಹೆಣ್ಣಿನ ವಿವಾಹದ ವಯಸ್ಸು ಹೆಣ್ಣಿನ ವಿವಾಹದ ಹಕ್ಕನ್ನು ಕಾದುಕೊಳ್ಳುವಂತೆ ಕಡಿತಗೊಳಿಸಲಾಯಿತು.

1:2 ವಿವಾಹ ಬಗೆಗಳು : ಪ್ರಾಚೀನ ಭಾರತದಲ್ಲಿ :

ಮದುವೆ ಎನ್ನುವುದು ಸ್ವಾಯತ್ತ ಸಂಸ್ಥೆಯಲ್ಲ. ಆದರೆ, ಈ ಸಂಸ್ಥೆಯು ಸಾಮಾಜಿಕ ಆಕೃತಿಯಿಂದ, ಅಂದಾ ಸಮಾಜದ ಪರಿಕಲ್ಪನೆಯಿಂದ ಪ್ರೇರಿತವಾದುದಾಗಿದೆ. (Barnard; Alan and Good; Antony 1984 p. 91)[33]

ಈಗ ಉಕ್ತವಾಗಿರುವ ವ್ಯಾಖ್ಯೆಯು ಮೂಲಕ ವಿವಾಹದ ಪದ್ಧತಿಯ ಕುರಿತಂತೆ ಅಧ್ಯಯನವನ್ನು ಮಾಡಬಹುದಾಗಿದೆ :

ಭಾರತದ ಆದಿವಾಸಿ ಸಮಾಜದಲ್ಲಿ ಇರುವ ಎಂಟು ವಿಧವಾದ ವಿವಾಹ ಪದ್ಧತಿಯನ್ನು ಸಾಮಾಜಿಕ ಮಾನವಶಾಸ್ತ್ರಜ್ಞರು ಉಲ್ಲೇಖಿಸುತ್ತಾರೆ :

1. **ಪರೀಕ್ಷಾರ್ಥ ವಿವಾಹ :** (Marriage by purchase)

ಈ ಪದ್ಧತಿಯು ಪ್ರಕಾರ ಯುವಕನು ತನ್ನ ಭಾವೀ ಪತ್ನಿಯ ಮನೆಯಲ್ಲಿ ಕೆಲವು ವಾರಗಳು ಇಲ್ಲವೇ ತಿಂಗಳುಗಳು ಇರುವಂತೆ ಹಿರಿಯರು ಅನುಮತಿ ಕೊಡುತ್ತಾರೆ. ಯುವಕ ಯುವತಿಯರು ಒಟ್ಟಿಗೆ ಕೆಲವು ಕಾಲ ವಾಸಮಾಡಿದ ಅನಂತರ ಅವರಿಬ್ಬರೂ ವಿವಾಹವಾಗಬಹುದೋ ಎಂಬುದನ್ನು ಅವರೇ ತೀರ್ಮಾನ ಮಾಡಿಕೊಳ್ಳುತ್ತಾರೆ.

2. ಅಪಹರಣ ವಿವಾಹ : ಈ ಪದ್ಧತಿಯ ಪ್ರಕಾರ ಆದಿವಾಸಿಗಳಲ್ಲಿ ಕನ್ಯೆಯನ್ನು ಬೇರೆ ಗುಂಪುಗಳಿಂದ ಇಲ್ಲವೆ ತಮ್ಮ ಗುಂಪಿನಿಂದಲೇ ಅಪಹರಿಸಿಕೊಂಡು ಹೋಗಿ ವಿವಾಹವಾಗುತ್ತಾರೆ.
3. ಅರ್ಹತೆಯ ಪರೀಕ್ಷಾನಂತರ ವಿವಾಹ : ವಿವಾಹವಾಗುವ ಯುವಕನು ಕನ್ಯೆಯನ್ನು ಹಡೆದವರ ಮುಂದೆ ತನ್ನ ಧೈರ್ಯ, ಶೌರ್ಯ, ಶಕ್ತಿ, ಸಹನೆಗಳನ್ನು ಪರೀಕ್ಷಿಸಬೇಕಾಗುತ್ತದೆ.
4. ಕೊಂಡ ವಿವಾಹ : ವರನ ಕಡೆಯವರು ವಧುವಿನ ತಂದೆಗೆ ಹಣದ ರೂಪದಲ್ಲಿ ಇಲ್ಲವೇ ವಸ್ತುಗಳ ರೂಪದಲ್ಲಿ ಕನ್ಯಾಶುಲ್ಕ ತರುತ್ತಾರೆ.
5. ಸೇವಾ ವಿವಾಹ : ಯುವಕನು ತನ್ನ ಭಾವೀ ಅತ್ತೆ ಮಾವಂದಿರಲ್ಲಿ ಸೇವೆಯನ್ನು ಮಾಡಿ ಕನ್ಯೆಯನ್ನು ಒಲಿಸಿಕೊಳ್ಳುವುದು.
6. ವಿನಿಮಯ ಪದ್ಧತಿ : ಒಂದು ಕುಟುಂಬದಿಂದ ಮತ್ತೊಂದು ಕುಟುಂಬಕ್ಕೆ ಹೆಣ್ಣನ್ನು ಕೊಟ್ಟು, ಅದೇ ಕುಟುಂಬದಿಂದ ಹೆಣ್ಣನ್ನು ತರುವುದು ಈ ಪದ್ಧತಿಯ ಕ್ರಮವಾಗಿದೆ.
7. ಪರಸ್ಪರ ಒಪ್ಪಿಗೆ ವಿವಾಹ : ಈ ಪದ್ಧತಿಯಲ್ಲಿ ಯುವಕ-ಯುವತಿಯರು ಪರಸ್ಪರ ಒಪ್ಪಿಕೊಂಡು ಮದುವೆಯಾಗುತ್ತಾರೆ.
8. ಅಕ್ರಮ ಪ್ರವೇಶದ ವಿವಾಹ : ವಿವಾಹವಾಗಬೇಕೆಂಬ ಕನ್ಯೆಯು ಯುವಕನ ಮನೆಯನ್ನು ಪ್ರವೇಶಿಸುವುದನ್ನು ಅಕ್ರಮ ಪ್ರವೇಶದ ವಿವಾಹವೆಂದು ಕರೆಯುತ್ತಾರೆ. (ನಂಜಮ್ಮಣ್ಣಿ ಎಂ. 1974, ಪು. 69-70)[34]

ಋಗ್ವೇದದಲ್ಲಿ 'ಗೃಭ್ಣಾಮಿ ತೇ ಸೌಭಗತ್ವಾಯ' (85. 36.) ಎಂಬ ಮಾತು ಬರುತ್ತದೆ. ಇದು ಬ್ರಾಹ್ಮ ಪದ್ಧತಿಯ ವಿವಾಹಪ್ರಕಾರವಾಗಿರಬೇಕೆಂದು ಪಿ. ವಿ. ಕಾಣೆಯವರು ಅಭಿಪ್ರಾಯಪಡುತ್ತಾರೆ. (ಕಾಣೆ, ಪಿ. ವಿ. 1980, ಪು. 5)[35] ಹಾಗೆಯೇ ಋಗ್ವೇದದಲ್ಲಿ ಬರುವ ಮತ್ತೊಂದು ಮಾತು-

"ಭದ್ರಾವಧೂರ್ಭವತಿ ಯತ್ ಸುಪೇಶಾ : ಸ್ವಯಂ ಸಾಮಿತ್ರಂ ವನುತೇ ಜನೇ ಚಿತ್" (ಋಗ್ವೇದ 27. 12.)

ಇದು ಗಾಂಧರ್ವ ವಿವಾಹದ ಕುರಿತಾದ ಸೂಚನೆಯಾಗಿದೆ.

(ಕಾಣೆ. ಪಿ. ವಿ. 1980. ಪು. 4)[36]

ವಸಿಷ್ಠ ಧರ್ಮಸೂತ್ರ (36.37)ದಲ್ಲಿ 'ಕ್ರಯಸ್ಯ ಧರ್ಮ ಮಾತ್ರತ್ವಂ' ಎಂಬ ಮಾತು ಬರುತ್ತದೆ. ಇದು ಹೆಣ್ಣನ್ನು ಕೊಂಡುಕೊಳ್ಳುವ ಕ್ರಮವಿತ್ತು ಎಂಬುದನ್ನು ಸೂಚಿಸುತ್ತದೆ.

(ಕಾಣೆ, ಪಿ. ವಿ. 1980, ಪು. 4)[37]

ವಸಿಷ್ಠನು ಆರು ಬಗೆಯ ವಿವಾಹವನ್ನು ಸೂಚಿಸುತ್ತಾನೆ :

1. ಬ್ರಾಹ್ಮ
2. ದೈವ
3. ಆರ್ಷ
4. ಗಾಂಧರ್ವ
5. ಕ್ಷಾತ್ರ
6. ಮಾನುಷ

ಆಪಸ್ತಂಭದಲ್ಲಿ ಆರು ಬಗೆಯ ವಿವಾಹವನ್ನು ಸೂಚಿಸುತ್ತಾನೆ. ವಿಷ್ಣುವಿನ ಧರ್ಮಸೂತ್ರವು ಎಂಟು ಪ್ರಕಾರದ ವಿವಾಹವನ್ನು ಕುರಿತು (24.18) ಹೇಳಿದರೆ, ಶಾತಕ ಗೃಹ್ಯಸೂತ್ರವು (3. ಮತ್ತು 4.) ಕೇವಲ ಎರಡು (ಬ್ರಾಹ್ಮ, ಆಸುರ) ಗೃಹ್ಯಸೂತ್ರದ ಹೆಸರು ಹೇಳಿ ಸುಮ್ಮನುಳಿಯುತ್ತದೆ. ಸ್ಮೃತಿಕಾರರು ಕೂಡಾ ಎಂಟು ಬಗೆಯ ವಿವಾಹವನ್ನು ಹೇಳುತ್ತಾರೆ.[38]

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕೂಡಾ ಬ್ರಾಹ್ಮ, ಪ್ರಾಜಾಪತ್ಯ, ಆರ್ಷ, ದೈವ, ಗಾಂಧರ್ವ, ಆಸುರ, ರಾಕ್ಷಸ, ಪೈಶಾಚ–ಇವುಗಳ ಕುರಿತು ಉಲ್ಲೇಖವಿದೆ. (ಭಟ್ಟ. ಕೃಷ್ಣ. ಕೆ. 1972, ಪು. 244–245)[39]

ಮಹಾಭಾರತದಲ್ಲಿ ಭೀಷ್ಮನು ಎಂಟು ಪ್ರಕಾರದ ವಿವಾಹವನ್ನು ಕುರಿತು ಹೇಳುತ್ತಾನೆ.[40]

ಒಟ್ಟಾಗಿ ಈ ವಿವಾಹ ಪ್ರಕಾರಗಳ ಕುರಿತ ವಿವರಣೆಯನ್ನು ಈ ರೀತಿಯಲ್ಲಿ ಕೊಡಬಹುದು[41] :

1. ಬ್ರಾಹ್ಮ : ಕನ್ನೆಯನ್ನಲಂಕರಿಸಿ ವರನಿಗೆ ಕೊಡುವುದು.
2. ಪ್ರಾಜಾಪತ್ಯ : ಮಂತ್ರ ಪೂರ್ವಕವಾಗಿ ಕನ್ಯಾದಾನ.
3. ಆರ್ಷ : ವರನಿಂದ ಎರಡು ಗೋವುಗಳನ್ನು ತೆಗೆದುಕೊಂಡು ಕನ್ಯಾದಾನ ಮಾಡುವುದು.
4. ದೈವ : ಯಾಗವೇದಿಯ ಮಧ್ಯದಲ್ಲಿರುವ ಋತ್ವಿಜನಿಗೆ ಕನ್ಯಾದಾನವನ್ನು ಮಾಡುವುದು.
5. ಗಾಂಧರ್ವ : ಪರಸ್ಪರ ಇಚ್ಛೆಯಿಂದ ಮದುವೆಯಾದರೆ ಅದು ಗಾಂಧರ್ವ.
6. ಆಸುರ : ತನಗಾಗಿಯೂ, ಕನ್ಯೆಗಾಗಿಯೂ ಶುಲ್ಕವನ್ನು ತೆಗೆದುಕೊಂಡು ಕನ್ಯಾದಾನ ಮಾಡುವುದು.
7. ರಾಕ್ಷಸ : ಬಲಾತ್ಕಾರದಿಂದ ಕನ್ಯೆಯನ್ನು ಅಪಹರಿಸುವುದು.
8. ಪೈಶಾಚ : ನಿದ್ದೆ ಮಾಡುವವಳನ್ನು ಅಪಹರಿಸುವುದು.

ಕೌಟಿಲ್ಯನು ಮೊದಲ ನಾಲ್ಕನ್ನು ಪಿತೃಪ್ರಮಾಣಕಗಳೆಂದು ಕರೆಯುತ್ತಾನೆ. (ಭಟ್ಟ. ಕೃಷ್ಣ.ಕೆ 1972, ಪು. 245)[42] ಮೊದಲ ನಾಲ್ಕು (ಬ್ರಾಹ್ಮ,ಪ್ರಾಜಾಪತ್ಯ, ಆರ್ಷ, ದೈವ) ತಂದೆಯ ಒಪ್ಪಿಗೆಯಿಂದ ಮದುವೆ ನಡೆಯುವುದರಿಂದ, ಇವುಗಳನ್ನು ಪಿತೃಪ್ರಮಾಣಕಗಳೆಂದು ಕೌಟಿಲ್ಯನು ಕರೆದಿರಬಹುದು. 'ಆರ್ಷ' ವಿವಾಹ ಪದ್ಧತಿಯು ಸಾಮಾಜಿಕ ಮಾನವಶಾಸ್ತ್ರಜ್ಞರು ಹೇಳುವ 'ಕೊಂಡ ವಿವಾಹ' ಪದ್ಧತಿಗೆ ಅನುಗುಣವಾಗಿದೆ. ಆಸುರ,ರಾಕ್ಷಸ,ಪೈಶಾಚ ವಿವಾಹವು ಆರ್ಯೇತರ ವಿವಾಹ ಪದ್ಧತಿಯೆಂದು ಊಹಿಸಬಹುದಾಗಿದೆ. ಇದಕ್ಕೆ ಕೊಡಬಹುದಾದ ಕಾರಣವೆಂದರೆ. ಕೌಟಿಲ್ಯನು ಹೇಳುವ ಪಿತೃಪ್ರಮಾಣಕಗಳು ಬ್ರಾಹ್ಮಣ ವಿವಾಹಪದ್ಧತಿಯನ್ನು ಹೋಲುತ್ತವೆ.

ಮಹಾಭಾರತದಲ್ಲಿ ಭೀಷ್ಮನು ಕನ್ಯಾಶುಲ್ಕವನ್ನಿತ್ತು ಪಾಂಡುವಿಗೆ ಮಾದ್ರಿಗೆ ಮದುವೆಯನ್ನು ಮಾಡಿಸುವ ಪ್ರಸಂಗವು ಬರುತ್ತದೆ.[43] ಹಾಗೆಯೇ ಮಹಾಭಾರತದಲ್ಲಿ ಭೀಷ್ಮನು ಕಾಶೀದೇಶದ ಸುಕುಮಾರಿಯರಾದ ಅಂಬೆ, ಅಂಬಿಕೆ, ಅಂಬಾಲಿಕೆಯರನ್ನು ಸ್ವಯಂವರಮಂಟಪದಿಂದ ಅಪಹರಿಸುವ ಸನ್ನಿವೇಶವು ಬರುತ್ತದೆ.[44] ಇದರಲ್ಲಿ ಮೊದಲನೆಯದು ಸಾಮಾಜಿಕ ಮಾನವಶಾಸ್ತ್ರಜ್ಞರು ಹೇಳುವ 'ಕೊಂಡ' ವಿವಾಹ ಪದ್ಧತಿಯನ್ನು ಸೂಚಿಸುವಂತಿದ್ದರೆ, ಎರಡನೆಯದು, ಅಪಹರಣ ವಿವಾಹ ಪದ್ಧತಿಯನ್ನು ಸೂಚಿಸುವಂತಿದೆ.

ಸೀತೆಯ ಮದುವೆ, ದ್ರೌಪದಿಯ ಮದುವೆಯು 'ಅರ್ಹತೆಯ ಪರೀಕ್ಷೆಯ ನಂತರ ವಿವಾಹ' ಪದ್ಧತಿಯನ್ನು ಸೂಚಿಸುತ್ತದೆ.

1 : 3 ಪ್ರಾಚೀನ ಭಾರತದಲ್ಲಿ ವಿವಾಹ ಆಚರಣೆಗಳು :

ಋಗ್ವೇದದಲ್ಲಿ ಹೆಣ್ಣಿನ ಮದುವೆಯೆಂದರೆ ಸಂತಾನವೃಕ್ಷವನ್ನು ಬೆಳೆಸುವುದಕ್ಕೆ ಎಂಬ ಕಲ್ಪನೆಯಲ್ಲಿದೆ ಋಗ್ವೇದದಲ್ಲಿ ಬರುವ ಅನೇಕ ಮಾತುಗಳಿಂದ ಮದುವೆಯ ಆಚರಣೆಯ ಕುರಿತ ಸೂಚನೆಗಳು ದೊರೆಯುತ್ತವೆ :

ನಮ್ಮಿಬ್ಬರಿಗೂ ಸುಖ ಸಂತೋಷವುಂಟಾಗಲೆಂದೂ, ನೀನು ನನ್ನೊಡನೆ ಬಹುಕಾಲ ಜೀವಿಸಬೇಕೆಂದೂ. ನಾನು ನಿನ್ನ ಪಾಣಿಗ್ರಹಣ ಮಾಡಿದ್ದೇನೆ. ಆರ್ಯಮಾ, ಭಗ, ಸವಿತೃ, ಪುರಂಧ್ರಿ ಮುಂತಾದ ದೇವತೆಗಳು ನನ್ನ ಮನೆಯ ಅಧಿದೇವತೆಯಾಗಿರೆಂದೂ ನಿನ್ನನ್ನು ನನಗೆ ಕೊಟ್ಟಿದ್ದಾರೆ. (ಋ. ಸಂ. 10–85–46)[45]

ಹೆಣ್ಣಿಗೆ ಹೇಳುವ ಹರಕೆಯಲ್ಲಿಯೂ ಎಲ್ಲರ ಮೇಲಿನ ಯೋಗಕ್ಷೇಮದ ಕುರಿತ ಜವಾಬ್ದಾರಿಯ ಸೂಚನೆಗಳಿವೆ.[46] ಅಥರ್ವವೇದದಲ್ಲಿ. ಬ್ರಹ್ಮಚರ್ಯವ್ರತವನ್ನು ಸಂಪೂರ್ಣ ಮಾಡಿದ ನಂತರ ಕನ್ಯೆಯು ತನ್ನ ಯುವಾವಸ್ಥೆಯಲ್ಲಿ ಪತಿಯನ್ನು ಹೊಂದಬೇಕು ಎಂದಿದೆ.[47] ಹೆಣ್ಣೊಬ್ಬಳು ಪತಿಯಲ್ಲಿ ಬೇಡುವ ಸನ್ನಿವೇಶದಲ್ಲಿ, 'ನಾನು ನಿಮ್ಮನ್ನು ಈ ವಸ್ತ್ರಬಂಧನದ ಮೂಲಕ ಪತಿಯಾಗಿ ಸ್ವೀಕರಿಸುತ್ತೇನೆ' ಎನ್ನುವ ಉಕ್ತಿಯು ಅಥರ್ವವೇದದಲ್ಲಿ ಬರುತ್ತದೆ.[48] ಋಗ್ವೇದದಲ್ಲಿ, ಸೋಮ ವಧುವನ್ನು ಇಚ್ಛಿಸುವವನು ವರನಾಗುವನು. ಆಗ ವಧು-ವರರಿಬ್ಬರಿಗೂ 'ಅಶ್ವಿನೌ' ಎಂಬ ಶಬ್ದವು ಸಂಬೋಧಿಸಲಾಗುತ್ತದೆ. ತಂದೆಯು ಅವಳನ್ನು ವರನಿಗೆ ಕೊಡುತ್ತಾನೆ ಎಂಬ ಕಲ್ಪನೆಯು ಇದೆ.[49] ವಿವಾಹದ ಆಚರಣೆಯ ಬಗೆಗೆ ಮತ್ತೊಂದು ಕಡೆ ಸೂಚ್ಯವಾದ ಅಂಶವು ಪ್ರತಿಪಾದಿತವಾಗಿದೆ. ಹೆಣ್ಣು ಮೊದಲು ಚಂದ್ರನ ಪತ್ನಿಯಾಗಿರುತ್ತಾಳೆ. ನಂತರ ಗಂಧರ್ವನೊಡನೆ ವಿವಾಹ ಮಾಡಿಕೊಂಡೇ ಆಮೇಲೆ ಅಗ್ನಿಯನ್ನು, ಕೊನೆಗೆ ಮಾನವನನ್ನು ವರಿಸುತ್ತಾಳೆ ಎಂದಿದೆ.[50] ಇದೇ ಧ್ವನಿಯನ್ನು ಅತ್ರಿಸ್ಮೃತಿಯು ಕೂಡಾ ಹೇಳುತ್ತದೆ[51]

ಆಚರಣೆಯ ದೃಷ್ಟಿಯಿಂದ ಹೆಚ್ಚು ನಿರ್ದಿಷ್ಟವಾಗಿ ಸ್ಮೃತಿಗಳಲ್ಲಿ ಉಲ್ಲೇಖಗಳನ್ನು ಕಾಣಬಹುದು. ತೈತ್ತಿರೀಯ ಬ್ರಾಹ್ಮಣದಲ್ಲಿ ದೇವನಕ್ಷತ್ರಗಳನ್ನೂ, ಪುಣ್ಯಾಹಗಳನ್ನೂ ಉಲ್ಲೇಖಿಸಿದೆಯಲ್ಲದೆ ಗಂಡನಿಗೆ ಪ್ರಿಯಳೆನಿಸಬೇಕೆಂದಿದ್ದರೆ ಮಗಳನ್ನು ಸ್ವಾತೀ ನಕ್ಷತ್ರದಲ್ಲಿ ವಿವಾಹ ಮಾಡಿಕೊಡಬೇಕೆಂದು ಹೇಳುತ್ತದೆ. (ಕಾಣೆ, ಪಿ. ವಿ. 1980. ಪು. 245)[52] ಮಿತಾಕ್ಷರದಲ್ಲಿ ವೈತನಸೀಯ ಒಂದು

ವಾಕ್ಯವನ್ನು ಕೊಡಲಾಗಿದೆ. ಅದರ ಪ್ರಕಾರ, ತಾಯಿಯಿಂದ ಮೂರು ತಲೆ ದಾಟಿರುವ ಮತ್ತು ತಂದೆಯಿಂದ ಐದು ತಲೆ ದಾಟಿರುವ ಕನ್ಯೆಯನ್ನು ಪುರುಷನು ವಿವಾಹವಾಗಬಹುದು. (ಕಾಣೆ³, ಪಿ. ವಿ. 1980. ಪು. 158)[53] 'ಜೀವನಂದನ ಸಂಗ್ರಹ'ದಲ್ಲಿ ಎಂಟು ವರ್ಷದ ಹುಡುಗಿಯರ ವಿವಾಹವನ್ನು ಅನುಮೋದಿಸಲಾಗಿದೆ. ಮತ್ತು ಸೋದರಮಾವನ ಮಗಳೊಡನೆ ವಿವಾಹವಾಗುವುದನ್ನು ಇದರಲ್ಲಿ ನಿಂದಿಸಲಾಗಿದೆ.(38-123-167) (ಕಾಣೆ³, ಪಿ. ವಿ. 1980. ಪು. 299)[54]

ವೇದಕಾಲದ ತರುವಾಯ ವಿವಾಹದ ಆಚರಣೆಯ ಕುರಿತಂತೆ ಅನೇಕ ಬದಲಾವಣೆಗಳಾದವು. ಸ್ಥೂಲವಾಗಿ ಈ ಆಚರಣೆಗಳ ಕುರಿತ ಅಂಶಗಳನ್ನು ಈ ಕೆಳಗಿನಂತೆ ಟಿಪ್ಪಣಿ ಮಾಡಬಹುದು :

1. ತಂದೆಯೇ ಮಗಳ ಮದುವೆಯನ್ನು ಮಾಡುತ್ತಿದ್ದನು.
2. ಕನ್ಯಾದಾನದ ಪರಿಕಲ್ಪನೆಯು ಹೆಚ್ಚು ಸ್ಪಷ್ಟವಾಗುತ್ತಾ ಬಂತು.
3. ಹೆಣ್ಣಿನ ಗುಣಲಕ್ಷಣಗಳ ಬಗೆಗೆ ಹೆಚ್ಚು ನಿರ್ದಿಷ್ಟವಾದ ನಿಲುವು ರೂಪುಗೊಂಡಿತು.
4. ಕನ್ಯೆಯ ಹೆಸರು ಶುಭ ನಕ್ಷತ್ರವನ್ನು ಸೂಚಿಸುವಂತಿರಬೇಕೆಂಬ ನಂಬಿಕೆಯು ಪ್ರಬಲವಾಯಿತು.
5. ಗೋತ್ರದ ಬಗೆಗೂ ಕೆಲವು ನಿಲುವುಗಳು ಸ್ಪಷ್ಟವಾಯಿತು.
6. ಸಗೋತ್ರ ವಿವಾಹ ನಿಷಿದ್ಧ ಇತ್ಯಾದಿ ಪರಿಕಲ್ಪನೆಗಳು ಹುಟ್ಟಿಕೊಂಡವು.
7. ಮದುವೆಯಲ್ಲಿ ಹೋಮದ ಆಚರಣೆಯು ಆಗಲೇಬೇಕೆಂಬ ನಿಯಮವು ಜಾರಿಗೆ ಬಂತು.
8. 'ಪಾಣಿಗ್ರಹಣ'ದ ಕಲ್ಪನೆಯು ಸ್ಮೃತಿಗಳ ಕಾಲದ ಕೊಡುಗೆಯಾಗಿದೆ.
9. 'ಸಪ್ತಪದಿ'ಯ ಉಲ್ಲೇಖವನ್ನು ಪಾಣಿನಿಯು ತನ್ನ ಗೃಹ್ಯಸೂತ್ರದಲ್ಲಿ ಮಂಡಿಸುತ್ತಾನೆ.
10. ಕೆಲವು ಗೃಹ್ಯಸೂತ್ರಗಳಲ್ಲಿ ಸಪ್ತಋಷಿಮಂಡಲದಲ್ಲಿ ಅರುಂಧತಿ ನಕ್ಷತ್ರವನ್ನು ವಧುವು ನೋಡಬೇಕೆಂಬ ಆಚರಣೆಯನ್ನು ಒತ್ತಿ ಹೇಳಿರುವುದನ್ನು ಕಾಣಬಹುದಾಗಿದೆ.
11. ಈ ಕಾಲದಲ್ಲಿಯೇ ವಧೂಗೃಹಪ್ರವೇಶವೆಂಬ ಆಚರಣೆಯೂ ಬಂದಿರುವುದನ್ನು ಸೂತ್ರಗಳಲ್ಲಿ ಕಾಣಬಹುದಾಗಿದೆ.[55]

ಒಟ್ಟಾಗಿ ಪ್ರಾಚೀನ ಭಾರತದಲ್ಲಿ ಕಂಡು ಬರುವ ಅಂಶಗಳನ್ನು ಮೇಲೆ ಗುರುತಿಸಲಾಗಿದೆ.

ಅಡಿ ಟಿಪ್ಪಣಿಗಳು

1. ಕಿಟ್ಟೆಲ್, ಎಫ್. 1894. **A Kannada - English Dictionary** Basel Mission, Book and Tract Company Mangalore.
2. Chattopadhyaya, Deviprasad. 1981. **Lokagata** Peoples publishing House Private Limited, Rani Jansi Road New Delhi-55
3. ನಂಜಮ್ಮಣ್ಣಿ, ಎಂ.1971. ಸಾಮಾಜಿಕ ಮಾನವ ಶಾಸ್ತ್ರ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-6
4. Thapar, Romila : **Ancient Indian Social History.** Orient Longman Limited. 3/5 Asaf Ali Road, New Delhi-110002.
5. Ibid.
6. ರಾವ್, ವೆಂಕಟ, ಎಚ್. ಪಿ. 1949. ಋಗ್ವೇದ ಸಂಹಿತಾ (ಭಾಗ - 1) ಶ್ರೀ ಚಾಮುಂಡೇಶ್ವರಿ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.
7. ಋಗ್ವೇದದ ಸೂಕ್ತವೊಂದರಲ್ಲಿ ಹೀಗೆ ಬರುತ್ತದೆ :
   ಅದರ ಅರ್ಭಾಂ ಮಹತೇವ ವಚಸ್ಯವೇ ಕಕ್ಷೀವತೇ ವೃಚಯಾಮಿಂದ್ರ ಸುನ್ವತೇ ।
   ಮೇನಾಭವೋ ವೃಷಣಶ್ವಸ್ಯ ಸುಕ್ರತೋ ವಿಶ್ವೇತ್ತಾ ತೇ ಸವನೇಷು ಪ್ರವಾಚ್ಯಾ ॥13॥
   ಎಲೈ ಇಂದ್ರನೇ, ನೀನು ಪ್ರವೃದ್ಧನಾದವನೂ, ನಿನ್ನನ್ನು ಸ್ತೋತ್ರ ಮಾಡಲಿಚ್ಛಿಸಿದವನೂ ಯಜ್ಞಗಳಲ್ಲಿ ನಿನಗೆ ಸೋಮರಸವನ್ನು ಹಿಂಡಿ ಅರ್ಪಿಸಿದವನೂ ಆದ ಕಕ್ಷೀವಂತನೆಂಬ ರಾಜನಿಗೆ ವೃಚಯಾ ಎಂಬ ಯುವತಿಯನ್ನು ಮದುವೆ ಮಾಡಿಕೊಟ್ಟೆ. ಶ್ರೇಷ್ಠವಾದ ಕರ್ಮಯುಕ್ತನಾದ ಎಲೈ ಇಂದ್ರನೇ, ವೃಷಣಶ್ವನೆಂಬ ರಾಜನಿಗೆ ಮೇನಾ ಎಂಬ ಕನ್ಯೆಯಾಗಿ ಹುಟ್ಟಿದೆ.
   (ಋಗ್ವೇದ ಮಂಡಲ. 1; ಅಧ್ಯಾಯ 10 ; ಸೂಕ್ತ. 51)
   (ರಾವ್. ವೆಂಕಟ. ಎಚ್. ಪಿ. (ಅನು) 1949. ಋಗ್ವೇದ ಸಂಹಿತ (ಭಾಗ-5) ಶ್ರೀ ಚಾಮುಂಡೇಶ್ವರಿ ಎಲೆಕ್ಟ್ರಿಕ್ ಪ್ರೆಸ್, ಮೈಸೂರು. ಪು. 200-201)
8. ಅದೇ. (ಭಾಗ–18)
9. ಅದೇ.
10. ಹೆಚ್ಚಿನ ವಿವರಗಳಿಗೆ ರಾವ್, ವೆಂಕಟ ಎಚ್. ಪಿ. 1952 ಋಗ್ವೇದ ಸಂಹಿತ (ಭಾಗ 18) ಶ್ರೀ ಚಾಮುಂಡೇಶ್ವರಿ ಎಲೆಕ್ಟ್ರಿಕ್ ಪ್ರೆಸ್, ಮೈಸೂರು, ಇದರ ಮುನ್ನುಡಿಯನ್ನು ಇದರಲ್ಲಿ ಉಕ್ತವಾದ ಸೂಕ್ತಗಳನ್ನು ಓದಬಹುದು.
11. ಅದೇ.
12. Needham, Rodney (Ed.) 1974 **'The Devlopment of Marriage and Kinship'** University of Chicago Press, Chicago.
13. ರಾವ್, ವೆಂಕಟ ಎಚ್.ಪಿ. (ಅನು) 1952 ಋಗ್ವೇದ ಸಂಹಿತ (ಭಾಗ-18) ನೋಡಿ.
14. ಈ ರೀತಿಯ ವಿಶ್ಲೇಷಣೆಯನ್ನು ಮಲಿನೋವಸ್ಕಿಯು ತನ್ನ ಗ್ರಂಥದಲ್ಲಿ ಮಾಡುವುದನ್ನು ಕಾಣಬಹುದು. ವಿವರಣೆಗಳಿಗೆ ನೋಡಿ :Malinowski, Bornislaw.

1927 'Sex and Repression in Savage Society,' Kegan Paul, London. p. 27

15. Altekar; A.S. 1962—'Women in Ancient Hindu Civilization,' Motilal Banarasidass, New Delhi.
16. ಕಾಣೆ ಪಿ.ವಿ.(ಮೂ) 1980. ಧರ್ಮಶಾಸ್ತ್ರದ ಇತಿಹಾಸ (ಸಂಪುಟ-1) ಪ್ರಸಾರಾಂಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-6.
17. ಅದೇ ಪು. 299.
18. ಪುಟ್ಟಪ್ಪ ಕೆ.ವಿ. (ಸಂ) 1971. ಯುಗಯಾತ್ರೀ ಭಾರತೀಯ ಸಂಸ್ಕೃತಿ (ಸಂಪುಟ-7) ಪ್ರಸಾರಾಂಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು–6.
19. ಕಾಣೆ ಪಿ. ವಿ. (ಮೂಲ) ರಾಮಚಂದ್ರ ರಾವ್, ಎಸ್.ಕೆ. ಮತ್ತು ಕೃಷ್ಣಮೂರ್ತಿ ಕೆ. (ಅನು) 1980. 'ಧರ್ಮಶಾಸ್ತ್ರದ ಇತಿಹಾಸ' ಕನ್ನಡ ಅಧ್ಯಯನ ಸಂಸ್ಥೆ ಮೈಸೂರು–6.
20. Upadhyaya, Bhagavat Saram 1974. 'Women In Rgveda' S. Chand & Co (Pvt) Ltd. Bombay.
21. Arora, Rajkumar 1972. 'Historical and Cultural Data from Bhavisya Purana,' Sterling Publishers (p.) Ltd., New Delhi-16
22. Meyer, Johann Jakob 1971.'Sexual life in Ancient India' Motilal Banarasidass Delhi-6
23. Altekar, A. S. 1962.-'Women in Ancient Hindu Civiliz ation' Motilal Banarasidass, Delhi-6
24. ವಿವರಗಳಿಗೆ—ರಾಮಾಯಣದ ಈ ಸಂದರ್ಭಗಳನ್ನು ನೋಡಿ :
25. ರಾಮೇಶ್ವರಾವಧಾನಿ (ಸಂ) 1981. ಮಹಾಭಾರತ (ಸಂಪುಟ 77) ಭಾರತದರ್ಶನ ಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು-18.
26. ಆತ್ಮಜಾಂ ರೂಪಸಮ್ಪನ್ನಾಂ ಮಹತೀಂ ಸದೃಶೇ ವರೇ ।
ನ ಪ್ರಯಚ್ಛತಿ ಯಃ ಕನ್ಯಾಂ ತಂ ವಿದ್ಯಾದ್ಬ್ರಹ್ಮಘಾತಿನಮ್ ॥ 9 ॥
ತನ್ನ ರೂಪವತಿಯಾದ ಮಗಳು ವಿವಾಹ ಯೋಗ್ಯಳಾಗಿರುವಳೆಂಬುದನ್ನು ತಿಳಿದು ಯಾವನು ಅವಳನ್ನು ಅನುರೂಪನಾದ ವರನಿಗೆ ಕೊಟ್ಟು ಮದುವೆ ಮಾಡುವುದಿಲ್ಲವೋ ಅಂತಹವನನ್ನು ಬ್ರಹ್ಮಘಾತುಕನೆಂದು ತಿಳಿಯಬೇಕು. ವಯಸ್ಸಿಗೆ ಬಂದ ಮಗಳಿಗೆ ಮದುವೆಯನ್ನು ಮಾಡದಿದ್ದರೆ ಬ್ರಹ್ಮಹತ್ಯಾಪಾಪವು ಸಂಘಟಿಸುತ್ತದೆ. (ರಾಮೇಶ್ವ ರಾವಧಾನಿ (ಸಂ) 1983. ಮಹಾಭಾರತ (ಸಂಪುಟ–27) ಭಾರತದರ್ಶನ ಮುದ್ರಣಾಲಯ, ಚಾಮರಾಜಪೇಟೆ. ಬೆಂಗಳೂರು-18
27. ವಿವರಗಳಿಗೆ—ಅದೇ ಸಂಪುಟ, ಅನುಶಾಸನ ಪರ್ವವನ್ನು ನೋಡಬಹುದು. (ಪುಟ. 39, 17)
28. ಮಹಾಭಾರತದಲ್ಲಿ ಬರುವ ಮಾತು ಹೀಗಿದೆ :
"ತಂದೆ ತಾಯಿಗಳು ಕನ್ಯೆಯು ಋತುಮತಿಯಾಗುವ ಮೊದಲು ಒಳ್ಳೆಯ ವರನನು ನೋಡಿ ಮದುವೆ ಮಾಡದಿದ್ದರೆ. ಕನ್ಯೆಯು ಋತುಮತಿಯಾದ ನಂತರ ಮೂರ

ವರ್ಷ ಕಾದಿರಬೇಕು. ಆಗಲೂ ಮದುವೆ ಮಾಡದಿದ್ದರೆ ನಾಲ್ಕನೆಯ ವರ್ಷ ತಾನೇ ಪತಿಯನ್ನು ಹುಡುಕಿಕೊಳ್ಳಬೇಕು. (ಅದೇ ಪು. 39-18)

29. ನಾಗೇಗೌಡ, ಎಚ್.ಎಲ್. (ಸಂ) 1964. ಪ್ರವಾಸಿ ಕಂಡ ಇಂಡಿಯಾ (ಸಂಪುಟ-1) ಪ್ರಸಾರಾಂಗ, ಕ.ಅ. ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು-6
30. ಅಲ್ಬೇರೂನಿಯು ಹೇಳುತ್ತಾನೆ. (ಕ್ರಿ.ಶ. 1080)—"ಹಿಂದೂಗಳು ಚಿಕ್ಕವಯಸ್ಸಿನಲ್ಲಿಯೇ ಮದುವೆಯಾಗುತ್ತಾರೆ. ಆದುದರಿಂದ ತಂದೆ-ತಾಯಿಗಳೇ ಮದುವೆಗೆ ಏರ್ಪಾಡು ಮಾಡುತ್ತಾರೆ. ಮದುವೆಯಲ್ಲಿ ಬ್ರಾಹ್ಮಣರು ಪೌರೋಹಿತ್ಯವನ್ನು ವಹಿಸುತ್ತಾರೆ. ಅವರಿಗೂ ಮಿತ್ರರಿಗೂ ದಾನದಕ್ಷಿಣೆಗಳು ನಡೆಯುತ್ತವೆ. (ಅದೇ ಪು. 384)
31. ಭಸ್ಮೆ, ವೆಂಕಟ, ಜಿ. 1983. ವಾತ್ಸಾಯನನ ಕಾಮಸೂತ್ರ ಸಮಾಜ ಪುಸ್ತಕಾಲಯ, ಧಾರವಾಡ.
32. Barnard, Alan and Good, Anthony, 1984. Research Practices in the Study of Kinship Academic Press INC: Orlando, Florida, 32887
33. ibid.
34. ನಂಜಮಣ್ಣಿ, ಎಂ. 1974. ಸಾಮಾಜಿಕ ಮಾನವ ಶಾಸ್ತ್ರ ಪ್ರಸಾರಾಂಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-6. ಇದರಲ್ಲಿ ಸಾಕಷ್ಟು ವಿವರಗಳಿವೆ. (ನೋಡಿ. ಪು. 69-70)
35. ಕಾಣೆ, ಪಿ.ವಿ. (ಮೂಲ) ರಾಮಚಂದ್ರರಾವ್, ಎಸ್. ಕೆ. ಮತ್ತು ಕೃಷ್ಣಮೂರ್ತಿ, ಕೆ. (ಅನು) 1980. ಧರ್ಮಶಾಸ್ತ್ರದ ಇತಿಹಾಸ (ಸಂ :1, ಭಾಗ-1) ಪ್ರಸಾರಾಂಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-6.
36. ಅದೇ.
37. ಅದೇ.
38. ವಿವರಗಳಿಗೆ ನೋಡಿ : ಕಾಣೆ, ಪಿ. ವಿ. (ಮೂಲ) ರಾಮಚಂದ್ರರಾವ್ ಕೆ., ಎಸ್. ಕೃಷ್ಣಮೂರ್ತಿ, ಕೆ. (ಅನು) 1980. ಧರ್ಮಶಾಸ್ತ್ರದ ಇತಿಹಾಸ (ಸಂಪುಟ-1: ಭಾಗ :1) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ಪು. 5,72. 61.
39. ಭಟ್ಟ, ಕೃಷ್ಣ, ಕೆ. 1972. ಕೌಟಿಲ್ಯನ ಅರ್ಥಶಾಸ್ತ್ರ ಸಮಾಜ ಪುಸ್ತಕಾಲಯ, ಧಾರವಾಡ.
40. ರಾಮೇಶ್ವರಾವಧಾನಿ (ಸಂ). 1983. ಮಹಾಭಾರತ (ಸಂ:27) ಭಾರತದರ್ಶನ ಮುದ್ರಣಾಲಯ, ಬೆಂಗಳೂರು-18-ಪು. 3914.
41. ಹೆಚ್ಚಿನ ಸ್ಮೃತಿಗಳಲ್ಲಿ ಮತ್ತು ಮಹಾಭಾರತದಲ್ಲಿ ಈ ಕುರಿತಂತೆ ಸಾಕಷ್ಟು ವಿವರಗಳಿವೆ.
42. ಭಟ್ಟ, ಕೃಷ್ಣ, ಕೆ. 1972 : ಕೌಟಿಲ್ಯನ ಅರ್ಥಶಾಸ್ತ್ರ ಸಮಾಜ ಪುಸ್ತಕಾಲಯ, ಧಾರವಾಡ.
43. ರಾಮೇಶ್ವರಾವಧಾನಿ (ಸಂ) 1972. ಮಹಾಭಾರತ ಸಂಪುಟ-1 ಭಾರತದರ್ಶನ ಮುದ್ರಣಾಲಯ ಬೆಂಗಳೂರು-18. ಪು. 755.
44. ಅದೇ. (ಸಂಪುಟ-7) ಪು. 698.
45. ವೆಂಕಟರಾವ್, ಎಚ್.ಪಿ. (ಸಂ) 1948. ಋಗ್ವೇದ ಸಂಹಿತಾ ಶ್ರೀ ಚಾಮುಂಡೇಶ್ವರಿ ಎಲೆಕ್ಟ್ರಿಕ್ ಪ್ರೆಸ್, ಮೈಸೂರು. ಮುನ್ನುಡಿ ಪು. 322 (ಭಾಗ-1)
46. (1) 'ಸಮ್ರಾಜ್ಞೀ ಶ್ವಶುರೇ ಭವ ಸಮ್ರಾಜ್ಞೀ ಶ್ವಶ್ರ್ವಾಂ ಭವ ।
ನನಾಂದರಿ ಸಮ್ರಾಜ್ಞೀ ಭವ ಸಮ್ರಾಜ್ಞೀ ಅಧಿದೇವೃಷು ॥ (10-85-46)

ಗಂಡನ ಮನೆಯಲ್ಲಿ ಅತ್ತೆ, ಮಾವ, ಮೈದುನರು ಎಲ್ಲರ ಮೇಲೂ ಅಧಿಕಾರ ಮಾಡಿಕೊಂಡಿರು ಎಂದರೆ ಅವರ ಯೋಗಕ್ಷೇಮವನ್ನು ನೋಡಿಕೊಂಡಿರು ಎಂದು ಅಭಿಪ್ರಾಯ.

(2) ಹೆಂಡತಿಯ ಗರ್ಭದಲ್ಲಿ ಪತಿಯು ಜನಿಸಿದಾಗ ಮಾತ್ರ ಅವಳು ನಿಜವಾಗಿಯೂ 'ಜಾಯಾ' ಎಂಬ ಅನ್ವರ್ಥನಾಮ ಪಡೆಯುತ್ತಾಳೆ.
(ಅದೇ. ಪು. 322)

47. ವಿಶ್ವ : ವಿದ್ಯಾರ್ಥಿ, ಲಕ್ಷ್ಮಣದೇವ, ಬಿ. 1934. ವಿಧವಾ ವಿವಾಹ ಶಾಸ್ತ್ರ-ವಿರುದ್ಧವೇ ?
ಮಂಗಳೂರು ಛಾಪಖಾನೆ, ಮಂಗಳೂರು. ಪು. 44.

48. ಅದೇ.
ಅಭಿತ್ವಾಮನು ಜಾತೇನ ದಧಾಮಿ ಮಮ ಮಾನಸಾ ।
ಯಥಾಸೋ ಮಮ ಕೇವಲೋ ನಾನ್ಯಾಸಾಂ ಕೀರ್ತಯಾಶ್ಚ ನ ॥
(ಅಥರ್ವ ಕಾಲ 7, ಸೂತ್ರ 37, ಮಂ-1)
ನಾನು ನಿಮ್ಮನ್ನು ಈ ವಸ್ತ್ರ ಬಂಧನದ ಮೂಲಕ ಪತಿಯಾಗಿ ಸ್ವೀಕರಿಸುತ್ತೇನೆ. ನೀವು ನನ್ನ ಪತಿಯಾಗಿಯೇ ಅನ್ಯರ ಕಡೆಗೆ ಮನಸ್ಸನ್ನು ಇಡಕೂಡದು.

49. ಸೋಮೋ ವಧು ಯುರ ಭವದಶ್ವಿನಾಸ್ತಾ ಮುಭಾವರಾ ।
ಸೂರ್ಯಂ ಯುತ್ಪತ್ಯೇ ಶಂ ಸನ್ತೀಂ ಮನಸಾಸ ಏತಾದದಾತ್
(ಋ. ಮಂ. 10, ಸೋ. 85. ಮಂ. 9)
ಸೋಮವಧುವನ್ನು ಇಚ್ಛಿಸುವವನು ವರನಾಗುವನು. ಆಗ ವಧೂವರರಿಬ್ಬರಿಗೂ 'ಅಶ್ವಿನೌ' ಶಬ್ದವು ಸಂಬೋಧಿಸಲ್ಪಡುತ್ತದೆ. ಯಾವಾಗ ಕನ್ಯೆಯು ಪತಿಯ ಪ್ರಶಂಸೆ ಮಾಡುತ್ತಾಳೋ, ಪತಿಯನ್ನು ಇಚ್ಛಿಸುತ್ತಾಳೋ ಆಗ 'ಸವಿತಾ' ಅಂದರೆ ತಂದೆಯು ಅವಳನ್ನು ಮನಃಪೂರ್ವಕವಾಗಿ 'ಸೋಮ' ಅಂದರೆ ವರನಿಗೆ ಕೊಟ್ಟನು.
(ವಿವರಗಳಿಗೆ ನೋಡಿ. ಅದೇ. ಪು. 114)

50. ಸೋಮಸ್ಯ ಜಾಯಾ ಪ್ರಥಮಂ ಗಂಧರ್ವಸ್ತೇ ಪರ : ಪತಿ : ।
ತೃತೀಯೋ ಅಗ್ನಿಷ್ಟೇ ಪತಿಸ್ತುರೀಯಸ್ತೇ ಮನುಷ್ಯಜಾ : ॥
(ಅಥರ್ವ ಕಾಲ : 14 ಸೂ. 2, ಮ. 3)
ನೀನು ಮೊದಲು ಚಂದ್ರನ ಪತ್ನಿಯಾಗಿರುತ್ತೀ, ಅನಂತರ ಗಂಧರ್ವನೊಡನೆ ವಿವಾಹ ಮಾಡಿಕೊಂಡೀ ಆಮೇಲೆ ಅಗ್ನಿಯನ್ನು ಕೊನೆಗೆ ಮಾನವನನ್ನು ವರಿಸಿದೆ.

51. ಅತ್ರಿಸ್ಮೃತಿಯಲ್ಲಿ ಹೀಗೆ ಬರುತ್ತದೆ :
ಪೂರ್ವಂ ಸ್ತ್ರೀಯ ಃ ಸುರ್ರೈರ್ಭುಕ್ತಾ ಃ ಸೋಮಗಂಧರ್ವ ವಹ್ನಿಭಿಃ ।
ಭುಂಜತೇ ಮಾನವಾ ಃ ಪಶ್ಚಾನ್ ನತಾ ದುತ್ಯಂತಿ ಕರ್ಹಿಚಿತ್ ॥
(ಅತ್ರಿಸ್ಮೃತಿ ಶ್ಲೋ : 141)
ಸ್ತ್ರೀಯರು ಮೊದಲು ಸೋಮ, ಆಮೇಲೆ ಗಂಧರ್ವ ಮತ್ತೆ ಅಗ್ನಿ ಎಂಬ ದೇವತೆಗಳಿಂದ ಭೋಗಿಸಲ್ಪಡುತ್ತಾರೆ. ಅನಂತರ ಮನುಷ್ಯರು ಭೋಗಿಸುತ್ತಾರೆ. ಇದರಿಂದ ಅವರಿಗೆ ಯಾವ ದೋಷವೂ ತಗಲುವುದಿಲ್ಲ. (ಅದೇ. ಪು. 115)

52. ಕಾಣೆ, ಪಿ.ವಿ. (ಮೂಲ) ಪೂರ್ವೋಕ್ತ.
53. ಅದೇ.
54. ಅದೇ.
55. ವಿವರಗಳಿಗೆ ನೋಡಿ : Apte V.M. 1954. **Social and Religious Life in the Grihya Sutras,** Popular Book Depot Bombay-7.

ನಿಘಂಟು - ವಿಜ್ಞಾನ

ವಿಲ್ಯಂ ಮಾಡ್ತ

ನಿಘಂಟು ಎಂದರೆ ಸಾಮಾನ್ಯವಾಗಿ ಶಬ್ದಕೋಶ ಎಂದರ್ಥ. ಶಬ್ದಕೋಶದಲ್ಲಿ ಬರುವ 'ಶಬ್ದ'ವನ್ನು ಭಾಷಾವಿಜ್ಞಾನದಲ್ಲಿ lexeme ಎಂದು ಪಾರಿಭಾಷಿಕವಾಗಿ ಕರೆಯುತ್ತಾರೆ. ಈ ಪಾರಿಭಾಷಿಕ ಪದವನ್ನು ಕನ್ನಡದಲ್ಲಿ ನಾನು 'ನಿಘಂಟಿಮ' ಎಂದು ಭಾಷಾಂತರಿಸಿದ್ದೇನೆ. ಸಾಮಾನ್ಯ ಭಾಷೆಯಲ್ಲಿ ಅದನ್ನು ಹೆಚ್ಚು ಕಡಿಮೆ ಶಬ್ದ/ಪದವೆಂದು ನಾವು ಕರೆಯುತ್ತೇವೆ.

ನಿಘಂಟಿಮಗಳನ್ನು ಕುರಿತ ಸೈದ್ಧಾಂತಿಕ ವಿವೇಚನೆಯೇ ನಿಘಂಟುವಿಜ್ಞಾನ. ಅದು ನಿಘಂಟಿಮಗಳ ಅರ್ಥವ್ಯಾಪ್ತಿ, ವೈವಿಧ್ಯತೆ ಹಾಗೂ ಅವುಗಳ ಸಂಯೋಜನೆಗಳನ್ನು ಕುರಿತು ವಿವೇಚಿಸುತ್ತದೆ. ನಿಘಂಟುಗಳ ಸಂಗ್ರಹ (stock) ವೇ ನಿಘಂಟು (Lexicon) : ನಿಘಂಟು ಸಮುದಾಯದಲ್ಲಿ ಬರುವ ಭಿನ್ನ ಭಿನ್ನ ಘಟಕಗಳೇ ನಿಘಂಟಿಮಗಳು. ನಿಘಂಟಿಮವೆಂದರೇನೆಂಬುದನ್ನು ನಾವು ಸುಲಭವಾಗಿ ತಿಳಿದುಕೊಳ್ಳಬಹುದಾದರೂ ಅದನ್ನು ವ್ಯಾಖ್ಯಾನಿಸುವುದು ಅಷ್ಟು ಸುಲಭದ ಕೆಲಸವಲ್ಲ. ಮೂಲಭೂತ ಅಂಶಗಳನ್ನು ವ್ಯಾಖ್ಯಾನಿಸುವುದು ಯಾವಾಗಲೂ ಕಷ್ಟಕರವಾದದ್ದೇ. ಕಾರಣ, ನಿಘಂಟುಸಮುದಾಯದಲ್ಲಿ ಬರುವ ವೈಯಕ್ತಿಕ ಘಟಕಗಳೇ ನಿಘಂಟಿಮ ಎಂದು ವಿವರಣೆಯನ್ನು ನೀಡುವುದೇ ಹೆಚ್ಚು ಸೂಕ್ತ. ಈ ಘಟಕಗಳನ್ನು ಸಾಮಾನ್ಯ ಭಾಷೆಯಲ್ಲಿ ಪದ (Word) ವೆನ್ನುವರು ಎಂದು ಈಗಾಗಲೇ ಹೇಳಲಾಗಿದೆ. ಹಾಗಾದರೆ ಪದ/ಶಬ್ದವೆಂದರೇನು? ಭಾಷಾವಿಜ್ಞಾನದಲ್ಲಿ ಇದೂ ಒಂದು ಸಮಸ್ಯೆಯೆ ; ಪದವನ್ನು ಅರ್ಥೈಸಿಕೊಳ್ಳಬಹುದಾದರೂ ಅದನ್ನು ವ್ಯಾಖ್ಯಾನಿಸುವುದು ಅಷ್ಟು ಸುಲಭದ ಕೆಲಸವಲ್ಲ. 'ಮನೆ' ಎಂಬುದು ಒಂದು ಪದವಾದರೆ 'ಮನೆಗೆ' ಎಂಬಲ್ಲಿ ಎಷ್ಟು ಪದಗಳಿವೆ? '—ಗೆ', '—ಇಂದ' ಎಂಬಿವು ಪದಗಳೆ? ಅಲ್ಲವಾದರೆ, ಇಂಗ್ಲೀಷಿನ To, From ಗಳಿಗೆ ಸಂವಾದಿಯಾಗಿ ಅವುಗಳನ್ನು ಹಲವಾರು ಕನ್ನಡಿಗರು ತಮ್ಮ ಪತ್ರವ್ಯವಹಾರದಲ್ಲಿ ಬಳಸಿಕೊಳ್ಳುವುದು ಸರಿಯೇ? ಇಂಗ್ಲೀಷಿನಲ್ಲಿ ಅವು ಪದಗಳೆ? 'ಸಂಯುಕ್ತ ರಾಷ್ಟ್ರ ಸಂಸ್ಥೆ' ಎಂಬುದು ಒಂದೇ ಪದವೆ? ಅಥವಾ ಹಲವು ಪದಗಳ ಸಮೂಹವೆ? ಹಲವು ಪದಗಳ ಸಮೂಹವಾದರೆ ಅದಕ್ಕೆ ಇರುವ ಅರ್ಥ ಒಂದೇ ಅಲ್ಲವೆ?—ಈ ರೀತಿಯ ಹಲವಾರು ಬಗೆಯ ಪ್ರಶ್ನೆಗಳು ಭಾಷಾವಿಜ್ಞಾನಿಗಳನ್ನು ಕಾಡುತ್ತವೆ. ಕಾರಣ, ಅವರು ತಮ್ಮ ವ್ಯಾಕರಣ

ದಲ್ಲಿ ಪದವನ್ನು ಬಿಟ್ಟು 'ಆಕೃತಿಮ' (Morpheme) ಎಂಬ ಘಟಕವನ್ನು ಭಾಷೆಯ ಅತ್ಯಲ್ಪ ಅರ್ಥಸಹಿತ ಮೂಲ ಘಟಕವನ್ನಾಗಿ ಇಟ್ಟುಕೊಳ್ಳುತ್ತಾರೆ.

ಸಾಂಪ್ರದಾಯಿಕ ವೈಯಾಕರಣರು ಭಾಷೆಯ ಎಲ್ಲ ಪದಗಳನ್ನು ಎಂಟು ಗುಂಪುಗಳನ್ನಾಗಿ ವರ್ಗೀಕರಿಸುತ್ತಾರೆ. ಆ ವರ್ಗೀಕರಣ ಇಂತಿದೆ: ನಾಮ, ನಾಮ ವಿಶೇಷಣ, ಸರ್ವನಾಮ, ಕ್ರಿಯಾಪದ, ಕ್ರಿಯಾವಿಶೇಷಣ, ಸಮುಚ್ಚಯ, ಉಪಸರ್ಗ, ಮತ್ತು ನಿಪಾತ.

ಪ್ರಸ್ತುತ ವರ್ಗೀಕರಣವನ್ನು ಆಧರಿಸಿ ಈ ಕೆಳಗಿನ ಕೋಷ್ಟಕದಲ್ಲಿ ಪದ ಗಳೆಷ್ಟು ಎಂಬುದನ್ನು ತೀರ್ಮಾನಿಸಬಹುದೇ?

A	B
1. An	boy
2. An	ant
3. The	girl
4. The	apple

A ವರ್ಗದಲ್ಲಿ ಬರುವ ರೂಪಗಳು ಯಾವ ಶಬ್ದವರ್ಗಕ್ಕೆ (Part of speech) ಸೇರುತ್ತವೆ? ಈ ಕೋಷ್ಟಕದಲ್ಲಿ ಬರುವ ಪದಗಳ ಸಂಖ್ಯೆ ಎಷ್ಟು? ನಾಲ್ಕೋ/ಎಂಟೊ/ಏಳೊ?

ಒಂದು ವಾಕ್ಯದಲ್ಲಿ ಎರಡು ವಿರಾಮಗಳ ನಡುವೆ ಬರುವ ವಾಕ್ಯಭಾಗಗಳೇ ಪದಗಳೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಹಾಗಾದರೆ ಈ ಕೆಳಗಿನ ಮಾತು ಗಳಲ್ಲಿ ಎಷ್ಟು ಪದಗಳಿವೆ?

5. A few
6. A little

ಕೆಳಗಿನ ವಾಕ್ಯಗಳನ್ನು ಗಮನಿಸಿರಿ :

7. A 'sick-room' should be well ventilated.
8. The 'letter-box' is not cleared.
9. A 'three-and-a-half-year-old-girl died in the hospital.

ಮೇಲಿನ ವಾಕ್ಯದಲ್ಲಿಯ sick-room, letter-box, three-and-a-half-year-old-girl ಇವು ಒಂದೊಂದು ಪದವೊ ಅಥವಾ ಅನೇಕ ಪದಗಳೊ? ಇದರ ಬಗೆಗೆ ವೈಯಾಕರಣಿಗಳಲ್ಲಿ ಏಕಾಭಿಪ್ರಾಯವಿಲ್ಲ. ಹೀಗೆ, ಪದದ ಸ್ವರೂಪ–ಲಕ್ಷಣಗಳ ಬಗೆಗೆ ಭಿನ್ನಾಭಿಪ್ರಾಯವಿರುವುದರಿಂದ ಭಾಷಾವಿಜ್ಞಾನಿಗಳು ನಿಘಂಟಿಮ (Lexeme) ಎಂಬ ಪಾರಿಭಾಷಿಕ ಪದವನ್ನು ಬಳಸಿಕೊಂಡಿದ್ದಾರೆ.

ಮೇಲಿನ ಕೋಷ್ಟಕದ A ವರ್ಗದಲ್ಲಿ ಬರುವ 1–4 ರೂಪಗಳು ನಿಘಂಟಿಮು ಗಳು ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ; ಅಂತೆಯೇ 5 ಮತ್ತು 6ನೆಯ ಮಾತುಗಳು ನಿಘಂಟಿಮುಗಳೇ; ಅದೇ ರೀತಿಯಲ್ಲಿ 7ರಿಂದ 9ನೆಯ ವಾಕ್ಯದಲ್ಲಿ ಬರುವ sick-room ಮೊದಲಾದ ಪದಗಳು ಒಂದೊಂದೇ ನಿಘಂಟಿಮುಗಳು.

ನಿಘಂಟು-ವಿಜ್ಞಾನ (Lexicology)ದಲ್ಲಿ ಸಾಮಾನ್ಯವಾಗಿ ಈ ಕೆಳಗಿನ ವಿಷಯ ಗಳನ್ನು ಕುರಿತು ಪ್ರಸ್ತಾಪಿಸಲಾಗುತ್ತದೆ :

1.1 ನಿಘಂಟಿಮು ಮತ್ತು ಅರ್ಥ
1.2 ನಿಘಂಟಿಮು ಮತ್ತು ವೈವಿಧ್ಯತೆ
1.3 ನಿಘಂಟಿಮು ಮತ್ತು ಅವುಗಳ ಸಂಯೋಜನೆ
1.4 ಭಾಷಾವೈವಿಧ್ಯತೆ ಮತ್ತು ನಿಘಂಟು ವಿಜ್ಞಾನ

1.1 ನಿಘಂಟಿಮು ಮತ್ತು ಅರ್ಥ

ನಿಘಂಟಿಮುಗಳಿಗೆ ಸರಿಯಾದ ಅರ್ಥವನ್ನು ಕೊಡುವುದೇ ನಿಘಂಟುಕಾರ (Lexicographer) ನ ಪ್ರಮುಖ ಕೆಲಸ. ಇದಕ್ಕಾಗಿ ಆತ/ಆಕೆ ಒಂದು ನಿಘಂಟಿ ಮುಕ್ಕಿರಬಹುದಾದ ಅರ್ಥದ ವ್ಯಾಪ್ತಿಯನ್ನು ಚೆನ್ನಾಗಿ ಅರಿತುಕೊಳ್ಳಬೇಕು. ನಿಘಂಟಿಮುಗಳನ್ನು ಸಂಯೋಜಿಸಿ ನಿಘಂಟುವನ್ನು ರಚಿಸುವ ಪೂರ್ವದಲ್ಲಿ ಅವುಗಳ ಸಹಜ ಸ್ಥಾನ (Sitz im Leben) ನಾವು ಬಳಸುವ ಭಾಷೆಯೆಂಬುದನ್ನು ಗಮನಿಸ ಬೇಕು. ಈ ಹಿನ್ನೆಲೆಯಲ್ಲಿ ನೋಡಿದಾಗ ನಿಘಂಟಿಮುಗಳು ಭಾಷಿಕ ಸಂಕೇತಗಳಾಗಿವೆ. ಅವು ನಿಯಮಬದ್ಧವಾಗಿ ವಾಕ್ಯದಲ್ಲಿ ಸಂಯೋಜನೆಗೊಳ್ಳುತ್ತವೆ. ವಾಕ್ಯದಲ್ಲಿ ಬರುವ ಈ ಘಟಕಗಳಿಗೆ ನಿರ್ದೇಶಕಾರ್ಥ (Referential meaning) ವಿರುತ್ತದೆ.

ಈ ಕೆಳಗಿನ ವಾಕ್ಯವನ್ನು ಗಮನಿಸಿ : "ಬೊಗಳುವ ನಾಯಿ ಕಚ್ಚುವುದಿಲ್ಲ." ಈ ವಾಕ್ಯದಲ್ಲಿ ಬರುವ ಪ್ರತಿಯೊಂದು ನಿಘಂಟಿಮುವೂ ಲೋಕದಲ್ಲಿರುವ ವಸ್ತು ವನ್ನು/ಕ್ರಿಯೆಯನ್ನು ನಿರ್ದೇಶಿಸುತ್ತದೆ. ಕೆಲವೊಮ್ಮೆ ಅವು ಕಾಲ್ಪನಿಕ ಜಗತ್ತಿನ ವಸ್ತುಗಳನ್ನು ನಿರ್ದೇಶಿಸಬಹುದು : "ಇಗೋ, ಹೇಮಗಿರಿ" ಇಂತಹ ನಿರ್ದೇಶಾತ್ಮಕ ಅರ್ಥಗಳನ್ನು ನಿಘಂಟಾತ್ಮಕ ಅರ್ಥಘಟಕಗಳು (Lexical sememes) ಎನ್ನುವರು.

ಅರ್ಥವಿವರಣ ವಿಜ್ಞಾನ

ನಿಘಂಟಿಮುಗಳ ಅರ್ಥವಿವರಣೆಯನ್ನು ಅಧ್ಯಯನ ಮಾಡುವ ಶಿಸ್ತುವನ್ನು ಅರ್ಥವಿವರಣಾ ವಿಜ್ಞಾನ (Semantics) ಎಂದು ಕರೆಯುತ್ತಾರೆ. ಧ್ವನಿಮುವಿಜ್ಞಾನ (Phonology) ಆಕೃತಿಮುವಿಜ್ಞಾನ (Morphology) ಮತ್ತು ವಾಕ್ಯವಿಜ್ಞಾನ (Syntax) ಗಳನ್ನು ಅಧ್ಯಯನ ಮಾಡುವ ರೀತಿಯಲ್ಲಿ ಅರ್ಥವಿಜ್ಞಾನ ಕಲಿಯುವುದು

ಕಷ್ಟ. ಅರ್ಥ ಹೆಚ್ಚು ಅಮೂರ್ತ ಸ್ವರೂಪದ್ದಾಗಿರುವುದೇ ಅದಕ್ಕೆ ಕಾರಣ. ಭಾಷಾ ವಿಜ್ಞಾನದ ವ್ಯಾಪ್ತಿಯಲ್ಲಿ ಅರ್ಥವಿಜ್ಞಾನಕ್ಕೆ ಕೇಂದ್ರೀಯ ಸ್ಥಾನವಿಲ್ಲವೆಂಬುದು ರಾಚನಿಕ ಭಾಷಾವಿಜ್ಞಾನಿಗಳ ಅಭಿಮತ (ನೋಡಿ, Hockett, 1958).

ನಿಘಂಟಿಮದಲ್ಲಿ ಅರ್ಥ ಹುದುಗಿಕೊಂಡಿರುವುದಿಲ್ಲ; ಅದು ಸಾಮಾಜಿಕ ಪರಿಸರದಿಂದ ಅರ್ಥವನ್ನು ಪಡೆದುಕೊಳ್ಳುತ್ತದೆ. ಹೀಗೆ God ಎಂಬ ರೂಪಕ್ಕೆ ಇಂಗ್ಲೀಷಿನಲ್ಲಿ 'ದೇವರು' ಎಂಬ ಅರ್ಥ ಪ್ರಾಪ್ತವಾದರೆ ಕೊಂಕಣಿಯಲ್ಲಿ 'ಬೆಲ್ಲ' ಎಂದು ಅರ್ಥ. Father ಎಂಬ ರೂಪಕ್ಕೆ 'ಜನಕ' ಎಂಬುದು ಸಾಮಾನ್ಯ ಅರ್ಥವಾದರೆ 'ಕೆಥೋಲಿಕ ಧರ್ಮಸಭೆಯ ಯೋಜಕ' ಎಂಬ ಇನ್ನೊಂದು ಅರ್ಥವೂ ಅದಕ್ಕಿದೆ. ಒಂದೇ ಭಾಷಿಕ ರೂಪಕ್ಕೆ ನೇರ ಅರ್ಥದ ಜೊತೆಗೆ ವ್ಯಂಗ್ಯಾರ್ಥವೂ ಬರಬಹುದು. ಇದಕ್ಕೆಲ್ಲ ಸಾಮಾಜಿಕ ಪರಿಸರಗಳೇ ಕಾರಣ. ಭಾಷಿಕ ಸಂಕೇತಗಳಾದ ನಿಘಂಟಿಮಗಳಿಗೆ ಸಾಮಾಜಿಕ ಪರಿಸರದಿಂದ ಅರ್ಥ ಒದಗಿ ಬರುವುದರಿಂದ ನಿಘಂಟುಕಾರ ನಿಘಂಟಿಮದ ವಿವಿಧ ಅರ್ಥಗಳನ್ನೂ ಅವುಗಳ ಭಿನ್ನ ಭಿನ್ನ ಸಂದರ್ಭ (context) ಗಳನ್ನೂ ತಿಳಿದುಕೊಳ್ಳುವುದು ಅನಿವಾರ್ಯ.

ನಾವು ಈಗಾಗಲೆ ನೋಡಿದಂತೆ, ನಿಘಂಟಿಮಗಳು ಭಾಷೆಯ ಅವಿಭಾಜ್ಯಾಂಗ. ಪ್ರತಿಯೊಂದು ಭಾಷೆಯೂ ರಾಚನಿಕವಾಗಿ ಸಂಕೀರ್ಣ ಸ್ವರೂಪದ್ದಾಗಿದೆಯೆಂದರೆ ತಪ್ಪಾಗಲಾರದು. ಅಲ್ಲಿಯ ಅರ್ಥಾಂತರ, ರೂಪಾಂತರ ಸಾಧ್ಯತೆಗಳನ್ನು ಗಮನಿಸಿದಾಗ ಒಂದು ಭಾಷೆಯ ಪರಿಪೂರ್ಣ ಜ್ಞಾನವನ್ನು ಪಡೆಯುವುದು ಮಾತೃಭಾಷಿಗನಿಗೂ ಸಾಧ್ಯವಾಗಲಾರದು. ನಿಘಂಟಿಮಕ್ಕೆ ಗ್ರಾಂಥಿಕ (Co-textual) ಹಾಗೂ ಸಾಮಾಜಿಕ ಸಂದರ್ಭ(Contextual) ಗಳಿಂದ ಅನೇಕ ಅರ್ಥಗಳು ಪ್ರಾಪ್ತವಾಗುವುದರಿಂದ ಅದರ ಮೂಲಾರ್ಥ ಯಾವುದು, ಉಪಾರ್ಥ (Satellite meaning) ಗಳು ಯಾವುವು ಎಂಬುದನ್ನು ನಿರ್ಣಯಿಸಿ ಅವುಗಳನ್ನು ಶ್ರೇಣಿ ರೂಪದಲ್ಲಿ (in a rank) ಕಾಣಿಸಬೇಕಾಗುತ್ತದೆ. ಸ್ವಭಾಷೆ ಹಾಗೂ ಮೃತ ಭಾಷೆಗಳ ನಿಘಂಟು ರಚನೆಯಲ್ಲಿ ಅರ್ಥನಿರ್ಣಯ ಹಾಗೂ ಅದರ ವ್ಯಾಪ್ತಿಯ ನಿರ್ದೇಶನ ಅಷ್ಟೊಂದು ಕ್ಲಿಷ್ಟಕರವಾಗದೆ ಇರಬಹುದಾದರೂ ಅನ್ಯಭಾಷೆಯ ಮತ್ತು ದ್ವಿಭಾಷಿಕ (Bilingual) ನಿಘಂಟು ರಚನೆಯಲ್ಲಿ ಅನೇಕ ಸಮಸ್ಯೆಗಳು ಉದ್ಭವಿಸುವುದುಂಟು. ಆಗ ಆಯಾ ಭಾಷೆಯ ಒಟ್ಟು ಸಂದರ್ಭಗಳನ್ನು ಗಮನಿಸಿಯೇ ಅರ್ಥಗಳನ್ನು ನಿಘಂಟುವಿನಲ್ಲಿ ಸೂಚಿಸಬೇಕಾಗುತ್ತದೆ.

ನಿಘಂಟಿಮದ ಅರ್ಥವೈವಿಧ್ಯ

ನಿಘಂಟಿಮದ ಅರ್ಥವನ್ನು ಪರಿಶೀಲಿಸುವಾಗ ಅದರ ವೈವಿಧ್ಯತೆಯನ್ನು ನಿಘಂಟುಕಾರ ಗಮನಿಸಬೇಕು ; ಅರ್ಥಾತ್ ನಿಘಂಟಿಮದ–

ಅ) ನಿರ್ದೇಶಕಾರ್ಥ (Denotation)
ಆ) ಸೂಚ್ಯಾರ್ಥ (Connotation)
ಇ) ಅರ್ಥವ್ಯಾಪ್ತಿ (Semantic range)
ಈ) ಅರ್ಥ – ಮಗ್ಗಲು (Semantic dimension)
ಉ) ವ್ಯಾಕರಣಾರ್ಥ (Grammatical meaning) ಇವುಗಳ ಬಗೆಗೆ ವಿಶೇಷ ಎಚ್ಚರಿಕೆಯನ್ನು ವಹಿಸಬೇಕು.

ನಿರ್ದೇಶಕಾರ್ಥ :

ಒಂದು ಭಾಷೆಯಲ್ಲಿ ನಿಘಂಟಿಮುವನ್ನು ಬಳಸುವಾಗ ಅದಕ್ಕೆ ಬಾಹ್ಯ ಜಗತ್ತಿನಲ್ಲಿರುವ 'ವಸ್ತು' (Phenomenon)ವಿನೊಂದಿಗೆ ಸಂಬಂಧವಿರುತ್ತದೆ. ಈ ಸಂಬಂಧವೇ ನಿಘಂಟಿಮುದ ನಿರ್ದೇಶಕಾರ್ಥ (Reference, Denotation, Designation). ಪ್ರಸ್ತುತದಲ್ಲಿ 'ವಸ್ತು'ವೆಂದಾಗ ಅದು ಕೇವಲ ಪದಾರ್ಥ(Thing) ಆಗಿರಬೇಕಾಗಿಲ್ಲ, ಅದು ಗುಣ (Quality : 'ಹೊಸ, ಬಿಳಿಯ ...') ಅಥವಾ ಕ್ರಿಯೆ (Action : ಕುಡಿ, ನಗು...) ಆಗಿರಬಹುದು.

ನಿರ್ದೇಶಕಾರ್ಥವೆಂಬುದು ವಸ್ತುವಿನ ಅಮೂರ್ತ ರೂಪ (Abstraction). ಈ ಅರ್ಥದಲ್ಲಿ ಪ್ರತ್ಯೇಕತಾ ಗುಣ (Differential quality) ವಿರುತ್ತದೆ. ಒಂದು ವಸ್ತು ಇನ್ನೊಂದು ವಸ್ತುವಿಗಿಂತ ಭಿನ್ನವೆಂದು ತೋರಿಸುವ ಲಕ್ಷಣಗಳು (features) ಅದರಲ್ಲಿವೆ. ಉದಾಹರಣಾರ್ಥವಾಗಿ, 'ಮೇಜು' ಎನ್ನುವ ಕಲ್ಪನೆ (Concept) ಯಲ್ಲಿ ಕುರ್ಚಿಗಿಂತ ಅದು ಭಿನ್ನವೆಂಬ ಅಂಶವಿರುತ್ತದೆ: 'ದೊಡ್ಡ' ಎಂದು ಹೇಳುವಲ್ಲಿ ಅದು ಸಣ್ಣದಕ್ಕಿಂತ ಭಿನ್ನವೆಂಬ ಅಂಶವಿರುತ್ತದೆ; 'ಕುಡಿ' ಎಂದು ಹೇಳುವಲ್ಲಿ ಅದು ಸಾಯು ಎಂಬ ಕ್ರಿಯೆಗಿಂತ ಭಿನ್ನ ಎಂಬ ಅಂಶವಿರುತ್ತದೆ.

ಪ್ರತಿಯೊಂದು ನಿರ್ದೇಶಕಾರ್ಥಕ್ಕೂ ಅದರದ್ದೇ ಆದ ಲಕ್ಷಣಗಳಿರುತ್ತವೆ. ಇದರಿಂದಾಗಿ ಒಂದು ನಿಘಂಟಿಮುವನ್ನು ಇನ್ನೊಂದು ನಿಘಂಟಿಮುದಿಂದ ಬೇರ್ಪಡಿಸಲು ಸಾಧ್ಯವಾಗುತ್ತದೆ. ಒಂದು ವಸ್ತುವನ್ನಿಡಲು ಒಂದು ಅಥವಾ ಹಲವು ಕಾಲುಗಳ ಮೇಲೆ ಹಲಗೆಯನ್ನು ಇಟ್ಟು ನಿರ್ಮಿಸಿದ ಸಾಧನವನ್ನು 'ಮೇಜು' ಎಂದು ಕರೆದರೆ, 'ಕುರ್ಚಿ' ಕುಳಿತುಕೊಳ್ಳಲು ಮಾಡಿದ ಒಂದು ಸಾಧನ. ಇದೇ ರೀತಿಯಲ್ಲಿ 'ಕುಡಿ' ಎಂಬುದರ ಅರ್ಥಕ್ಕೂ 'ಸಾಯು' ಎಂಬುದರ ಅರ್ಥಕ್ಕೂ ಭಿನ್ನತೆಯುಂಟು. ಇವುಗಳನ್ನು ಭಿನ್ನಾರ್ಥಕ ಲಕ್ಷಣಗಳು (Criterial (feature) ಎಂದು ಕರೆಯುತ್ತಾರೆ.

ನಿಘಂಟುಕಾರ, ನಿಘಂಟಿಮುಗಳ ಭಿನ್ನಾರ್ಥಕ ಲಕ್ಷಣಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾಗುತ್ತದೆ. ಬೇರೆ ಬೇರೆ ಭಾಷೆಯಲ್ಲಿ ನಿಘಂಟಿಮುಗಳ ಭಿನ್ನಾರ್ಥಕ ಲಕ್ಷಣಗಳು ಒಂದೇ ರೀತಿಯಲ್ಲಿ ಇರಬೇಕಾಗಿಲ್ಲ. ಕನ್ನಡದ ತೋಳು ಮತ್ತು ಕೈ ಕೂಡಿದಾಗ

ಇಂಗ್ಲೀಷಿನ arm ಎಂಬುದಕ್ಕೆ ಸಮಾನವಾಗುತ್ತದೆ. ಇಂಗ್ಲೀಷಿನ hand ಗೆ, ಕನ್ನಡದಲ್ಲಿ ಮುಂಗೈ ಸಮಾನಾರ್ಥಕವಾಗುತ್ತದೆ. ಇಂಗ್ಲೀಷಿನಲ್ಲಿ Violet, Indigo, Blue ಭಿನ್ನ ಭಿನ್ನ ಬಣ್ಣಗಳಾದರೆ ಅವುಗಳೆಲ್ಲವನ್ನೂ ಕನ್ನಡದಲ್ಲಿ 'ನೀಲಿ' ಎಂದು ಕರೆಯುವುದುಂಟು ಎಂಬುದನ್ನು ಗಮನಿಸಿದಾಗ ವಿಭಿನ್ನ ಭಾಷೆಗಳಲ್ಲಿಯ ನಿಘಂಟಿಮುಗಳ ಭಿನ್ನಾರ್ಥಕ ಲಕ್ಷಣಗಳ ಸ್ವರೂಪ ಏಕರೀತಿಯದ್ದಲ್ಲ ಎಂಬುದು ಖಚಿತವಾಗುತ್ತದೆ.

ನಿಘಂಟಿಮುಗಳು ಪಾರಿಭಾಷಿಕವಾಗಿ ಬಳಕೆಗೊಂಡಾಗ ಅದಕ್ಕೆ ವಿಶಿಷ್ಟ ಅರ್ಥ ಪ್ರಾಪ್ತವಾಗುತ್ತದೆ. ಹೀಗೆ 'ಭಾಷೆ' ಎಂಬ ನಿಘಂಟಿಮುವನ್ನು ಭಾಷಾವಿಜ್ಞಾನದಲ್ಲಿ ಬಳಸಿದಾಗ ಅದಕ್ಕೆ ಕೇವಲ ಆಡುಮಾತು ಮತ್ತು ಪ್ರಾದೇಶಿಕ ಮಾತಿಗಿಂತ ವಿಸ್ತಾರವಾದ ಅರ್ಥ ದೊರಕುತ್ತದೆ. ಹೀಗೆ ಒಂದೇ ನಿಘಂಟಿಮುಕ್ಕೆ ಬೇರೆ ಬೇರೆ ಶಿಸ್ತುಗಳಲ್ಲಿ (ಉದಾ : ದೇವಶಾಸ್ತ್ರ, ತತ್ವಶಾಸ್ತ್ರ, ವಿಜ್ಞಾನ, ಕಾನೂನುಶಾಸ್ತ್ರ....) ಬೇರೆ ಬೇರೆ ಅರ್ಥವ್ಯಾಪ್ತಿ ಬರಬಹುದಾದುದರಿಂದ ನಿಘಂಟುಕಾರ ನಿಘಂಟು ರಚನೆಯಲ್ಲಿ ಬಹಳಷ್ಟು ಕಾಳಜಿ ವಹಿಸಬೇಕಾಗುತ್ತದೆ.

ಹಲವು ಸಲ ಭಾಷೆಯಲ್ಲಿರುವ ನಿಘಂಟಿಮುಗಳು ಸೂಚಿಸುವ ವಸ್ತುಗಳು ಅಲೌಕಿಕ/ಕಾಲ್ಪನಿಕವಾಗಿರುತ್ತವೆ : ಕಾಮಧೇನು, ಕಲ್ಪವೃಕ್ಷ, ಅಮೃತ ಮೊದಲಾದವುಗಳು ಕನ್ನಡದ ಉದಾಹರಣೆಗಳಾದರೆ Unicorn, Phoenix ಮೊದಲಾದವುಗಳು ಇಂಗ್ಲೀಷಿನ ಉದಾಹರಣೆಗಳು. ಇನ್ನು ಕೆಲವು ಕೇಳುಗನ ಗಮನ ಸೆಳೆಯಲು ಬಳಸುವಂತಹವುಗಳಾಗಿವೆ: ಏಯ್, ಒಯ್, ಹಲೋ...., ಇನ್ನು ಕೆಲವು ಕೇವಲ ಔಪಚಾರಿಕ ಮಾತುಗಳು : ದಯವಿಟ್ಟು, ಪ್ಲೀಸ್..., ಇನ್ನು ಕೆಲವು ನಿರ್ದೇಶಕಗಳು (Directics): ಈ/ಆ ; ಇದು/ಅದು. ಇವು ವಾಕ್ಯಗಳಲ್ಲಿ ಅರ್ಥಪೂರ್ಣವಾದ ಘಟಕಗಳಾಗಿ ಬರುತ್ತವೆಯಾದುದರಿಂದ ಅವುಗಳನ್ನೂ ನಿಘಂಟಿಮುಗಳೆಂದು ಪರಿಗಣಿಸುತ್ತಾರೆ.

ಸೂಚ್ಯಾರ್ಥ :

ನಿಘಂಟಿಮುಗಳಿಗೆ ನಿರ್ದೇಶಕಾರ್ಥದ ಜೊತೆಗೆ ಸೂಚ್ಯಾರ್ಥ (Connotation) ಇರುತ್ತವೆ. ಕೆಳಗಿನ ವಾಕ್ಯಗಳನ್ನು ಗಮನಿಸಿ :

1. ಯೇಸು ಕ್ರಿಸ್ತ ಶಿಲುಬೆಯಲ್ಲಿ ತನ್ನ ಪ್ರಾಣತ್ಯಾಗ ಮಾಡಿದನು.
2. ಜೂದಾಸನು ಮರಕ್ಕೆ ನೇಣು ಹಾಕಿದನು.
3. ವಿಲ್ಯಮ್‌ನು ಮುಪ್ಪಿನಲ್ಲಿ ತೀರಿಹೋದನು.

1 ರಿಂದ 3 ನೆಯ ವಾಕ್ಯಗಳ ಕ್ರಿಯಾಪದಗಳು ನಿರ್ದೇಶನಾತ್ಮಕವಾಗಿ ಒಂದೇ ಅರ್ಥವನ್ನು ಸೂಚಿಸುತ್ತವೆ (: 'died') ಯಾದರೂ, ಅಲ್ಲಿ ಬರುವ ಮೊದಲನೆಯ

ಎರಡು ಕ್ರಿಯಾಪದಗಳಿಗೆ ಮೂರನೆಯ ಕ್ರಿಯಾಪದದ ಅರ್ಥಕ್ಕಿಂತ ವಿಶೇಷ ಅರ್ಥವ್ಯಾಪ್ತಿ ಇದೆ. ಈ ಅರ್ಥವಿಶೇಷವನ್ನು ನಾವು ಸೂಚ್ಯಾರ್ಥವೆಂದು ಕರೆಯುತ್ತೇವೆ.

ಸಾಯು, ದೈವಾಧೀನನಾಗು, ಕೈಲಾಸನಿವಾಸಿಯಾಗು, ಲಿಂಗೈಕ್ಯನಾಗು, ಕ್ರಿಸ್ತೈಕ್ಯನಾಗು, ವೈಕುಂಠವಾಸಿಯಾಗು, ಮಣ್ಣುತಿನ್ನು-ಎಂಬ ರೂಪಗಳ ವಾಚ್ಯಾರ್ಥ ಒಂದೇ ಆದರೂ ಅದರ ಜೊತೆ ವಿಶೇಷ ಅರ್ಥಗಳೂ ಅವುಗಳಿಗಿವೆ ಎಂಬುದು ನಮಗೆ ತಿಳಿದ ವಿಷಯವೇ. ನಿರ್ದೇಶಕಾರ್ಥಗಳಿಗಿಂತ ಈ ಸೂಚ್ಯಾರ್ಥಗಳು ಕಾಲ, ಪ್ರದೇಶ ಹಾಗೂ ಸಾಮಾಜಿಕ ಗುಂಪುಗಳನ್ನು ಅವಲಂಬಿಸಿ ಬದಲಾಗುತ್ತವೆ ಯಾದುದರಿಂದ ನಿಘಂಟಿಮಗಳ ಸೂಚ್ಯಾರ್ಥಗಳ ಬಗೆಗೆ ನಿಘಂಟುಕಾರ ಬಹು ಜಾಗರೂಕತೆಯಿಂದ ಇರಬೇಕಾಗುತ್ತದೆ.

ಅರ್ಥವ್ಯಾಪ್ತಿ :

ನಿಘಂಟಿಮಗಳ ಬಳಕೆಯನ್ನು ಅವಲಂಬಿಸಿ ಅದರ ಅರ್ಥವ್ಯಾಪ್ತಿ (Semantic range) ಇರುತ್ತದೆ. ಉದಾಹರಣೆಗೆ ಕನ್ನಡದಲ್ಲಿ ದಕ್ಷಿಣೆ, ಸಂಬಳ ಹಾಗೂ ಮಜೂರಿ—ಇವುಗಳೆಲ್ಲ ಮಾಡಿದ ಕೆಲಸಕ್ಕೆ ಕೊಡುವ ಹಣವೇ ಸರಿ. ಆದರೆ ಅವುಗಳ ಬಳಕೆ ಏಕಸ್ವರೂಪದ್ದಲ್ಲ. ದಕ್ಷಿಣೆ ಗುರುವಿಗೆ ಅಥವಾ ಪೂಜಾರಿಗೆ ಕೊಡುವ ಹಣವಾದರೆ, ಸಂಬಳವನ್ನು ನೌಕರರಿಗೆ ಕೊಡುತ್ತಾರೆ. ಆದರೆ ಮಜೂರಿಯನ್ನು ಕೊಡುವುದು ದೈನಂದಿನ ಕೂಲಿಕಾರರಿಗೆ ಮಾತ್ರ.

ಕೆಲವೊಂದು ನಿಘಂಟಿಮಗಳ ಬಳಕೆ ಅತ್ಯಂತ ನಿರ್ದಿಷ್ಟವಾಗಿರುತ್ತದೆ. ಹೀಗೆ 'ಕಾಣಿಕೆ' ಹಾಗೂ 'ಪ್ರಸಾದ' ಇವುಗಳ ನಿರ್ದೇಶಕಾರ್ಥ ಒಂದೇ : 'gift'. ಆದರೂ 'ಪ್ರಸಾದ'ವೆಂಬ ರೂಪ ದೇವರ ಸಂದರ್ಭದಲ್ಲಿ ಮಾತ್ರ ಬಳಸುತ್ತಾರೆ, 'ಕಾಣಿಕೆ' ಯನ್ನು ಮಾನವ ಸಂದರ್ಭದಲ್ಲಿ ಬಳಸುತ್ತಾರೆ. ಇದೇ ರೀತಿಯಲ್ಲಿ ಇಂಗ್ಲೀಷಿನಲ್ಲಿ house ಮತ್ತು home ಇವುಗಳನ್ನು ನಿರ್ದಿಷ್ಟವಾಗಿ ಬಳಸುತ್ತಾರೆ. House ವಾಸ ಮಾಡುವ ಸ್ಥಳವಾದರೆ, home ತಮಗೆ ಬೇಕಾದವರು (ತಾಯ್ತಂದೆ, ಅಕ್ಕ-ತಂಗಿ, ಗಂಡ-ಹೆಂಡತಿ...) ಇರುವ ಸ್ಥಳ. ನಿಘಂಟುಕಾರ ನಿಘಂಟಿಮಗಳ ನಿರ್ದೇಶಕಾರ್ಥ, ಸೂಚ್ಯಾರ್ಥಗಳೊಂದಿಗೆ ಅವುಗಳ ಅರ್ಥವ್ಯಾಪ್ತಿಯನ್ನು ಸೂಚಿಸಬೇಕಾಗುತ್ತದೆ.

ಸಾಹಿತ್ಯದಲ್ಲಿ ನಿಘಂಟಿಮಗಳಿಗೆ ನಿರ್ದೇಶಕಾರ್ಥದ ಬದಲು ಕಾವ್ಯಾರ್ಥ ಶೈಲಿಯಾತ್ಮಕ ಅರ್ಥ (Stylistic meaning) ಪ್ರಾಪ್ತವಾಗುವುದುಂಟು. ಅವನ್ನು ಅಲಂಕಾರ (Figure of speech) ಎನ್ನುತ್ತಾರೆ.

1. ನನ್ನ ಹೆಂಡತಿ ಸೆಲೀನ್ ದೇವತೆ (Angel) ಯಾಗಿದ್ದಾಳೆ (:ನಿಷ್ಕಳಂಕೆ ಹಾಗೂ ರೂಪವತಿ).

2. ಅಬ್ಬಾ! ನನ್ನ ಅತ್ತೆ ರಾಕ್ಷಸಿಯೇ ಸರಿ (ಕ್ರೂರ ಸ್ವಭಾವದವಳು).
3. ಅವನು ಕತ್ತೆ (ಬುದ್ಧಿ ಇಲ್ಲದವನು).
4. ಜೀವನವೆಂಬುದು ಕನಸು (ನಿತ್ಯವಲ್ಲ).

ಈ ಮೇಲಿನ ವಾಕ್ಯಗಳಲ್ಲಿ ಬರುವ 'ದೇವತೆ' 'ರಾಕ್ಷಸಿ' 'ಕತ್ತೆ', 'ಕನಸು' ಎಂಬ ರೂಪಗಳು ಅಲಂಕಾರಿಕ ಅರ್ಥದಲ್ಲಿ ಬಳಕೆಯಾಗಿವೆ.

ಅರ್ಥ–ಮಗ್ಗಲು

ನಿಘಂಟಿಮುಗಳ ಅರ್ಥವೈವಿಧ್ಯತೆಯು ಜೊತೆಗೆ ಅವುಗಳ ಅರ್ಥಕ್ಕೆ ಸಂಬಂಧಿಸಿದ ಅನೇಕ ಮಗ್ಗಲುಗಳ (Dimensions), ಉದಾಹರಣಾರ್ಥವಾಗಿ, ಅನೇಕಾರ್ಥತೆ (Polysemy),ಸಮರೂಪತೆ (Homonymy), ಸಮಾನಾರ್ಥತೆ (Synonymy)- ಮೊದಲಾದವುಗಳ ಪರಿಚಯವೂ ನಿಘಂಟುಕಾರನಿಗಿರಬೇಕು.

ಧ್ವನಿಮಾತ್ರಕವಾಗಿ ಏಕರೂಪವುಳ್ಳ ಕೆಲವು ನಿಘಂಟಿಮುಗಳಿಗೆ ಅನೇಕ ಅರ್ಥಗಳಿದ್ದು ಅವುಗಳಿಗೆ ಪರಸ್ಪರ ಸಂಬಂಧವಿದ್ದರೆ ಅದನ್ನು ಅನೇಕಾರ್ಥತೆಯೆನ್ನುವರು. ಅವು ಒಂದೇ ನಿಘಂಟಿಮುವೆಂದು ಪರಿಗಣಿಸಲಾಗುತ್ತವೆ.

1) ಕೊಂಬು : (ಅ) 'ಪ್ರಾಣಿಗಳ ಕೋಡು' (ಆ) 'ಒಂದು ಊದುವ ವಾದ್ಯ ವಿಶೇಷ,
2) ಹಾರು : (ಅ) 'ನೆಗೆ' (ಆ) 'ವಾಯುಮಂಡಲದಲ್ಲಿ ಹಾರಾಡು'
3) ಕೂಗು : (ಅ) 'ಧ್ವನಿ ಮಾಡು' (ಆ) 'ಕರೆ' (ಇ) 'ಅಳು'

ಹೀಗೆ, ಒಂದು ನಿಘಂಟಿಮುಕ್ಕೆ ಅನೇಕಾರ್ಥಗಳಿದ್ದಾಗ ಅವುಗಳಲ್ಲಿ ಒಂದು ಪ್ರಧಾನವಾಗಿರುತ್ತದೆ, ಉಳಿದವು ಅಪ್ರಧಾನವಾಗಿರುತ್ತವೆ. ನಿಘಂಟುಕಾರನು ಈ ವ್ಯತ್ಯಾಸಗಳನ್ನು ಗೊತ್ತುಮಾಡಿಕೊಳ್ಳುವುದು ಅತ್ಯಗತ್ಯ; ಆದರೆ, ಈ ಕೆಲಸ ಅಷ್ಟು ಸುಲಭವಲ್ಲ. ನಿರೂಪಕ (Informant)ರೊಡನೆ ಚರ್ಚಿಸಿ, ತನ್ನ ಮಾಹಿತಿಯನ್ನು ಬಳಸಿಕೊಂಡು ಪ್ರಧಾನಅರ್ಥವನ್ನು ನಿರ್ಣಯಿಸಬೇಕಾಗುತ್ತದೆ. ಸಂದಿಗ್ಧತೆಗಳು ಉದ್ಭವಿಸಿದಾಗ ಭಾಷಾಸಂದರ್ಭಗಳನ್ನು ಪರಿಶೀಲಿಸಬೇಕಾಗುತ್ತದೆ :

ಉದಾಹರಣೆಗೆ :

'ಹಕ್ಕಿ ಹಾರಿತು' ಎಂಬ ವಾಕ್ಯದಲ್ಲಿ 'ಹಾರು' ಎಂಬುದರ ಅರ್ಥ 'ವಾಯುಮಂಡಲದಲ್ಲಿ ಹಾರಾಡು' ಎಂಬುದಾಗಿ ಸ್ಪಷ್ಟವಾಗುತ್ತದೆ.

'ಗೋಪಾಲ ಕೊಂಬು ಊದಿದನು' ಎನ್ನುವಲ್ಲಿ 'ಕೊಂಬು' ಎಂದರೆ 'ಒಂದು ಊದುವ ವಾದ್ಯ ವಿಶೇಷ' ಎಂಬುದು ಸ್ಪಷ್ಟವಾಗುತ್ತದೆ.

ಧ್ವನಿಮಾತ್ರಕವಾಗಿ ಏಕರೂಪವುಳ್ಳ ನಿಘಂಟಿಮಕ್ಕೆ ಯಾವುದೇ ಸಂಬಂಧವಿಲ್ಲದ ಅನೇಕಾರ್ಥಗಳಿದ್ದರೆ ಅದಕ್ಕೆ ಸಮರೂಪತೆ (Homonyms) ಎನ್ನುತ್ತಾರೆ. ಭಿನ್ನಾರ್ಥಕ ಸಮಾನರೂಪಗಳು ಭಿನ್ನಭಿನ್ನ ನಿಘಂಟಿಮಗಳೆಂದು ಪರಿಗಣಿಸಲಾಗುತ್ತವೆ.

1. ಕನ್ನಡ : 1. ಕಲೆ : 'ಲಲಿತ ವಿದ್ಯೆ' 1. ಸರಿ 'ಚಲಿಸು'
2. ಕಲೆ : 'ಗುರುತು' 2. ಸರಿ 'ಯೋಗ್ಯವಾದುದು'

1. ಹರಿ : 'ಪ್ರವಹಿಸು'
2. ಹರಿ : 'ಕೀಳು'

2. ಇಂಗ್ಲೀಷ : 1. Calf 'ಕರು'
2. Calf 'ಕಣಕಾಲಿನ ಹಿಂಭಾಗ'

3. ಚೀನಿ : 1. /Shu⁴-mu⁴/'number' (ಸಂಖ್ಯೆ)
2. /Shu⁴-mu⁴/'trees' (ಮರಗಳು)

ಅನೇಕಾರ್ಥಕ ರೂಪ(Polysymous form) ಗಳನ್ನು ಅವುಗಳ ಅರ್ಥಗಳೊಂದಿಗೆ ಅಡ್ಡಸಾಲಿನಲ್ಲಿ (Horizontally) ಒಂದರ ನಂತರ ಇನ್ನೊಂದಾಗಿ ನಮೂದಿಸಿದರೆ (:ಕೊಂಬು: (ಅ) 'ಪ್ರಾಣಿಗಳ ಕೋಡು' (ಆ) 'ಒಂದು ಊದುವ ವಾದ್ಯವಿಶೇಷ') ಸಮರೂಪ (Homonymous form) ಗಳನ್ನು ಲಂಬಿಕವಾಗಿ (Vertically) ಒಂದರ ಕೆಳಗೆ ಇನ್ನೊಂದಾಗಿ ಅವುಗಳ ಅರ್ಥಗಳೊಂದಿಗೆ ನಮೂದಿಸುತ್ತಾರೆ.

1. ಹರಿ : 'ಪ್ರವಹಿಸು'
2. ಹರಿ : 'ಕೀಳು'

ಧ್ವನಿಮಾತ್ರಕವಾಗಿ ಭಿನ್ನರೂಪಗಳುಳ್ಳ ನಿಘಂಟಿಮಗಳಿಗೆ ಏಕಾರ್ಥವಿದ್ದರೆ ಅವುಗಳನ್ನು ಸಮಾನಾರ್ಥಕ (Synonyms)ಗಳೆನ್ನುತ್ತಾರೆ. ಇವುಗಳಲ್ಲಿ ಪೂರ್ಣ (Absolute) ಮತ್ತು ಅಪೂರ್ಣ (Partial) ಎಂದು ಎರಡು ತೆರ.

ಪೂರ್ಣ ಸಮಾನಾರ್ಥಕಗಳು :

1. ಅಪ್ಪ, ತಂದೆ
2. ಹೊಯ್ಗೆ, ಉಸುಕು, ಮರಳು
3. ಹಣ, ದುಡ್ಡು, ರೊಕ್ಕ
4. ಹೆಣ, ಶವ

ಅಪೂರ್ಣ ಸಮಾನಾರ್ಥಕಗಳು :

1. ಹೊಲ, ಗದ್ದೆ
2. ಸಸಿ, ಗಿಡ
3. ಆಳು, ಸೇವಕ
4. ಯಜಮಾನ, ಒಡೆಯ

ಅಪೂರ್ಣ ಸಮಾನಾರ್ಥಕಗಳು ನಿಘಂಟಿನಗಳ ಅರ್ಥನಿಖರತೆಗೆ ಅನುಕೂಲ ಮಾಡಿ ಕೊಡುತ್ತವೆ.

ವ್ಯಾಕರಣಾರ್ಥ :

ನಿಘಂಟಿನಗಳಿಗೆ ನಿರ್ದೇಶಕಾರ್ಥ, ಸೂಚ್ಯಾರ್ಥ ಇತ್ಯಾದಿಗಳಂತೆ ವ್ಯಾಕರಣಾರ್ಥವೂ ಇರುತ್ತದೆ. ವಾಕ್ಯದಲ್ಲಿ ನಿಘಂಟಿನಂದ ಕ್ರಿಯೆಯೇ ಅದರ ವ್ಯಾಕರಣಾರ್ಥ. ನಿಘಂಟುಕಾರ ವ್ಯಾಕರಣಾರ್ಥವನ್ನೂ ತಿಳಿದುಕೊಳ್ಳಬೇಕು; ಅಂತೆಯೇ, ತನ್ನ ನಿಘಂಟುವಿನಲ್ಲಿ ಅದನ್ನು ನಮೂದಿಸಬೇಕು.

ವ್ಯಾಕರಣಾರ್ಥಕ್ಕೆ ಉದಾಹರಣೆ :

1. ಹಸು : ನಾಮಪದ, ಏಕವಚನ, ನಪುಂಸಕ
2. ಒಳ್ಳೆಯ : ನಾಮಗುಣವಾಚಕ
3. ಅವನು : ಸರ್ವನಾಮ, ಏಕವಚನ, ಪುಲ್ಲಿಂಗ
4. ಬರೆ : ಕ್ರಿಯಾಪದ (ಸಕರ್ಮಕ); ಭೂತಕಾಲ ಪ್ರತ್ಯಯ-ದ್
5. ಬೇಗನೆ : ಕ್ರಿಯಾವಿಶೇಷಣ
6. ತನಕ : ಉಪಸರ್ಗ
7. ಮತ್ತು : ಸಂಯೋಜಕ (Connector)
8. ಅಯ್ಯೋ : ಉದ್ಗಾರವಾಚಕ

ಈ ರೀತಿ ನಿಘಂಟಿನಗಳ ಅರ್ಥವೈವಿಧ್ಯತೆಯನ್ನು ವಿವರಿಸುವ ವಿಜ್ಞಾನಕ್ಕೆ ಅರ್ಥವಿವರಣಾ ವಿಜ್ಞಾನ (Semantics) ಎಂದು ಕರೆಯುತ್ತಾರೆ. ನಿಘಂಟುಕಾರನು ಪ್ರತಿಯೊಂದು ನಿಘಂಟಿನದ ನಿರ್ದೇಶಕಾರ್ಥ, ಸೂಚ್ಯಾರ್ಥ, ಅರ್ಥವ್ಯಾಪ್ತಿ, ಅರ್ಥಮಗ್ಗಲು (Dimension), ಹಾಗೂ ಅದರ ವ್ಯಾಕರಣಾರ್ಥವನ್ನೂ ಗಮನಿಸಿ ತನ್ನ ನಿಘಂಟುವಿನಲ್ಲಿ ಅವುಗಳನ್ನು ಯೋಗ್ಯ ರೀತಿಯಲ್ಲಿ, ಶ್ರೇಣಿಬದ್ಧವಾಗಿ (Hierarchically), ನಮೂದಿಸಬೇಕು.

1.2 ನಿಘಂಟಿಮ ಮತ್ತು ವೈವಿಧ್ಯತೆ

ನಿಘಂಟಿಮಂಗಳನ್ನು ವಾಕ್ಯವಿನ್ಯಾಸ ಕ್ರಮಾತ್ಮಕವಾಗಿ (Syntagmatically) ಮತ್ತು ರೂಪಾವಳಿಯಾತ್ಮಕವಾಗಿ (Paradigmatically) ಬಳಸುವಾಗ ಅವುಗಳ ರೂಪಗಳಲ್ಲಿ ವೈವಿಧ್ಯತೆಯುಂಟಾಗುತ್ತದೆ :

1. ನಾನು ಓಡುತ್ತೇನೆ. (<ಓಡ್ + –ಉತ್ತ್ + –ಏನೆ)
2. ಉಷಾ ಓಡುತ್ತಾಳೆ. (<ಓಡ್ + –ಉತ್ತ್ + –ಆಳೆ)
3. ಶೈನಿ ಓಡಿದಳು. (<ಓಡ್ + –ಇದ್ + –ಅಳು)

ಮೇಲಿನ ವಾಕ್ಯಗಳಲ್ಲಿ 'ಓಡು' ಎಂಬುದು ಮೂಲ ನಿಘಂಟಿಮ;ಓಡುತ್ತೇನೆ, ಓಡುತ್ತಾಳೆ, ಓಡಿದಳು ಎಂಬಿವು ಅದರ ವಿವಿಧ ರೂಪಗಳು.

ರೂಪಾವಳಿ

ನಿಘಂಟಿಮದ ವಿವಿಧ ರೂಪಗಳನ್ನು ಲಂಬಿಕವಾಗಿ (Vertically) ಅರ್ಥಾತ್ ಒಂದರ ಕೆಳಗೆ ಇನ್ನೊಂದಾಗಿ ಸಮೂದಿಸಬಹುದು. ಆಗ ಉಂಟಾಗುವ ಶ್ರೇಣಿ (Series)ಯನ್ನು ರೂಪಾವಳಿ (Paradigm) ಎನ್ನುತ್ತಾರೆ :

'ಓಡು'

ಏಕವಚನ	ಬಹುವಚನ
ಓಡುತ್ತೇನೆ	ಓಡುತ್ತೇವೆ
ಓಡುತ್ತೀ	ಓಡುತ್ತೀರಿ
ಓಡುತ್ತಾಳೆ/ನೆ	ಓಡುತ್ತಾರೆ
ಓಡುತ್ತದೆ	ಓಡುತ್ತವೆ

ರೂಪಾವಳಿಯಲ್ಲಿಯ ಮೂಲ ರೂಪವನ್ನು(Basic form) ನಿಯಮ ಸಿದ್ಧ ರೂಪ (Canonical form)ವೆನ್ನುತ್ತಾರೆ. ಮೇಲಿನ ರೂಪಾವಳಿಯಲ್ಲಿ ಓಡು ಎಂಬುದು ನಿಯಮಸಿದ್ಧ ರೂಪವಾಗಿದೆ.

ನಿಘಂಟಿಮಗಳಿಗೆ ನಿಯಮಸಿದ್ಧ ರೂಪವಲ್ಲದೆ ಅನಿಯಮಿತ (Irregular) ರೂಪಗಳೂ ಇರುತ್ತವೆ. ಉದಾಹರಣಾರ್ಥವಾಗಿ, ಇಂಗ್ಲೀಷಿನಲ್ಲಿ go ಎಂಬುದು ಭೂತಕಾಲದಲ್ಲಿ went ಎಂಬ ರೂಪವನ್ನು ತಾಳಿದರೆ, child ಎಂಬುದು ಬಹು ವಚನದಲ್ಲಿ children ಎಂದಾಗುತ್ತದೆ. ನಿಘಂಟಿಮದ ಇಂತಹ ಅನಿಯಮಿತ ರೂಪ ಗಳನ್ನೂ ನಿಘಂಟುವಿನಲ್ಲಿ ಸೂಚಿಸಬೇಕು. ರೂಪಾವಳಿಯ ಎಲ್ಲ ಅನಿಯಮಿತ ರೂಪ ಗಳನ್ನೂ ನಿಘಂಟುವಿನಲ್ಲಿ ಗುರುತಿಸಬೇಕು. ನಿಘಂಟಿಮಗಳ ಅನಿಯಮಿತ ರೂಪಾವಳಿ ಗಳನ್ನು ನಿಘಂಟುವಿನ ಆರಂಭದಲ್ಲಿಯೇ ಕೊಟ್ಟುಬಿಟ್ಟರೆ ಬಹಳ ಉತ್ತಮ. ಒಂದು

ಭಾಷೆಯಲ್ಲಿ ಬರುವ ನಿಘಂಟಿಮುಗಳ ವಾಕ್ಯವಿನ್ಯಾಸ ಕ್ರಮಾತ್ಮಕ, ಹಾಗೂ ರೂಪಾವಳಿಯಾತ್ಮಕ ಸಂಬಂಧಗಳ ಪರಿಚಯುವಾಗಬೇಕಾದರೆ ನಿಘಂಟು ರಚನೆಯ ಪೂರ್ವದಲ್ಲಿ ಆ ಭಾಷೆಯ ಭಾಷಾವೈಜ್ಞಾನಿಕ ವಿಶ್ಲೇಷಣೆ ನಡೆಯಬೇಕಾದದ್ದು ಅನಿವಾರ್ಯ.

ಸಾಧಿತ

ನಿಘಂಟಿಮು ರೂಪದ ವೈವಿಧ್ಯತೆಯಿಂದಾಗಿ ಅದರ ವ್ಯಾಕರಣಾತ್ಮಕ ಅರ್ಥ/ವ್ಯಾಕರಣ ವರ್ಗ ಬದಲಿತಗೊಳ್ಳದಿದ್ದರೆ ಆ ಬದಲಾವಣೆಯನ್ನು ವಿಭಕ್ತಿ (Inflection) ಎಂದು ಕರೆಯುತ್ತಾರೆ. ಉದಾ:-(1) ಪುಸ್ತಕ, ಪುಸ್ತಕವನ್ನು, ಪುಸ್ತಕದಿಂದ, ಪುಸ್ತಕಕ್ಕೆ, ಪುಸ್ತಕದ, ಪುಸ್ತಕದಲ್ಲಿ. (2) ತಿನ್ನು, ತಿನ್ನುತ್ತೇನೆ, ತಿನ್ನುತ್ತಿ, ತಿನ್ನುತ್ತಾನೆ, ತಿನ್ನುತ್ತಾಳೆ, ತಿನ್ನುತ್ತದೆ.

ನಿಘಂಟಿಮು ರೂಪದ ವೈವಿಧ್ಯತೆಯಿಂದಾಗಿ ಅದರ ಅರ್ಥ ಬದಲಾದರೆ ಆ ಬದಲಾವಣೆಯನ್ನು ಸಾಧಿತ (Derivation) ಎಂದು ಕರೆಯುತ್ತಾರೆ. ಉದಾ : ತೋಟ : ತೋಟಗಾರ; ಹಾವು : : ಹಾವಾಡಿಗ; ಭಾರತ : : ಭಾರತೀಯ; ಉಪಾಧ್ಯಾಯ : : ಉಪಾಧ್ಯಾಯಿನಿ.

ನಿಘಂಟುವಿನ ಆರಂಭದಲ್ಲಿ ಆ ಭಾಷೆಯ ಸಂಕ್ಷಿಪ್ತ ವ್ಯಾಕರಣ ಕೊಟ್ಟರೆ ಅಲ್ಲಿಯೇ ನಿಯಮಬದ್ಧ ಹಾಗೂ ಸಂಬಂಧವುಳ್ಳ ಸಾಧಿತಗಳ ನಿಷ್ಪತ್ತಿಯನ್ನು ತೋರಿಸಿ, ನಿಘಂಟಿಮುದ ಕೆಳಗೆ ಅನಿಯಮಿತ ಹಾಗೂ ಅರ್ಥದಲ್ಲಿ ಬದಲಾವಣೆಯುಳ್ಳ ಸಾಧಿತಗಳನ್ನು ತೋರಿಸುವುದು ಹಿತಕರ. ಉದಾ:- ಇಂಗ್ಲಿಷಿನ bad 'ಕೆಟ್ಟ' > badly 'ಅತ್ಯಗತ್ಯ'-ಇಂತಹ ಸಾಧಿತಗಳನ್ನು bad ಎಂಬ ನಿಘಂಟಿಮುದ ಕೆಳಗೆ ಪ್ರತ್ಯೇಕ ನಿಘಂಟಿಮುವೆಂದು ಪರಿಗಣಿಸಿ ಕೊಡಬೇಕು.

ಎರಡು ಅಥವಾ ಹೆಚ್ಚು ನಿಘಂಟಿಮುಗಳು ಸೇರಿಕೊಂಡು ಒಂದು ಸಮಸ್ತ ನಿಘಂಟಿಮು ರೂಪಿತಗೊಂಡರೆ ಅದನ್ನು ನಾವು ಸಮಾಸ (Compound) ಎಂದು ಕನ್ನಡದ ಮಟ್ಟಿಗೆ ಕರೆಯುತ್ತೇವೆ. 'ಬೆಳ್ಗೊಡೆ'ಎಂಬ ಸಮಾಸದಲ್ಲಿ 'ಬಿಳಿದು' ಮತ್ತು 'ಕೊಡೆ' ಎಂಬಿವು ಎರಡು ನಿಘಂಟಿಮುಗಳಿವೆ. 'ಗಿಡಮರಬಳ್ಳಿ' ಎಂಬುದರಲ್ಲಿ 'ಗಿಡ' 'ಮರ' 'ಬಳ್ಳಿ' ಎಂಬ ಮೂರು ನಿಘಂಟಿಮುಗಳಿವೆ. ಭಿನ್ನ ಭಿನ್ನ ನಿಘಂಟಿಮುಗಳು ಸೇರಿ ಒಂದು ಸಮಸ್ತರೂಪವಾಗದಿದ್ದರೆ ಆಗ ಅದನ್ನು ಸಮಾಸವೆಂದು ಕರೆಯಲಾಗುವುದಿಲ್ಲ. ಹೀಗೆ 'ಆ ಮನೆ', 'ತೂಗುವ ತೊಟ್ಟಿಲು' ಸಮಾಸಗಳಲ್ಲ; ಅವು ಕೇವಲ ಪದಪುಂಜ (Phrase)ಗಳು.

ಸಮಾಸಗಳು ನಿಷ್ಪನ್ನಗೊಂಡಾಗ ಅವುಗಳ ಘಟಕಗಳಲ್ಲಿ ಧ್ವನಿಮಾತ್ಮಕ ಬದಲಾವಣೆಗಳು ಉಂಟಾಗುತ್ತವೆ :

1) ಮುಂದು + ಕೈ > ಮುಂಗೈ : (ದ್ > ಗ್ ; ನ್ > ϕ) ಉ > ಉಂ ;
2) ಮೂರ್ + ಕಣ್ + ಅ > ಮುಕ್ಕಣ್ಣ : (ರ್ > ಕ್ ; ϕ > ಣ್)
3) ಗಿಡ + ಮರ + ಬಳ್ಳಿ > ಗಿಡಮರಬಳ್ಳಿ : (+ > ϕ)

ಸಮಾಸಗಳಲ್ಲಿ ವಿರಾಮ ಕಳೆದುಕೊಳ್ಳುವುದು ದ್ರಾವಿಡ ಭಾಷೆಗಳ, ಆದುದರಿಂದ ಕನ್ನಡದ ಪ್ರಮುಖ ಲಕ್ಷಣ.

ಕೆಲವು ಸಲ ಸಮಾಸ ತನ್ನ ಘಟಕಗಳ ಅರ್ಥಗಳಿಗಿಂತ ಭಿನ್ನವಾದ ಅರ್ಥವನ್ನು ಸೂಚಿಸುವುದುಂಟು. ಹೀಗೆ 'ಕರಿಗೊರಲ' ಎಂದರೆ ಕಪ್ಪು ಕೊರಳುಳ್ಳ ಯಾವುದೇ ವ್ಯಕ್ತಿಯಲ್ಲ ; ಕೇವಲ 'ಶಿವ'ನೆಂದರ್ಥ. Black-bird ಎಂದರೆ ಯಾವುದೇ ಕಪ್ಪು ಹಕ್ಕಿಯಲ್ಲ ; ಒಂದು ವಿಶಿಷ್ಟ ಜಾತಿಯ ಹಕ್ಕಿ ಮಾತ್ರ

ಒಂದು ಸಮಾಜದಲ್ಲಿ ಹೊಸ ಹೊಸ ಸಮಾಸಗಳು ಸೃಷ್ಟಿಗೊಳ್ಳಬಲ್ಲವು (:ಚೆಂಬೆಳಕು, ಕ್ರಿಸ್ತಾಂಜಲಿ...) ವಸ್ತುಸ್ಥಿತಿ ಹೀಗಿರುವಾಗ ನಿಘಂಟುಕಾರನಿಗೆ ಭಾಷಾಜ್ಞಾನ ಚೆನ್ನಾಗಿರಬೇಕಾಗುತ್ತದೆ.

1.3 ನಿಘಂಟಿಮ ಮತ್ತು ಅವುಗಳ ಸಂಯೋಜನೆ

ವಾಕ್ಯದಲ್ಲಿ ನಿಘಂಟಿಮಗಳು ಸಂಯೋಜಿತಗೊಳ್ಳುತ್ತವೆ. ನಿಘಂಟಿಮಗಳ ವಿನ್ಯಾಸವೇ ವಾಕ್ಯ. ಇಂತಹ ವಿನ್ಯಾಸದಲ್ಲಿ ವ್ಯಾಕರಣ ಸಂಬಂಧಗಳಿಗೆ ಪ್ರಧಾನ ಸ್ಥಾನವಿದೆ. ಕನ್ನಡದಲ್ಲಿ ಸಕರ್ಮಕ ಕ್ರಿಯಾಪದಗಳು ದ್ವಿತೀಯಾ ವಿಭಕ್ತಿ ಪ್ರತ್ಯಯವುಳ್ಳ ನಾಮಪದವನ್ನು ಆಖ್ಯಾತದಲ್ಲಿ ಪಡೆದುಕೊಳ್ಳುತ್ತವೆ : 'ರಾಮ ಸೀತೆಯನ್ನು ಪ್ರೀತಿಸಿದನು'. ಕೆಲವೊಂದು ಕ್ರಿಯಾಪದಗಳು ಚತುರ್ಥಿ ವಿಭಕ್ತಿಯುಳ್ಳ ನಾಮಪದವನ್ನು ಆಖ್ಯಾತದಲ್ಲಿ ಪಡೆದುಕೊಳ್ಳುತ್ತವೆ : ರಾಮು ಕಾಡಿಗೆ ಹೋದನು. ಹೀಗೆ ಕ್ರಿಯಾಪದಗಳ ಕಾರಕ ಸಂಬಂಧವನ್ನೂ ನಿಘಂಟುವಿನಲ್ಲಿ ಸೂಚಿಸುವುದು ಬಹು ಉಪಯುಕ್ತ.

ನಿಘಂಟುವಿನಲ್ಲಿ ವಿಭಿನ್ನ ನಿಘಂಟಿಮಗಳ ವ್ಯಾಕರಣ ಸಂಬಂಧಗಳ ವಿವರಗಳನ್ನು ಕೊಟ್ಟರೆ ಅನ್ಯಭಾಷಿಗನಿಗೆ ಭಾಷಾಕಲಿಕೆಯಲ್ಲಿ ನಿಘಂಟು ಬಹಳ ಉಪಯುಕ್ತ ಸಾಧನವಾಗುತ್ತದೆ.

ಕೆಲವೊಂದು ನಿಘಂಟಿಮಗಳು ಬೇರೆ ನಿಘಂಟಿಮಗಳೊಂದಿಗೆ ಸಂದರ್ಭದಲ್ಲಿ ಕೂಡಿಕೊಳ್ಳುತ್ತವೆ. ಉದಾ :– ಹಸಿ ಕಟ್ಟಿಗೆ, ಹಸಿ ನೆಲ, ಹಸಿ ಬಟ್ಟೆ, ಹಸಿ ಗದ್ದೆ. ಅದೇ ರೀತಿಯಲ್ಲಿ 'ಹಸಿ' ಎಂಬ ವಿಶೇಷಣ 'ಸುಳ್ಳು' ಎಂಬ ನಾಮಪದದ ಪೂರ್ವದಲ್ಲಿಯೂ ಬಳಸಬಹುದು. ಆದರೆ ಆಗ ಅರ್ಥ ಮಾತ್ರ ಭಿನ್ನವಾಗುತ್ತದೆ. ಇದೇ ರೀತಿಯಲ್ಲಿ ಇಂಗ್ಲೀಷಿನ wet dreams ಗೆ 'ಹಸಿ ಕನಸು' ಎಂದು ಹೇಳ

ಬಹುದೆ? ಈ ರೀತಿಯ ವಿಚಾರ ಬಗ್ಗೆ ನಿಘಂಟುಕಾರನಲ್ಲಿ ಸದಾ ಜಾಗೃತವಾಗಿರಬೇಕು. ಆಗ ಮಾತ್ರ ಒಂದು ಭಾಷೆಯಲ್ಲಿಯ ನಿಘಂಟಿಮುಗಳ ಸಂಬಂಧ ಹಾಗೂ ಸಂಯೋಜನೆಗಳ ಸಾಧ್ಯತೆಗಳನ್ನು ತಿಳಿದುಕೊಳ್ಳಲು ಅವನಿಗೆ ಸುಲಭವಾಗುತ್ತದೆ

ಭಾಷೆಯಲ್ಲಿ ಹಲವಾರು ಪದಸಮುಚ್ಚಯ (Set combination) ಗಳಿರುತ್ತವೆ.

'ಭತ್ತದ ಹುಲ್ಲು', 'ಜೋಳದ ಕಡ್ಡಿ', 'ಗೋವಿನ ಜೋಳ', 'ಪಟ್ಟೆ ಹುಲಿ', 'ಕಾಡು ಬೆಕ್ಕು'-ಇವು ಸಮಾಸಗಳಲ್ಲ. ಇವು ಒಂದೇ ರೀತಿಯಲ್ಲಿ ಬರುವುದರಿಂದ ಸಾಮಾನ್ಯ ಪದಪುಂಜಗಳೂ ಅಲ್ಲ. ಇಂತಹ ಸಮುಚ್ಚಯಗಳು ನಿಘಂಟಿಮುಗಳ ನಿಗದಿತ ಸಂಯೋಜನೆಯಿಂದಾಗಿ ಉಂಟಾಗುತ್ತವೆ. ಇವುಗಳನ್ನು ನಿಘಂಟುವಿನಲ್ಲಿ ಸೂಚಿಸಬೇಕು.

ನುಡಿಗಟ್ಟುಗಳೂ ಒಂದು ಬಗೆಯ ನಿಘಂಟಿಮುಗಳ ಸಂಯೋಜನೆಯೇ ಸರಿ. ನುಡಿಗಟ್ಟಿನ ಘಟಕಗಳ ಅರ್ಥಗಳಿಗಿಂತ ನುಡಿಗಟ್ಟಿನ ಅರ್ಥ ಭಿನ್ನವಾಗಿರುತ್ತದೆ. ಉದಾ :–

1. ಕಿವಿ ಚುಚ್ಚು 'ಚಾಡಿ ಹೇಳು'
2. ಕಣ್ಣಲ್ಲಿ ಮಣ್ಣೆರಚು 'ಮೋಸ ಮಾಡು'
3. ಮಣ್ಣು ತಿಂದು ಹೋಗು 'ನಾಶವಾಗು'
4. ಕಾಲಿಗೆ ಬುದ್ಧಿ ಹೇಳು 'ಪಲಾಯನ ಮಾಡು'

ಈ ರೀತಿಯ ನುಡಿಗಟ್ಟುಗಳು ಕೂಡ ನಿಘಂಟಿಮುಗಳಾಗಿವೆ. ಇದೇ ರೀತಿಯಲ್ಲಿ ಬೃಹತ್ ನಿಘಂಟುಗಳಲ್ಲಿ ಉದ್ಧರಣ (Quotation) ಗಳನ್ನು, ಸೂಕ್ತಿ (Dictum ಗಳನ್ನು, ಗಾದೆಗಳನ್ನೂ ನಿಘಂಟಿಮುಗಳೆಂದು ಪರಿಗಣಿಸುವುದುಂಟು. ಇವುಗಳೆಲ್ಲವೂ ನಿಘಂಟಿಮುಗಳನ್ನು ಸಂಯೋಜಿಸುವ ವಿವಿಧ ರೀತಿಗಳು. ಈ ರೀತಿಯ ನಿಘಂಟಿಮುಗಳ ಸಂಯೋಜನೆಯನ್ನು ಘಟಕಗಳೆಂದು ಪರಿಗಣಿಸಿ ನಿಘಂಟುವಿನಲ್ಲಿ ಉಲ್ಲೇಖಿಸುತ್ತಾರೆ.

1.4 ಭಾಷಾ ವೈವಿಧ್ಯತೆ ಮತ್ತು ನಿಘಂಟು ವಿಜ್ಞಾನ

ಈ ಮೊದಲೇ ನಾವು ಚರ್ಚಿಸಿದಂತೆ ನಿಘಂಟಿಮುಗಳು ಒಂದು ಭಾಷೆಯ ಘಟಕಗಳಾಗಿದ್ದು ನಿಘಂಟುವಿನಲ್ಲಿ ಸ್ವತಂತ್ರವಾಗಿ ಬರುತ್ತವೆ. ಭಾಷೆ, ಕಾಲ ಪ್ರದೇಶ ಹಾಗೂ ಜನಸಮುದಾಯಗಳನ್ನು ಅವಲಂಬಿಸಿ ಭಿನ್ನಗೊಳ್ಳುತ್ತದೆಯಾದುದರಿಂದ ಅದರ ನಿಘಂಟಿಮುಗಳಲ್ಲಿಯೂ ವೈವಿಧ್ಯತೆಯನ್ನು ಕಾಣುವುದು ಸಹಜವೇ ಸರಿ. ಈ ವಿಷಯವನ್ನು ನಿಘಂಟುಕಾರ ಚೆನ್ನಾಗಿ ತಿಳಿದುಕೊಳ್ಳಬೇಕಾಗುತ್ತದೆ.

ಭಾಷೆಗೆ ಹಲವಾರು ಸ್ತರಗಳಿರುತ್ತವೆ. ಕೆಳಗಿನಿಂದ ಮೇಲೆ ಹೋದಂತೆ ಭಾಷೆ ಹೆಚ್ಚು ಅಮೂರ್ತ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ವ್ಯಕ್ತಿ ಭಾಷೆ (Idiolect) ಭಾಷೆಯ ಅತಿ ಕೆಳಗಿನ ಸ್ತರ. ಒಬ್ಬ ವ್ಯಕ್ತಿ ಆಡುವ ಭಾಷೆಯ ಮೊತ್ತವೇ ವ್ಯಕ್ತಿಭಾಷೆ. ವ್ಯಕ್ತಿಯ ಬೆಳವಣಿಗೆ, ಶಿಕ್ಷಣ ಮೊದಲಾದುವುಗಳನ್ನು ಅವಲಂಬಿಸಿ ವ್ಯಕ್ತಿಭಾಷೆಯೂ ಬದಲಾಗುತ್ತದೆ. ಒಂದು ಕಾಲದ, ಪ್ರದೇಶದ, ಜನಸಮುಂದಾಯದ ಎಲ್ಲ ವ್ಯಕ್ತಿಭಾಷೆಗಳ ಮೊತ್ತವನ್ನು ಉಪಭಾಷೆ (Dialect) ಎಂದು ಕರೆಯುತ್ತಾರೆ. ಎಲ್ಲ ಉಪಭಾಷೆಗಳ ಮೊತ್ತವನ್ನು ಭಾಷೆ ಎಂದು ಪಾರಿಭಾಷಿಕವಾಗಿ ಕರೆಯುತ್ತಾರೆ.

ಒಂದು ಭಾಷೆಗೆ ಸಹಜವಾಗಿ ಅನೇಕ ಉಪಭಾಷೆಗಳಿರುತ್ತವೆ. ಅವುಗಳಲ್ಲಿ ಯಾವುದಕ್ಕೆ ರಾಜಕೀಯ ಮತ್ತು/ಅಥವಾ ಸಾಂಸ್ಕೃತಿಕ ಬೆಂಬಲವಿರುತ್ತದೋ ಅದು ಸಮಾಜದಲ್ಲಿ ಗೌರವ ಸ್ಥಾನವನ್ನು ಪಡೆಯುತ್ತದೆ. ಕಾಲಕ್ರಮೇಣ ಅದು ಅಧಿಕೃತ ಭಾಷೆ (Standard language) ಯಾಗಿ ಮಾನ್ಯತೆಯನ್ನು ಪಡೆಯುತ್ತದೆ.

ಅಧಿಕೃತ ಭಾಷೆಯಲ್ಲಿಯೂ—

1. ಸಾಹಿತ್ಯಕ ಭಾಷೆ (Literary language) ಮತ್ತು
2. ಆಡುಭಾಷೆ (Colloquial language)

—ಎಂದು ಎರಡು ರೀತಿಗಳನ್ನು ನಾವು ಗುರುತಿಸಬಹುದು. ಸಾಹಿತ್ಯಿಕ ಭಾಷೆಯನ್ನು ಸಾಹಿತ್ಯ ರಚನೆಯಲ್ಲಿ ಮಾತ್ರವಲ್ಲದೆ ಅಧಿಕೃತ (official) ಸಂದರ್ಭಗಳಲ್ಲಿಯೂ ಬಳಸಿದರೆ ಆಡುಭಾಷೆಯನ್ನು ಅನಧಿಕೃತ ಸಂದರ್ಭಗಳಲ್ಲಿ ಬಳಸುತ್ತಾರೆ. ಅಧಿಕೃತ ಭಾಷೆಯಲ್ಲಿ ಹಲವಾರು ಸಲ ಪ್ರಾದೇಶಿಕ ಪ್ರಯೋಗಗಳು ಬರುವುದುಂಟು.

ಸಮಾಜದ ಯಾವುದೇ ಒಂದು ವಿಶಿಷ್ಟ ಗುಂಪಿಗೆ ಉಪಭಾಷೆ ಸೀಮಿತವಾದಾಗ ಅದನ್ನು ಗ್ರಾಮ್ಯ (Jargon/slang) ವೆಂದು ಕರೆಯುತ್ತಾರೆ. ನಿಘಂಟುಕಾರನಿಗೆ ಭಾಷೆಯ ಈ ಎಲ್ಲ ವೈವಿಧ್ಯತೆಯನ್ನು ಕುರಿತು ಸರಿಯಾದ ಜ್ಞಾನವಿರಬೇಕಾಗುತ್ತದೆ. ನಿಘಂಟುವಿನಲ್ಲಿ ಯಾವಾಗ ಭಾಷಾ ವೈವಿಧ್ಯಗಳಿಗೆ ಸೇರಿದ ನಿಘಂಟಿಮಗಳಿಗೆ ಯಾವಾವ ಸ್ಥಾನ ಕೊಡಬೇಕೆಂಬುದು ನಿಘಂಟುಕಾರ ನಿರ್ಣಯಿಸಬೇಕಾಗುತ್ತದೆ. ಸಾಹಿತ್ಯಿಕ ಭಾಷೆಯಲ್ಲಿ ಕೆಲವೊಂದು ಪ್ರಾಚೀನ ರೂಪಗಳು (Archaic forms) ಇರುತ್ತವೆ; ಅಂತೆಯೇ ಆಡುಭಾಷೆಯಲ್ಲಿ ಪ್ರದೇಶ ಸೀಮಿತವಾದ (Regional) ರೂಪಗಳಿರುತ್ತವೆಂಬುದನ್ನು ಗಮನಿಸಬೇಕು.

ಉಪಭಾಷೆಗಳು ಕೇವಲ ಪ್ರಾದೇಶಿಕವಾಗಿ ಅಥವಾ ಜಾತಿಯನ್ನು ಅವಲಂಬಿಸಿ ಭಿನ್ನವಾಗುತ್ತವೆ ಮಾತ್ರವಲ್ಲದೆ ಕಾಲವನ್ನು ಆಧರಿಸಿಕೊಂಡೂ ಭಿನ್ನತೆಯನ್ನು

ಪಡೆದುಕೊಳ್ಳುತ್ತವೆ. ಹೀಗೆ ಕನ್ನಡದಲ್ಲಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡವೆಂಬ ಮೂರು ಪ್ರಸಿದ್ಧ ಪ್ರಭೇದಗಳಿವೆ. ಇವು ರೂಪ ಹಾಗೂ ಅರ್ಥ ದೃಷ್ಟಿಯಿಂದಲೂ ಭಿನ್ನವಾಗಿವೆ.

ನಿಘಂಟಿಮಗಳ ರೌಪಿಕ ಹಾಗೂ ಅರ್ಥ ಬದಲಾವಣೆಗಳನ್ನು ನಿಘಂಟುವಿನಲ್ಲಿ ಸೂಚಿಸಬೇಕು. ಬಹುಕಾಲಿಕ ನಿಘಂಟು (Diachronic dictionary)ವಿನಲ್ಲಿ ಅವುಗಳನ್ನು ಹೆಚ್ಚು ವಿವರವಾಗಿ ತಿಳಿಸಬೇಕು. ಏಕಕಾಲಿಕ ನಿಘಂಟು (Synchronic lexicon) ವಿನಲ್ಲಿ ಅರ್ಥಬದಲಾವಣೆಗಳಿಲ್ಲವನ್ನೂ ಸೂಚಿಸಬೇಕು; ಅಲ್ಲದೆ, ಪ್ರಾಚೀನ ಮತ್ತು ಅಪ್ರಚಲಿತ (Obsolete) ರೂಪಗಳನ್ನು ಹಾಗೂ ನವ್ಯರೂಪ (Neologism)ಗಳನ್ನು ನಿಘಂಟುವಿನಲ್ಲಿ ತಕ್ಕುದಾದ ರೀತಿಯಲ್ಲಿ ನಮೂದಿಸಬೇಕು.

ಸಣ್ಣ ನಿಘಂಟುವಿನಲ್ಲಿ ಅಧಿಕೃತ ಭಾಷೆಗೆ ಪ್ರಧಾನ ಸ್ಥಾನ ಕೊಡಬೇಕಾಗುತ್ತದೆ. ಅಲ್ಲಿ ಪ್ರಾದೇಶಿಕ ಉಪಭಾಷೆಗಳಿಗೆ ಸ್ಥಾನ ಸಿಗದೆ ಹೋಗಬಹುದು. ಆದರೆ ದೊಡ್ಡ ನಿಘಂಟುಗಳಲ್ಲಿ ಭಾಷೆಯ ವಿಭಿನ್ನ ಉಪಭಾಷೆಗಳಿಗೆ ಭಾಷಿಗರ ಸಂಖ್ಯೆಯನ್ನು ಗಮನಿಸಿ, ತಕ್ಕುದಾದ ಸ್ಥಾನಮಾನ ಕೊಡಬೇಕಾದುದು ನಿಘಂಟುಕಾರನ ಧರ್ಮ. ತತ್ಪೂರ್ವದಲ್ಲಿ ಉಪಭಾಷೆಗಳ ಪರಿವೀಕ್ಷಣೆ ಹಾಗೂ ಭಾಷಾವೈಜ್ಞಾನಿಕ ಅಧ್ಯಯನ ಅತ್ಯಗತ್ಯವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಶೈಕ್ಷಣಿಕ ನಿಘಂಟು (Pedagogical dictionary)ಗಳಲ್ಲಿ ಏಕರೂಪದ ಭಾಷೆ ಇರುವುದು ಉತ್ತಮ. ಆದುದರಿಂದ ಅಧಿಕೃತ ಭಾಷೆಯೊಂದಿಗೆ ಹಲವಾರು ಉಪಭಾಷೆಗಳನ್ನು ಬೆರಸುವುದು ಅಲ್ಲಿ ಸಲ್ಲದು. ಆದರೆ ಸಾಹಿತ್ಯದಲ್ಲಿ ಬಳಸಲಾದ ಉಪಭಾಷಿಕ ನಿಘಂಟಿಮಗಳ ಪ್ರಸ್ತಾಪವನ್ನು ಮಾತ್ರ ಅಲ್ಲಿ ಮಾಡುವುದು ಅನಿವಾರ್ಯ.

ಹೀಗೆ ನಿಘಂಟು ರಚನೆಯಲ್ಲಿ ಭಾಷಾವೈವಿಧ್ಯತೆಯನ್ನು ಅರ್ಥಾತ್ ಭಾಷೆಯ ವಿವಿಧ ರೂಪಗಳನ್ನು ನಿಘಂಟುಕಾರ ಅರಿತುಕೊಳ್ಳುವುದು ಬಹು ಮುಖ್ಯ. ನಿಘಂಟಿಮ–ಸಮುದಾಯ (Lexicon) ದಿಂದ ನಿಘಂಟಿಮಗಳನ್ನು ಆರಿಸಿ ಯಾವ ರೀತಿಯಲ್ಲಿ ಅವುಗಳನ್ನು ವ್ಯವಸ್ಥಿತವಾಗಿ ಸಂಯೋಜಿಸಬೇಕೆಂಬುದು ಶಬ್ದಕೋಶ (Dictionary)ದ ಸ್ವರೂಪ ಮತ್ತು ಉದ್ದೇಶಗಳನ್ನು ಅವಲಂಬಿಸಿದೆ.

ಒಟ್ಟಿನಲ್ಲಿ, ನಿಘಂಟುರಚನೆಯ ಸೈದ್ಧಾಂತಿಕ ವಿವೇಚನೆಯೇ ನಿಘಂಟು–ವಿಜ್ಞಾನ (Lexicology). ಈ ಶಿಸ್ತುವಿನಲ್ಲಿ ನಿಘಂಟಿಮಗಳ ಸ್ವರೂಪ–ಲಕ್ಷಣ, ಅರ್ಥವಿವೇಚನೆ (Semantics), ವೈವಿಧ್ಯತೆ ಹಾಗೂ ಸಂಯೋಜನೆಗಳ ವಿವೇಚನೆಯನ್ನು ಭಾಷಾವೈವಿಧ್ಯತೆಯನ್ನು ಗಮನದಲ್ಲಿಟ್ಟು ಮಾಡಲಾಗುತ್ತದೆ. ಈ ವಿವೇಚನೆಗಳ ಹಿನ್ನೆಲೆಯಲ್ಲಿ ನಿಘಂಟು ರಚನೆಯನ್ನು ಮಾಡಬೇಕಾಗುತ್ತದೆ. ಕಾರಣ ನಿಘಂಟು–ವಿಜ್ಞಾನ, ನಿಘಂಟುರಚನೆಗೆ ಪೂರ್ವಭಾಗಿಯಾಗಿ ಹಾಗೂ ಸೈದ್ಧಾಂತಿಕ ಆಧಾರವಾಗಿ ಇರುತ್ತದೆ.

ಪ್ರಾಕೃತ ಭಾಷೆಗಳು ಮತ್ತು ಸಾಹಿತ್ಯ*

ಇಂಗ್ಲೀಷ್** : ಡಾ. ಬಿ. ಕೆ. ಖಡಬಡಿ
ಕನ್ನಡ : ಡಾ. ಚಂದ್ರಮೌಳಿ ನಾಯ್ಕರ

ಭಾಷೆಯು ವಿಚಾರದ ಒಂದು ಮಾಧ್ಯಮ ಇಲ್ಲವೇ ವಾಹಕ. ಮತ್ತು ಸರ್ವಾಂಗ ಪರಿಪೂರ್ಣವಾದ ಭಾಷೆಯೊಂದು ಸುಮಾರು ಕ್ರಿ. ಪೂ. 15000 ದಿಂದ ಕ್ರಿ. ಪೂ. 8000ರ ಮಧ್ಯದಲ್ಲಿ ಗೊತ್ತುಮಾಡಿದ ಮಧ್ಯಶಿಲಾಯುಗದ ಸಂಸ್ಕೃತಿಯ ಕಾಲದ್ದೆಂದು ಹೇಳಲಾಗಿದೆ.[1] ಇದರ ಫಲವಾಗಿ ಸುಮಾರು ಕ್ರಿ. ಪೂ. ಎರಡು ಸಾವಿರ ವರ್ಷ ಕಾಲದ (ಧರ್ಮಯುಗದ) ಆರಂಭಕ್ಕೆ ದಂಡೆತ್ತಿ ಬರುತ್ತಿದ್ದ ಆರ್ಯರು ಸರ್ವಾಂಗ ಪರಿಪೂರ್ಣವಾದ ಭಾಷೆಯೊಂದಿಗೆ ಭಾರತದ ಭೂಮಿಯನ್ನು ಕುರಿತು ಬಂದಿಳಿದರು ಎಂದು ನಾವು ಸುಲಭವಾಗಿ ಹೇಳಬಹುದು. "ನೆನಪಿಡಬೇಕಾದಂಥ ವಾಕ್‌ಶಕ್ತಿಯ ಶಾಶ್ವತ ದಾಖಲೆ"[2] ಎಂದು ವ್ಯಾಖ್ಯಾನಿತವಾದ ಸಾಹಿತ್ಯದ ಸೃಷ್ಟಿಯನ್ನು ಅವರು ಯಾವಾಗ ಮತ್ತು ಹೇಗೆ ರೂಪಿಸಿದರೆಂಬುದನ್ನು ಕುರಿತು ನಾವು ಏನನ್ನೂ ಹೇಳಲಿಕ್ಕಾಗದು. ಆದರೆ ಕ್ರಿ. ಪೂ. ಸುಮಾರು 1500ರಲ್ಲಿ ಅವರು ಅತ್ಯಂತ ಪ್ರಾಚೀನ, ಚಿರಪರಿಚಿತ ಮಾನವ ಜ್ಞಾನದ ದಾಖಲೆಯಾಗಿ ಉಳಿದ ಋಗ್ವೇದವನ್ನು ರಚಿಸಿ ನಮಗಾಗಿ ಬಿಟ್ಟುಕೊಟ್ಟರು ಎಂಬುದನ್ನು ನಾವು ಖಂಡಿತ ಅರಿತಿದ್ದೇವೆ.

ದಂಡೆತ್ತಿ ಬರುತ್ತಿದ್ದ ಆರ್ಯರು ಯಾವ ಭಾಷೆಯನ್ನು ಮಾತನಾಡಿದರು ? ಅವರ ಪಂಗಡದ ಭಾಷಿಕರು ಎಷ್ಟು ಉಪಭಾಷೆಗಳನ್ನು ಬಳಸಿದರು ? ಅವುಗಳಿಂದ

---

* 1979ರ ಏಪ್ರಿಲ್ ತಿಂಗಳಲ್ಲಿ ಧಾರವಾಡದ ಕರ್ನಾಟಕ ಕಲಾ ಮಹಾವಿದ್ಯಾಲಯದ ಸ್ಟಾಫ್ ಅಕ್ಯಾಡೆಮಿಯಲ್ಲಿ ಈ ಲೇಖನವನ್ನು ಮಂಡಿಸಲಾಗಿದೆ.

** Prakrit Languages and Literature, *Jain Journal*, Vol. XIV-2, Calcutta, 1979, Pp. 43-51.

1. i. *Aspects of Language,* William J. Entwistle, Faber and Faber, London, Pp. 26 ff.
   ii. ಮಧ್ಯಶಿಲಾಯುಗದ ಸಂಸ್ಕೃತಿಯು ಮೇಲಿನ ದರ್ಜೆಯ ಪುರಾತನ ಕಾಲದ ಶಿಲಾಯುಧಗಳ ಬಳಕೆಯ ಗುರುತುಳ್ಳ ಕಾಲಕ್ಕೆ ಇಲ್ಲವೆ ಪ್ರಾಚೀನ ಶಿಲಾಯುಗಕ್ಕೆ ಸಂಬಂಧಿಸಿದೆ.
2. *On the Art of Writing*, Sir Arthur Quiller-Couch, Guild Books No. 426, Cambridge, 1954, 1954, p .42.

ವೈದಿಕ ಸಾಹಿತ್ಯದ ಉದಯವಾಗಿರುವ ಸಾಧ್ಯತೆ ಇದೆಯೇ ? ಇಂಥ ಹಲವಾರು
ಪ್ರಶ್ನೆಗಳು ಈ ಕ್ಷೇತ್ರದಲ್ಲಿ ವಿದ್ವಾಂಸರ ಮನಸ್ಸಿನಲ್ಲಿ ಉದ್ಭವಿಸಿವೆಯಲ್ಲದೆ, ಇಂದಿಗೂ
ಉದ್ಭವಗೊಳ್ಳುತ್ತಲೇ ಇವೆ. ಈ ವಿಷಯವಾಗಿ ಮತ್ತು ತತ್ಸಂಬಂಧದ ಸಮಸ್ಯೆಗಳ
ಬಗ್ಗೆ ಭಿನ್ನಾಭಿಪ್ರಾಯಗಳು ಇರುತ್ತವೆ. ಪಾಣಿನಿಯು (ಸುಮಾರು ಕ್ರಿ.ಪೂ. 700)
ವೈದಿಕ ಗ್ರಂಥಗಳ ಭಾಷೆಯನ್ನು ಛಾಂದಸವೆಂದು ಕರೆದದ್ದು ಗಮನಿಸತಕ್ಕ ಸಂಗತಿ.
ರಾಮಾಯಣದ ಕಾಲದಲ್ಲಿ ಪ್ರಚಲಿತವಾಗಿ ಬಂದಿರಬಹುದೆಂದು ಹೇಳಿದ 'ಸಂಸ್ಕೃತ'
ಪದವನ್ನಾಗಲಿ ಅಥವಾ 'ಪ್ರಾಕೃತ' ಪದವನ್ನಾಗಲಿ ಅವನು ತನ್ನ ಶ್ರೇಷ್ಠ ವ್ಯಾಕರಣ
ಕೃತಿಯಲ್ಲಿ ಎಲ್ಲಿಯೂ ಉಲ್ಲೇಖಿಸಿಲ್ಲ ; ವೈದಿಕ ಭಾಷೆಯಿಂದ ಶಾಸ್ತ್ರೀಯ ಸಂಸ್ಕೃತವು
ಹುಟ್ಟಿತು ಹಾಗೂ ಶಾಸ್ತ್ರೀಯ ಸಂಸ್ಕೃತದಿಂದ ಪ್ರಾಕೃತವು ಹುಟ್ಟಿತು ಎಂಬ
ಸಿದ್ಧಾಂತವು ಅವೈಜ್ಞಾನಿಕವೆಂದು ಪರಿಗಣಿತವಾಗಿದೆ. ಏಕೆಂದರೆ ವೈದಿಕ ಭಾಷೆಯ
ಹಲವಾರು ಭಾಷಾ ವೈಶಿಷ್ಟ್ಯಗಳು ಅನುರೂಪವಾದ ಸಂಸ್ಕೃತದವುಗಳಿಗಿಂತ ಪ್ರಾಕೃತ
ದವುಗಳಿಗೆ ಹೆಚ್ಚು ಹತ್ತಿರವಾಗಿವೆ ; ಮತ್ತು ಅನೇಕ ಪ್ರಾಕೃತೀಯ ಪದಗಳು ವೈದಿಕ
ಸಾಹಿತ್ಯದಲ್ಲಿ ಕಾಣಸಿಗುವುದು ವಿಸ್ಮಯಕರ. ಪವಿತ್ರವೆಂದು ಪರಿಗಣಿತವಾದ ಅತ್ಯಂತ
ಹಳೆಯ ಭಾಷೆಯು ಅನಂತರದ, ಅಂದರೆ ಶಾಸ್ತ್ರೀಯ ಸಂಸ್ಕೃತಕ್ಕೆ[3] ಜನ್ಮ ಕೊಡದೇ,
ಒಂದು ಆದರ್ಶ ಸ್ವರೂಪವನ್ನು ಕೊಟ್ಟಿತು ಎಂದು Jules Bloch ಅಭಿಪ್ರಾಯ
ಪಡುತ್ತಾರೆ. ಆದರಂತೆ ವೈಯಾಕರಣಿಗಳು ಹಾಗೂ ವಿದ್ವಾಂಸರು ವಿವರಿಸಿದಂತೆ
ಸಂಸ್ಕೃತವು ಪ್ರಾಕೃತದ ಆಧಾರವಾಗಲಾರದು. ತನ್ಮೂಲಕ ಪ್ರಾಕೃತವು ಜನ
ಸಾಮಾನ್ಯರ ಸಹಜ ಭಾಷೆಯೆಂದು ಮತ್ತು ಸಂಸ್ಕೃತವು, ಪೂರ್ವ ದಿನಗಳಲ್ಲಿ
ಸಾಹಿತ್ಯದ ಉದ್ದೇಶಕ್ಕಾಗಿ ಶಿಷ್ಟಪದರು ಬಳಸಿದ ಸುಧಾರಿತ ಅಥವಾ ಸಂಸ್ಕರಿತ
ಭಾಷೆಯೆಂದು ಅರ್ಥೈಸಬಹುದು. ಪ್ರಖ್ಯಾತ ವಿದ್ವಾಂಸರಿಂದ, ಭಾರತ ಮತ್ತು
ವಿದೇಶಗಳಲ್ಲಿ ಈ ವಿಷಯದ ಮೇಲಿನ ಮುಂದುವರೆದ, ವ್ಯಾಪಕವಾದ ಚರ್ಚೆಗಳನ್ನು
ಬದಿಗಿಟ್ಟು, ಇತ್ತೀಚೆಗೆ ಸರಳ, ಆದರೆ ಸ್ಪಷ್ಟವಾದ ಶಬ್ದಗಳಲ್ಲಿ ನಿರೂಪಿಸಿದ
Dr. P.L. Vaidya ಅವರ ಅಭಿಪ್ರಾಯಗಳನ್ನು ನಾನು ಇಲ್ಲಿ ಉದ್ಧರಿಸಬಹುದಾಗಿದೆ
ಪ್ರಾಕೃತವು ಭಾರತೀಯರ ಅತ್ಯಂತ ಹಳೆಯ ಮತ್ತು ಸಹಜವಾದ ಭಾಷೆಯಾಗಿದೆ :
ಅದು ಎಲ್ಲರಿಂದಲೂ ಬಾಲ್ಯಾವಸ್ಥೆಯಿಂದ ಬಳಸಿದ್ದಾಗಿದೆ. ಆದರಿಂದಲೇ (ಪ್ರಾಕೃತ
ಭಾಷೆಯಿಂದಲೇ) ಸುಸಂಸ್ಕೃತದ ಶಿಷ್ಟ ಭಾಷೆಯಾದ ಸಂಸ್ಕೃತವು ಬೆಳೆದುಬಂದಿದೆ.
ನಿಮ್ಮಲ್ಲಿ ಕೆಲವರಿಗೆ ಅನಿಸಬಹುದು : ಏನೆಂದರೆ, ಇದು ಪ್ರಾಕೃತ ಭಾಷೆಯ ಮಹತ್ವ
ವನ್ನು ಭವ್ಯಗೊಳಿಸಲು ಮಾಡಿದ ಆಶ್ಚರ್ಯಕರವಾದುದೊಂದು ಉಕ್ತಿ ಎಂದು.
ಆದರೆ ಆ ಮಾತು ಒಂದೆಡೆ ಇರಲಿ. ನನ್ನ ಈ ಉಕ್ತಿಯನ್ನು ಪ್ರತಿಪಾದಿಸಲು ಇಲ್ಲಿ

---

3. 'Some Problems of Indo-Aryan Philosophy', *B.S.O.S.*, Vol. V, Part IV, London, 1930, p. 720.

ಆಧಾರಗಳು ಉಪಲಬ್ಧವಿವೆ; ಮತ್ತು ಅವು ಅತ್ಯಂತ ಹಳೆಯ ಹಾಗೂ ವಿಶ್ವಾಸಾರ್ಹವಾದ ಸಂಸ್ಕೃತ ಕೃತಿಗಳಿಂದಲೇ ಸಂಗ್ರಹಿಸಲ್ಪಟ್ಟವೆ. ನೀವು ಪತಂಜಲಿಯ (ಕ್ರಿ.ಪೂ. 2ನೆಯ ಶತಮಾನ) ಮಹಾಭಾಷ್ಯವನ್ನು ತೆಗೆದುಕೊಂಡರೆ, ಶ್ರೇಷ್ಠ ವೈಯಾಕರಣಿ ಮತ್ತು ಸಂಸ್ಕೃತದ ದಿಗ್ಗಜನಾದ ಪತಂಜಲಿ ಉಲ್ಲೇಖಿಸಿದ ಆಕಳು ಎಂಬರ್ಥದ **ಗೋಣ** ಮತ್ತು **ಗೋಣೀ** ಶಬ್ದಗಳನ್ನು ಕಾಣುತ್ತೀರಿ. ಕನಿಷ್ಟಪಕ್ಷ ಯಜ್ಞದ ಸಮಾರಂಭದಂಥ, ಪವಿತ್ರ ಸಂದರ್ಭಗಳಲ್ಲಿಯಾದರೂ ಸುಸಂಸ್ಕೃತ ಜನರಿಂದ ಬಳಸಲು ಅನುಚಿತವಾದ, ಕೆಳದರ್ಜೆಯ ಅಪಭ್ರಂಶಗಳಾಗಿರುವುದರಿಂದ ಈ ಶಬ್ದಗಳನ್ನು ಬಳಸಕೂಡದು ಎಂದು ಪತಂಜಲಿಯು ತನ್ನ ಶ್ರೋತೃಗಳಿಗೆ ಕೇಳಿಕೊಳ್ಳುತ್ತಾನೆ. ಆದರೆ **ಗೋಣಿ, ಗೋಣಾ, ಗೋಣ**ದಂಥ ಶಬ್ದಗಳು ಜನರಲ್ಲಿ ಎಷ್ಟೊಂದು ಜನಪ್ರಿಯ ಹಾಗೂ ಪ್ರಚಲಿತವಿದ್ದವೆಂದರೆ, ಅವುಗಳ ಬಳಕೆಯನ್ನು ಸಂಪೂರ್ಣ ತೆಗೆದುಹಾಕುವುದು ಸಾಧ್ಯವಿಲ್ಲದಾಯಿತು. ಆದ್ದರಿಂದ ಪತಂಜಲಿಯೋ ಅಥವಾ ಅವನ ಹತ್ತಿರದ ಅನುಯಾಯಿಗಳೋ 'ಯಜ್ಞ ಕರ್ಮಣಿನಾಪಭ್ರಂಶತವೈಃ' ಎಂದು ಕನಿಷ್ಟಪಕ್ಷ ಪವಿತ್ರ ಸಂದರ್ಭಗಳಲ್ಲಿ ಅಂಥ ಶಬ್ದಗಳನ್ನು ಬಳಸಕೂಡದೆಂದು ಒಂದು ನಿಯಮವನ್ನು ಮಾಡಿದರು. ಅನಂತರದ ಭರ್ತೃಹರಿಯಂಥ ಶ್ರೇಷ್ಠ ಸಾಹಿತಿಗಳು ಸ್ವಲ್ಪ ಮುಂದುವರೆದು, ಪ್ರಾಕೃತ ಶಬ್ದಗಳು ಬಹಳ ಜನರಲ್ಲಿ ಮತ್ತು ಬಹು ಸಂಖ್ಯೆಯಲ್ಲಿ ಪ್ರಚಲಿತವಿದ್ದು, ತಮ್ಮಷ್ಟಕ್ಕೆ ಯಾವ ಅರ್ಥವನ್ನೂ ಹೊರುವಲ್ಲಿ ಅಸಮರ್ಥವಾಗಿವೆಯಾದರೂ, ಸಂಸ್ಕೃತದ ಮಾಧ್ಯಮದ ಮೂಲಕ ಅರ್ಥವನ್ನು ಕೊಡುವಂಥವುಗಳಾಗಿವೆ ಎಂದು ಒಂದು ಸಿದ್ಧಾಂತವನ್ನು ಮಂಡಿಸಿದರು. ಇದನ್ನು ಸ್ಪಷ್ಟಪಡಿಸಬೇಕೆಂದರೆ, **ಗೋಣಾ, ಗೋಣಿ, ಗೋಣ** ಶಬ್ದಗಳು, ಶ್ರೋತೃಗಳಿಗೆ ಆಕಳು (ಗೋವು) ಅಥವಾ ನಂದಿ ಎಂಬ ಅರ್ಥವನ್ನು ನೇರವಾಗಿ ಕೊಡಲಾರವು. ಆದರೆ ಸಂಸ್ಕೃತದ ಮಾಧ್ಯಮದ ಮೂಲಕ ಆ ಅರ್ಥವನ್ನು ಕೊಡಬಲ್ಲವು. **ಗೋಣೀ**–ಗೌ ಎಂದು ಅದರ ಸಮಾಕರಣ ಮಾಡಬಹುದು. ಆರ್ಯಾವರ್ತದ ಜನರ ಸಾಮಾನ್ಯ ಭಾಷೆಯು ಕನಿಷ್ಟಪಕ್ಷ ಪ್ರಾಕೃತವಾಗಿತ್ತು; ಅದರಿಂದಲೇ ಸಂಸ್ಕರಿಸಿದ ಭಾಷೆ ಸಂಸ್ಕೃತವು ವೃದ್ಧಿಯಾಯಿತು ಎಂದು ರುಜುವಾತು ಮಾಡಲು ಯಾವ ವಿವರಣೆಯೂ ಬೇಕಿಲ್ಲ ಎಂದು ನಾನು ತಿಳಿಯುವೆ.[4]

ಇದೆಲ್ಲದರ ಅರ್ಥವೇನೆಂದರೆ, ಯಾವಾಗ ಪುರೋಹಿತವರ್ಗದಿಂದ ವೇದಗಳು ರಚಿತವಾದವೋ, ಆಗ ತಮ್ಮ ಜನ್ಮಭೂಮಿಯಲ್ಲಿ ಮಾತಾಡಲ್ಪಟ್ಟ ಹಾಗೂ

4. Inaugural Address, Proceedings of the Seminar of Scholars in Prakrit Studies, Shivaji University, Kolhapur, 1969, pp 12 ff.

ಸಾಮಾಜಿಕ ಶ್ರೇಣಿಯಿಂದಾಗಿ ಮತ್ತು ಬುಡಕಟ್ಟಿನ ಜನಸಮೂಹ ಮೊದಲಾದವು ಗಳಲ್ಲಿ, ಜನಪ್ರಿಯ ಭಾಷೆಗಳು ಅಥವಾ ಪ್ರಾಕೃತ ಭಾಷೆಗಳು ಸಾಮಾನ್ಯ ಜನರ ಸಮೂಹದಲ್ಲಿಯೂ ಪ್ರಚಲಿತವಾಗಿದ್ದವು ಎಂಬುದು ಇದರ ತಾತ್ಪರ್ಯ. ಅನಂತರದ ಶ್ರೇಷ್ಠ ಸಂಸ್ಕೃತವು ವೈದಿಕ ದರ್ಜೆಯನ್ನು ಅಂಗೀಕರಿಸಿತು, ಮತ್ತು ಮಹಾವೀರ ಹಾಗೂ ಬುದ್ಧರು ಪ್ರಮುಖವಾದ ಪ್ರಾದೇಶಿಕ ಉಪಭಾಷೆಯ (ಅರ್ಧಮಾಗಧಿ ಇಲ್ಲವೆ ಪಾಶ್ಚಾತ್ಯ ಪ್ರಾಚ್ಯಾವನ್ನು)ನ್ನು ಬಹು ಸಂಖ್ಯೆಯ ಜನರಿಗೆ, ಧಾರ್ಮಿಕ ತತ್ವಗಳನ್ನು ಬೋಧಿಸಲು ಕೈಗೆತ್ತಿಕೊಳ್ಳುವವರೆಗೆ, ಪ್ರಾಕೃತ ಭಾಷೆಗಳು ತಮ್ಮ ಪಯಣವನ್ನು ಮುಂದುವರೆಸಿದವು. ಇದು ಭಾರತದ ಸಾಂಸ್ಕೃತಿಕ ಇತಿಹಾಸ ದಲ್ಲಿ ಒಂದು ಮಹತ್ವಪೂರ್ಣ ಘಟನೆಯಾಗಿತ್ತು. ಯಾಕಂದರೆ ಒಂದು ಸಾಮಾನ್ಯ ಉಪಭಾಷೆ (ಅರ್ಧಮಾಗಧಿ ಇಲ್ಲವೆ ಪಾಶ್ಚಿಮಾತ್ಯ ಪ್ರಾಚ್ಯಾ)ಯು ಮೊಟ್ಟಮೊದಲು ಸಾರೆ ಧಾರ್ಮಿಕ ಮತ್ತು ನೈತಿಕ ಧರ್ಮೋಪದೇಶಗಳಿಗೆ ಮತ್ತು ಬೋಧನೆಗಳಿಗೆ ಮಾಧ್ಯಮದ ಸ್ಥಾನವನ್ನು ಪಡೆಯಿತು ಮತ್ತು ಆ ಕಾರಣದಿಂದಾಗಿ ಸಂಸ್ಕರಿಸಿದ ಭಾಷೆಯಾಗುವ ಸುಯೋಗವನ್ನು ಪಡೆಯಿತು ಹಾಗೂ ಅದರ ಫಲವಾಗಿ ಕಾಲ ಕ್ರಮದಲ್ಲಿ ಶ್ರೇಷ್ಠ ಪಾಲೀ ಮತ್ತು ಅರ್ಧಮಾಗಧೀ ತತ್ವಗಳು ಕಾಣಿಸಿಕೊಂಡವು. ಆದರೆ ಈ ಎರಡೂ ತತ್ವಗಳ ಉದಯಕ್ಕಿಂತ ಮೊದಲು ಚಕ್ರವರ್ತಿ ಅಶೋಕನು (ಕ್ರಿ.ಪೂ.300) ತನ್ನ ಪ್ರಜೆಗಳನ್ನು ಕುರಿತು ಮೊದಲೇ ಪ್ರಾಕೃತದಲ್ಲಿ ಭಾಷಣ ಮಾಡಿದ್ದನು. ಭಾರತದ ಬೇರೆ ಬೇರೆ ಭಾಗಗಳಲ್ಲಿ ಇಂದಿಗೂ ಲಬ್ಧವಿದ್ದ ಬ್ರಾಹ್ಮೀ ಲಿಪಿಯಲ್ಲಿ ಬರೆಯಿಸಿದ, ಅವನ ಸುಪ್ರಸಿದ್ಧ ಶಿಲಾಶಾಸನದಿಂದ ಇದು ಗೊತ್ತಾಗು ತ್ತದೆ.

ಈ ರೀತಿ ಪ್ರಾಕೃತವೂ ಕೂಡ ಸಾಹಿತ್ಯ ಶ್ರೇಣಿಯನ್ನು ಪಡೆದು, ಕ್ರಮೇಣ ತನ್ನ ಸಾಹಿತ್ಯಕ ಉಪಭಾಷೆಗಳನ್ನು ಹೊಂದಿತು ಮತ್ತು ಉಳಿದ ಸಾಮಾನ್ಯ ಉಪ ಭಾಷೆಗಳು ಸಾಮಾನ್ಯ ಜನಸಮೂಹದೊಂದಿಗೆ ಹರಿದುಹೋದರೂ ಇದು ಮಾತ್ರ ಸಂಸ್ಕೃತದ ಶ್ರೇಣಿಯೊಂದಿಗೆ ನಿಂತಿತು. ದಿನಗಳು ಕಳೆದಂತೆ ಸಾಹಿತ್ಯಕ ಪ್ರಾಕೃತಗಳ ಮತ್ತು ಮೌಖಿಕ ಉಪಭಾಷೆಗಳೆರಡರ ಅಂತರವು ಹೆಚ್ಚು ವಿಸ್ತಾರವಾಯಿತು.

---

5. (i) Dr. S. K. De ಯವರ ಪ್ರಕಾರ ಬುದ್ಧವಚನದ ಮೂಲ ಪ್ರವಚನ (ಉಪದೇಶ) ಗಳು ಪಾಶ್ಚಿಮಾತ್ಯ ಪ್ರಾಚ್ಯಾ (ಅರ್ಧಮಾಗಧಿ)ದಲ್ಲಿ ಇದ್ದವು : The Origin and Development of the Bengali Language, Vol.I, Calcutta, 1926, pp.56-77.
(ii) ಬುದ್ಧಘೋಷನು ಪಾಲಿಯನ್ನು ಬುದ್ಧವಚನದ, ಅಂದರೆ ಬುದ್ಧನ ವಾಖ್ಯಾನದ ಪರ್ಯಾಯ ಪದವನ್ನಾಗಿ ಗಮನಿಸುವನು. ಆದರೆ ಇದು ಸರಿಯಲ್ಲ. ಈ ವಿಷಯವಾಗಿ ವಿವರಣೆಗಳಿಗೆ ನೋಡಿರಿ : Magadhi and its formation, by Dr. Munis shwar Jha, Calcutta, 1967 pp. 35-39.

ಸುಮಾರು ಕ್ರಿ.ಶ. 5ನೆಯ ಶತಮಾನದ ಹೊತ್ತಿಗೆ ಸಂಸ್ಕೃತ ಮತ್ತು ಪ್ರಾಕೃತ ಬಹಳ ಮಟ್ಟಿಗೆ ಸಾಹಿತ್ಯದ ಒಂದೇ ಸ್ವರೂಪವನ್ನು ಹೊಂದಿದವು ಮತ್ತು ಸಾಮಾನ್ಯ ಉಪಭಾಷೆಯನ್ನು ಸಾಹಿತ್ಯಕ ಶ್ರೇಣಿಯವರೆಗೆ ಮೇಲೆತ್ತುವ ಪ್ರಯತ್ನವೊಂದು ಮಾಡಲಾಗಿ, ಅದರ ಪರಿಣಾಮವಾಗಿ ಅಪಭ್ರಂಶವು ಸಾಹಿತ್ಯಕ ಉಪಭಾಷೆಯಾಗಿ ಬಳಕೆಗೆ ಬಂದಿತು. ಈ ರೀತಿಯ ಕ್ರಿ.ಶ. 5ನೆಯ ಶತಮಾನದ ಸಂಗತಿಯು ತನ್ನ ಷ್ಟಕ್ಕೆ ತಾನೇ ಸುಮಾರು ಕ್ರಿ. ಶ. 11ನೆಯ ಶತಮಾನದ ಹೊತ್ತಿಗೆ ಹೊಸ ಹಿಂದೂ ಆರ್ಯ ಸಾಹಿತ್ಯ ಭಾಷೆಗಳಂಥ ಹಿಂದೀ, ಗುಜರಾತಿ, ಮರಾಠಿ ಮೊದಲಾದವುಗಳ, ಉತ್ಪತ್ತಿಗೆ ಪುನರಾವೃತ್ತಿಯಾಯಿತು. ಈ ರೀತಿ, ಯಾವ ಅಡತಡೆಗಳಿಲ್ಲದ ಸಾಮಾನ್ಯ ಉಪಭಾಷೆಗಳ ಪ್ರವಾಹವು ಹರಿಯುತ್ತಾದ್ದರಿಂದ ಅಲ್ಲಿ ಕೆಲವು ಸಾಹಿತ್ಯದ ನಡುಗಡ್ಡೆಗಳು ರೂಪುಗೊಂಡವು ಮತ್ತು ಮುಂದಿನ ಪೀಳಿಗೆಗಾಗಿ ಬಿಟ್ಟುಕೊಡಲ್ಪಟ್ಟವು. Prof. Devendrakumar Banerjee ಯವರು ಈ ಸಂಗತಿಯನ್ನು ಕೆಳಗಿನಂತೆ ವಿವರಿಸಿರುವರು :"ಶಾಶ್ವತ ಪ್ರವಾಹ ಸಿದ್ಧವಾಗಲು, ಉಸುಕಿನ ಕಣಗಳಾಗಿ ಮತ್ತು ನೀರಿನ ಹನಿಗಳಾಗಿ ಶಬ್ದಗಳು ಇರುವವು; ಸೃಷ್ಟಿಯ ಪ್ರಾರಂಭದಿಂದಲೂ ಹರಿಯುತ್ತಿದ್ದ ಈ ಪ್ರವಾಹವು ಜಗತ್ಪ್ರಳಯದವರೆಗೂ ಹರಿಯುತ್ತದೆ. ಅದರಲ್ಲಿಯೇ ಸಾಹಿತ್ಯಕ ನಡುಗಡ್ಡೆಗಳಾದ **ವೇದಗಳು, ಉಪನಿಷತ್‌ಗಳು, ರಾಮಾಯಣ** ಮೊದಲಾದವುಗಳು ರೂಪುಗೊಂಡಿವೆ."[7] ಆದರೆ ಈ ಸಂಗತಿಯ ಬಗ್ಗೆ J. Vendrye ಯವರ ಅಭಿಮತವು ಅತ್ಯಂತ ಮನಮುಟ್ಟುವುದಾಗಿದೆಯೆಂದು ನನಗೆ ಅನಿಸುತ್ತದೆ. ಅವರು, ಸಾಹಿತ್ಯದ ಭಾಷೆಯನ್ನು ನದಿಯ ಮೇಲ್ಭಾಗದ ಮಂಜುಗಡ್ಡೆಯ ಲೇಪದ ರಚನೆಗೆ ಹೋಲಿಸುವರು ಮತ್ತು "ಮಂಜುಗಡ್ಡೆಯು ನದಿಯಿಂದ ತನ್ನ ಸಾರವನ್ನು ಎರವಲು ತೆಗೆದುಕೊಳ್ಳುವುದು. ಅದು ನಿಜವಾಗಿ ನದಿಯ ಯಥಾರ್ಥ ನೀರೇ ಆಗಿದೆಯಾದರೂ ಅದು ನದಿಯಲ್ಲ"[8] ಎಂದು ಸ್ಪಷ್ಟಪಡಿಸುವರು. ಆದ್ದರಿಂದ, ವಿವಿಧ ಸಾಹಿತ್ಯದ ಕೃತಿಗಳನ್ನು, ವೇದದಲ್ಲಿ ಶ್ರೇಷ್ಠ ಸಂಸ್ಕೃತದಲ್ಲಿ, ಪ್ರಾಕೃತದಲ್ಲಿ ಮತ್ತು ಆಧುನಿಕ ಭಾರತೀಯ ಆರ್ಯರ ಭಾಷೆಗಳಲ್ಲಿ ರೂಪಗೊಂಡ ಉಪಭಾಷೆಗಳ ಪ್ರವಾಹದಿಂದ ಒಟ್ಟುಗೂಡಲ್ಪಟ್ಟ ಸಾಹಿತ್ಯದ ನಡುಗಡ್ಡೆಗಳನ್ನು ಅಥವಾ ಅದರ ಮೇಲಿನ ಮಂಜುಗಡ್ಡೆಯ ಲೇಪನಗಳನ್ನು ಶಾಶ್ವತ ತೇಪೆಗಳೆಂದು ನಾವು ಕರೆಯಬಹುದು. ಸರ್ವಸಾಮಾನ್ಯವಾದ ಅಚ್ಚುಕಟ್ಟಾದ ಯಾವ ನೀರುತಡೆಯ ಅರಗಳು ಇಲ್ಲದ ಭಾರತದ ಈ ಎಲ್ಲ ಸಾಹಿತ್ಯಕ ಭಾಷೆಗಳ

---

6. ಹೆಚ್ಚಿನ ವಿವರಗಳಿಗೆ ನೋಡಿರಿ : Dr. Upadhye ಯವರ ಪ್ರಬಂಧದಲ್ಲಿಯ ಸಿರೀಕ್ಷಣೆಗಳನ್ನು. 'Prakrit Literature', **Shipley's Encyclopaedia of Literature,** Vol. I, New York, 1946.
7. On the Origin of Sanskrit and the Prakrits **K. B. athak Commemoration Volume,** Poona, p. 321.
8. **Languages,** London, 1931, p. 275-276

ಶಕಾನುಕ್ರಮವಾದ (ನಕ್ಷೆ) ಚಿತ್ರವನ್ನು ಕೆಳಗಿನ ಪಟ್ಟಿಯಲ್ಲಿ ಬಿಡಿಸಬಹುದಾಗಿದೆ:[9]

ವೈದಿಕ ಮತ್ತು ಶ್ರೇಷ್ಠ ಸಂಸ್ಕೃತ	ಕ್ರಿ. ಪೂ. 1500 ಇನ್ನೂ ಮುಂದೆ
ಪ್ರಾಕೃತಗಳು : ಶಿಲಾಶಾಸನ ಪ್ರಾಕೃತ, ಪಾಲಿ, ಪೈಶಾಚೀ, ಶೌರಸೇನೀ, ಮಾಗಧಿ, ಅರ್ಧಮಾಗಧೀ, ಮಹಾರಾಷ್ಟ್ರಿ, ಅಪಭ್ರಂಶ, ಇತ್ಯಾದಿ.	ಕ್ರಿ. ಪೂ. 600 ರಿಂದ ಕ್ರಿ.ಶ. 1100ರ ವರೆಗೆ.
ಆಧುನಿಕ ಹಿಂದೂ ಆರ್ಯರ ಭಾಷೆಗಳು ಹಿಂದೀ, ಗುಂಜರಾತಿ, ಮರಾಠಿ, ಮೊದಲಾದವುಗಳು.	ಕ್ರಿ. ಶ. 1100 ರಿಂದ ಇಂದಿನ ವರೆಗೆ

ಈ ರೀತಿ ಭಾರತೀಯ–ಆರ್ಯ ಭಾಷೆಯು 3500 ವರ್ಷಗಳ ಬದುಕಿನ ನಿರಂತರ ಮತ್ತು ಧೀರ್ಘವಾದ ಇತಿಹಾಸವನ್ನು ಹೊಂದಿತ್ತೆಂಬುದನ್ನು ನಾವು ಕಾಣುವೆವು. Dr. Katreಯುವರು ಗಮನಿಸುವಂತೆ : "ಅಂಥ ಗೌರವಾರ್ಹ ಪ್ರಾಚೀನತೆಯಿಂದ, ಇಂದಿನವರೆಗೆ ಅದರ ಜನತೆಯ ಸಾಹಿತ್ಯದಲ್ಲಿ ಪ್ರತಿಬಿಂಬಿಸಿರುವ ಈ ಭಾಷೆಯ ಅವಿಚ್ಛಿನ್ನ ಪ್ರವಾಹದ ಅಸ್ತಿತ್ವವನ್ನು ಬೇರೆ ಎಲ್ಲಿಯೂ ಕಾಣೆವು ಮತ್ತು ಈ ಅರ್ಥದಲ್ಲಿ, ಜಗತ್ತಿನಲ್ಲಿ ಯಾವುದೇ ಭಾಷೆಯ ಗುಂಪಿನ ಇತಿಹಾಸದಲ್ಲಿ ಭಾರತೀಯ–ಆರ್ಯ ಭಾಷೆಯು ಅದ್ವಿತೀಯವಾಗಿದೆ"[10] ಈ ಬಹುದೊಡ್ಡ ಇತಿಹಾಸದಲ್ಲಿ, ಭಾರತದ ಸಾಂಸ್ಕೃತಿಕ ಜೀವನಕ್ಕೆ ತಮ್ಮದೇ ಆದ ಅತ್ಯಲ್ಪ ಕೊಡುಗೆಯನ್ನು ನೀಡಿ, ಪ್ರಾಕೃತಗಳು ಬಹು ಮಹತ್ವದ ಪಾತ್ರವನ್ನು ವಹಿಸಿವೆ. ಈ ವಿಷಯವು, ಮಹಾವೀರ ಹಾಗೂ ಬುದ್ಧನ ದಿನಗಳಿಂದ ಹಿಡಿದು ಸುಮಾರು

---

9. i) ಭಾರತೀಯ-ಆರ್ಯ ಕುಟುಂಬದ ವೃದ್ಧಿಯನ್ನು, ಹಳೆಯ ಭಾರತೀಯ ಆರ್ಯ ಮಧ್ಯದ ಭಾರತೀಯ-ಆರ್ಯ ಹಾಗೂ ಆಧುನಿಕ ಭಾರತೀಯ ಆರ್ಯವೆಂದು ಮೂರು ತರಹದ ವಿಭಾಗಗಳನ್ನು ಸಂಸ್ಕರಿಸುವುದು ಸಂಪ್ರದಾಯವಾಗಿದೆ.

   ii) Grierson ಅವರು, ಭಾರತೀಯ-ಆರ್ಯ ಭಾಷೆಯ ಬೆಳವಣಿಗೆಯನ್ನು ಕೆಳಗಿನಂತೆ ವಿಭಾಗಿಸುವರು (1) ವೈದಿಕ ಕಾಲದ ಮಾತನಾಡುವ ಸಾಮಾನ್ಯ ಭಾಷೆಗಳು (ಕ್ರಿ.ಪೂ.2000 ರಿಂದ ಕ್ರಿ.ಪೂ. 600), (2) ಕ್ರಿ.ಪೂ.600 ಮತ್ತು ಕ್ರಿ.ಪೂ. 1100ರ ಮಧ್ಯದಲ್ಲಿಯವುಗಳು; ತರುವಾಯದ(ಎರಡನೆಯ ತರಹದ) ಪ್ರಾಕೃತಗಳು ಮತ್ತು (3) ಆಧುನಿಕ ಭಾರತೀಯ-ಆರ್ಯ ಭಾಷೆಗಳು ; ಮೂರನೆ ವರ್ಗದ ಪ್ರಕೃತಗಳು.

10 **Prakrit Languages and their Contribution to Indian Culture,** Bharatiya Vidya Bhavan, Bombay, 1946, p. 7.

ಕ್ರಿ. ಶ. 11ನೆಯ ಶತಮಾನದವರೆಗೆ, ಆಧುನಿಕ ಭಾರತೀಯ-ಆರ್ಯ ಭಾಷೆಗಳು ಪ್ರಾರಂಭಗೊಳ್ಳುವಾಗ, ಗಣನೀಯವಾಗಿ 1700 ಅಥವಾ 1800 ವರ್ಷಗಳ ಕಾಲದ ದೀರ್ಘ ಅವಧಿಯನ್ನೊಳಗೊಂಡ, ವಿಶಾಲ ಹಾಗೂ ವೈವಿಧ್ಯಮಯವಾದ ಸಾಹಿತ್ಯದ ಮುಚ್ಚಳಿಕೆಯಾಗಿರುವುದು ಆ ಪ್ರಾಕೃತ ಸಾಹಿತ್ಯದ ಲಬ್ಧ ವಿವರವಾಗಿದೆ.

ಹೀಗೆ ಪ್ರಾಕೃತ ಭಾಷೆಗಳ ಮತ್ತು ಅವುಗಳ ಸಾಹಿತ್ಯಕ ಪ್ರಗತಿಯ ಒಂದು ಸಂಕ್ಷಿಪ್ತ ಪರಿಚಯದ ನಂತರ, ಈಗ ನಾವು ಈ ನಮ್ಮ ಶ್ರೇಷ್ಠ ದೇಶದ ಸಂಸ್ಕೃತಿಗೆ, ಪ್ರಾಕೃತ ಸಾಹಿತ್ಯದ ವಿದ್ದ ಕಾಣುವ ಕ್ಷೇತ್ರಗಳ ಕೊಡುಗೆಯನ್ನು ಕುರಿತು ವಿಹಂಗಮ ದೃಷ್ಟಿಯ ಅಂದಾಜು ಮಾಡುವ ಪ್ರಯತ್ನ ಮಾಡೋಣ.

ಅಶೋಕ ಚಕ್ರವರ್ತಿ (ಕಿ. ಪೂ. 300)ಯ ಶಾಸನಗಳು, ಸಾಹಿತ್ಯವೆಂದು ವಿಂಗಡಿಸಲ್ಪಡುವ ಅತ್ಯಂತ ಪ್ರಾಚೀನವಾದ, ಉಪಲಬ್ಧವಿರುವ ಪ್ರಾಕೃತ ದಾಖಲೆಗಳಾಗಿವೆ. ಅಲ್ಲದೆ, ಈ ಶಾಸನಗಳು Bloch ಅವರು ಗಮನಿಸುವಂತೆ,[11] ವಿಶ್ವೇತಿಹಾಸದ ಶ್ರೇಣಿಯಲ್ಲಿ ಸಾಪೇಕ್ಷ ನಿಕೃಷ್ಟತೆಯಿಂದ ಮುದ್ರಿತ ಹಾಗೂ ಕಾಲಗಣಿತ ಪ್ರಥಮ ಪ್ರಮಾಣಯುಕ್ತ ದಾಖಲೆಗಳಾಗಿವೆ. ಅವು ಮೂವತ್ತಕ್ಕಿಂತ ಹೆಚ್ಚು ಇರುವವಲ್ಲದೆ ಗುಹೆಗಳ-ಶಿಲೆಗಳ, ಗುಂಡುಗಲ್ಲುಗಳ, ಸ್ತೂಪಗಳ ಹಾಗೂ ಭಿತ್ತಿಗಳ ಮೇಲೆ ಕೆತ್ತಿದವುಗಳಾಗಿವೆ. ಪರಿಷ್ಕೃತ ಸಪ್ತಗ್ರಂಥಗಳಲ್ಲಿ ಉಪಲಬ್ಧವಿದ್ದ ಹದಿನಾಲ್ಕು ಶಿಲಾ ಶಾಸನಗಳು ಸರಳ ಮತ್ತು ಸತ್ತ್ವಯುತವಾಗಿವೆ ಮತ್ತು ಸಾಮ್ರಾಟ ಶ್ರೇಷ್ಠನ ಮೊರೆಯ ಧ್ವನಿಯ ಪ್ರತಿಧ್ವನಿಗಳಾಗಿವೆ. ಅವು ರಾಜ್ಯದ ಚಿತ್ರಣವನ್ನು ವರ್ಣಿಸುವುದರೊಂದಿಗೆ ಅಹಿಂಸಾ ಮತ್ತು ಶಾಂತಿಗಾಗಿ ಹಾಗೂ ಪ್ರಜೆಗಳ ಹಿತಕ್ಕಾಗಿ ಹಲುಬಿದ ವೀರಸಾಮ್ರಾಟನ ಶ್ರೇಷ್ಠ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವವು. ಅಶೋಕಾನಂತರ ಕಾಲದ ಅನೇಕ ಪ್ರಾಕೃತ ಶಾಸನಗಳಲ್ಲಿ, ಸವಿಸ್ತರ ಮಹತ್ವ ಹಾಗೂ ಸಾಹಿತ್ಯಕ ಗುಣಗಳಿಗಾಗಿ ಖಾರವೇಲ (ಕ್ರಿ. ಪೂ. 2ನೇ ಶತಮಾನ) ರಾಜನ ಹಾಥಿಗುಂಫ ಶಾಸನಗಳ ಹಾಗೂ ವಶಿಷ್ಠಪುತ್ರ ಪುಲುಮಾಯಿ (ಕ್ರಿ. ಶ. 2ನೇ ಶತಮಾನ)ಯ ನಾಸಿಕ ಗುಹೆಯ ಶಾಸನಗಳ ವಿಶೇಷ ಉಲ್ಲೇಖವನ್ನು ಮಾಡಬಹುದು. ಕ್ರಿ. ಪೂ. 300 ರಿಂದ ಕ್ರಿ. ಶ. 100ರವರೆಗೆ ಭಾರತದ ಎಲ್ಲ ಶಾಸನಗಳೂ ಪ್ರಾಕೃತದಲ್ಲಿರುವುದು ಗಮನಾರ್ಹವಾದ ಉಲ್ಲೇಖವಾಗಿದೆ; ಮತ್ತು ಈ ಕಾಲಾವಧಿಯಲ್ಲಿ ಸಂಸ್ಕೃತವು ಪ್ರಾಕೃತದಿಂದ ತೇಜೋಹೀನವಾಯಿತು. ಇದಕ್ಕೆ ಪ್ರಪ್ರಥಮ ಸಾಕ್ಷಿಯಾಗಿ ಅಶೋಕನ ಶಾಸನಗಳು ಸ್ಪಷ್ಟವಾಗಿ ಸೂಚಿಸುವಂತೆ, ಪ್ರಾಕೃತ ಭಾಷೆಯು ಅಂದಿನ ಮಗಧ ಸಾಮ್ರಾಜ್ಯದ ಸರಕಾರಿ (official) ಭಾಷೆಯಾಗಿತ್ತು. "ಈ ಪ್ರಾಕೃತ ಶಾಸನಗಳು ಮತ್ತು ನಾಣ್ಯಗಳ ದಂತಕಥೆಗಳು,

11 Dr. Jha ಅವರಿಂದ ಗಮನಿಸಿದ, ಅದೇ, p. 6.

ಸುಮಾರು ಎಂಟು ಶತಮಾನಗಳವರೆಗೆ ಮುಂದುವರೆದವು ಹಾಗೂ ಇದೇ ಕಾಲಾವಧಿಯ ಉಳಿದ ಅರ್ಧ ಅವಧಿಯಲ್ಲಿ, ಬೋಧನೆಯ ಮಾಧ್ಯಮವಾಗಿ ಮತ್ತು ಸಂಸ್ಕೃತಿಯ ಭಾಷೆಗಳಾಗಿ ಸಂಸ್ಕೃತದೊಂದಿಗೆ ಸ್ಪರ್ಧಿಸಿದವು"[12] ಎಂದು Dr. Katre ಯವರು ಹೇಳುವರೆಂಬುದನ್ನು ಇಲ್ಲಿ ಮತ್ತೆ ನಾವು ತಿರುಗಿ ಹೇಳಲೇಬೇಕು.

ಶಾಸನಗಳ ತರುವಾಯ, ದಿಗಂಬರರ ಅರ್ಧಮಾಗಧಿ (canon) ವಿಧಿ (ನಿಯಮ) ಹಾಗೂ ನೈಮಿತ್ತಿಕ ವಿಧಿಗಳಿಂದ ಕೂಡಿಕೊಂಡದ್ದೆಂದು ಹೇಳಬಹುದಾದ ಅಧಿಕೃತ ಸಾಹಿತ್ಯದ ಕ್ಷೇತ್ರದಲ್ಲಿ ನಾವು ಪ್ರವೇಶಿಸುತ್ತೇವೆ.[13] ಅರ್ಧಮಾಗಧಿ ವಿಧಿಯು, ಬೇರೆ ಬೇರೆ ಕಾಲದಲ್ಲಿ ರಚಿತವಾದ 45 ಗ್ರಂಥಗಳಲ್ಲಿ ಬರೆಯಲ್ಪಟ್ಟಿದೆ. ಅವುಗಳಲ್ಲಿ ಕ್ರಿ. ಪೂ. 400ರಷ್ಟು ಹಳೆಯ ಕಾಲಕ್ಕೆ ಸಂಬಂಧಿಸಿದ **ಆಚಾರಾಂಗ ಸೂತ್ರವೂ** ಒಂದು ಮೂಲಗ್ರಂಥವಾಗಿದೆ. ಇಂದು ಉಪಲಬ್ಧವಿರುವ ಈ ವಿಧಿಯು ಸಂಪೂರ್ಣ, ಸಂಗ್ರಹಿತವಾಗಿ (ಕ್ರಮಗೊಳಿಸಲ್ಪಟ್ಟು) ಕೊನೆಗೆ ಕ್ರಿ.ಶ. 454ರಲ್ಲಿ ಬರೆಯಲ್ಪಟ್ಟಿತು. ವಿಶ್ವಕೋಶ ಗಾತ್ರವುಳ್ಳ ಈ ಮೂಲಗ್ರಂಥಗಳು, ಧರ್ಮ, ತತ್ತ್ವಜ್ಞಾನ, ಅಧ್ಯಾತ್ಮ ವಿದ್ಯೆ, ತತ್ತ್ವಶಾಸ್ತ್ರ (ಸತ್ಯರೂಪ ಮೀಮಾಂಸೆ), ತರ್ಕಶಾಸ್ತ್ರ, ನೀತಿಬೋಧನೆ, ನೈತಿಕ ಉದ್ಬೋಧತೆ, ನೀತಿಪರ ಕಥೆ ವಿಶ್ವವರ್ಣನೆ, ಐತಿಹಾಸಿಕ ಹಾಗೂ ಅರೆಐತಿಹಾಸಿಕ ದಂತಕಥೆ ಮೊದಲಾದವುಗಳನ್ನು ಒಳಗೊಂಡಿವೆ. ದಿಗಂಬರರ ನೈಮಿತ್ತಿಕ ವಿಧಿಯು ಸಾಮಾನ್ಯವಾಗಿ ನಾಲ್ಕು ವಿಧವಾಗಿ ವರ್ಗೀಕರಿಸಲ್ಪಟ್ಟಿದೆ. 1) ಪ್ರಥಮಾನುಯೋಗ, 2) ಚರಣಾನುಯೋಗ, 3) ಕರುಣಾನುಯೋಗ, ಮತ್ತು 4) ದ್ರವ್ಯಾನುಯೋಗ. ಶಿವಕೋಟ್ಯಾಚಾರ್ಯ, ಕುಂದಕುಂದ, ವಟ್ಟಕೇಶ, ಯೋಗೀಂದ್ರದೇವ, ನೇಮಿಚಂದ್ರ ಮೊದಲಾದವರ **ಷಟ್ಖಂಡಾಗಮಗಳು** ಬಹು ಪ್ರಶಂಸಾರ್ಹವಾಗಿವೆ. ಈ ಎರಡೂ ಮತಗಳ ಎಲ್ಲ ಶಾಸ್ತ್ರೋಕ್ತ ಗ್ರಂಥಗಳ ಮೌಲ್ಯವು, ಜನಸಾಮಾನ್ಯರಿಗಾಗಿ ಅತ್ಯುಚ್ಚ ಮೌಲ್ಯಗಳಾದ ಅಹಿಂಸೆಯಂಥ ಇನ್ನಿತರ ನೀತಿ ತತ್ತ್ವಗಳನ್ನು ಪ್ರತಿಪಾದಿಸಿದ ಸತ್ಯಾಂಶವನ್ನವಲಂಬಿಸಿದೆ. ಅಲ್ಲದೆ ಅದು ಸಮಕಾಲೀನ ಮತ್ತು ತದನಂತರದ ಭಾರತೀಯ ಜನರ ಜೀವನದ ಮೇಲೆ ಶಾಂತಿಪರ ಪ್ರವೃತ್ತಿಯ, ಪರರಿಗಾಗಿ ಗೌರವ ಭಾವನೆಗಳ, ಶಾಕಾಹಾರಿತ್ವ ಮೊದಲಾದವುಗಳನ್ನು ಕುರಿತು ಪ್ರಭಾವ ಬೀರಿದೆ. ಅಹಿಂಸೆಯ ಆಧುನಿಕ, ರಾಜಕೀಯ ಸಿದ್ಧಾಂತದ ಮೂಲಗಳು ಈ ಶಾಸ್ತ್ರೋಕ್ತ ಗ್ರಂಥಗಳ[14] ಮೂಲಕ ಸಂರಕ್ಷಿತವಾಗಿ ಕೊಡಲ್ಪಟ್ಟಿವೆಯೆಂದು ಕೆಲವು ವಿದ್ವಾಂಸರು ಭಾವಿಸುವರು.

---

12 ಅದನ್ನೇ ನೋಡಿರಿ, p. 7.

13 ಬುದ್ಧರ ಪಾಲಿ ವಿಧಿಯೂ ಇದೇ ವರ್ಗದಲ್ಲಿ ಬರುವುದು.

14 ನೋಡಿರಿ : Dr. Katre ಅದೇ, p. 84.

ಪ್ರಾಕೃತದಲ್ಲಿ ಭಾಷ್ಯ ಸಾಹಿತ್ಯದ ಬಹು ದೊಡ್ಡ ಗಾತ್ರವು ಅರ್ಧಮಾಗಧೀಯ (ಶಾಸ್ತ್ರದ ಮತ್ತು ಅದರ ನಿಮಿತ್ತದ) ಸುತ್ತುಮುತ್ತಲೂ, ನಿರ್ಯುಕ್ತಿಗಳ, ಭಾಷ್ಯಗಳ, ಚೂರ್ಣಿ ಮತ್ತು ಇತರ ವೇದಾಭ್ಯಾಸಕ್ಕೆ ಸಂಬಂಧಿಸಿದ ಕೃತಿಗಳಿಂದ ಅನಂತರ ಉಂಟಾದ ವಿಸ್ತೃತ ಮತ್ತು ವಿವಿಧ ತರಹದ ಕಥನದ ಸಾಹಿತ್ಯ : ಧಾರ್ಮಿಕ ಪ್ರಖ್ಯಾತಿವೇತ್ತರ ಜೀವನ ವೃತ್ತಾಂತ, ನೀತಿಪ್ರೇರಕ ದಂತಕಥೆ, ದೃಷ್ಟಾಂತ ಕಥೆ, ನೀತಿಕಥೆ, ಸಾಮಾನ್ಯ ಕಲ್ಪಿತ ಕಥೆ, ಯಕ್ಷ ಕಥೆ, ಕಥಾಕೋಶ ಇತ್ಯಾದಿಗಳಿಂದ ಬೆಳೆದಿದೆ. ನೀತಿಕಥೆಗಳ ಮತ್ತು ಇತರ ಧಾರ್ಮಿಕ ತತ್ತ್ವಗಳನ್ನು ದೃಷ್ಟಾಂತಿಸುವ ನೀತಿ ತತ್ತ್ವಗಳ ಉತ್ಸಾಹಕಾರಕ ಕಥೆಗಳ ಮೂಲಕ ಪ್ರಾಕೃತ ಭಾಷೆಗಳು ತಾರ್ಕಿಕ ಸಂವಾದಗಳನ್ನು ಪ್ರತಿಯಾಗಿ ನೀಡಿದವೆಂಬುದನ್ನು ಈ ಪ್ರಸಂಗದಲ್ಲಿ ಗಮನಿಸಬಹುದು. ಆದ್ದರಿಂದ ಅವು ಕಥೆಗಳ, ನೀತಿಕಥೆಗಳ ಮತ್ತು ಕಥಾ ಸಾಹಿತ್ಯದ ಇತರ ಮಾದರಿಗಳ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದವು. ಪ್ರಾಕೃತ ಕಥಾ ಸಾಹಿತ್ಯವು, ಜಾಗತಿಕ ಸಾಹಿತ್ಯಕ್ಕೆ[15] ಗಣನೀಯವಾದ ಕೊಡುಗೆ ನೀಡಿದ ಪಂಚತಂತ್ರಕ್ಕಿಂತಲೂ ಪೂರ್ವಗಾಮಿಯಾದದ್ದೆಂದು ಪರಿಗಣಿತವಾಗಿದೆ. ಆರ್ಯ–ದ್ರಾವಿಡ ಉಭಯತರ ಆಧುನಿಕ ಭಾರತೀಯ ಸಾಹಿತ್ಯದ ಮೇಲೆ ಪ್ರಾಕೃತ ಕಥಾ ಸಾಹಿತ್ಯವು ಗಣನೀಯವಾದ ಪ್ರಭಾವವನ್ನು ಬೀರಿದೆ ಹಾಗೂ ಜನಸಾಮಾನ್ಯರಲ್ಲಿ ಮಾನವೀಯ ಮೌಲ್ಯಗಳನ್ನು ಬೋಧಿಸಿವೆಯೆಂಬುದೂ ಅಷ್ಟೇ ಸತ್ಯ ಸಂಗತಿಯಾಗಿದೆ.

ಪ್ರಾಕೃತ ಕಥಾನಕ ಸಾಹಿತ್ಯ ಕ್ಷೇತ್ರದಲ್ಲಿ ವಿಹರಿಸುವಾಗ (ಸುಮಾರು ಕ್ರಿ. ಶ. 1ನೇ ಶತಮಾನದ) ಪೈಶಾಚಿ ಪ್ರಾಕೃತದಲ್ಲಿಯ ಗುಣಾಢ್ಯನ ದೊಡ್ಡ ಬೃಹತ್ಕಥೆಯನ್ನು ಅಲಕ್ಷಿಸಲಾಗುವುದಿಲ್ಲವಾದರೂ ಅದು ಉಪಲಬ್ಧವಿಲ್ಲ. ಆದರೆ ಸಂಸ್ಕೃತ ಸಾರದ ಮೂರು ಕೃತಿಗಳು ಮಾತ್ರ ಸಿಕ್ಕಿವೆ. ಲೌಕಿಕ ಸ್ವರೂಪವುಳ್ಳದ್ದರಿಂದ, ರಾಷ್ಟ್ರೀಯ ಮಟ್ಟದಲ್ಲಿ

---

15. i) ನೋಡಿರಿ : Dr. Katre, ಅದೇ, p.85
ii) ಜಗತ್ತಿನ ವಿವಿಧ ಭಾಗಗಳಲ್ಲಿ ದೊರೆತ ಎಲ್ಲ ಯಕ್ಷಕಥೆ, ವರ್ಣನಾತ್ಮಕ ಕಥೆಗಳಿಗೆ ಭಾರತವೇ ತವರೂರಾಗಿದೆಯೆಂದು *Pancatantra*ದ ಪ್ರಖ್ಯಾತವಾದ ಪ್ರಸ್ತಾವನೆ (Introduction)ಯಲ್ಲಿ Benfey ಯು ಬಲವಾಗಿ ಪ್ರತಿಪಾದಿಸಿದ್ದಾನೆಂಬುದನ್ನು ಪರಿಗಣಿಸಬಹುದು. ಜಗತ್ತಿನಲ್ಲಿ ಪ್ರಚಲಿತವಿರುವ ಅಸಂಖ್ಯ ಕಥೆಗಳು ಭಾರತೀಯ ಮೂಲದವುಗಳೆಂದು ಎಚ್ಚರಿಕೆ ಭಾವ ತಳೆಯಲು Winternitz ನು ಇಷ್ಟಪಡುವನು.° Arabian Nights ದಲ್ಲಿ Sheherzadaವು. ಕ್ರಿ ಶ. 11ನೇ ಶತಮಾನದ ಪ್ರಾಕೃತ ಭಾಷ್ಯ ಕನಯಮಂಜರಿಗೆ ಸ್ವರೂಪದಲ್ಲಿ, ಭಾವದಲ್ಲಿ ಮತ್ತು ಪಾತ್ರದಲ್ಲಿಯೂ ಸರಿಸಮಾನವಾಗಿದೆಯೆಂದು ಮುಂದುವರೆದು ಅವಲೋಕಿಸುವನು (the Sukhabodha of Devendra). ನೋಡಿರಿ: *Some Problems of Indian Literature,* Calcutta, 1927, Pp. 71-72.

ರಾಮಾಯಣ ಮತ್ತು ಮಹಾಭಾರತಗಳ ಸಾಲಿನಲ್ಲಿ ನಿಲ್ಲುವುದು. ಅಂದರೆ ಧರ್ಮ ಮೋಕ್ಷದಂಥ ಧಾರ್ಮಿಕ ಕಲ್ಪನೆಗಳ ಮೂಲಕ ಎರಡೂ ಮಹಾಕಾವ್ಯಗಳು ಭಾರತೀಯ ಸಾಹಿತ್ಯ ಸೃಷ್ಟಿಗೆ, ತಮ್ಮ ಪ್ರಭಾವ ಬೀರಿದರೆ, ಬೃಹತ್ಕಥೆಯು ಭಾರತೀಯ ಸಾಹಿತ್ಯದ ಅಖಂಡ-ಮೌಖಿಕ ಮತ್ತು ಲಿಖಿತ ಎರಡರಿಂದಲೂ ಅಪ್ಪಟ ರಮ್ಯ (ಕಲ್ಪನಾಮಯ) ಕಲ್ಪನೆಯನ್ನು ಪ್ರಾರಂಭಿಸಿತು. ಆಧುನಿಕ ಭಾರತೀಯ ಭಾಷೆಗಳಲ್ಲಿ ಇನ್ನೂ ಮೌಖಿಕ ಪರಂಪರೆಯಲ್ಲಿ ಉಪಲಬ್ಧವಿದ್ದ ಅನೇಕ ಜನಪದ ಕಥೆಗಳು ತಮ್ಮ ಶ್ರೇಷ್ಠ ಮೂಲಗಳನ್ನು ಬೃಹತ್ಕಥೆಯಿಂದ ಪಡೆದವು. **ಮೃಚ್ಛಕಟಿಕ** ಮತ್ತು **ಸ್ವಪ್ನವಾಸವದತ್ತ**ದಂಥ ಅನೇಕ ಉತ್ಸಾಹಪೂರ್ಣ ಸಂಸ್ಕೃತ ನಾಟಕಗಳು ಮತ್ತು ಅವುಗಳ ರಮ್ಯ ಕಥೆಗಳು ಇದರಲ್ಲಿಯ ದಂತಕಥೆಗಳನ್ನಾಧರಿಸಿವೆ. ಅದರ ಅತ್ಯುಚ್ಚ ಜನಪ್ರಿಯತೆಯು ಅದನ್ನು ಸಂಸ್ಕೃತ, ಪ್ರಾಕೃತ[16] ಮತ್ತು ತಮಿಳು[17] ಗಳಂಥ ವಿವಿಧ ಭಾಷೆಗಳಿಗೆ ಭಾಷಾಂತರಗೊಳಿಸುವಂತಾಯಿತು. ಸಂಸ್ಕೃತ ಭಾಷೆಗೆ ಭಾಷಾಂತರಿಸಿದನೆಂದು ಹೇಳಲಾದ ದುರ್ವಿನೀತ (ಕ್ರಿ. ಶ. 600)ನು ಬಹುಶಃ ಅದರ ಕನ್ನಡಾನುವಾದವನ್ನೂ ನೀಡಿರಬೇಕು. ಕನ್ನಡ ವಡ್ಡಾರಾಧನೆ (ಸುಮಾರು ಕ್ರಿ.ಶ. 925)ಯ ಒಂದನೆಯ ಕಥೆಯಲ್ಲಿ ಸುದಾಮ ಎಂಬ ಒಂದು ವಿನೋದಪೂರ್ಣ ಉಪಕಥೆಯು ತನ್ನ ಮೂಲವನ್ನು ಬೃಹತ್ಕಥೆಯಲ್ಲಿ[18] ಹೊಂದಿದೆಯೆಂಬುದನ್ನು ಗಮನಿಸಿದ್ದೇನೆ. ವಡ್ಡಾರಾಧನೆಯ ಈ ಉಪಕಥೆಯು ಒಂದು ಜನಪದ ಕಥೆಯಂತಿದ್ದು, ಆಧುನಿಕ ಭಾರತೀಯ ಸಾಹಿತ್ಯದಲ್ಲಿ ಆರ್ಯ ಹಾಗೂ ದ್ರಾವಿಡದಲ್ಲಿ ಅಂಥ ಲಿಖಿತ ಮತ್ತು ಮೌಖಿಕ ಅನೇಕ ಕಥೆಗಳು ಪ್ರಚಲಿತವಾಗಿ ಸಿಗುವವು. Prof. Eberhard ನು ಜನಪದ ಕಥೆಯ ವಸ್ತುಗಳನ್ನು ಪೂರ್ವಕಾಲದ (ಹೂತು ಹೋದ), ಸಾಮಾಜಿಕ ಮತ್ತು ಧಾರ್ಮಿಕ ಇತಿಹಾಸವೆಂದು ಗಮನಿಸುವನು ಹಾಗೂ ಈ ಹಿನ್ನೆಲೆಯ ಅಭಿಪ್ರಾಯದಲ್ಲಿಯೂ, ನಾವು ಗುಣಾಢ್ಯನ ಬೃಹತ್ಕಥೆಯ ಮಹತ್ವದ ಬೆಲೆ ಕಟ್ಟಬೇಕಾಗಿದೆ.

ಲೌಕಿಕ ಭಾವಗೀತೆಯು,ಪ್ರಾಕೃತ ಸಾಹಿತ್ಯದ ಇನ್ನೊಂದು ಮೋಹಕ ವಲಯವಾಗಿದೆ. ಗತವೈಭವ ಕಾಲದಿಂದ ಕ್ರಿ.ಶ. 1ರ ವರೆಗೆ ಋಗ್ವೇದದ 10ನೇ ಮಂಡಲ

---

16. The *Vasudevahindi.*
17. The *Perungadai* and the *Vasudevanar' sindam.*
18. ವಡ್ಡಾರಾಧನೆಗಿಂತಲೂ ಚಿಕ್ಕದಾದ, ಸೋಮದೇವನ ಕಥಾಸರಿತ್ಸಾಗರದ ಕೇಸಟ ಹಾಗೂ ಕಂದರ್ಪನೆಂಬ ಬ್ರಾಹ್ಮಣರ ಮತ್ತು ಮದನಸೇನನ ಕಥೆಯೊಂದಿಗೆ ಈ ಉಪಕಥೆಯನ್ನು ತುಲನೆ ಮಾಡಬಹುದು.
    ಬೃಹತ್ಕಥೆಯ ಪ್ರಾಕೃತ ಭಾಷಾಂತರದಿಂದಾಗಲಿ ಅಥವಾ ಕನ್ನಡಾನುವಾದದಿಂದಾಗಲಿ ಇಲ್ಲವೆ ಮೌಖಿಕ ಪರಂಪರೆಯ ಮೂಲಕ ಈ ಉಪಕಥೆಯನ್ನು ತೆಗೆದುಕೊಂಡಿರಬಹುದಾದ ಸಂಭವವಿದೆ.

ದಲ್ಲಿಯ ಎರಡು ಸಂವಾದ ಸೂಕ್ತಗಳ ಮತ್ತು ಪತಂಜಲಿಯ ಮಹಾಭಾಷ್ಯದಲ್ಲಿ ಉದ್ಧರಿತ ಪಂಕ್ತಿಯೊಂದರ ಹೊರತು ಸಂಸ್ಕೃತ ಸಾಹಿತ್ಯದಲ್ಲಿ ಪ್ರೇಮಗೀತದಂಥವುಗಳನ್ನು ಪಡೆಯಲಾರೆವು. Prof. S. K. De ಯವರು: "ಆ ಯುಗದ ನೀತಿಪರ ಹಾಗೂ ಉದಾತ್ತ ಉದ್ದೇಶದಿಂದ, ಪ್ರಮುಖವಾಗಿ ಪ್ರಭಾವಿತವಾದ ಉಚ್ಚ ಶ್ರೇಣಿಯ ಶ್ರದ್ಧಾವಂತ ಸಾಹಿತ್ಯದಲ್ಲಿ, ಪವಿತ್ರ-ಪ್ರೇಮಗೀತದ ಏಳ್ಗೆಗಾಗಿ ಆ ಸಂಸ್ಕೃತಿಯಾಗಲಿ ಅಥವಾ ಅದರ ಸಾಮಾಜಿಕ ವಾತಾವರಣವಾಗಲಿ ಅನುಕೂಲಕರವಾಗಿರಲಿಲ್ಲ"[19] ಎಂದು ಟೀಕಿಸುವರು. ಆದರೆ ಜನಪದ ಸಾಹಿತ್ಯದಲ್ಲಿ ಪ್ರಾಕೃತದಲ್ಲಿ ಈ ಪರಂಪರೆಯು ಸುರಕ್ಷಿತವಾಗಿದೆ. ಪ್ರೇಮ ಭಾವನೆಯು ಆಸ್ಥೆಯಿಂದ ಪುಷ್ಟಿಗೊಂಡಿರಬೇಕು. ಈ ಸಂಗತಿಯಿಂದಾಗಿ ಪ್ರಾಕೃತದಲ್ಲಿ ಅಂಥ ಭಾವಗೀತೆಗಳ ದೊಡ್ಡ ಸಂಖ್ಯೆಯು, ಕಾಳಿದಾಸನಿಗಿಂತಲೂ ಮೂರು ಶತಮಾನಗಳ ಹಿಂದೆ ವೃದ್ಧಿಗೊಂಡು ಅವುಗಳ ಒಂದು ಕವನಸಂಗ್ರಹವು ಹಾಲರಾಜನಿಂದ ರಚಿತವಾಗಿ ಸಂಗ್ರಹಿತಗೊಂಡ **ಸತ್ತಸಯಿ** ಅಥವಾ **ಗಾಥಾಸಪ್ತಶತಿ**[20] ಯ ಸ್ವರೂಪದಲ್ಲಿ ಉಪಲಬ್ಧವಿದೆ. ಈ ಚಿಕ್ಕ ಪ್ರೇಮ-ಚೇತನ ಗೀತಗಳು, ಪರಮಾತ್ಮನಲ್ಲಿ ಸಾಮರಸ್ಯ ಹೊಂದಲು ಬಯಸುವ ಭಕ್ತಿ, ಅಧ್ಯಾತ್ಮಗಳನೊಳಗೊಂಡು ತದನಂತರದ ಭಾರತೀಯ ಸಾಹಿತ್ಯದ ಮೇಲೆ ಗಣನೀಯವಾದ ಪ್ರಭಾವ ಬೀರಿದವು. ಪುರಾತನ ಹಾಗೂ ಮಧ್ಯಕಾಲದ ಗ್ರಾಮೀಣ ಭಾರತದ ಕುಟುಂಬ ಹಾಗೂ ಸಾಮಾಜಿಕ ಜೀವನದೊಡನೆ, ವಾಸ್ತವವಾದದ (ಸ್ಪರ್ಶ) ಪ್ರತಿಪಾದನೆ ಹಾಗೂ ನಿಕಟತೆ ಈ ಭಾವಗೀತೆಗಳ ಒಂದು ವಿಶೇಷತೆಯಾಗಿದೆ.

ಪ್ರಾಕೃತ ಸಾಹಿತ್ಯವು, ಅಲಂಕಾರಿಕ ಹಾಗೂ ಶ್ರೇಷ್ಠ ಸಾಹಿತ್ಯಶೈಲಿಯ ಕಾವ್ಯ ಕಥನಗಳಿಂದ ಮತ್ತು **ಸೇತುಬಂಧ, ಗೌಡವಹೋ, ಕುವಲಯಮಾಲಾ, ಲೀಲಾವಈ**, **ಸಮರಾಇಚ್ಚಕಹಾ** ಮೊದಲಾದ ಗದ್ಯ ಕಾವ್ಯಗಳಿಂದ, ಕನ್ನಡವನ್ನೊಳಗೊಂಡು ಆಧುನಿಕ ಭಾರತೀಯ ಸಾಹಿತ್ಯದ ಕೆಲವು ಶಾಖೆಗಳ ಮೇಲೆ ಪ್ರಭಾವ ಬೀರಿದೆ. ಅದರಲ್ಲಿ ಕೆಲವು ಮಧ್ಯಕಾಲೀನ ಭಾರತದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನದ ನೈಜ ಶಬ್ದಚಿತ್ರಗಳನ್ನು ಕೊಡುವವು. ಆದರೆ (ಕ್ರಿ.ಶ.8ನೇ ಶತಮಾನದ) ಹರಿಭದ್ರನ **ಧೂರ್ತಾಖ್ಯಾನವು** ಭಾರತೀಯ ಸಾಹಿತ್ಯದಲ್ಲಿ ಅದ್ವಿತೀಯ ವಿಡಂಬನೆಯಾಗಿದೆ. ಅದು ಹಿಂದು ಪೌರಾಣಿಕ ದಂತಕಥೆಗಳ ವಿಮರ್ಶಾತ್ಮಕ ಅಭಿಪ್ರಾಯ ತೋರಿದೆ.

---

19. *Ancient Indian Erotics and Erotic Literature*, Calcutta, 1969, p. 11

20. i) ಅಂಥ ಅನೇಕ ಪದ್ಯಗಳು ಅಪಭ್ರಂಶದಲ್ಲಿ, ಹೇಮಚಂದ್ರನಿಂದ ತನ್ನ ಪ್ರಾಕೃತ ವ್ಯಾಕರಣದಲ್ಲಿ ಸಂಗ್ರಹಿತವಾಗಿವೆ.

ii) ವಿಷಯ ರಚನಾಕ್ರಮವಾಗಿ ರಚಿತವಾದ *Vajjālaggam* ವು ಅಂಥ ಮತ್ತೊಂದು ಸಂಕಲನವಾಗಿದೆ.

ಇನ್ನು ಕೊನೆಗೆ, ನಾಟಕ ಸಾಹಿತ್ಯಕ್ಕೆ ಬಂದಾಗ, ಸಂಪೂರ್ಣ ಪ್ರಾಕೃತದಲ್ಲಿರುವ, **ಸಟ್ಟಕ**ವೆಂದು ಕರೆಸಿಕೊಳ್ಳುವ ಆರು ಪ್ರಾಕೃತ ನಾಟಕಗಳು ನಮಗೆ ಉಪಲಬ್ಧವಿವೆ. ರಾಜಶೇಖರ (ಕ್ರಿ. ಶ. 10ನೇ ಶತಮಾನ) ನಿಂದ ರಚಿತವಾದ, ಉಪಲಬ್ಧವಿದ್ದ **ಕರ್ಪೂರಮಂಜರಿಯು** ಪ್ರಪ್ರಥಮ ಕೃತಿಯಾಗಿದೆ. **ಸಟ್ಟಕ**[21]ವೆಂಬ ಪದವು ದ್ರಾವಿಡ ಮೂಲವನ್ನು ಪಡೆದಿದೆ. ಅಂದರೆ 'ಆಟ' (ಆಡು ಎಂಬರ್ಥದಲ್ಲಿ) ವೆಂಬ ಪದವು, ಗ್ರಾಮೀಣ ಕರ್ನಾಟಕದಲ್ಲಿ ಆಡುವ ಜನಪದ ನಾಟಕಗಳಲ್ಲಿ ಇಂದಿಗೂ ಬಳಸಲ್ಪಡುವುದು. ಅಂದರೆ **ಆಟ** ಅಥವಾ **ಬಯಲಾಟ**ವೆಂದರೆ ಈ ಸಟ್ಟಕವು ಒಂದು ಲೋಕಪ್ರಿಯ ಮೂಲ[22]ವನ್ನು ಹೊಂದಿದೆಯೆಂಬುದನ್ನು ಸೂಚಿಸುತ್ತದೆ. **ಸಟ್ಟಕಗಳನ್ನು** ಬದಿಗಿರಿಸಿ ನೋಡಿದಾಗ ಸುಮಾರಾಗಿ ಪ್ರತಿಯೊಂದು ಸಂಸ್ಕೃತ ನಾಟಕವು ಪ್ರಾಕೃತ (ಭಾಷೆಗಳ) ಭಾಗವನ್ನು ಹೊಂದಿದೆ. ಅಂದರೆ ಕೆಲವು ಪಾತ್ರಗಳು ಪ್ರಾಕೃತದಲ್ಲಿಯೇ ಅದರ ಉಪಭಾಷೆಗಳಲ್ಲಿ ಮಾತನಾಡುತ್ತವೆ. ಅಶ್ವಘೋಷ, ಭಾಸ, ಶೂದ್ರಕ, ಕಾಳಿದಾಸ ಮುಂತಾದವರ ಮುಂಚಿನ ನಾಟಕಗಳು ಸಮಕಾಲೀನ ಸಮಾಜದ ಭಾಷಾ ಚಿತ್ರಗಳನ್ನು ನೀಡಲೇಬೇಕು. ಆದರೆ ಅನಂತರದವುಗಳು ಪ್ರಾಕೃತ ಉಪಭಾಷೆಗಳನ್ನು ಸಾಂಕೇತಿಕವಾಗಿ ಬಳಸಿಕೊಂಡಿವೆ. **ಮೃಚ್ಛಕಟಿಕಮ್** ಮತ್ತು **ವಿಕ್ರಮೋರ್ವಶೀಯಮ್**‌ದಲ್ಲಿ ಪ್ರಾಕೃತದಲ್ಲಿ ಮಾತನಾಡುವ ಪಾತ್ರಗಳ ಸಂಖ್ಯೆಯು, ಸಂಸ್ಕೃತದಲ್ಲಿ ಮಾತನಾಡುವರಿಗಿಂತಲೂ ಅಧಿಕ ಹೆಚ್ಚಾಗಿದೆ. ಪ್ರಾಚೀನ ಸಂಸ್ಕೃತ ನಾಟಕಗಳ ಪ್ರಾಕೃತ ಭಾಗವು ಭಾರತೀಯ ಅತ್ಯಮೂಲ್ಯ ಭಾಷಾ ಪರಂಪರೆಯನ್ನು ಹೊಂದಿದೆ ಎಂದು ವಿದ್ವಾಂಸರು ಅಭಿಪ್ರಾಯಪಡುವರು.

ಅಂತ್ಯದಲ್ಲಿ, ಈಗ ಭಾರತೀಯ ಸಂಸ್ಕೃತಿಗೆ ಪ್ರಾಕೃತ ಸಾಹಿತ್ಯದ ಕೊಡುಗೆಯೊಂದಿಗೆ ಉಪಸಂಹಾರಗೊಳಿಸುವೆ :

ಪ್ರಾಕೃತ ಸಾಹಿತ್ಯವು, ಅದ್ಭುತವಾದ ಭಾಷಾಶಾಸ್ತ್ರ, ಸಾಹಿತ್ಯ ಹಾಗೂ ಆಧ್ಯಾತ್ಮಿಕ ಸಂಪ್ರದಾಯವನ್ನು ಒಳಗೊಂಡಿದೆ. ಮತ್ತು ಈ ಸಂಪ್ರದಾಯವು ಆರ್ಯ ಹಾಗೂ ದ್ರಾವಿಡರನ್ನೊಳಗೊಂಡು ಕೆಲವು ಆಧುನಿಕ ಭಾರತೀಯ ಭಾಷೆಗಳ ಮತ್ತು ಸಾಹಿತ್ಯದ ಮೇಲೆ ಗಣನೀಯವಾದ ಪ್ರಭಾವ ಬೀರಿದೆ. ಜಗತ್ತಿನ ಶ್ರೇಷ್ಠ ಸಾಮ್ರಾಟರಲ್ಲೊಬ್ಬನಾದ ಅಶೋಕಚಕ್ರವರ್ತಿಯ ಉದಾತ್ತ ವಿಚಾರಗಳನ್ನು ಹಾಗೂ ಸಂದೇಶಗಳನ್ನೂ, ಅದು ದಾಖಲಿಸುತ್ತದೆ. ಪ್ರಾಕೃತ ಸಾಹಿತ್ಯದ ಶಾಸ್ತ್ರೀಯ ಭಾಗವು, ಮಾನವ ವಿಚಾರೇತಿಹಾಸದಲ್ಲಿ ಕೆಲವು ಉಜ್ವಲ ಅಧ್ಯಾಯಗಳನ್ನು ನೀಡು

---

21. ಸಟ್ಟಕವು ನರ್ತಿಸಲ್ಪಡಬೇಕು ಎಂದು ರಾಜಶೇಖರನು ತನ್ನ 'ಕರ್ಪೂರಮಂಜರಿ'ಯಲ್ಲಿ (I.4-5) ಹೇಳುತ್ತಾನೆ.
22. I. Shekhar ನ ಪ್ರಕಾರ "ಆರ್ಯರಿಗೆ, ಸಂಸ್ಕೃತ ನಾಟಕವು ದ್ರಾವಿಡರಿಂದ ಮತ್ತು ಆರ್ಯಪೂರ್ವರಿಂದ ಆಗಮಿಸಿದೆ". **ನೋಡಿರಿ** : Introduction to the Sanskrit Drama : Its Origin and Decline, Leiden, 1960.

ತ್ತದೆ. ಅವು ಅಹಿಂಸೆ (ಹಿಂಸಾ ನಿವೃತ್ತಿ), ಸ್ಯಾದ್ವಾದ (ಇತರರ ಅಭಿಪ್ರಾಯಗಳಿಗೆ ಮನ್ನಣೆ ನೀಡುವಿಕೆ) ಮತ್ತು ಗೃಹಸ್ಥ ಧರ್ಮ (ಸಾಮಾಜಿಕ ಸ್ವಾಸ್ಥ್ಯದೆಡೆಗೆ ಸಾಗಲು, ಸಾಮಾನ್ಯನಿಗಾಗಿ ಆದರ್ಶ ಚಾರಿತ್ರ್ಯ ನಿಯಮಾವಳಿ)ಗಳೆಂದು ಇಲ್ಲಿ ಹೇಳಬಹುದು. ಜನಸಾಮಾನ್ಯರ ಮಧ್ಯದಲ್ಲಿ ಶ್ರೇಷ್ಠ ಜೀವನಮೌಲ್ಯಗಳನ್ನು ವೃದ್ಧಿಗೊಳಿಸುವಲ್ಲಿ ಸಹಾಯಕವಾದ ಹಾಗೂ ಅವರಿಗಾಗಿ ಸ್ವಸ್ಥ ನೀತಿಯ ಆದರ್ಶವನ್ನು ಸ್ಥಾಪಿಸುವಲ್ಲಿ ಈ ಸಂಪ್ರದಾಯವು ಪ್ರತಿಷ್ಠಿತವಾದ ಆಧ್ಯಾತ್ಮಿಕ ಮತ್ತು ನೀತಿಶಾಸ್ತ್ರದ ತಳಹದಿಗಳನ್ನು ಸಂರಕ್ಷಿಸಿ ಪ್ರಸಾರ ಮಾಡಿತು. ಗಾಂಧೀಜಿಯ 'ಸತ್ಯ' ಮತ್ತು 'ಅಹಿಂಸೆ' ತತ್ತ್ವವು, ಅಂಥ ಬಹುಕಾಲದ ಪ್ರತಿಬಿಂಬಗಳ ಹಾಗೂ ಬೋಧನೆಗಳ ಆಧುನಿಕ ಫಲವೆಂದು ಹೇಳಬಹುದು. ವಿಶೇಷವಾಗಿ, ಕಥನ ಹಾಗೂ ಭಾವಗೀತೆಗಳ ವಲಯಗಳಲ್ಲಿ, ಪ್ರಾಕೃತ ಸಾಹಿತ್ಯದಲ್ಲಿ ಚಿತ್ರಿತ ಸಮಾಜವು, ದರ್ಪ ಮತ್ತು ಕೃತಕತೆಗಿಂತ ಬಹು ಜನಪ್ರಿಯ ಹಾಗೂ ವಾಸ್ತವಿಕವಾಗಿದೆ. ಹೆಚ್ಚು ಕಡಿಮೆ, ಜಾಗತಿಕ ನಾಗರಿಕತೆಗೆ ತಕ್ಕ ಕಾಣಿಕೆ ನೀಡಿದ ಕಾಲದ ಭಾರತದ ಸಮಗ್ರ ಧಾರ್ಮಿಕ, ಸಾಮಾಜಿಕ ಹಾಗೂ ರಾಜಕೀಯ ಚಿತ್ರದೆಡೆಗೆ ಕರೆದೊಯ್ಯುವ ಮಾಹಿತಿಗಳ ವೃತ್ತಾಂತಗಳ ಆಕರಗಳನ್ನೊಳಗೊಂಡಿದೆ ಆ ಸಮಾಜವು. ಅಂದರೆ, ಭಾರತೀಯ ಸಂಸ್ಕೃತಿಯ ಪುನರ್ರಚನೆಗೆ, ಪ್ರಾಕೃತ ಸಾಹಿತ್ಯವು ಅಪರೂಪದ ಹಾಗೂ ಮಹತ್ತ್ವದ ವಿವರಗಳನ್ನು ನೀಡುತ್ತದೆ.ನಮ್ಮ ಗತ ಸಂಸ್ಕೃತಿಯ ಉಚಿತ ಜ್ಞಾನವನ್ನಾವು ಪಡೆಯಬೇಕು- ನಮ್ಮ ವರ್ತಮಾನವನ್ನು ಅರಿಯಲು ಹಾಗೂ ಭವಿಷ್ಯದ ಉಪಾಯ (ಮಾಡಲು) ಕ್ಕಾಗಿ ಸಹಾಯಕವಾಗುವುದು.

ಸಣ್ಣಾಟಗಳ ಹುಟ್ಟು, ಸ್ವರೂಪ ಮತ್ತು ಹೈದ್ರಾಬಾದ ಕರ್ನಾಟಕದ ಸಣ್ಣಾಟಗಳು

ಡಾ. ವ್ಹಿ. ಜಿ ಪೂಜಾರ

ಬಯಲಿನಲ್ಲಿ ಅಟ್ಟಹಾಕಿ ಇಲ್ಲವೆ ಕಟ್ಟೆಯ ಮೇಲೆ ಆಡುವ ಆಟಗಳೇ ಬಯಲಾಟಗಳು. ಇವುಗಳಲ್ಲಿ ದೊಡ್ಡಾಟ ಮತ್ತು ಸಣ್ಣಾಟವೆಂಬೆರಡು ಪ್ರಕಾರಗಳು. ಸಣ್ಣಾಟಗಳಲ್ಲಿ ಡಪ್ಪು ಬಾರಿಸುವುದರಿಂದ ಇವಕ್ಕೆ ಡಪ್ಪಿನಾಟಗಳೆಂದೂ ಕರೆಯುವರು. ದೊಡ್ಡಾಟಗಳನ್ನು ದಕ್ಷಿಣಕರ್ನಾಟಕದಲ್ಲಿ ಕ್ವಚಿತ್ತಾಗಿ ಕಾಣಬಹುದಾದರೂ ಸಣ್ಣಾಟಗಳನ್ನು ಮಾತ್ರ ಅಲ್ಲಿ ಕಾಣಲಾರೆವು. ಇವನ್ನು ಉತ್ತರ ಕರ್ನಾಟಕದ ಬಳ್ಳಾರಿ, ಧಾರವಾಡ, ಬೆಳಗಾವಿ ವಿಜಾಪುರ, ರಾಯಚೂರ, ಗುಲಬರ್ಗಾ ಮತ್ತು ಬೀದರ ಜಿಲ್ಲೆಗಳಲ್ಲಿ ಕಾಣಬಹುದು. ಅದರಲ್ಲೂ ವಿಶೇಷವಾಗಿ ಇವು ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಪ್ರಚಲಿತವಾದಂಥವು. ಈ ಪ್ರದೇಶದ ಸಣ್ಣಾಟಗಳನ್ನು ಪ್ರಸ್ತಾಪಿಸುವುದಕ್ಕಿಂತ ಮುನ್ನ ಸಣ್ಣಾಟಗಳ ಹುಟ್ಟು, ಸ್ವರೂಪದ ಬಗ್ಗೆ ಸ್ವಲ್ಪದರಲ್ಲಿ ನೋಡೋಣ.

ಸಣ್ಣಾಟಗಳು ಯಾವಾಗ ಹುಟ್ಟಿದುವು ಎಂಬುದನ್ನು ಖಚಿತವಾಗಿ ಸಂಶೋಧಕರಿಗಿನ್ನೂ ಗುರುತಿಸುವುದಾಗಿಲ್ಲ. ಲಿಖಿತ ಆಧಾರಗಳು ಅಷ್ಟಾಗಿ ಲಭಿಸದ್ದರಿಂದ ಇದು ಕಷ್ಟದ ಕೆಲಸ. ಆದರೂ ಕೆಲ ವಿದ್ವಾಂಸರು ನಮ್ಮ ಪ್ರಾಚೀನ ಕಾವ್ಯಗಳಲ್ಲಿ ಉಲ್ಲೇಖಗೊಂಡ 'ಪಗರಣ'ವೆಂಬ ರೂಪಕ ಮತ್ತು ಬಹುರೂಪಿಗಳ ಆಟಗಳಿಂದ ಸಣ್ಣಾಟ ಹುಟ್ಟಿರಬಹುದೆನ್ನುವರು. 'ಕವಿರಾಜಮಾರ್ಗ' 'ವಡ್ಡಾರಾಧನೆ' ಮತ್ತು 'ಧರ್ಮಾಮೃತ'ಕಾವ್ಯಗಳಲ್ಲಿ ಉಲ್ಲೇಖಗೊಂಡ 'ಪಗರಣ' ಪಟಹ ಹಾಗೂ ಶೃತಿಯ ಮೇಳದೊಂದಿಗೆ ಆಡುವ, ಕುಣಿತ, ಸಂಭಾಷಣೆ ಹಾಗೂ ಹಾಡುಗಳಿಂದ ಕೂಡಿದ ಕಲಾ ಪ್ರಕಾರವಾದರೂ ಇದರಲ್ಲಿ ಸಣ್ಣಾಟಗಳಲ್ಲಿರುವಂತೆ ಒಂದು ನಿಶ್ಚಿತ ಕಥಾವಸ್ತು ಇರುವುದಿಲ್ಲ. ಇದೊಂದು ಲಘುಪ್ರಹಸನ. ಇದರಲ್ಲಿ ಪಟಹ ವಾದ್ಯ ಬಳಸಿದರೆ, ಸಣ್ಣಾಟದಲ್ಲಿ ಇದನ್ನೇ ಹೋಲುವ ಡಪ್ಪನ್ನು ಬಾರಿಸುವರು. ಇದೊಂದೇ ಎರಡರಲ್ಲಿರುವ ಸಮಾನಾಂಶ. ಇದಿಷ್ಟರಿಂದಲೇ 'ಪಗರಣ'ದಿಂದ ಸಣ್ಣಾಟ ಹುಟ್ಟಿದೆಯೆನ್ನಲು ಬಾರದು. ಇನ್ನು, ಹನ್ನೆರಡನೆಯ ಶತಮಾನದ ಬಹುರೂಪಿ ಚೌಡಯ್ಯ ಶಿವನ ಇಪ್ಪತ್ತೈದು ಲೀಲೆಗಳನ್ನು ಚಿತ್ರಿಸುವ ಆಟ ಆಡಿ ತೋರಿಸುತ್ತಿದ್ದ ವಿಷಯ ಕೆಲ ಕೃತಿಗಳಿಂದ ತಿಳಿದುಬರುವುದು. ಅನಂತರ ಕರ್ನಾಟಕದಲ್ಲಿ ಬಹುರೂಪಿಗಳ ತಂಡವೇ ಹುಟ್ಟಿಕೊಂಡಂತಿದೆ. ಈ ತಂಡಗಳು ಶರಣರ ಚರಿತ್ರೆಯನ್ನು

ಸರಳ ಸಂಭಾಷಣೆ ಹಾಗೂ ಹಾಡುಗಳ ಮೂಲಕ ಸಂಯೋಜನಗೊಳಿಸಿ ಊರೂರು ಅಲೆದು ವೇಷಧರಿಸಿ ಬಣ್ಣಬಳಿದು ಸೋಗುಹಾಗಿ ಬಯಲಲ್ಲೇ ಆಡಿ ಜನರನ್ನು ರಂಜಿಸುವುದರ ಮೂಲಕ ಅವರಿಗೆ ಭಕ್ತಿ, ಜ್ಞಾನ, ವೈರಾಗ್ಯ ಮತ್ತು ನೀತಿಬೋಧೆ ಮಾಡುತ್ತ ಬಂದುದು ಇತಿಹಾಸದಿಂದ ವಿದಿತವಾಗುವುದು. ಇಂಥ ವೇಷಗಾರರ ತಂಡವೊಂದು 'ಪದಿನೆಂಟು ಜಾತಿಯ ನೂರೊಂದು ಕುಲದ ವೇಷಮಂ ತೊಟ್ಟು ಭಾಷೆಯನ್ನಾಡುವಲ್ಲಿ' ಸೋಲಲು ಬಹುರೂಪಿ ಚೌಡಯ್ಯ ಅವೆಲ್ಲವನ್ನಾಡಿ ಗೆದ್ದನೆಂದು ಉಲ್ಲೇಖಿಸಲಾಗಿದೆ.[1] ಇಂಥ ವೃತ್ತಿಯನ್ನೇ ತಮ್ಮ ಜೀವನಕ್ಕೆ ಆಧಾರವಾಗಿಸಿಕೊಂಡ ಬಹುರೂಪಿಗಳ 'ಸೋಗು'ಗಳೇ ಮುಂದೆ ಸಣ್ಣಾಟ, ದೊಡ್ಡಾಟಗಳಾಗಿ ಬೆಳೆದು ಬಂದಂತಿವೆಯೆಂದು ಡಾ. ಮ. ಗು. ಬಿರಾದಾರ ಅವರ ಅಭಿಪ್ರಾಯಪಡುವರು.[2] 'ಈ ಆಟಗಳಿಗೆ ಉಪಯೋಗಿಸುವ ಕಥಾವಸ್ತು ನೋಡಿದರೆ ಸಣ್ಣಾಟ 12ನೆಯ ಶತಮಾನದ ಇತ್ತೀಚೆಗೆ ಹುಟ್ಟಿರಬೇಕೆನ್ನಿಸುತ್ತದೆ'[3]ಯೆಂದು ಡಾ. ಸುಂಕಾಪುರ ಅವರು ಅಭಿಪ್ರಾಯಪಟ್ಟರೆ, ಡಾ. ಕಲಬುರ್ಗಿಯವರು ಸಣ್ಣಾಟ ಸೃಷ್ಟಿಯ ಪ್ರಬಲ ಕಾರಣ 12ನೆಯ ಶತಮಾನದ ಭಕ್ತಿ ಸಂವೇದನೆಯೇ ಆಗಿದೆಯೆನ್ನುವರು.[4] ಈ ಹೇಳಿಕೆಗಳು ಗಮನಿಸುವಂತಹವಾದರೂ ಇವಕ್ಕೆ ಇನ್ನೂ ಖಚಿತ ಆಧಾರ ಬೇಕೆನ್ನಿಸುತ್ತದೆ.

ಇನ್ನು ಸಣ್ಣಾಟ, ದೊಡ್ಡಾಟ ಇವುಗಳಲ್ಲಿ ಯಾವುದು ಮೊದಲು ರಂಗಭೂಮಿಯ ಮೇಲೆ ಬಂತೆಂಬುದರ ಬಗ್ಗೆ ವಿದ್ವಾಂಸರಲ್ಲಿ ಮತಾಭಿಪ್ರಾಯವಿಲ್ಲ. ಡಾ. ದೇವೇಂದ್ರಕುಮಾರ ಹಕಾರಿಯವರು 'ಸಣ್ಣಾಟವೇ ಮೊದಮೊದಲು ಜನಪದ ರಂಗಭೂಮಿಯಲ್ಲಿ ತಲೆದೋರಿ, ಅದರ ಹಿಗ್ಗಿದ ಭವ್ಯರೂಪವೇ ದೊಡ್ಡಾಟವೆಂದು ಹೇಳುವುದು ಸೂಕ್ತವಾದೀತು'[5] ಎಂದರೆ ಡಾ. ಸುಂಕಾಪುರ ಅವರು ಮೊದ ಮೊದಲು ರಂಗಭೂಮಿಗೆ ಬಂದುದು ದೊಡ್ಡಾಟವೆನ್ನುವರು.[6] ಒಂದೇ ಮನೆಯಲ್ಲಿ ಬಸಪ್ಪ ಎಂಬ ಹೆಸರಿನವರಿಬ್ಬರಿದ್ದರೆ ಅವರಲ್ಲಿ ದೊಡ್ಡವನಿಗೆ ದೊಡ್ಡ ಬಸಪ್ಪನೆಂದೂ, ಸಣ್ಣಾತನಿಗೆ ಸಣ್ಣಬಸಪ್ಪನೆಂದೂ ಕರೆಯುವುದು ಒಂದು ವಾಡಿಕೆ. ಇದರಂತೆಯೇ ಮೊದಲು ನಮ್ಮಲ್ಲಿದ್ದುದು 'ಬಯಲಾಟ'ವೊಂದೇ. ಅನಂತರ ಇದಕ್ಕಿಂತ ಸ್ವರೂಪದಲ್ಲಿ ಭಿನ್ನವಾದುದೊಂದು ಹುಟ್ಟಿಕೊಂಡಾಗ ಮೊದಲಿದ್ದುದಕ್ಕೆ ದೊಡ್ಡಾಟ

---

1. ಹೀರೆಮಠ. ಆರ್. ಸಿ. (ಸಂ): ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ, ಭಾಗ-೧ ಸುಂಕಾಪುರ, ಎಂ. ಎಸ್. ಪುಟ–೨೨೩
2. ಹಿರೇಮಠ ಆರ್. ಸಿ. (ಸಂ) : ಜಾನಪದ ಸಾಹಿತ್ಯದರ್ಶನ, ಭಾಗ-೧ ಪುಟ-೮೮
3. ಸುಂಕಾಪುರ, ಎಂ. ಎಸ್. (ಸಂ): ಕನ್ನಡ ಬಯಲಾಟ, ಅಲ್ಲಮಪ್ರಭು. ಪ್ರಸ್ತಾವನೆ ಪುಟ-೨
4. ಲಠ್ಠೆ, ಎಂ. ಎಸ್. (ಸಂ) : ಜಾನಪದ ಸಂಪದ, ಪುಟ-೧೬೧
5. ಪರಮಶಿವಯ್ಯ ಜೀ. ಶಂ. (ಸಂ) : ಜಾನಪದ ಸಮೀಕ್ಷೆ, ಪುಟ-೨೦೨
6. ಸುಂಕಾಪುರ, ಎಂ. ಎಸ್. (ಸಂ) : ಕನ್ನಡ ಬಯಲಾಟ ಅಲ್ಲಮ ಪ್ರಭು. ಪ್ರಸ್ತಾವನೆ ಪುಟ-೧

ವೆಂದೂ ಅನಂತರ ಹುಟ್ಟಿಕೊಂಡುದಕ್ಕೆ ಸಣ್ಣಾಟವೆಂದೂ ಕರೆಯುತ್ತ ಬಂದರೆನ್ನು ವುದೇ ಸೂಕ್ತವಾದುದು. ಸಣ್ಣಾಟ ಇತ್ತೀಚಿನದೆಂದು ಹೇಳಲು ಅದರ ಮೇಲೆ ಮಹಾರಾಷ್ಟ್ರದ ತಮಾಶಾದ ಪ್ರಭಾವವಾದುದೂ ಒಂದು ಕಾರಣವೆನ್ನಬಹುದು. ಮತ್ತು ಇವುಗಳ ಕಥಾವಸ್ತು, ಹಾಡು, ಕುಣಿತ ಸಂಭಾಷಣೆ ವೇಷ ಭೂಷಣಗಳನ್ನು ನೋಡಿದರೆ ಇವು ಅಷ್ಟು ಪ್ರಾಚೀನವಾದಂಥಲ್ಲವೆಂದು ಹೇಳಬಹುದು. ಇವುಗಳಲ್ಲಿ ಕೆಲವು ವೃತ್ತಿರಂಗಭೂಮಿಯ ನಾಟಕಗಳನ್ನು ಹೋಲುವುದನ್ನೂ ಕಾಣಬಹುದು. ದೊಡ್ಡಾಟಗಳ ಅನಂತರವೇ ಇವು ಹುಟ್ಟಿದುವೆನ್ನುವುದು ಸಮಂಜಸವಾದುದು. ದೊಡ್ಡಾಟ ಹೆಸರಿಗೆ ತಕ್ಕಂತೆ ದೊಡ್ಡದೆ! ಭರ್ಜರಿ ವೇಷಭೂಷಣ, ಭವ್ಯರಂಗಸಜ್ಜಿಕೆ, ಕುಣಿತ,ಜಾಗಟೆ,ದೇವತಾ ಪಾತ್ರಗಳ ಠೀವಿ,ರಾಕ್ಷಸ ಪಾತ್ರಗಳ ಆರ್ಭಟ ಮುಂತಾದುವು ಪ್ರೇಕ್ಷಕರಿಗೆ ಭವ್ಯತೆಯ ಅನುಭವವನ್ನುಂಟುಮಾಡುವಂಥವು. ದೊಡ್ಡಾಟಗಳಿಗೆ ಬಳಸಿಕೊಂಡ ಕಥೆಯೂ ಇತಿಹಾಸ, ಪುರಾಣಗಳಿಂದಾಯ್ದುಂಥದು. ಇಲ್ಲಿ ವೀರ, ರೌದ್ರರಸಗಳಿಗೇ ಪ್ರಾಧಾನ್ಯ. ಈ ಆಟದ ಭವ್ಯತೆ ಬರಬರುತ್ತ ಜನತೆಯಲ್ಲಿ ಒಂದು ವಿಧದ ಏಕತಾನತೆಯನ್ನುಂಟು ಮಾಡಿದಂತಿದೆ. ಜನ ವೀರ ರೌದ್ರ ರಸಗಳ ಬದಲು ಶೃಂಗಾರ, ಭಕ್ತಿ, ಹಾಸ್ಯ ಮುಂತಾದ ರಸಗಳನ್ನು ಹೊಮ್ಮಿಸುವ ಆಟಗಳನ್ನು ಬಯಸತೊಡಗಿದರೆಂದು ಕಾಣುತ್ತದೆ. ಇದರ ಫಲವೇನೋ ಎನ್ನುವಂತೆ 'ದೊಡ್ಡಾಟದ ಗಂಭೀರ ತಂತ್ರಗಳು ಸಡಿಲಗೊಂಡು ಜಾನಪದ ರಂಗ ಭೂಮಿ ಸಣ್ಣಾಟ ಒಂದನ್ನು ರೂಪಿಸಿಕೊಂಡಿತು. ಮಹಾರಾಷ್ಟ್ರದ ತಮಾಶಾ ಮಾದರಿಯ ಸನ್ನಿವೇಶ ಸಣ್ಣಾಟಕ್ಕೆ ಪ್ರೇರಣೆ ನೀಡಿರಬೇಕು. ಹೆಣ್ಣು ಗಂಡಿಗೆ ಸಂಬಂಧಿಸಿದ ಶೃಂಗಾರ ಹಾಸ್ಯರಸಗಳಿಂದ ಕೂಡಿದ ರಾಧಾನಾಟ, ರಾಜಾನಾಟಗಳು ಹುಟ್ಟಿಕೊಂಡವು. ಕಾಳಗದ ಕಥೆ ಇಲ್ಲಿಲ್ಲ. ಸಾಮಾಜಿಕ, ಐತಿಹಾಸಿಕ ಇಲ್ಲವೆ ಪೌರಾಣಿಕ ಕಥೆಯನ್ನೊಳಗೊಂಡು ಈ ಸಣ್ಣಾಟಗಳು ಪ್ರಯೋಗಕ್ಕಿಳಿದವು.[7]

ಒಟ್ಟಾರೆಯಾಗಿ ಇವುಗಳ ಹುಟ್ಟಿನ ಬಗ್ಗೆ ಇದಮಿತ್ಥಂ ಎಂದು ಹೇಳಲಿಕ್ಕಾಗದಿದ್ದರೂ ಇವು ಒಂದು ನಿಶ್ಚಿತ ರೂಪ ಪಡೆದು ಪ್ರಯೋಗಗೊಳ್ಳುತ್ತ ಬಂದುದು 19ನೆಯ ಶತಮಾನದಿಂದೀಚೆಯೋ ಎಂದು ಹೇಳಬಹುದು.

ಸಣ್ಣಾಟ ಸಾಹಿತ್ಯ, ಸಂಗೀತ, ಗಾಯನ, ವಾದ್ಯವಾದನ, ನೃತ್ಯ ಮತ್ತು ಅಲಂಕರಣಗಳ ಒಂದು ಸಮ್ಮಿಶ್ರಕಲೆ. ಇವೆಲ್ಲ ಹದವರಿತು ಬೆರೆತಾಗ ಆಟಕ್ಕೆ ಮೆರುಗು ಬರುವುದು. ಇವು ನಡೆಯುವುದು ಹಳ್ಳಿಗಳಲ್ಲೇ. ಸಾಮಾನ್ಯ ಜನರೇ ಇವುಗಳ ಪ್ರೇಕ್ಷಕರು. ಇವುಗಳ ಕಥಾವಸ್ತು ಸಾಮಾನ್ಯ ಜನರಿಗೆ ಸುಲಭವಾಗಿ ಗ್ರಾಹ್ಯವಾಗುವಂಥದೇ. ಹನ್ನೆರಡನೆಯ ಶತಮಾನದ ಶರಣರ ಮತ್ತು ಹದಿನೈದ

---

7 ಲಕ್ಷ್ಮೆ. ಎಂ. ಎಸ್. (ಸಂ) : 'ಭೂಕೈಲಾಸ ಮತ್ತು ಚಂದ್ರಶಿರೋಮಣಿ'
ಕಾಶೀನಾಥರೆಡ್ಡಿ ಪ್ರಸ್ತಾವನೆ, ಪುಟ-5.

ನೆಯ ಶತಮಾನದ ಅನಂತರ ಬಂದ ದಾಸರ ಚರಿತ್ರೆ ಇವುಗಳ ಕಥಾವಸ್ತು. ಇವುಗಳಲ್ಲಿ ಮುಖ್ಯವಾಗಿ ಕಾಣಿಸಿಕೊಂಡ ವಿಷಯಗಳೆಂದರೆ ಪಾಪ-ಪುಣ್ಯಗಳ ಚರ್ಚೆ ಜೀವನ ಅಶಾಶ್ವತವೆಂಬ ನಂಬಿಕೆ, ಹೆಣ್ಣು-ಗಂಡುಗಳ ಜಗಳ, ಪತಿವ್ರತಾ ಧರ್ಮದ ಮಹತಿ, ನೀತಿಯುತ, ಭಕ್ತಿಯುತ ಜೀವನದ ಮೇಲ್ಮೆ ಮುಂತಾದುವು. ಇವುಗಳನ್ನು ರಚಿಸಿದವರು ಅಲ್ಪ ವಿದ್ಯಾವಂತರು. ಆಡುವವರು ಸ್ವಲ್ಪ ಕಲಿತವರು ಇಲ್ಲವೆ ನಿರಕ್ಷರಿಗಳು. ಇವುಗಳಲ್ಲಿ ಪಾತ್ರಗಳೂ ಕಡಿಮೆ. ಎಂಟೋ ಹತ್ತೋ ಇರುವವು. ದೂತೆಯದೇ ಪ್ರಧಾನ ಪಾತ್ರ. ದೂತೆ ಈ ಹೆಸರು ಸ್ತ್ರೀ ಪಾತ್ರಗಳನ್ನು ಸೂಚಿಸಿದರೂ ಪುರುಷರೇ ಬಣ್ಣ ಬಳಿದುಕೊಳ್ಳದೆ ಪುರುಷವೇಷದಲ್ಲೇ ಇದನ್ನು ನಿರ್ವಹಿಸುವರು. ಯಕ್ಷಗಾನ, ದೊಡ್ಡಾಟಗಳಲ್ಲಿ ಹನುಮನಾಯಕ, ಭಾಗವತ ಮತ್ತು ಸಾರಥಿ ಇದ್ದಂತೆ ಈ ಪಾತ್ರ. ಆಟ ನಡೆಸುವ ಸೂತ್ರಧಾರ ದೂತೆಯೇ. ಈ ಪಾತ್ರ ಎಲ್ಲ ಪಾತ್ರಗಳನ್ನು ಪ್ರೇಕ್ಷಕರಿಗೆ ಪರಿಚಯಿಸುವುದರೊಂದಿಗೆ ಹಾಸ್ಯ ಚಟಾಕಿಗಳನ್ನು ಹಾರಿಸಿ ಅವರಿಗೆ ರಂಜನೆಯನ್ನೊದಗಿಸುವುದು. ಈ ಪಾತ್ರಧಾರಿ ಇನ್ನುಳಿದ ಪಾತ್ರಗಳನ್ನು ಮಾತಾಡಿಸುವ ರೀತಿ ಹೀಗೆ : ತಾವುದಾರು ? ಎಲ್ಲಿಂದ ಬಂದ್ರಿ ? ಬಂದ ಕೆಲಸದಾವುದು ? ಇದಕ್ಕುತ್ತರವಾಗಿ ಬಂದ ಪಾತ್ರ 'ನಾವು ಇಂಥವರು (...) ದೇವಲೋಕದಿಂದ ಬಂದವು ಎನ್ನಲು, ಆ ಕ್ಷಣವೇ ಅಲ್ಲಿಂದಿಲ್ಲಿಗೆ ಹೆಂಗ ಬಂದ್ರಿ ಅಪ್ಪುದ್ದ ನಿಚ್ಚಣಿಕಿ ಎಲ್ಲಿಂದ ತಂದ್ರಿ ಎಂದು ಪ್ರೇಕ್ಷಕರನ್ನು ದೂತೆ ನಗಿಸುವನು. ಕೆಲ ಸಲ ಪಾತ್ರಧಾರಿಯ ವೇಷಭೂಷಣ ನೋಡಿ ಹಾಸ್ಯಮಯವಾಗುವಂತೆ ಮಾತು ಬಳಸುವನು. ಆಟದುದ್ದಕ್ಕೂ ಪ್ರೇಕ್ಷಕರು ಉತ್ಸುಕರಾಗಿರಲೆಂದು ಅಲ್ಲಿಯೇ ಸಂದರ್ಭಕ್ಕೆ ತಕ್ಕಂತೆ ಎಷ್ಟೋ ಮಾತುಗಳನ್ನು ಪ್ರಾಸಬದ್ಧವಾಗಿ ಹೆಣೆದು ಹೇಳುವನು. ಅಂಥ ಕೆಲ ಮಾತುಗಳನ್ನಿಲ್ಲಿ ಉದಾಹರಿಸಬಹುದು. 'ಮುಕ್ಕಟ ಕೊಡದಿದ್ರ ಕೆಲಸ ಪುಕ್ಕಟ ಮಾಡಬೇಕೇನ' ಪಾತ್ರಧಾರಿ ದಪ್ಪಗಿದ್ದರೆ 'ದೊರೆಯೆ ಚಿಟ್ಟಾನಿಯ ಮರಿಯೆ' ಎಂದು, ಕುಳ್ಳನಾಗಿದ್ದರೆ 'ದೊರೆಯೆ ಗುಡ್ಡದೊಳಗಿನ ನರಿಯೆ' ಎಂದುಅನೀತಿ ಮಾರ್ಗದಲ್ಲಿ ನಡೆವ ಸ್ತ್ರೀ ಪಾತ್ರವನ್ನು 'ಹೇ ! ತಾಯಿ ಹಣ್ಣ ಮೆಣಸಿನಕಾಯಿ' ಅಥವಾ 'ಹೇ ! ತಾಯಿ ಕೊಳಕ ಟೆಂಗಿನಕಾಯಿ' ಎಂದಂದು ಪ್ರೇಕ್ಷಕರನ್ನು ನಗಿಸುತ್ತ ಆಟದಲ್ಲಿ ಅವರ ಮನಸ್ಸು ಕೇಂದ್ರೀಕೃತವಾಗಿರುವಂತೆ ನೋಡಿಕೊಳ್ಳುವನು. ಇನ್ನುಳಿದ ಪಾತ್ರಗಳ ಮಾತುಗಳು ಜನಸಾಮಾನ್ಯರಾಡುವ ಸಹಜ ಮಾತುಗಳಂತೆಯೇ ಇರುತ್ತವೆ.

ಸಣ್ಣಾಟಗಳು ಹಬ್ಬ, ಜಾತ್ರೆ, ಗ್ರಾಮದೇವತೆಯ ಪಲ್ಲಕ್ಕಿ ಉತ್ಸವ ಮತ್ತು ಓಕಳಿ ಮುಂತಾದ ಸಂದರ್ಭಗಳಲ್ಲಿ ಪ್ರಯೋಗಗೊಳ್ಳುತ್ತಬಂದುದನ್ನರಿಯಬಹುದು. ಇವು ವೃತ್ತಿಕಲಾವಿದರಿಂದ ಬೆಳೆದು ಬರದೆ ಇಂಥ ವಿಶೇಷ ಸಂದರ್ಭಗಳಲ್ಲಿ ಮಾತ್ರ ಪ್ರಯೋಗ ಮಾಡುತ್ತಿದ್ದ ಹವ್ಯಾಸಿ ಕಲಾವಿದರಿಂದ ಬೆಳೆದು ಬಂದಿದೆ.

ಸಣ್ಣಾಟಗಳೆಂದಾಗ ನಮ್ಮ ಕಣ್ಣೆದುರು 'ಶ್ರೀಕೃಷ್ಣ ಪಾರಿಜಾತ', 'ಸಂಗ್ಯಾ ಬಾಳ್ಯಾ', 'ಕಡ್ಲಿಮಟ್ಟಿ ಕಾಶೀಬಾಯಿ' 'ಅಲ್ಲಮಪ್ರಭು', 'ತಿರುನೀಲಕಂಠ' ಮುಂತಾದ ಪ್ರಕಟಗೊಂಡ ಕೆಲವೇ ಆಟಗಳು ಗೋಚರಿಸುತ್ತವೆ. ಆದರೆ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಎಪ್ಪತ್ತಕ್ಕೂಮಿಕ್ಕಿ ಸಣ್ಣಾಟಗಳು ರಚನೆಗೊಂಡುದು ತಿಳಿದು ಬರುವುದು.[8] ಆದರೆ ಇವೆಲ್ಲ ಕೈಬರಹದ ಚೋಪಡಿಯಲ್ಲಿವೆ. ಇವೆಲ್ಲ ಪ್ರಕಟವಾಗಬೇಕಿದೆ. ಇವುಗಳಲ್ಲಿ 'ಅರಬರಾಟ' ಮತ್ತು 'ಭೂಕೈಲಾಸ ಮತ್ತು ಚಂದ್ರಶಿರೋಮಣಿ'ಗಳನ್ನು ಡಾ. ಎಂ. ಎಸ್. ಲಠ್ಠೆಯವರು ಇತ್ತೀಚೆ ಪ್ರಕಟಿಸಿರುವರು. ಸಣ್ಣಾಟಗಳ ರಾಜನೆಂದು ಕರೆಸಿಕೊಂಡ 'ಶ್ರೀಕೃಷ್ಣಪಾರಿಜಾತ'ವನ್ನು ರಚಿಸಿದವ ಈ ಭಾಗದ ರಾಯಚೂರು ಜಿಲ್ಲೆಯ ಅಪರಾಳ ತಮ್ಮಣ್ಣನೆಂಬುದನ್ನಿಲ್ಲಿ ಸ್ಮರಿಸಿಕೊಳ್ಳಬಹುದು. ಗೀತರೂಪದಲ್ಲಿದ್ದ ಇದನ್ನು ಅನಂತರ ಬೆಳಗಾವಿ ಜಿಲ್ಲೆಯ ಕುಲಗೋಡ ತಮ್ಮಣ್ಣ ಗದ್ಯರೂಪದಲ್ಲಿ ಬರೆದು ಜನಪ್ರಿಯ ಆಟವಾಗಿಸಿದ್ದು ಎಲ್ಲರಿಗೂ ತಿಳಿದ ಸಂಗತಿ.

ಸಾಮಾಜಿಕ, ಐತಿಹಾಸಿಕ ಮತ್ತು ಪೌರಾಣಿಕ ಈ ಮೂರೂ ವಸ್ತುನ್ನೊಳಗೊಂಡ ಸಣ್ಣಾಟಗಳು ಇಲ್ಲಿ ರಚನೆಗೊಂಡುದನ್ನು ಮತ್ತು ಅವು ಒಳಗೊಂಡ ವಸ್ತುವೈವಿಧ್ಯವನ್ನು ಗಮನಿಸಿದಾಗ ನಿಜಕ್ಕೂ ಈ ಭಾಗ ಸಣ್ಣಾಟಕ್ಕೆ ಗಮನಾರ್ಹ ಕಾಣಿಕೆ ಸಲ್ಲಿಸಿದೆಯೆನ್ನಬಹುದು.

ಪುರಾಣಪುರುಷರ ಚರಿತ್ರೆಯನ್ನು ಸಾಮಾನ್ಯ ಜನರಿಗೆ ತಿಳಿಸಲೋಸುಗ ರಚಿತವಾದ ಪೌರಾಣಿಕ ಸಣ್ಣಾಟಗಳಲ್ಲಿ ಬೀದರ ಜಿಲ್ಲೆಯ ಧುಮ್ಮನಸೂರ ಸಿದ್ಧಪ್ರಭುಲಾದಾದ ಶಿವರಾಯ ಇವರು ರಚಿಸಿದ 'ಭೂಕೈಲಾಸ','ಮಾನಸರಾಜ', ಗುಲಬರ್ಗಾ ಜಿಲ್ಲೆಯ ಮಹಾಗಾಂವ ಗುರುಲಿಂಗ ಸಿದ್ಧ ರಚಿಸಿದ 'ವಿಭೂತಿ ಮಹಿಮೆ','ರುದ್ರಾಕ್ಷಿ ಮಹಿಮೆ', ಅಬಲಗಿ ಜಗದೇವಪ್ಪ ರಚಿಸಿದ 'ಶುಕಮುನಿ'ಮುಂತಾದುವು ಪ್ರಮುಖವಾದುವು. 'ಭೂಕೈಲಾಸ' ಬೀದರ ಜಿಲ್ಲೆಯಾದ್ಯಂತ ಅನೇಕಸಲ ಪ್ರಯೋಗಗೊಂಡ ಜನಪ್ರಿಯ ಪೌರಾಣಿಕ ಸಣ್ಣಾಟ. ಇದು ರಾವಣನ ಕಥೆಯನ್ನೊಳಗೊಂಡಿದೆ. ಹನ್ನೆರಡು ವರ್ಷ ತಪಸ್ಸುಮಾಡಿ ಶಿವನನ್ನು ಒಲಿಸಿಕೊಂಡ ರಾವಣನಿಗೆ ಗರ್ವ ಬರುವುದು. ಪಾರ್ವತಿಯನ್ನೇ ಮೋಹಿಸುವನು. ವಿಷ್ಣು ನಾರದರ ಯುಕ್ತಿಯಿಂದ ಪಾರ್ವತಿ ಮಂಡೋದರಿಯಾದಾಗ ರಾವಣ ಅವಳನ್ನು ಮದುವೆಯಾಗುವನು. ತಾಯಿಯ ಕಳೆದುಹೋದ ಇಷ್ಟಲಿಂಗವನ್ನು ಮರಳಿ ಪಡೆಯಲು ಆತ ಕೈಲಾಸಕ್ಕೆ ಹೋದನಂತೆ! ಅಲ್ಲಿ ಶಿವನಿಂದ ಆತ್ಮಲಿಂಗ ಪಡೆಯಲು, ಶಿವ ಅದನ್ನು ನೆಲದ ಮೇಲೆ ಇರಿಸಬೇಡವೆಂದು ಹೇಳಿ ಕಳಿಸಿದನಂತೆ. ಆದರೆ ರಾವಣ

8. ಪೋಲೀಸಪಾಟೀಲ. ಬಿ. ಎಸ್. : 'ಜಾನಪದ ಭಾರತಿ', ಪುಟ-83.

ಬರುವಾಗ ಒಬ್ಬ ಹುಡುಗನ ಕೈಯಲ್ಲಿ ಅದನ್ನು ಕೊಟ್ಟು ಮೂತ್ರ ಮಾಡಲು ಹೋಗುವನು. ಆತ ತಿರುಗಿ ಬರುವಷ್ಟರಲ್ಲಿ ಆ ಹುಡುಗ ಅದನ್ನು ನೆಲದ ಮೇಲಿಟ್ಟು ಹೋಗಿದ್ದ. ರಾವಣ ಅದನ್ನೆತ್ತಲು ಎಷ್ಟು ಪ್ರಯತ್ನಿಸಿದರೂ ಅದು ಎತ್ತದಾಗಲು, ಆತನ ಗರ್ವ ಭಂಗವಾಗುವುದು. ಇದರಿಂದ ಆತ ನಿರಾಶನಾಗಿ ಪ್ರಾಣ ಕೊಡಲು ಸಿದ್ಧನಾಗುವನು. ಆಗ ಶಿವ ಬಂದು ಸಾಂತ್ವನ ಹೇಳಿ, ನೀತಿ ಮಾರ್ಗದಲ್ಲಿ ನಡೆಯಬೇಕೆನ್ನುವನು. ಲಂಕಾದ ಆಳ್ವಿಕೆಯೇ ನನಗಿನ್ನು ಸಾಕು ನೀಲಕಂಠನೇ ನನಗೆ ಮುಕ್ತಿ ದಯಪಾಲಿಸೆಂದು ಬೇಡಿಕೊಳ್ಳುವನು. ಮುಕ್ತಿಪದವಿ ಕೊಡಲಿಕ್ಕೆ ನಿನಗೀಗ ಸ್ಥಳವೇ ಇಲ್ಲ. ನಿನ್ನ ಕಾರ್ಯಕ್ಕೆ ಪ್ರತಿಫಲವಾಗಿ ಅದು ಮುಂದೆ ಲಭಿಸುವುದೆಂದು ಹೇಳಿ ಶಿವ ಅದೃಶ್ಯನಾಗುವನು. ಇದಿಷ್ಟು ಈ ಆಟದ ಕಥೆ.

ಈ ಪ್ರದೇಶದಲ್ಲಿ ಉರ್ದು ಮಾತಾಡುವ ಜನ ವಿಪುಲವಾಗಿರುವುದರಿಂದ ಅವರಿಗೂ ತನ್ನ ಆಟ ತಿಳಿಯಲೆಂದು ಕವಿ ಅನೇಕ ಉರ್ದುಶ್ಲೋಕಗಳನ್ನು ನಡು ನಡುವೆ ಔಚಿತ್ಯವರಿತು ಸೇರಿಸಿದ್ದಾನೆ. ಒಂದನ್ನಿಲ್ಲಿ ನೋಡಬಹುದು. 'ಮೇರಾ ನಜರಮೆ ಕೋಹಿ ಚೀಜ ನಹಿ ಸೋಚ ಸಮಜಕರ ಜಲಸಾ ಪಾರ್ವತಿ ಛೋಟೆ ಬಡೆ ದೇವತಾ ಕೆ ಸಾಮನೆ ಹೋ ಜಾಯೇಂಗೆ ಫಜೀತಿ''

ಐತಿಹಾಸಿಕ ವ್ಯಕ್ತಿಗಳಾದ ಶರಣರ, ಸಂತರ, ಕವಿಗಳ ಮತ್ತು ಸತ್ಪುರುಷರ ಉದಾತ್ತ ಬದುಕಿನ ಆದರ್ಶಗಳು ಈ ನಾಡಿನ ಸಾಮಾನ್ಯ ಜನತೆಯ ಬಾಳಿಗೆ ದಾರಿ ದೀವಿಗೆಯಾಗಲಿ ಎಂದು ಕೆಲ ಕವಿಗಳು ಐತಿಹಾಸಿಕ ಸಣ್ಣಾಟಗಳನ್ನು ರಚಿಸಿದುದುಂಟು. ಅವುಗಳಲ್ಲಿ ಮುಡಬಿಯ ಅಂದಯ್ಯಪ್ಪನ 'ಭಕ್ತಕುಂಬಾರ' ಹೇಡ ತುಕಾರಾಮ ಮತ್ತು ಮಾಡ್ಯಾಳ ಕೃಷ್ಣಾಜಿಯರ'ಸುಕವಿ ಕಬೀರದಾಸ' ಓಕಳಿಯ ಚೆನ್ನಬಸಯ್ಯ ಸ್ವಾಮಿ, ಕಾರಭಾಸಗಿಯ ರೇವಣಸಿದ್ಧಯ್ಯಸ್ವಾಮಿ ಮತ್ತು ಸಾವಳಗಿ ಮಹಮ್ಮದ ಸಾಬ ಈ ಮೂವರೂ ರಚಿಸಿದ 'ಜಗಜ್ಯೋತಿ ಬಸವಣ್ಣ' ಅಂಬಲಗಿ ಜಗದೇವಪ್ಪನ 'ಪ್ರಭುಲಿಂಗ' ಪ್ರಮುಖವಾದುವು. ಮತ್ತು ಹುಚ್ಚಗಂಡನೊಡನೆ ಪತಿವ್ರತಾಧರ್ಮ ದಿಂದ ಬಾಳಿದ 'ಹೇಮರಡ್ಡಿ ಮಲ್ಲಮ್ಮ'ನನ್ನು ಕುರಿತು ನರೋನಾದ ಹೈದರಸಾಬನು ರಚಿಸಿದ ಸಣ್ಣಾಟವಂತೂ ಈ ಭಾಗದಲ್ಲಿ ಅತ್ಯಂತ ಜನಪ್ರಿಯವಾಗಿದೆ.

ಸಾಮಾಜಿಕ ಸಣ್ಣಾಟಗಳಿಗಂತೂ ಇಲ್ಲಿ ಕೊರತೆಯಿಲ್ಲ. ಜೀವನದ ವಿವಿಧ ಮುಖಗಳನ್ನು ಪ್ರದರ್ಶಿಸುವ, ವಿವಿಧ ಸಮಸ್ಯೆಗಳನ್ನು ಬಿಂಬಿಸುವ ಆಧುನಿಕ ಸಾಮಾಜಿಕ ನಾಟಕಗಳನ್ನು ಹೋಲುವ ಸಣ್ಣಾಟಗಳು ಇಲ್ಲಿ ಅಧಿಕ ಸಂಖ್ಯೆಯಲ್ಲಿ

---

9. ಲಕ್ಷ್ಮೆ. ಎಂ.ಎಸ್.ಕಾಶೀನಾಥರೆಡ್ಡಿ (ಸಂ): ಭೂಕೈಲಾಸ ಮತ್ತು ಚಂದ್ರಶಿರೋಮಣಿ ಪುಟ-24

ರಚನೆಗೊಂಡುದೊಂದು ವೈಶಿಷ್ಟ್ಯವೇ ಆಗಿದೆ. ಅವುಗಳಲ್ಲಿ ಪ್ರಮುಖವಾದುವೆಂದರೆ ನಾಗೂರ ಸಾಯಿಬಣ್ಣನ 'ನೀಲಕಂಠರಾಜ' ಬೇನೂರ ಭವಾನಸಿಂಗನ 'ಮದನ ಮಂಜರಿ', 'ತಾರಾಮಲಿ' ಮತ್ತು 'ನನ್ನಭೂಮಿ' ಐನಾಪೂರ ಮಾರುತಿಯ 'ಗುಣ ವಂತಿ', ಕುರಕೋಟಾ ಬಸವಣ್ಣನ 'ಗುಣಶೇಖರರಾಜ' ಹೆಬ್ಬಾಳ ಗುರುಪಾದಪ್ಪ ಚೇಂಗಟೆಯ 'ಗುಣವಂತಿ-ಗುಣಲೋಪ', ದೊಡ್ಡಗೋರಠಾದ ಶಿವಲಿಂಗಸ್ವಾಮಿಯ 'ಸತ್ವಪರೀಕ್ಷೆ' ದೇಗಾಂವ ಮಹಾಲಿಂಗನ 'ಶಿವಿ' ಸಲಗರ ಸಿದ್ರಾಮಪ್ಪನ 'ಧರ್ಮ ಪಾಲ-ಗುಣಶೀಲ' ಖೇಳಗಿ ಪೀರಪ್ಪನ 'ನಂದಗೋಪಾಲ' ಧುಮ್ಮನಸೂರ ಸಿದ್ಧ ಪ್ರಭುವಿನ 'ಚಂದ್ರಶಿರೋಮಣಿ' ಓಕಳಿ ಚೆನ್ನಬಸವಯ್ಯನ 'ಶಿವಕಾಂತರಾಜ' ಅಂಬಲಗಿ ಜಗದೇವಪ್ಪನ 'ಚಿತರಂಗಿ' ಬೇನ್ ಚಿಂಚೋಳಿ ಗಿರೆಪ್ಪ ಜಮಾದಾರನ 'ಬಂಧುಪ್ರೇಮ' ಮುಂತಾದುವು.

ಜನಪದರು ಸತ್ಯ, ನ್ಯಾಯ ನಿಷ್ಠೆ, ಪ್ರಾಮಾಣಿಕತೆ, ಪ್ರೀತಿ, ವಿಶ್ವಾಸ ಕರುಣೆ ಮುಂತಾದ ಮೌಲ್ಯಗಳನ್ನು ನಂಬಿ ಇವನ್ನೆಲ್ಲ ತಮ್ಮ ಜೀವನದಲ್ಲಿ ಅಳವಡಿಸಿ ಕೊಂಡು ಬಂದವರು. ಸ್ತ್ರೀಯರಂತೂ ಪತಿಯೇ ದೈವವೆಂದು ನಂಬಿದವರು. ಜೀವಕ್ಕಿಂತಲೂ ಪತಿವ್ರತಾಧರ್ಮಕ್ಕೇ ಮಹತ್ವವಿತ್ತವರು. ಪಾತಿವ್ರತ್ಯದ ಪ್ರಭಾವ ವನ್ನು ಬಿಂಬಿಸುವ ಸಣ್ಣಾಟಗಳೂ ಇಲ್ಲಿ ರಚನೆಗೊಂಡಿವೆ. ಅವುಗಳಲ್ಲಿ 'ಗುಣ ವಂತಿ' ಮತ್ತು 'ನನ್ನಭೂಮಿ'ಗಳನ್ನು ಹೆಸರಿಸಬಹುದು. ಗುಣವಂತಿಯ ತಂದೆ ಗುಣಶೀಲ. ಆತ ಒಮ್ಮೆ ಮಗಳೊಬ್ಬಳನ್ನೇ ಮನೆಯಲ್ಲಿ ಬಿಟ್ಟು ವ್ಯಾಪಾರಕ್ಕೆ ಹೋಗಿದ್ದ. ಆಗ ಗುಣವಂತಿಯ ಮೇಲೆ ಆ ಊರಿನ ಅರಸ ಕಣ್ಣಿಟ್ಟು ಬಲಾತ್ಕಾರ ಮಾಡಲೆಳಸುವನು. ಆಗ ಆಕೆ ಉಪಾಯ ಮಾಡಿ ಆತನಿಂದ ಪಾರಾಗಿ ಅಡವಿ ಸೇರುವಳು. ಅಲ್ಲಿ ಅವಳು ವೇಷ ಬದಲಿಸಿಕೊಂಡು ಕಾಲಹರಣ ಮಾಡುವಳು ಪಾತಿವ್ರತ್ಯ ಕಾಯ್ದುಕೊಳ್ಳಲು ಗುಣವಂತಿ ಅಡವಿಸೇರಿ ಬದುಕಿದುದು ಮಹಿಳೆ ಯರಿಗೆ ಆದರ್ಶವಾಗಿದೆ.

ಸಮಾಜವೆಂದಾಗ ಒಳ್ಳೆಯವರೂ ಕೆಟ್ಟವರೂ ಇರುವವರೇ. ಸ್ತ್ರೀಯರೆಲ್ಲರೂ ಪತಿವ್ರತೆಯರೇ ಇರುತ್ತಾರೆಂದಲ್ಲ. ಪಾತಿವ್ರತ್ಯ ಜೀವಕ್ಕಿಂತಲೂ ಮಿಗಿಲೆಂದು ತಿಳಿದು ಅದನ್ನು ಕಾಪಾಡಿಕೊಂಡು ಬಂದ ಸ್ತ್ರೀಯರಿದ್ದಂತೆ ಪರಪುರುಷರನ್ನು ಕಂಡು ಮೋಹಗೊಂಡು ಹಾದರಕ್ಕೆಳಸುವ ಕೆಲ ಸ್ತ್ರೀಯರೂ ಇರುವುದುಂಟು. ಇಂಥವರನ್ನು ಕುರಿತು ರಚನೆಗೊಂಡ ಸಣ್ಣಾಟಗಳೆಂದರೆ 'ತಾರಾಮಲಿ' 'ಮದನಮಂಜರಿ' ಮತ್ತು 'ಶಿವಕಾಂತರಾಜ' ತಾರಾಮಲಿಯ ಪತಿ ಮಕ್ಕಳನ್ನು ಪಡೆಯಲು ತಪಸ್ಸಿಗೆ ತೆರಳಿ ದಾಗ ಆಕೆ ತನ್ನ ಮೈದುನನನ್ನು ಮೋಹಿಸಿ ಸರಸಕ್ಕೆ ಕರೆಯುವಳು. ಆತ ನಿರಾಕರಿಸು ವನು; ನಾರಿ ಮುನಿದರೆ ಮಾರಿ ಎನ್ನುವಂತೆ ತನ್ನ ಪತಿ ಬಂದೊಡನೆ ಮೈದುನ ಬಲಾತ್ಕರಿಸಲು ಬಂದಿದ್ದನೆಂದು ಆತನ ಮೇಲೆ ಅಪವಾದ ಹೊರಿಸಿ ಆತನನ್ನು

ಹೊರಗೆ ಹಾಕಿಸುವಳು. ಮಂಜರಿ ಎಂಬ ಗುರುವಿನ ಮಗಳು ತನ್ನ ತಂದೆಯ ಶಿಷ್ಯ ಮದನನನ್ನು ಮೋಹಿಸಿ ಸರಸಕ್ಕೆ ಕರೆಯುವಳು. ಆತ ನಿರಾಕರಿಸಲು ಆತನನ್ನು ಬಲಾತ್ಕರಿಸಲು ಹೋಗಿ ವಿಫಲಳಾಗುವಳು. ಈ ಅಪಮಾನ ಸಹಿಸದ ಆಕೆ ಆತನ ಮೇಲೆ ಅಪವಾದ ಹೊರಿಸಿ ಶಿರಚ್ಛೇದನ ಮಾಡಿಸುವಳು. 'ಶಿವಕಾಂತರಾಜ', ಎಂಬ ಸಣ್ಣಾಟದಲ್ಲಿ, ಮಲಮಗನ ಮೇಲೆ ಮೋಹಗೊಂಡ ತಾಯಿಯೊಬ್ಬಳು ಆತನನ್ನು ಸರಸಕ್ಕೆ ಕರೆಯುವಳು. ಆಗ ಆತನು ನಿರಾಕರಿಸಲು, ಪತಿಯ ಕಿವಿಯೂದಿ ಆಕೆ ಆತನನ್ನು ಕಾಡಿಗಟ್ಟುವಳು. ಸ್ತ್ರೀಯ ಕಾಮವಾಸನೆ ಮಧುರವಾದ ಕುಟುಂಬವನ್ನು ಛಿದ್ರಗೊಳಿಸಿ ಅತ್ಯಂತ ದಾರುಣಗೊಳಿಸುವ ಚಿತ್ರವನ್ನು ಈ ಸಣ್ಣಾಟಗಳು ಪರಿಣಾಮಕಾರಿಯಾಗಿ ಹಿಡಿದಿಟ್ಟಿವೆ. ಕಾಮುಕರಾದ ಬಿಡುವಡೆಯ ಸ್ತ್ರೀಕುಲಕ್ಕೇ ಇವು ಬುದ್ಧಿವಾದ ಮಾಡಿದಂತಿವೆ.

ಈ ಪ್ರದೇಶದಲ್ಲಿ ಅತ್ಯಂತ ಪ್ರಸಿದ್ಧಿ ಪಡೆದ ಸಣ್ಣಾಟವೆಂದರೆ 'ಗುಣವಂತಿ ಗುಣಲೋಪ'. ಗುಣವಂತಿ ಹೆಸರಿಗೆ ತಕ್ಕಂತೆ ಆದರ್ಶಸತಿ; ಗುಣಲೋಪ ವಿಷಯ ಲಂಪಟ, ವೇಶ್ಯಾಗಮನಿ. ಈತ ಪತ್ನಿಯನ್ನು ತವರಿನಲ್ಲೇ ಬಿಟ್ಟು ಸಿಂತ್ರಾಸೈನಿ ಎಂಬ ಬೆಲೆವೆಣ್ಣಿನ ಬೆನ್ನುಹತ್ತಿ ಆಕೆ ಬೇಡಿದ್ದನ್ನೆಲ್ಲಾ ಕೊಡುತ್ತ ಹೋಗುವನು. ಈತನ ಹತ್ತಿರವಿದ್ದ ಧನವೆಲ್ಲ ತೀರಲು ಹೆಂಡತಿಯ ಮೈಮೇಲಿನ ಒಡವೆಗಳನ್ನೆಲ್ಲ ಕದ್ದೊಯ್ದು ಕೊಡುವನು. ಕೊನೆಗೆ ಈತನ ಹತ್ತಿರ ಏನೂ ಇಲ್ಲದಾಗಲು, ಆ ವೇಶ್ಯೆ ಇವನನ್ನು ತಿರಸ್ಕರಿಸುವಳು. ಸಾವಕಾರನಾಗಿ ಮೆರೆದ ಈತ ಆ ಊರಲ್ಲೇ ಭಿಕ್ಷೆ ಬೇಡತೊಡಗುವನು. ಇದನ್ನು ಕಂಡು ಗುಣವಂತಿ ತಾನು ದುಡಿದು ಈತನನ್ನು ಸಾಕುವಳು. ವೇಶ್ಯಾಸಂಗದಿಂದ ಮನುಷ್ಯ ಹೇಗೆ ಅಧಃಪತನ ಹೊಂದುವನೆಂಬುದನ್ನು ಈ ಆಟ ಅತ್ಯಂತ ಮಾರ್ಮಿಕವಾಗಿ ತಿಳಿಸುವುದು. ಇಟ್ಟುಕೊಂಡವಳೆಷ್ಟು ದಿನ? ಕಟ್ಟಿಕೊಂಡವಳೇ ಕಡೇತನಕ ಎಂಬ ಸಾರ್ವತ್ರಿಕ ಸತ್ಯವನ್ನು, ನೀತಿಯನ್ನು ಇದು ಸಾರುವುದು.

ಸಣ್ಣಾಟಗಳು ಈ ಭಾಗದಲ್ಲಿ ರಚನೆಗೊಂಡು ಈಗ ನಿಂತಿವೆಯೆಂದಲ್ಲ. ಈಗಲೂ ಇವು ರಚನೆಗೊಳ್ಳುತ್ತಲೇ ಇವೆ. ಇದಕ್ಕೆ ಇತ್ತೀಚೆ ರಚನೆಗೊಂಡ ಡಾ. ಚೆನ್ನಣ್ಣ ವಾಲೀಕಾರ ಅವರ 'ಸೋಮರಾಯ-ಭೀಮರಾಯ' ಮತ್ತು 'ಅಯ್ಯ ಮಾಡಿದ್ದು ಕೈಯ್ಯ್ಮಾಲೆಂಬ ಡಪ್ಪಿನಾಟ'ಗಳೇ ಸಾಕ್ಷಿ. ಸೋಮರಾಯ-ಭೀಮರಾಯರು ಆತ್ಮೀಯ ಗೆಳೆಯರು. ಕುಸ್ತಿಪಟುಗಳು. ಭೀಮರಾಯನದು ಮದುವೆ ಆಗಿತ್ತು. ಸೋಮರಾಯನದು ಆಗಿರಲಿಲ್ಲ. ಒಂದುದಿನ ಸೋಮರಾಯ ಬಟ್ಟೆ ಒಗೆಯಲೆಂದು ಬಂದ ಭೀಮರಾಯನ ಹೆಂಡತಿಯನ್ನು ಕಂಡ. ಅವಳ ಸೌಂದರ್ಯಕ್ಕೆ ಮರುಳಾಗಿ ಅವಳ ಮನೆಯನ್ನೂ ಗುರುತು ಮಾಡಿಕೊಂಡ. ಈ ವಿಷಯವನ್ನು ಗೆಳೆಯ

ಭೀಮರಾಯನಿಗೆ ತಿಳಿಸಲು, ಆತ ಆಕೆ ಯಾರು ತೋರಿಸೆನ್ನುವನು. ಆಗಲಿ ಎಂದು ಸೋಮರಾಯ ಆಕೆಯ ಮನೆಗೆ ಕರೆದೊಯ್ಯಲು ಭೀಮರಾಯನಿಗೆ ವ್ಯಥೆಯಾದರೂ ಅದನ್ನು ತೋರಗೊಡದೆ ಒಳಹೋಗಿ ಪತ್ನಿಯನ್ನು ಒಪ್ಪಿಸಿ ಬಂದ. ಪತಿಯಾಣತಿಯನ್ನು ಮೀರದೆ ಆಕೆ ಒಪ್ಪಿಕೊಳ್ಳುವಳು. ಸೋಮರಾಯನಿಗೆ ಭೀಮರಾಯ ನೀನು ಬೆಳಿಗ್ಗೆ ಐದು ಗಂಟೆಗೆ ಗರಡಿಮನೆಗೆ ಬಾ ಎಂದು ಹೇಳಿ ಹೋಗುವನು. ಸೋಮರಾಯ ಆಕೆಯ ಮನೆ ಒಳಗಡೆ ಹೋಗುವನು. ಅಲ್ಲಿರುವ ತಲವಾರ ತಂಬಿಗೆ ಇವನ್ನೆಲ್ಲ ನೋಡಿ ಆತನಿಗೆ ಆಶ್ಚರ್ಯವಾಗುವುದು. ಅದು ತನ್ನ ಗೆಳೆಯನ ಮನೆಯೇ ಎಂದು ಖಚಿತವಾಗುವುದು. ನಾನೆಂಥ ಹೇಯ ಕೆಲಸಕ್ಕೆಳೆಸಿದೆನಲ್ಲಾ, ಇನ್ನು ಆತನಿಗೆ ಹೇಗೆ ಮುಖ ತೋರಿಸಲಿ ಎಂದು ಪಶ್ಚಾತ್ತಾಪ ಪಡುತ್ತ ಅಲ್ಲಿಯೇ ಇದ್ದ ಖಡ್ಗದಿಂದ ಇರಿದುಕೊಂಡು ಬಿಡುವನು. ತಾನೇ ಆತನನ್ನು ಕೊಂದೆನೆಂಬ ಜನಾಪವಾದ ಬರುವುದೆಂದು ಆಕೆಯೂ ಅದೇ ಖಡ್ಗದಿಂದಿರಿದು ಕೊಳ್ಳುವಳು. ಅತ್ತ ಭೀಮರಾಯ ಸೋಮರಾಯ ಬರಲಿಲ್ಲವೆಂದು ಮನೆಗೆ ಬರುವನು. ಅಲ್ಲಿ ಶವವಾಗಿ ಬಿದ್ದ ಈರ್ವವರನ್ನೂ ಕಂಡು ಸಹಿಸಲಾಗದೆ ತಾನೂ ಖಡ್ಗದಿಂದಿರಿದುಕೊಳ್ಳುವನು. ಇದಿಷ್ಟು ಸ್ಥೂಲವಾಗಿ ಇದರ ಕಥೆ.

ಈ ಸಣ್ಣಾಟವನ್ನು ಡಾ. ವಾಲೀಕಾರರು ಈ ಭಾಗವಲ್ಲಿ ಪ್ರಚಲಿತವಿದ್ದ ಜನಪದ ಕಥೆಯೊಂದನ್ನಾಧರಿಸಿ ರಚಿಸಿರುವರು. ಮೂಲಕಥೆಯಲ್ಲಿ ಭೀಮರಾಯ ಈರ್ವರೂ ಶವವಾಗಿ ಬಿದ್ದುದನ್ನು ಕಂಡು ತಾನೂ ಖಡ್ಗದಿಂದಿರಿದುಕೊಳ್ಳಲಣಿಯಾದಾಗ ಶಿವ ಪ್ರತ್ಯಕ್ಷನಾಗಿ ಅವರನ್ನು ಬದುಕಿಸಿದನೆಂದಿದೆ. ಈ ಅಂಶವನ್ನು ಕೈಬಿಟ್ಟು ಡಾ. ವಾಲೀಕಾರರು ಭೀಮರಾಯನೂ ಆತ್ಮಾಹುತಿ ಮಾಡಿಕೊಳ್ಳುವನೆಂದು ಮಾರ್ಪಾಟು ಮಾಡಿಕೊಳ್ಳುವುದರ ಮೂಲಕ ಸುಖಾಂತವಾಗುವುದನ್ನು ದುಃಖಾಂತವಾಗಿಸಿದ್ದಾರೆ. ಇದರಿಂದ ಸಣ್ಣಾಟಕ್ಕೆ ವಾಸ್ತವಿಕ ಕಳೆ ಬಂದಿದೆ. ಗದ್ಯ ಪದ್ಯಗಳ ಸಮ್ಮಿಶ್ರಣದೊಂದಿಗೆ ಕಥೆ ಮುಂದುವರಿದರೂ ಇಲ್ಲಿ ಪದ್ಯಕ್ಕೇ ಪ್ರಾಶಸ್ತ್ಯ ಸಿಕ್ಕಿದೆ. ಗೆಳೆಯರ ಪರಸ್ಪರ ತ್ಯಾಗ ಮನೋಭಾವನೆಯೇ ಈ ಸಣ್ಣಾಟದ ತಿರುಳು. ಜನಪದರು ಸ್ನೇಹಕ್ಕಾಗಿ ಏನೆಲ್ಲವನ್ನೂ, ಅಂಥ ಬಿಕ್ಕಟ್ಟಿನ ಪ್ರಸಂಗವೊದಗಿದರೆ ಜೀವವನ್ನೂ ತ್ಯಜಿಸಲು ಹಿಂದೆಗೆಯರೆಂಬುದನ್ನು ಈ ಸಣ್ಣಾಟ ಅತ್ಯಂತ ಪರಿಣಾಮಕಾರಿಯಾಗಿ ತಿಳಿಯಪಡಿಸುವುದು.

ಇವರ 'ಅಯ್ಯ ಮಾಡಿದ್ದು ಕೈಯ್ಯ ಮ್ಯಾಲೆಂಬ ಡಪ್ಪಿನಾಟ'ವೂ ಜನಪದ ಕಥೆಯೊಂದನ್ನಾಧರಿಸಿ ರಚಿಸಿದಂಥದು. ಕುರುಬನೊಬ್ಬ ಎತ್ತು ತರಲೆಂದು ಮೂರು ಸಾವಿರ ರೂಪಾಯಿ ತೆಗೆದುಕೊಂಡು ನೆರೆಯೂರಿಗೆ ಹೊರಟುನಿಂತಾಗ ಆತನಿಗೆ ರಾತ್ರಿ ಅಲ್ಲಿ ಎಲ್ಲಿ ಇಳಿದುಕೊಳ್ಳಬೇಕೆಂಬ ಚಿಂತೆಯಾಗುವುದು. ಆ ಊರಿನ ಸ್ವಾಮಿಯೊಬ್ಬ ನನಗೊಬ್ಬ ಅಯ್ಯನ ಪರಿಚಯವಿದೆ ನಿನಗೊಂದು ಪತ್ರ ಕೊಡುವೆನೆನ್ನುವನು.

ಕುರುಬ ಆತನಿಂದ ಪತ್ರ ಪಡೆದುಕೊಂಡು ಆ ಊರಿಗೆ ಬರುವನು. ಆ ಪತ್ರ ಕೊಟ್ಟು ಅಯ್ಯನಿಗೆ ತಾನು ಬಂದ ಕಾರಣ ತಿಳಿಸುವನು. ಆತ ಮೂರು ಸಾವಿರ ರೂಪಾಯಿ ತಂದುದನ್ನು ತಿಳಿದು ಅಯ್ಯನ ಬಾಯಲ್ಲಿ ನೀರೂರುವವು. ಮಲಗಿಕೊಳ್ಳಲು ಆತನಿಗೊಂದು ಸ್ಥಳ ತೋರಿಸುವನು. ಹಣದಾಸೆಗಾಗಿ ಆತನನ್ನು ಅಲ್ಲೇ ಮುಗಿಸಿ ಬಿಡಬೇಕೆಂದು ಅಯ್ಯ ಕೆಲ ಗೂಂಡಾಗಳನ್ನು ಕರೆಸಿ ಆತ ಮಲಗಿಕೊಂಡ ಸ್ಥಳವನ್ನು ತೋರಿಸುವನು. ಅಂದೇ ರಾತ್ರಿ ತನ್ನ ಪ್ರೇಯಸಿಯೊಂದಿಗೆ ಓಡಿಹೋಗಬೇಕೆಂದು ಮೊದಲೇ ಯೋಚಿಸಿದ ಅಯ್ಯನ ಮಗ ರಾತ್ರಿ ಎದ್ದು ಆ ಕುರುಬನನ್ನು ಆಚೆ ಸರಿಸಿ ಆ ಸ್ಥಳದಲ್ಲಿ ತಾನು ಮಲಗಿಕೊಳ್ಳುವನು. ಆತನ ಪ್ರೇಯಸಿಯು ಮನೆಯಲ್ಲಿ ಆ ದಿನ ಒಬ್ಬರಿಗೆ ಚೇಳು ಕಡಿದುದರಿಂದ ಬರಲಿಲ್ಲ. ಗೂಂಡಾಗಳು ರಾತ್ರಿ ಬಂದು ಮೊದಲೇ ಮಾತುಕೊಟ್ಟಂತೆ ಅಯ್ಯನ ಮಗನನ್ನೇ ಕುರುಬನೆಂದು ತಿಳಿದು ಆತನ ರುಂಡವನ್ನು ಕತ್ತರಿಸಿ ಅಯ್ಯನ ಬಳಿಗೊಯ್ದು ತೋರಿಸುವರು. ತಾನು ಮಾಡಿದ್ದು ತನಗೇ ತಿರುಮಂತ್ರವಾಯ್ತೆಂದು ಅಯ್ಯ ಗೋಳಾಡುವನು. ಅಯ್ಯನ ಮಗ ತನ್ನ ಪ್ರೇಯಸಿಯೊಂದಿಗೆ ಓಡಿಹೋಗಲೆಂದು ಹೊರಗೆ ಬಂದು ಮಲಗಿದ್ದು ಮೂಲ ಕಥೆಯಲ್ಲಿಲ್ಲ. ಅಲ್ಲಿ, ಒಳಗೆ ಶಕೆಯಾದುದರಿಂದ ಸಹಜವಾಗಿ ಹೊರಗೆ ಬಂದು ಮಲಗಿಕೊಳ್ಳುವನೆಂದಿದೆ. ಈ ಅಂಶವನ್ನು ಬದಲಿಸಿ ಡಾ. ಮಾಲೀಕಾರರು ಆಟ ಪರಿಣಾಮಕಾರಿಯಾಗಲೆಂದು ಯತ್ನಿಸಿದುದನ್ನಿಲ್ಲಿ ಕಾಣುವೆವು. ಇಲ್ಲೂ ಪದ್ಯಗಳಿಗೇ ಪ್ರಾಶಸ್ತ್ಯ ಸಿಕ್ಕಿದೆ.

ಹೀಗೆ ಸಮಾಜದಲ್ಲಿನ ಅರೆ–ಕೊರೆ, ಲೋಪ ದೋಷಗಳನ್ನೆತ್ತಿ ತೋರಿಸುವ, ಮಾನವ ಸ್ವಭಾವವನ್ನು, ದೌರ್ಬಲ್ಯವನ್ನು ಚಿತ್ರಿಸುವ ಸ್ನೇಹ, ತ್ಯಾಗ, ಪ್ರಾಮಾಣಿಕತೆ, ಸತ್ಯ ಮುಂತಾದ ಜೀವನಮೌಲ್ಯಗಳನ್ನು ಆದರ್ಶಗಳನ್ನು ಚಿತ್ರಿಸುವ ಈ ಭಾಗದ ಕೆಲ ಸಣ್ಣಾಟಗಳನ್ನು ನೋಡಿದೆವು. ಇದು ಒಂದು ಕಿರುನೋಟ ಅಷ್ಟೇ. ಈ ಭಾಗದ ಸಣ್ಣಾಟಗಳು ಹಿಂದೆಯೇ ಹೇಳಿದಂತೆ ವೃತ್ತಿರಂಗಭೂಮಿಯ ಸಾಮಾಜಿಕ ನಾಟಕಗಳನ್ನು ಹೋಲುವುದೊಂದು ವೈಶಿಷ್ಟ್ಯವೇ ಆಗಿದೆ. ಕಾಲಕ್ಕೆ ತಕ್ಕಂತೆ ಅವುಗಳ ಕಥಾವಸ್ತುವಿನಲ್ಲೂ ಬದಲಾವಣೆಯಾಗುತ್ತ ಬಂದುದನ್ನು ಗುರುತಿಸುವೆವು. ಒಂದರ್ಥದಲ್ಲಿ ಇವು ಸಾಮಾನ್ಯ ಜನತೆಗೆ ನೈತಿಕ ಶಿಕ್ಷಣವನ್ನು ನೀಡುವ ಕಾರ್ಯಮಾಡುತ್ತಾ ಬಂದಿವೆಯೆನ್ನಬಹುದು. ಸಣ್ಣಾಟ ಒಟ್ಟಾರೆಯಾಗಿ ಈ ಭಾಗದ ವಿಶೇಷ ಜನಪ್ರಿಯ ಕಲಾಪ್ರಕಾರವಾಗಿ ಬೆಳೆದು ಬಂದುದನ್ನು ಗುರುತಿಸುವೆವು.

ಬಂಧುವರ್ಮ : ನಾಲ್ಕು ಟಿಪ್ಪಣಿಗಳು

ಡಾ॥ ಹಂಪನಾ

ಟಿಪ್ಪಣಿ ೧ : ಪ್ರವೇಶ-ಹಿನ್ನೆಲೆ

.00 ತನ್ನ ಹಲವು ವಿಶಿಷ್ಟ ಗುಣ ಗೌರವಗಳಿಂದ, ಉಳಿದ ಕನ್ನಡ ಕವಿಗಳಿಗಿಂತ ಭಿನ್ನನಾಗಿ ಕಾಣುವ ಬಂಧುವರ್ಮಕವಿ ಹಿಂಡನಗಲಿ ನಿಂತ ಒಂಟಿ ಸಲಗನನ್ನು ನೆನಪಿಸುತ್ತಾನೆ. ಆತನ ಕಾವ್ಯಗಳು ಎರಡು ; ಜೀವ ಸಂಬೋಧನೆ ಮತ್ತು ಹರಿವಂಶ. ಈ ಎರಡು ಚಂಪೂಕಾವ್ಯರಚನೆಯಲ್ಲಿ ವ್ಯಕ್ತವಾಗಿರುವ ಒಟ್ಟು ಸತ್ವ, ಸಾಧನೆ ಮತ್ತು ವ್ಯಕ್ತಿತ್ವದ ಔನ್ನತ್ಯದೃಷ್ಟಿಯಿಂದ ಬಂಧುವರ್ಮಕವಿ ನಿಶ್ಚಯವಾಗಿಯೂ ಪಂಪನಿಗೆ ದ್ವಿತೀಯನಾಗಿ ತೋರುತ್ತಾನೆ. ಆದಿಪುರಾಣ ಮತ್ತು ಜೀವ ಸಂಬೋಧನೆ ಕಾವ್ಯಗಳನ್ನು ತುಲನೆ ಮಾಡಿ ನೋಡುವಾಗ ಈ ಎರಡೂ ಕಾವ್ಯಗಳು ಸಮಶ್ರುತಿಯಲ್ಲಿ ಸಾಗುವುದು ಕಾಣುತ್ತದೆ ; ಒಮ್ಮೊಮ್ಮೆ ಪಂಪನ ಸಾಧನೆಗಿಂತ ಬಂಧುವರ್ಮನ ಸಾಧನೆ ದೊಡ್ಡದೆನಿಸಲೂಬಹುದು. ಈ ಕಾವ್ಯಪರೀಕ್ಷೆಯಲ್ಲಿ ಬಂಧುವರ್ಮನ ಮಹತ್ವಾಕಾಂಕ್ಷೆಗೆ ಪಂಪನದಕ್ಕಿಂತ ಕೆಲವು ಹೆಚ್ಚಿನ ಅಂಕಗಳು ಬರಲು ನಿರ್ದಿಷ್ಟ ಕಾರಣಗಳಿವೆ. ಆದಿಪುರಾಣದಲ್ಲಿ ಧರ್ಮದೊಂದಿಗೆ ಒಟ್ಟೊಟ್ಟಿಗೆ ಕಥಾನಿರೂಪಣೆಯಿದೆ ; ಪಂಪ ಧರ್ಮವೊಂದನ್ನೇ ತನಿಯಾಗಿ ಪ್ರತಿಪಾದಿಸುತ್ತಿಲ್ಲ, ಕಥೆಯ ಮೂಲಕ ಕಥಾ ಶರೀರದಲ್ಲಿ ಧರ್ಮಸ್ವರೂಪ ಅನಾವರಣಗೊಳ್ಳುತ್ತಾ ಹೋಗುತ್ತದೆ.

.01 ಬಂಧುವರ್ಮನ ದಾರಿ ಕಠಿಣತರವಾದದ್ದು. ಈ ಇಕ್ಕಟ್ಟಿನ ನಡಿಗೆ ಅವನು ಬಯಸಬೇಕೆಂದೇ ಮಾಡಿಕೊಂಡಿರುವ ಏರ್ಪಾಟು. ನೇರವಾಗಿ, ತನಿಯಾಗಿ ಧರ್ಮತತ್ವವನ್ನೇ ನಿರೂಪಿಸುವ ಅಸುಲಭದ ಹಾದಿಯನ್ನು ಬಂಧುವರ್ಮ ಆರಿಸಿಕೊಂಡು, ತನ್ನ ಕಾವ್ಯಶಕ್ತಿಯನ್ನು ಅಗ್ನಿದಿಬ್ಯಕ್ಕೆ ಒಡ್ಡಿ, ತೇರ್ಗಡೆಯಾಗಿದ್ದಾನೆ. ಇಂಥ ಕಠಿಣ ಪರೀಕ್ಷೆಯ ಶೋಧನ ಕ್ರಿಯೆಗೆ ತಾನಾಗಿ ಸ್ವೇಚ್ಛೆಯಿಂದ ಒಳಗಾಗಿಯೂ ಅದರಿಂದ ಪಾರಾಗಿರುವುದು ಕವಿಯೊಬ್ಬನ ಮಹಾವಿಜಯ. ಕಾವ್ಯಸಕ್ತಿಗೆ ಸಂದ ಗೌರವ. ತನ್ನ ಸೃಜನ ಸಾಮರ್ಥ್ಯದ ಮೇಲ್ಮೆಯನ್ನು ಬಂಧುವರ್ಮ ಕವಿ ಹಲವು ಕಡೆಗಳಲ್ಲಿ ಸ್ಥಿರವಾಗಿ ಸ್ಥಾಪಿಸಿದ್ದಾನೆ. ಈ ಮಹತ್ವವನ್ನು ಮನವರಿಕೆ ಮಾಡಲು ಪ್ರತಿಯೊಂದು ಅಧಿಕಾರವನ್ನು ಜೀವಸಂಬೋಧನೆಯಲ್ಲಿ ಎರಡೆರಡು ಭಾಗಗಳನ್ನಾಗಿಸಿದ್ದಾನೆ. ಒಂದೊಂದೂ ಅಧಿಕಾರದ ಮೊದಲರ್ಧದಲ್ಲಿ ಕೇವಲ ಶುದ್ಧ ಜೈನ

ಸಿದ್ಧಾಂತವಾದ ಅನುಪ್ರೇಕ್ಷೆಯೊಂದರ ವಿವೇಚನೆಯಿರುವಂತೆ ಸಂಯೋಜಿಸಿದ್ದಾನೆ, ಇದು ಪಂಪನಿಗಿಂತ ಒಂದು ಹೆಜ್ಜೆ ಮುಂದಿಟ್ಟ ಪ್ರಯತ್ನ.

.02 ಹಾಗೆಯೇ ಪ್ರತಿ ಅಧಿಕಾರದ ಉತ್ತರಾರ್ಧ ಭಾಗದಲ್ಲಿ, ಪೂರ್ವಾರ್ಧದಲ್ಲಿ ಹೇಳಿರುವ ತಾತ್ವಿಕ ಜಿಜ್ಞಾಸೆಯನ್ನು ಪುಷ್ಟೀಕರಿಸಲು ದೃಷ್ಟಾಂತಕಥೆಯನ್ನು ಕೊಡಲಾಗಿದೆ. ಬಂಧುವರ್ಮಕವಿ ಈ ಎರಡು ಘಟ್ಟದ ಪ್ರಯತ್ನದಲ್ಲೂ ವಿಜಯಿಯಾಗಿದ್ದಾನೆ. ಅಲ್ಲಿಯೂ ಸಂದು ಇಲ್ಲಿಯೂ ಸಲ್ಲುವ ಇಂಥ ದಿಗ್ವಿಜಯ ಸಂಪಾದಿಸಿದ ಬಂಧುವರ್ಮನಿಗೆ ಸಾಟಿಯಾದ ಇನ್ನೊಬ್ಬ ಕವಿ ಯಾರಿದ್ದಾರೆಂದು ಹುಡುಕಬೇಕು; ಪುರಾಣ ಕವಿಶ್ರೇಣಿಯಲ್ಲಿ ಪರಿಗಣಿಸುತ್ತಾ ಕೈಬೆರಳು ಮಡಚುತ್ತಾ ಹೊರಟರೆ, ಪ್ರಾಯಃ ಬಂಧುವರ್ಮನಿಗೆ ಕಿರುಬೆರಳು ಮಡಚಿದ್ದಾದ ಮೇಲೆ, ಅದರ ಪಕ್ಕದ ಎರಡನೆಯ ಬೆರಳು ಮಡಚಲು ಬೇಕಾದ, ಬಂಧುವರ್ಮಸಮಾನಾದ, ಇನ್ನೊಬ್ಬ ಕವಿಯ ಹೆಸರು ಸಿಗದೆ ಅನಾಮಿಕವಾಗಿ ಹಾಗೆಯೇ ಉಳಿಯಬಹುದು.

.03 ಪಂಪನ ಸಾಧನೆಯನ್ನು ಕಡೆಗಣಿಸುತ್ತಿಲ್ಲ, ಆದರೆ ಬಂಧುವರ್ಮನ ಸಾಧನೆಯೂ ಕಡೆಗಣಿಸುವಂತಹುದಲ್ಲ ಎಂಬುದು ಮುಖ್ಯವಾದ ವಿಷಯ. ಈತನೂ ತನ್ನ ಬಗೆಗಣ್ಣೆದುರಲ್ಲಿ ಪಂಪನ ಕಾವ್ಯದ ಮಹೋನ್ನತಿಯನ್ನು ಸಾಕ್ಷಾತ್ಕರಿಸಿದ್ದಾನೆ. ಅದಕ್ಕಿಂತ ಭಿನ್ನವೂ ಮಿಗಿಲೂ ಆದ ತನ್ನೊಂದು ಪ್ರಯೋಗವನ್ನು ಇರುವ ಪರಿಮಿತಿಯಲ್ಲೂ ನಡೆಸಿದ್ದಾನೆ; ಕಥೆಯೇ ಇಲ್ಲದ ತತ್ವವನ್ನಷ್ಟೇ, ತನಿಯಾಗಿ, ಮನೋಜ್ಞವಾಗಿ ಹೇಳುವುದು ; ಕಥೆಯೂ ಹೇಳಿ, ಮೊದಲೇ ತಿಳಿಸಿದ್ದ ತತ್ವದ ಸಾರಸರ್ವಸ್ವವನ್ನು ಮತ್ತೊಮ್ಮೆ ರಸವತ್ತಾಗಿ ಮನವರಿಕೆ ಮಾಡುವುದು–ಹೀಗೊಂದು ಕೈನೋಡಿದಂತಿದೆ. ಪಂಪನಿಗೆ ಒಂದೇ ಆಕರ, ಜಿನಸೇನರ ಸಂಸ್ಕೃತ ಪೂರ್ವಪುರಾಣ. ಬಂಧುವರ್ಮನಿಗಾದರೊ ಹಲವು ಆಕರಗಳು, ಸಂಸ್ಕೃತ ಪ್ರಾಕೃತ ಕನ್ನಡ ಮೂಲಗಳು. ಪಂಪನ ಸಂಗ್ರಹಗುಣ, ಔಚಿತ್ಯಪ್ರಜ್ಞೆ ಈತನಲ್ಲೂ ಸಮಪ್ರಮಾಣದಲ್ಲಿದೆ. ಪಂಪನಿಗಿಂತ ಈತನ ಶ್ರಮ–ಸಾಧನೆ ಹೆಚ್ಚು. ಆದರೂ ಪಂಪನ ಮಹಾಕಾವ್ಯ ವಸ್ತುನಿರ್ವಹಣೆಯ ಅಖಂಡ ಬೀಸು, ವೈಭವೋನ್ನತಿ ಆ ಎತ್ತರದಲ್ಲಿ ಈತನಲ್ಲಿಲ್ಲ.

.04 ಕಥಾನಿಷ್ಠವಾದ ಹರಿವಂಶಕ್ಕಿಂತ ಶುದ್ಧ ಧಾರ್ಮಿಕ ಕೃತಿಯಾದ ಜೀವಸಂಬೋಧನೆಗೇ ಬಂಧುವರ್ಮಕವಿ ಮುತುವರ್ಜಿ ತೋರಿದ್ದಾನೆ. ಕೃತಿಯುದ್ದಕ್ಕೂ ಸುಲಭಗ್ರಾಹ್ಯವೂ ಸರಳವೂ ಸುಪರಿಚಿತವೂ ಆದ ವಸ್ತು–ಕಥೆ ಇರುವ ಹರಿವಂಶಾಭ್ಯುದಯ ಕಾವ್ಯ ವಿಮರ್ಶಕ–ಕಾವ್ಯಪ್ರೇಮಿಗಳಿಗೆ ವಾಸ್ತವವಾಗಿ ಆದರಣೀಯವಾಗಬೇಕು. ದುರವಗಾಹ್ಯವೂ ಗಂಭೀರವೂ ಅಪರಿಚಿತವೂ ಆದ ಅನುಪ್ರೇಕ್ಷೆಗಳ ಮಹಿಮೆಯ ಪ್ರಕಟನೆಗೆ ಮೀಸಲಾದ ಜೀವಸಂಬೋಧನೆ ಅರೋಚಕವಾಗಬಹುದಿತ್ತು. ಆದರೆ ಈ ಎರಡೂ ಕಾವ್ಯಗಳಲ್ಲಿ ನಮ್ಮ ನಿರೀಕ್ಷೆ ತಲೆಕೆಳಗಾಗಿದೆ.

ಲೌಕಿಕಕಾವ್ಯ ಹರಿವಂಶಾಭ್ಯುದಯಕ್ಕಿಂತ ಧಾರ್ಮಿಕಕಾವ್ಯ ಜೀವಸಂಬೋಧನೆ ಪ್ರಿಯವಾಗಿ ಅಚ್ಚೊತ್ತಿ ನಿಲ್ಲುತ್ತದೆ. ಹೀಗೆಂದಾಗ ಹರಿವಂಶಾಭ್ಯುದಯ ಕಳಪೆಯಾಗಿದೆಯೆಂದು ಅರ್ಥೈಸಬೇಕಾಗಿಲ್ಲ. ನೇಮಿನಾಥಪುರಾಣಗಳು ಹಾಗೂ ಹರಿವಂಶಪುರಾಣ ಪರಂಪರೆಯ ಕಥೆ ಹೇಳುವ ಕೃತಿಶ್ರೇಣಿಯಲ್ಲಿ ಬಂಧುವರ್ಮನ ಹರಿವಂಶಕ್ಕೆ ವಿಶಿಷ್ಟ ಸ್ಥಾನವಿದೆ. ಭವಾವಳಿಗಳ ಹಾವಳಿಯಿಂದ ಮುಕ್ತಗೊಳಿಸಿ, ಪ್ರಸ್ತುತತೆಗೇ ಆದ್ಯತೆಯಿತ್ತು, ನೇರವಾಗಿ ಕಥೆ ಪ್ರತಿಪಾದಿಸುತ್ತ ಹೊರಟಿರುವ ಈ ಕಾವ್ಯ ಆಧುನಿಕ ಮನಸ್ಸುಗಳಿಗೂ ಇಷ್ಟವಾಗುತ್ತದೆ, ಅಷ್ಟರಮಟ್ಟಿಗೆ ಇದೂ ಯಶಸ್ವೀಕಾವ್ಯವೇ. ಆದರೆ ಜೀವಸಂಬೋಧನೆಯ ಸಾಧನೆ-ಗೆಲುವು ಬೇರೆ ಬಗೆಯದು; ಅಲ್ಲಿ ಧಾರ್ಮಿಕ ಜಿಜ್ಞಾಸೆಯೂ ಹೃದ್ಯನಿರೂಪಣೆಯಾಗಿರುವುದರೊಂದಿಗೆ ದೃಷ್ಟಾಂತಕಥೆಗಳೂ ಮನಸೆಳೆಯುವ ಕಲೆಗಾರಿಕೆಯಿಂದ ಜಯಭೇರಿ ಬಾರಿಸಿವೆ. ಈ ವಿಷಯದಲ್ಲಿ ಬಂಧುವರ್ಮನ ಕಾವ್ಯರಥ ಪಂಪನ ರಾಜಮಾರ್ಗದಲ್ಲಿ ಹೊರಟಿದೆ.

.05 ಇನ್ನು ಬಂಧುವರ್ಮ ಆಯ್ಕೆ ಮಾಡಿರುವ ಕಥೆಗಳಲ್ಲಿರುವ ಹಿರಿಮೆ ಕುರಿತೂ ಎರಡು ಮಾತು ಹೇಳಬೇಕು ; ಆ ಕಥೆಗಳೆಲ್ಲ ಕವಿಗಳನೇಕರು ಹೇಳಿ ಹೋದ ಸವೆದ–ಸೊರಗಿದ ಕಥೆಗಳೇ. ಹೀಗೆ ಪೂರ್ವಾಚಾರ್ಯರು ನಿಗದಿಸಿದ ಚರ್ವಿತ ಚರ್ವಣ ಕಥೆಗಳನ್ನೇ ಬಾಚಿಕೊಂಡು ಕಾಯಕಲ್ಪ ಕ್ರಿಯೆಯಿಂದ ಈ ಕವಿ ಸಪ್ರಾಣಿಸಿದ್ದಾನೆ, ತನ್ನ ಪ್ರತಿಭೆಯ ತಿಳಿನೀರಲ್ಲಿ ತೋಯಿಸಿ ಮಿಯಿಸಿ ಸ್ಫೂರ್ತಿಯ ಒಪ್ಪ ಓರಣದಿಂದ ಅಣಿಗೊಳಿಸಿಟ್ಟಿದ್ದಾನೆ, ಮಸೆದ ಅಲಗಿನಂತೆ ಮಿಂಚುವ ಶೈಲಿಯಿಂದ ತಿದ್ದಿ ತೀಡಿ ಅಚ್ಚುಕಟ್ಟು ತಂದಿದ್ದಾನೆ, ಮಾಲೋಪಮೆಗಳ ಮಣಿಹಾರಹಾಕಿ ಸಾಲಂಕೃತಗೊಳಿಸಿದ್ದಾನೆ. ಮಾರ್ಗ ಮತ್ತು ದೇಸಿ ಕಾವ್ಯಪದ್ಧತಿಯ ಸಮನ್ವಯವನ್ನು ಸಾಧಿಸಿದ್ದಾನೆ. ಸಂಕ್ಷೇಪಿಸಿ ಹೇಳುವುದಾದರೆ, ತನ್ನ ಪರಿಣತ ಕಾವ್ಯ ಶಕ್ತಿಯಿಂದ ಹೊಸಹುಟ್ಟು ಕೊಟ್ಟಿರುವದರಿಂದ ಉಂಟಾದ ಅಸಾಧಾರಣ ಮೇಲ್ಮೆ ಕೊರು ಎಲ್ಲ ಅಂಶಗಳಲ್ಲೂ ಮಿರುಗಿದೆ. ಹಿಂದಿನ ಕವಿಗಳ ಪ್ರಥಮಗಳನ್ನೂ ವಿಕ್ರಮಗಳನ್ನೂ ಮುರಿದು ಹೊಸ ದಾಖಲೆ ಸ್ಥಾಪಿಸಿರುವ ಬಂಧುವರ್ಮ ಕವಿಯ ಕೊರಳಲ್ಲಿ ಪೇರುರದಲ್ಲಿ ಹಲವು ಸುವರ್ಣಪದಕಗಳು ಕಂಗೊಳಿಸುತ್ತವೆ.

.06 ಬಂಧುವರ್ಮ ಜೈನ ಪರಂಪರೆಯಲ್ಲಷ್ಟೇ ಅಲ್ಲದೆ ತನ್ನವರೆಗೆ ಅಕುಂಟಿತವಾಗಿ ಬೆಳೆದುಬಂದ ಕನ್ನಡ ಕಾವ್ಯದ ಸಂದರ್ಭದಲ್ಲಿ ನಿಂತು ಕಾವ್ಯ ಬರೆಯುತ್ತಿರುವಂತೆ ಮೇಲುನೋಟಕ್ಕೆ ಕಾಣಬಹುದು. ದೂರನೋಟಕ್ಕೆ ಹೀಗೆ ಪರಂಪರೆಯಲ್ಲಿ ಕಾಲೂರಿರುವ ಹಾಗೆ ಕಂಡರೂ ವಾಸ್ತವದಲ್ಲಿ ಭಿನ್ನನಾಗಿದ್ದಾನೆ. ಬಂಧುವರ್ಮ ಪ್ರಯೋಗಪರಿಣತಮತಿಯಾದ ಉತ್ತಮ ಕವಿಯೆಂಬುದು ಹಲವು ಪಾತಳಿಗಳಲ್ಲಿ ಪ್ರಕಟವಾಗಿರುವುದನ್ನು ಸೂಕ್ಷ್ಮತೌಲನಿಕ-ಸಾಂಸ್ಕೃತಿಕ-ಐತಿಹಾಸಿಕ ಸಮೀಕ್ಷೆಯಿಂದ ಅರಿಯಬಹುದು.

.07 ಕಾವ್ಯ ರಚನೆಯಲ್ಲಿ ಸ್ವಾತಂತ್ರ್ಯ ವಹಿಸಿ, ಪ್ರಯೋಗ ನಡಸಿ, ಕನ್ನಡ ಕಾವ್ಯ ಪರಂಪರೆಗೆ ಪರಿಮಿತ ಪ್ರಮಾಣದ ತಿರುವನ್ನು ಕೊಟ್ಟ ಈ ಕವಿಯ ವೈಶಿಷ್ಟ್ಯಗಳನ್ನು ಹಳಗನ್ನಡ ಕಾವ್ಯ ವಿಮರ್ಶಕರು ಸರಿಯಾಗಿ ಗುರುತಿಸಿಲ್ಲವಾಗಿ, ಸಾಹಿತ್ಯ ಚರಿತ್ರೆಯಲ್ಲಿ ಸಲ್ಲಬೇಕಾದ ಸ್ಥಾನ ಈ ಕವಿಗೆ ಸಂದಿಲ್ಲ. ಈತ ಗತಾನುಗತಿಕನಾಗದ ಸ್ವತಂತ್ರ ಮನೋಧರ್ಮದ ಕವಿಯೆಂಬುದು ಹತ್ತಾರು ಸಂಗತಿಗಳಲ್ಲಿ ಹೆಪ್ಪುಗಟ್ಟಿದೆ. ಚಲಾವಣೆಗೆ ಇನ್ನು ಸಲ್ಲದ ನಾಣ್ಯದಂತೆ ಮೂಲೆಗುಂಪಾಗಿದ್ದ ಕಥೆಗಳನ್ನು ಪುನರುಜ್ಜೀವಿಸಿ ಅಭಿಜಾತತೆಯನ್ನು ತಂದು ಕೊಟ್ಟಿರುವುದು ಬಂಧುವರ್ಮನ ಸೃಜನತ್ವಕ್ಕೊಂದು ದಿವ್ಯ ಸಾಕ್ಷಿ : ಮುಖ್ಯ ಪಾತ್ರಗಳು ಮುಖಾಮುಖಿಯಾಗಿ ನಿಂತು ಸಂವಾದಿಸಿರುವ ನಾಟ್ಯಮಯ ಸಂದರ್ಭಗಳನ್ನು ನಿರ್ಮಿಸಿ ನಿರ್ವಹಿಸಿರುವುದರಲ್ಲೂ ಹಿರಿಮೆಯಿದೆ. ಪ್ರಗಲ್ಭ ಪಾಂಡಿತ್ಯಕ್ಕೆ ತೆಕ್ಕೆ ಹಾಕಿಕೊಂಡ ಪಾರದರ್ಶಕ ಪ್ರತಿಭೆಯನ್ನು ಉದ್ದಕ್ಕೂ ಸಹಜಸ್ಫೂರ್ತಿಯೊಂದು ನಿರ್ವಹಿಸಿ ನಡೆಸುವ ರೀತಿಗೆ ಬೆರಗಾಗುತ್ತೇವೆ.

.08 ಕವಿ-ಕಾವ್ಯ ಸಂಬಂಧವಾದ ತನ್ನ ಪರಿಕಲ್ಪನೆಯನ್ನು ಬಂಧುವರ್ಮ ತಿಳಿಸಿದ್ದಾನೆ. ಈತನಿಗಿರುವ ಕಾವ್ಯಪ್ರಜ್ಞೆ, ವಸ್ತುಪ್ರಜ್ಞೆ, ಭಾಷಾಪ್ರಜ್ಞೆ, ಸಾಮಾಜಿಕಪ್ರಜ್ಞೆಯಂತೆ ಛಂದೋಪ್ರಜ್ಞೆಯನ್ನು ಇಲ್ಲಿ ಉಲ್ಲೇಖಿಸಬೇಕು. ಸಂಸ್ಕೃತಕಾವ್ಯಗಳ ಛಂದಸ್ಸಿನಂತೆ ದೇಸೀ ಛಂದಸ್ಸನ್ನು ಅಳವಡಿಸಿದ್ದಾನೆ. ತ್ರಿಪದಿ ಅಕ್ಕರ ರಗಳೆ-ಇವನ್ನು ಲೀಲಾಜಾಲವಾಗಿ ಬಳಸಿದ್ದಾನೆ. ತ್ರಿಪದಿಯ ಲಕ್ಷಣವೆಲ್ಲ ಅಂಶಗಣ ಘಟಿತವಾಗಿ ಛಂದೋಂಬುಧಿಯ ಲಕ್ಷಣಕ್ಕೆ ಅನುಗುಣವಾಗಿದೆ. ರಗಳೆಯ ಗೇಯಗುಣವನ್ನೂ ಕಥಾನಕ ಪ್ರಣಾಳಿಕೆಯನ್ನೂ ಮೇಳವಿಸಿ ವ್ಯವಸ್ಥಿತವಾಗಿ ಪ್ರತಿ ಅಧಿಕಾರದಲ್ಲೂ ಉಪಯೋಗಿಸಿರುವುದರಿಂದ, ಸಹಜವಾಗಿಯೇ ಅನಂತರದ ಕವಿಗಳ ಗಮನ ಸೆಳೆಯುವಂತಾಗಿದೆ; ಹರಿಹರನು ಬಂಧುವರ್ಮನ ಈ ಪ್ರಯೋಗದಿಂದ ಪ್ರಭಾವಿತನಾಗಿ ಸ್ಫೂರ್ತಿಗೊಂಡು ತನ್ನ ಇಡೀ ಕಾವ್ಯಗಳಿಗೆ ಅಳವಡಿಸಿರುವ ಸಂಭಾವ್ಯತೆಯನ್ನು ಪರಿಶೀಲಿಸಬಹುದು. ಕನ್ನಡ ಕಾವ್ಯಗಳ ಛಂದಸ್ಸಿನ ಚರಿತ್ರೆಯಲ್ಲಿ ಅಪರೂಪ ಪ್ರಯೋಗವಾದ ಪಂಚಪಾದವೃತ್ತ ಕೂಡ ಹರಿವಂಶಾಭ್ಯುದಯದಲ್ಲಿದೆ; ಇದು ಅವನ ಪ್ರಯೋಗಶೀಲ ಗುಣಕ್ಕೆ ಹಿಡಿದ ಕನ್ನಡಿ : ಇಲ್ಲಿಯೇ 13-31ರ ಆದಮೇಲೆ ಒಂದು ದಂಡಕವೂ ಕಂಡುಬರುತ್ತದೆ.

.09 ಬಂಧುವರ್ಮನ ವಿದ್ವತ್ತಿನ ವ್ಯಾಪಕ ಸ್ವರೂಪ ಕುರಿತು ಕ್ಷ-ಕಿರಣ ಹಾಯಿಸುವ ಹತ್ತಾರು ಪದ್ಯಗಳಿವೆ ; ಈ ನೆಲೆಯಲ್ಲಿಯೇ ಕವಿಪ್ರತಿಭೆಯ ಕ್ರಿಯಾಶೀಲತೆಯೂ ಇತರ ಸಾಧ್ಯತೆಗಳನ್ನು ಅನ್ವೇಷಿಸಿ ಹೊರಟಿರುವ ಪ್ರಯೋಗ ಪ್ರವೃತ್ತಿಯೂ ಗಮನಿಕೆಗೆ ಬರುತ್ತದೆ. ನೀರಸವಾದ ಅನುಪ್ರೇಕ್ಷೆಯಂಥ ಶಾಸ್ತ್ರ-ಸಂಗತಿಯನ್ನು ಸಾಮಾನ್ಯ ಜೀವಕ್ಕೂ ಸುಬೋಧಗೊಂಡು ರೋಚಕವಾಗುವಂತೆ

ಸಕ್ಕರೆ ಲೇಪ ಕಟ್ಟುವ ಈತನ ಕೆಲಸ ಹಳೆಗನ್ನಡ ಕಾವ್ಯಶ್ರೇಣಿಯಲ್ಲಿ ಪ್ರತ್ಯೇಕವಾಗಿ ಎದ್ದು ಕಾಣುವಂತಿದೆ.

01.00 ಬಂಧುವರ್ಮನಿಗಿದ್ದ ಧಾರ್ಮಿಕ ಆವಶ್ಯಕತೆಯಿಂದಾಗಿ, ನಯಸೇನ ಕವಿ ಹಾಕಿಕೊಟ್ಟ ದೇಸೀ ಕಾವ್ಯಧೋರಣೆಯು ಮುಂದುವರಿದಿದೆ ; ಕರ್ನಾಟಕದಲ್ಲಿ ವೀರಶೈವ ಧಾರ್ಮಿಕ ಆಂದೋಲನದ ಕಾವು ಹತ್ತಿದ ಸಂದರ್ಭದಲ್ಲಿ ಈತ ಕೃತಿ ರಚಿಸಿದ್ದಾನೆ. ಆಕರ್ಷಕವಾದ ಕಥೆಗಳ ಮೂಲಕ ಸರಳವಾದ ಜನ ಭಾಷೆಯಲ್ಲಿ ಜಿನಧರ್ಮವನ್ನು ಹೇಳಬೇಕಾದ ಸಾಮಾಜಿಕ ಜರೂರು ಮತ್ತು ಐತಿಹಾಸಿಕ ತುರ್ತು ಕವಿಗೆ ಒದಗಿದೆ. ಈತನ ಕಾವ್ಯ ಪ್ರೇರಣೆಯ ಒಂದು ಬೇರು ಈ ಬಗೆಯ ಸಾಮಾಜಿಕ ಸಂದರ್ಭದ ಅನಿವಾರ್ಯತೆಯಲ್ಲಿ ಚಾಚಿಕೊಂಡಿದೆ.

01.01 ಬಂಧುವರ್ಮ ರಾಜಾಶ್ರಯದ ಕವಿಯಲ್ಲ, ಪ್ರಜಾಶ್ರಯದ– ಜನತೆಯ ಕವಿ. ಆಸ್ಥಾನದ ಕವಿಗಳಿಗೆ ಇದ್ದಂತೆ ತನ್ನ ಕಾವ್ಯ ಪ್ರೌಢವಾಗಿರಬೇಕು, ಸಂಸ್ಕೃತಭೂಯಿಷ್ಠವಾಗಿರಬೇಕು ಎಂಬ ಒತ್ತಡಗಳಿರಲಿಲ್ಲ. ಆಂಡಯ್ಯ-ನಯಸೇನರಂತೆ ಬಂಧುವರ್ಮ ಕೂಡ ಜನಪರ ಧೋರಣೆಯ ಕವಿ ; ಸ್ವರೂಪದಲ್ಲಿ ಮಾರ್ಗಕವಿಯಾದರೂ, ಸತ್ವದಲ್ಲಿ ದೇಸಿಗೆ ಒಲಿದ ಕವಿ. ಹೀಗೆ ಅಂತಸ್ಸತ್ವದಲ್ಲಿ ಮಾರ್ಪಾಟು ಮಾಡಿದ್ದರೂ ಕಾವ್ಯದ ಒಟ್ಟು ಸ್ವರೂಪವನ್ನು ಬದಲಾಯಿಸದೆ ಉಳಿಸಿಕೊಂಡಿರುವ ಮಟ್ಟಿಗೆ ಈತ ಕೂಡ ಸಂಪ್ರದಾಯದ ಹಿಡಿತದಿಂದ ಪೂರ್ತಿ ಪಾರಾಗಿಲ್ಲವೆಂಬುದು ಸ್ಪಷ್ಟ.

01.02 ಬಂಧುವರ್ಮ ಕವಿಗಿರುವ ಭಾಷಾ ಪ್ರಜ್ಞೆ ಕುರಿತೂ ಪ್ರತ್ಯೇಕವಾಗಿಯೇ ಪ್ರಸ್ತಾಪಿಸಬೇಕು. ಸಂಸ್ಕೃತಕ್ಕೆ ದ್ವಿತೀಯ ಸ್ಥಾನವಿತ್ತು ಕನ್ನಡಕ್ಕೆ ಮೊದಲ ಮನ್ನಣೆ ನೀಡುವುದಷ್ಟೇ ಇವನ ವಿಶೇಷತೆಯಲ್ಲ. ಭಾಷೆಯ ಬಳಕೆಯಲ್ಲಿ ಹೆಚ್ಚಿನ ಕಾಳಜಿ ತೋರಿಸಿದ್ದಾನೆ. 12ನೆಯ ಶತಮಾನದ ಕರುನಾಡ ಜನಪದರು ಮಾತಾಡುತ್ತಿದ್ದ ವ್ಯವಹಾರದ ಅಥವಾ ಆತ ಇದ್ದ ಪರಿಸರದ ಕನ್ನಡಭಾಷೆ ಅಭಿವ್ಯಕ್ತಿ ಪಡೆದುಕೊಂಡಿದೆ ; ಈ ಕವಿ ಪದ್ಯ-ಗದ್ಯಗಳಲ್ಲಿ ಬಳಸಿರುವ ಕನ್ನಡ ಭಾಷೆಯಲ್ಲಿರುವ ಅಂತರವನ್ನೂ ಪರಿಶೀಲಿಸಬೇಕು. ಕನ್ನಡವಲ್ಲದೆ ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿಯೂ ಪ್ರವೇಶ, ಪರಿಶ್ರಮ, ಸಮದಂಡಿಯಾದ ಭಾಷಾ ಪ್ರಭುತ್ವವಿರುವ ಕವಿಯೀತ.

01.03 ಬಂಧುವರ್ಮನ ಪ್ರಥಮಗಳು ಸಾಕಷ್ಟಿವೆ; ಅನುಪ್ರೇಕ್ಷೆಗಳೊಂದಿಗೆ ದೃಷ್ಟಾಂತಕಥೆಗಳನ್ನು ಪೋಣಿಸಿಕೊಟ್ಟ ಆದಿಕವಿ, ಸಗರನ ಕಥೆಯನ್ನು ಮೂಲ ತೀರ್ಥಂಕರವೃಕ್ಷದಿಂದ ಬೇರ್ಪಡಿಸಿ ಸ್ವತಂತ್ರವಾಗಿ ಕನ್ನಡದಲ್ಲಿ ಹೇಳಿದ ಮೊದಲಿನ, ಮುಂಡಕೌಶಿಕನ ಕಥೆಯನ್ನು ವಿಸ್ತಾರವಾಗಿ ಸಾವಯವತೆಯಿಂದ ಮಂಡಿಸಿದ ಆದ್ಯಕವಿ, ಧನ್ಯಕುಮಾರನ ಕಥೆಯನ್ನು ಕನ್ನಡಕ್ಕೆ ಕೊಟ್ಟ ಪ್ರಥಮಕವಿ, ಹೀಗೆಯೇ

ವರಾಂಗನ ಕಥೆ-ವಸಂತ ತಿಲಕೆಯ ಕಥೆ ಮೊದಲಾದುವನ್ನು ಕನ್ನಡ ಕಣಜಕ್ಕೆ ಹೊರಳಿಸಿದ ಕವಿಭಗೀರಥನೀತ. ಬಂಧುವರ್ಮನ ಬಣ್ಣದ ಆಕರ್ಷಕ ಕಾವ್ಯಕುಲಾವಿಯಲ್ಲಿ ಇಂಥ ನವಿಲುಗರಿಗಳು ಸಾಕಷ್ಟಿವೆ, ಅವು ತಮ್ಮ ಸಹಜ ಚೆಲುವಿನಿಂದ ರಸಿಕರ-ಕಾವ್ಯಪ್ರೇಮಿಗಳ ಹೃನ್ಮನಗಳನ್ನು ಸೂರೆಗೊಳ್ಳುತ್ತವೆ. ವ್ಯುತ್ಪತ್ತಿಯು ಬಲಿಬೀಸಿ, ಅನ್ಯಾನ್ಯ ಮೂಲಗಳಿಂದ ಕಥಾಂಶಗಳನ್ನು ಸೆಳೆದು ಕಾವ್ಯಗರ್ಭಕ್ಕೆ ಕಸಿ ಮಾಡಿದ್ದಾನೆ. ಈ ಸಮಾವೇಶಕ ಹಾಗೂ ಮಾಂತ್ರಿಕ ಗುಣ ಅಸಾಧಾರಣವಾದುದು. ಭವಾವಳಿಯಂ ಸೀಗೆ ಮೆಳೆಯನ್ನು ಕಟಾವು ಮಾಡಿದ್ದರಿಂದ ಜೀವಸಂಬೋಧನೆ ಕಾವ್ಯದ ಕಥೆಗಳು ಒಪ್ಪವಾಗಿ ಓರಣಗೊಂಡಿವೆ.

01 04 ಸಹಜತೆ-ಸರಳತೆ ಬಂಧುವರ್ಮನ ಕಾವ್ಯಪುರುಷನ ಎರಡು ಕಣ್ಣುಗಳು. ಸರಳತೆ ಸ್ವಾಭಾವಿಕತೆಯಿಂದ ಬಂದಿರುವ ಸೊಗಸುಗಾರಿಕೆಯು ಬಂಧುವರ್ಮನ ಕಥೆಗಾರಿಕೆಗೆ ಮೆರಗು ಕೊಟ್ಟಿದೆ. ಅದ್ಭುತ ಔಚಿತ್ಯ ಜ್ಞಾನಕ್ಕೆ; ಕಥೆಗಳು ಹದಮೀರದಂತೆ ಕವಿ ನಿಗಾವಹಿಸಿದಾನೆ. ಯಾವ ಕಥೆಯೂ ಗಾತ್ರದಲ್ಲಿ ಹೊರೆಯಾಗಿ ಉಬ್ಬುವುದಿಲ್ಲ, ಗುಣದಲ್ಲಿ ತಗ್ಗುವುದಿಲ್ಲ. ಜತೆಗೆ ಅಪೂರ್ವ ಸಂಯಮದ ಕವಚ. ಕವಿಯ ಯಶಸ್ಸಿನ ರಹಸ್ಯ—ಔಚಿತ್ಯ ಸಂಯಮಗಳನ್ನು ಸಮತೂಕದಲ್ಲಿ ನಿರ್ವಹಿಸಿರುವುದು. ಸಾಂಪ್ರದಾಯಿಕ ವರ್ಣನೆಗಳಿಗೆ ದಾಸನಾಗಿಲ್ಲ. ಅರ್ಥಾಲಂಕಾರ ಶಬ್ದಾಲಂಕಾರಗಳ ಶುಷ್ಕ ಚಮತ್ಕಾರದ ಗೀಳಿಲ್ಲ.

ಟಿಪ್ಪಣಿ ೨ : ಶಬ್ದ ಸಂಪತ್ತು

01.05 ಬಂಧುವರ್ಮನ ಶಬ್ದಭಂಡಾರ ಕೂಡ ಶ್ರೀಮಂತವಾದುದು. ಕನ್ನಡಭಾಷೆಯನ್ನು ಈತ ಬಳಸುವ ರೀತಿ ಬೆರಗುಗೊಳಿಸುವಂತಹುದು. ಕನ್ನಡ ನುಡಿಕಟ್ಟುಗಳ ವ್ಯಂಜಕಶಕ್ತಿಯನ್ನು ಕವಿ ಸಮರ್ಥವಾಗಿ ದುಡಿಸಿಕೊಂಡಿದ್ದಾನೆ. ತನ್ನ ಎರಡೂ ಕಾವ್ಯಗಳಲ್ಲಿ ಅಲ್ಲಲ್ಲಿ ಹರಳುಗಳ ಹಾಗೆ ಕೀಲಿಸಿರುವ ಅಪರೂಪ ಶಬ್ದಗಳಲ್ಲಿ ಕೆಲವನ್ನು ದಿಗ್ದರ್ಶನಾರ್ಥವಾಗಿ ಇಲ್ಲಿ ಪ್ರಸ್ತಾಪಿಸಬಹುದು.

01.06 ಒಡನಿರ್ದನಲ್ಲನಂ ಬಿಸು
ಟುಡುಪಾನನೆ ಪರಿಯೆ ಪರಿದು ಪೇಲುದನೋಪಂ
ಪಿಡಿದೊಡನದನಂತೆ ಬಿಸುಟು
ಳ್ದೊಡೆಯು ಸಡಿಲ್ದುಡೆಯನಣಮೆ ಪರಿದಳ್।। ಹರಿವಂಶ 1-46, ಪುಟ 15

ಈ ಪದ್ಯದ ಎರಡನೆಯ ಪಾದದಲ್ಲಿ ಉಡುಪಾನನೆ (ಚಂದ್ರಮುಖಿ) ಎಂಬುದು ತೀರ ಅಪರೂಪ ಶಬ್ದ, ಕಸಾಪ ಕನ್ನಡ ನಿಘಂಟಿನಲ್ಲಿ (ಸಂಪುಟ ೧, ಪುಟ 878) ಉಡುಪ, ಖಂಡ ಶಿಖಂಡ, ಉಡುಪತಿಜೂಟ, ಉಡುಪತಿಸುತ, ಉಡುಪಮುಖಿ—ಎಂಬೆಲ್ಲ ಮಾತುಗಳಿವೆ, ಉಡುಪಾನನೆ ಶಬ್ದವೇ ದಾಖಲಾಗಿಲ್ಲ; ಮುಂದೆ ಈ ನಿಘಂಟಿನ ಪುನರ್ ಮುದ್ರಣಕಾಲದಲ್ಲಿ ಅವಶ್ಯ ಸೇರಿಕೊಳ್ಳಬೇಕಾದ ಇಂಥದೊಂದು

ಪ್ರಯೋಗವನ್ನು ಬಂಧುವರ್ಮ ಉಳಿಸಿಕೊಟ್ಟಿದ್ದಾನೆ. ಇದೇ ಪದ್ಯದಲ್ಲಿರುವ ಉಳ್ದೊಡೆ ಎಂಬ ಮಾತೂ ಮುಖ್ಯವೇ. ಪೂರ್ವೋಕ್ತ ನಿಘಂಟಿನಲ್ಲಿ ಉಳ್ದೊಡೆ (ಒಳತೊಡೆ) ಶಬ್ದವಿದೆ (ಪುಟ ೧೦೦೫). ಅದಕ್ಕೆ ಮಂಗರಸ ಕವಿಯ ಜಯನೃಪ ಕಾವ್ಯದಿಂದ, ಅದಕ್ಕಿಂತ ಹಳೆಯ ಪ್ರಯೋಗಗಳು ನಿಘಂಟು ಪಟ್ಟಿಕೆಗಳಲ್ಲಿ ಸೇರ್ಪಡೆಯಾಗಿಲ್ಲದ ಕಾರಣ, ಒಂದೇ ಒಂದು ಪ್ರಯೋಗವನ್ನು ತೋರಿಸಲಾಗಿದೆ. ಮಂಗರಸನಿಗಿಂತ ಮುನ್ನೂರು ವರ್ಷ ಹಿಂದಿನವನಾದ ಬಂಧುವರ್ಮನ ಈ ಪ್ರಯೋಗ ಅವರ ಅವರ ಕಣ್ಣಿಗೆ ಬಿದ್ದಿರಲಿಲ್ಲ. ಈಗ ಇಲ್ಲಿ ಉಳ್ದೊಡೆ ಶಬ್ದದ ಅತ್ಯಂತ ಪ್ರಾಚೀನ ಪ್ರಯೋಗ ಸಿಗುತ್ತದೆಯಾದ್ದರಿಂದ ಮುಂದಿನ ಪರಿಷ್ಕರಣದಲ್ಲಿ ಈ ತಿದ್ದುಪಡಿಯನ್ನು ಅಳವಡಿಸಿಕೊಳ್ಳಬೇಕು.

01.07 ಅದರಂತೆ 'ಸಡಿಲ್ದುಡೆ' ಎಂಬ ಪ್ರಯೋಗವೂ ಮಹತ್ವದ್ದೆಂದು ತೋರುತ್ತದೆ. ನಾಗವರ್ಮನ ಕರ್ಣಾಟಕಾದಂಬರಿ ಉತ್ತರಭಾಗದಲ್ಲಿ (ಪದ್ಯ–136) ಇದರ ಇನ್ನೊಂದು ಪ್ರಯೋಗವಿದೆ.

> ಆತನಾರೂಢಯೌವನನಾದಂದು ವಜ್ರಚಾಪನೆಂಬ ಖೇಚರನ ಮಗಳ್
> ವಿದ್ಯುನ್ಮಾಳೆಯಂ ಮದುವೆನಿಂದು : ಹರಿವಂಶ 1-32 ವ, ಪುಟ-10

ಇಲ್ಲಿ ಆರಂಭದಲ್ಲೇ ಬರುವ 'ಆರೂಢಯೌವನ' ಶಬ್ದ ಕಸಾಪ ಕನ್ನಡ ನಿಘಂಟಿನಲ್ಲಿ ಸೇರ್ಪಡೆಯಾಗಿಲ್ಲ (ಪೂರ್ವೋಕ್ತ, ಪುಟ-660). ಆರೂಢಕೋಪ,-ತಪ,-ಪಥ, -ಪದವಿ,–ಪ್ರತಿಜ್ಞೆ,-ಯೋಗಿ,-ವಿದ್ಯೆ,-ಸರ್ವಜ್ಞ ಇತ್ಯಾದಿಯಾದ ಶಬ್ದಗಳು ಮುಖ್ಯ ಉಲ್ಲೇಖವಾಗಿ ಬಂದಿವೆ, ಯೌವನ ಬಿಟ್ಟು ಹೋಗಿದೆ. ಆರೂಢಯೌವನ (ಹೊಂದಿದಯೌವನ, ಪಡೆದ–) ಶಬ್ದ ನಿಘಂಟಿನ ಪರಿಷ್ಕರಣ ಕಾಲದಲ್ಲಿ ಮುಖ್ಯ ಉಲ್ಲೇಖವಾಗಿ ಬರಬೇಕೆಂಬುದನ್ನು ಬಂಧುವರ್ಮನ ಪ್ರಯೋಗ ಬೊಟ್ಟು ಮಾಡಿ ತೋರಿಸಿದೆ.

> 01.08 ಇದೇಂ ಗಳಾ ನಿಮ್ಮಮ್ಮನಪ್ಪ ಸಗರ ಚಕ್ರವರ್ತಿಗೆ ಚಿತ್ತೆಯೆಂಬ
> ನೆಲದಿಂ ಕೆಳಗೆ ಸಾಮ್ಯುವಂಟೆ: ಜೀವಸಂ. ಪುಟ 20, ಪದ್ಯ 36ವ.

ಇಲ್ಲಿ ಬಂದಿರುವ ಚಿತ್ತೆ ಎಂಬ ಶಬ್ದವೇ ಕಸಾಪ ನಿಘಂಟಿನಲ್ಲಿ ದಾಖಲಾಗಿಲ್ಲ. ಈ ಈ ಶಬ್ದವನ್ನು ಬಂಧುವರ್ಮನಿಗಿಂತ ಮೊದಲು ರನ್ನನು ಅಜಿತಪುರಾಣದಲ್ಲಿ ಬಳಸಿದ್ದಾನೆ-ಆ ಚಿತ್ತೆಯೆಂಬ ಧಾತ್ರೀತಳಕ್ಕೆ (11-22 ವ) ಚಿತ್ತೆ (ಧಾತ್ರೀತಳ) ಶಬ್ದ ನಿಘಂಟಿನ ಮುಂದಿನ ಪರಿಷ್ಕೃತ ಆವೃತ್ತಿಯಲ್ಲಿ ಮುಖ್ಯ ಉಲ್ಲೇಖವಾಗಿ ಬರಬೇಕು, ಮತ್ತು ಅದಕ್ಕೆ ರನ್ನ ಹಾಗೂ ಬಂಧುವರ್ಮನ ಪ್ರಯೋಗಗಳನ್ನು ಕೊಡಬೇಕು.

> 01.09 ಆಕಾಶಂ ಮೇಲೆ ಕವಿದೊಡೆ ಪೆರಟಿ ಕಾಲಲೊಪೆವೆನೆಂದು ಕಾಲಂ
> ನೆಗಪಿರ್ಪ ತೀತಕಿಯಂತೆ ನಿಮ್ಮ ಬೆಸದಿರ್ಪುದಕ್ಕೆ ಜವನಟ್ಟುವನೆ
> ಮರುಳಾಗದಿರಿಂ : ಜೀವಸಂ. 45-7 ವ

ಇಲ್ಲಿ ಸೇರಿರುವ 'ತೀತಕಿ' ಎಂಬುದು ಒಂದು ಅಪರೂಪ ಶಬ್ದ, ಕಸಾಪ ನಿಘಂಟಿನಲ್ಲಿ ಈ ಶಬ್ದವೇ ಸೇರ್ಪಡೆಯಾಗಿಲ್ಲ.

02.00 ಪರಮತಪೋಧನರೊರ್ವರ್
ಚರಿಗೆಗೆವರೆ ಕಂಡು ನೆಟ್ಟನೆನ್ನಿಂದೀತಂ
ಕರಮೆ ಬಡವಂ ದಲೆಂದಾ
ದರದಿಂ ಕಱುಕುಱಿಗನವರ ಕಯ್ಯಂ ಪಿಡಿದಂ॥ ಜೀವಸಂ. 202-43

ಈ ಕಂದಪದ್ಯದ ಕಡೆಯ ಪಾದದಲ್ಲಿ ಪ್ರಯೋಗವಾಗಿರುವ ಕಱುಕುಱಿಗ ಎಂಬ ಶಬ್ದ ಕೂಡ ನಿಘಂಟಿನಲ್ಲಿ ದಾಖಲಾಗಿಲ್ಲ. ವತ್ಸಪಾಲಕ, ಕರುಗಳನ್ನು ಕಾಯುವ ಆಳು ಎಂಬರ್ಥದ ಈ ಶಬ್ದವನ್ನು ಬಂಧುವರ್ಮ ಇನ್ನೂ ಎರಡುಕಡೆ ಬಳಸಿದ್ದಾನೆ. (202–42 ವ, 203–44 ವ). ಬಂಧುವರ್ಮನನ್ನು (ಈ ಕಥೆಗೆ) ಮೂಲ ಆಕರವಾಗಿರಿಸಿಕೊಂಡು ಧನ್ಯಕುಮಾರಚರಿತೆಯೆಂಬ ಸಾಂಗತ್ಯಕಾವ್ಯವನ್ನು ರಚಿಸಿರುವ ಆದಿಯಪ್ಪ ಕವಿ ಕೂಡ ಈ ಶಬ್ದವನ್ನು ಬಳಸಿದ್ದಾನೆ.

02.01 ಅಸಿಪಂಜರ (ಸೂಕ್ಷ್ಮವಾದ ಪಂಜರ) : ಹರಿವಂಶ. 5–43 ವ ಮತ್ತು ಜೀವಸಂ 31–6 ಎಂಬ ಈ ಶಬ್ದವೇ ನಿಘಂಟಿನಲ್ಲಿ ದಾಖಲಾಗಿಲ್ಲ : ಅಸಿಧಾರಾವ್ರತ, ಅಸಿಧಾರೆ, ಅಸಿಧೇನು, ಅಸಿಪತ್ರನಂದನ ಎಂಬೆಲ್ಲ ಶಬ್ದ (ಪುಟ 497) ಗಳಿವೆಯೇ ಹೊರತು 'ಅಸಿಪಂಜರ' ಶಬ್ದ ಸೇರ್ಪಡೆಯಾಗಿಲ್ಲ.

02.02 ನಟ್ಟುವಿದರ್ರುವಂಗರುಂ (ನಟುವಾಂಗರು) : ಹರಿವಂಶ. 2–32 ವ ಎಂಬ ಶಬ್ದ ಕೂಡ ನಿಘಂಟಿನಲ್ಲಿ ದಾಖಲಾಗದೆ ಕೈಬಿಟ್ಟುಹೋಗಿದೆ. ಇದು ಮುಖ್ಯ ಉಲ್ಲೇಖವಾಗಿ ಬರಬೇಕು.

02.03 ದುಷ್ಪಾಪ : ಜೀವಸಂ. 11–19. ಈ ಶಬ್ದವು ಮುಖ್ಯ ಉಲ್ಲೇಖ ದೋಳಿಯಲ್ಲಿ ಕೈಬಿಟ್ಟು ಹೋಗಿದೆ ; ನಿಘಂಟು ಪರಿಷ್ಕೃತಗೊಳ್ಳುವಾಗ ಇದೂ ಸೇರಬೇಕು.

02.04 ಅಜರಾಮರರ್ಕಳ್ (ಜೀವಸಂ. 7–6) ಅಪುತ್ರಕ(ಹರಿವಂಶ.1-34ವ) ಮುಂತಾದ ಏಕೈಕ ಪ್ರಯೋಗಗಳೂ ಕನ್ನಡ ನಿಘಂಟಿನವರ ಗಮನಿಕೆ ಯಿಂದ ಕೈಜಾರಿಬಿಟ್ಟಿವೆ. ಕಣ್ತಪ್ಪಿಸಿಕೊಂಡ ಈ ಪ್ರಯೋಗಗಳನ್ನು ಮುಂದಿನ ಆವೃತ್ತಿಯಲ್ಲಿ ಅಳವಡಿಸಿಕೊಳ್ಳಬೇಕು.

02.05 ಕಕ್ಕಿ (ಜೀವಸಂ. 244–34) ಕುಟಿ (ಜೀವಸಂ. 241–25) ಕಿಂದೇಟು (ಜೀವಸಂ. 181–39) ಶಬ್ದಗಳು ನಿಘಂಟಿನಲ್ಲೇನೋ ದಾಖಲಾಗಿವೆ, ನಿಜ. ಆದರೆ ಈ ಶಬ್ದಗಳಿಗಿರುವ ಪ್ರಾಚೀನತಮ ಪ್ರಯೋಗವಾಗಿರುವ ಬಂಧುವರ್ಮನ ಸಾಲುಗಳು ಗಮನಕ್ಕೆ ಬರದೆ ಮರೆಯಾಗಿವೆ.

ಟಿಪ್ಪಣಿ ೩ : ಉಪಮಾಸಂಪತ್ತು

02.06 ಒಂದು ಕಾವ್ಯದ ಉಪಮಾನಗಳ ಬಳಕೆ ಕುರಿತು ಆಳವಾಗಿ ಪರಿಶೀಲಿಸುವುದರ ಮೂಲಕ ಕೂಡ ಆಯಾ ಕವಿಯ ಕಲ್ಪನಾಸಾಮರ್ಥ್ಯ ಮತ್ತು ಅನುಭವವ್ಯಾಪ್ತಿಯನ್ನು ಅರಿಯಬಹುದು, ಆ ಪರಿಕಲ್ಪನೆಗಳ ಹಿಂದೆ ಕ್ರಿಯಾಶೀಲವಾಗಿರುವ ಧೋರಣೆಗಳನ್ನೂ ಪರಿಭಾವಿಸಬಹುದು. ಪರಸ್ಪರವಾಗಿ ಎರಡುವಸ್ತುಗಳಲ್ಲಿರುವ ಸಾದೃಶ್ಯಸಂಪತ್ತನ್ನು ಪ್ರಕಟಿಸುವುದು ಉಪಮಾಲಂಕಾರ (ಉಪಮಾ ಯತ್ರ ಸಾದೃಶ್ಯಲಕ್ಷ್ಮೀರುಲ್ಲಸತಿ ದ್ವಯೋಃ). ಅಂತಿರೆ,ಅಂತಿರೆವೊಲ್, ಅಂತೆ, ವೊಲ್ ಎಂಬ ಅವ್ಯಯಗಳೂ, ಪೋಲ್ ಎಂಬ ಧಾತುವೂ, ಮಾಟ್ಕೆ, ತೆಱಂ ಎಂಬ ಪ್ರಕಾರ ವಾಚಕಗಳೂ ಉಪಮಾನವಾಚಕಗಳಾಗಿ ಈ ಕವಿಯಿಂದ ಬಳಕೆಯಾಗಿವೆ. ಇವೆಲ್ಲ ಬದ್ಧಾಕೃತಿಗಳಾಗಿರುವುದರಿಂದ ಭಾಷಾವಿಜ್ಞಾನ ಪರಿಭಾಷೆಯಲ್ಲಿ ಉಪಮಾನವಾಚಕದ ಈ ಉಪಾಕೃತಿಗಳನ್ನು ಹೀಗೆ ನಿರ್ವಚಿಸಬಹುದು.

ಅಂತಿರೆ ಅಂತೆ ವೋಲ್ ಪೋಲ್ ಅಂತವೊಲ್	ಉಪಮಾನ ವಾಚಕದ ಉಪಾಕೃತಿಗಳು

ಬಂಧುವರ್ಮಕವಿ ಒಮ್ಮೊಮ್ಮೆ ಈ ಬಗೆಯ ಉಪಮಾನ ವಾಚಕಗಳನ್ನೇ ಬಳಸದೆ ಉಪಮೆಯ ಸೊಗಸನ್ನು ತೋರಿಸುವುದೂ ಉಂಟು.

02.07 ಬಂಧುವರ್ಮನ ಉಪಮೆಗಳಲ್ಲಿ ಸ್ವಾರಸ್ಯದೊಂದಿಗೆ ಉಳಿದ ಕವಿಗಳ ಬಳಕೆಗಿಂತ ಭಿನ್ನತೆಯಿದೆ, ತಾರ್ಕಿಕವಾದ ಬೆಳವಣಿಗೆಯಿದೆ. ಒಂದಕ್ಕೊಂದು ಕೊಂಡಿಹಾಕಿಕೊಂಡು ಹೋಗುವ ಯುಗ್ಮೋಪಮೆಗಳೂ ಮಾಲೋಪಮೆಗಳೂ ಹತ್ತಾರಿವೆ. ಜೀವಸಂಬೋಧನೆ ಕಾವ್ಯದಲ್ಲಂತೂ ಸಾದೃಶ್ಯ ಸಂಪತ್ತು ಸೂರೆಯಾಗಿವೆ, ಔಪಮ್ಯಮೂಲಕವಾದ ಅರ್ಥಾಲಂಕಾರಗಳು ಸಾದ್ಯಂತವಾಗಿ ವಿಜೃಂಭಿಸಿವೆ. ಸೂಕ್ಷ್ಮಸಮೀಕ್ಷೆಯ ರೂಪದಲ್ಲಿ ಸ್ಥೂಲವಾಗಿ ಹೇಳುವುದಾದರೆ ಪ್ರಾಯಃ ಜೀವಸಂ. ಕಾವ್ಯದ ಪ್ರತಿ ಪದ್ಯ ಹಾಗೂ ಪ್ರತಿ ಗದ್ಯಭಾಗದಲ್ಲಿ ಉಪಮೆಗಳು ತುಂಬಿ ತುಳುಕುತ್ತವೆ. ಈ ಕಾವ್ಯವನ್ನು ಉಪಮೆಗಳ ಉದ್ಯಾನ ಇಲ್ಲವೇ ಉಪಮಾ ಸರಸ್ಸು ಎಂದು ಕರೆದರೆ ಉತ್ಪ್ರೇಕ್ಷೆಯಾಗದೆ ವಾಸ್ತವವನ್ನು ನಿವೇದಿಸುವ ಸ್ವಭಾವೋಕ್ತಿಯಾದೀತು. ಉಪಮಾಲೋಲ ಬಂಧುವರ್ಮನ ಉಪಮೆಗಳಲ್ಲಿ ದೈವ (ದೇವತೆ, ದೇವಲೋಕ), ಪ್ರಾಣಿ, ಪಕ್ಷಿ, ಮನುಷ್ಯ, ಪ್ರಕೃತಿ ಸಂಬಂಧವಾದುವು ಹೆಚ್ಚಾಗಿವೆ.

02.08 ಅಮೂರ್ತವಾದದ್ದನ್ನು ಕುರಿತೂ, ಆಕಾಶಮೂಲಕ್ರಿಯೆಯನ್ನು ಕುರಿತೂ ಇರುವ ಉಪಮೆಗಳು ಚಿಂತನೀಯವಾಗಿವೆ ; ಇವುಗಳಲ್ಲಿ ಪರಿಭಾವಿಸಿದಷ್ಟೂ

ಪ್ರಿಯವಾಗಬಲ್ಲ ಅರ್ಥಶ್ರೀಯ ಸಾರ್ಥಕತೆಯೂ, ವೈವಿಧ್ಯವೂ, ವಿಲಾಸವೂ ಕಂಡುಬರುತ್ತದೆ. ಉಪಮಾನಗಳನ್ನು ಬಂಧುವರ್ಮ ಎಷ್ಟು ಸಾರ್ಥಕವಾಗಿ ದುಡಿಸಿ ಕೊಂಡಿದ್ದಾನೆಂಬುದನ್ನು ವ್ಯಾಪಕವಾದ ಅಧ್ಯಯನದಿಂದ ಅರಿಯಬಹುದು, ದಿಗ್ದರ್ಶನಾರ್ಥವಾಗಿ ಇಲ್ಲಿ ಮೂರು ಉದಾಹರಣೆಗಳನ್ನು ನೋಡಬಹುದು :

02.09 ಜೀವಸಂ. ಪುಟ 6 ಪದ್ಯ 2

ದರಿಯ ಮರದಂತೆ ಮಂಜನ
ನೆರವಿಯ ತೆಱದಂತೆ ಪಣ್ತ ಮರದಂತೆ ಕರಂ
ಬೆರಸಿರ್ದ ನಿನ್ನ ತನುವುಂ
ಪರಿವೇಷ್ಟಿತ ಬಂಧುಜನಮುಮೆಯ್ದಿದ ಧನಮುಂ ॥

ಉಪಮೇಯಂ: ತನು, ಬಂಧುಜನ, ಧನ
ಉಪಮಾನ: ದರಿಯಮರ ಮಂಜಿನ, ಪಣ್ತಮರ
ಸಾಧಾರಣ ಧರ್ಮ: ಅಧ್ರುವತೆ
ಉಪಮಾನ ವಾಚಕ: ಅಂತೆ

ಈ ಪದ್ಯದಲ್ಲಿ ಉಪಮಾನ-ಉಪಮೇಯ ಸಂಖ್ಯೆ ಸಮಾನವಾಗಿದೆ.

03.00 ಜೀವಸಂ. ಪುಟ 6, ಪದ್ಯ 3

ಸುರಧನುವೆಂತುಟಂತೆ ವಿಳಸಜ್ಜಳ ಬುದ್ಬುದಮೆಂತುಟಂತೆ ಪೆ
ರ್ದೆರೆಯುರವೆಂತುಟಂತೆ ಕಿಸುಸಂಜೆಯ ರಂಜನೆಯೆಂತುಟಂತೆ ಭೂ
ಧರ ನದಿಯೆಂತುಟಂತೆ ಮುಗಿಲೊಡ್ಡಣ ದಾಕೃತಿಯೆಂತುಟಂತೆ ಮ
ರ್ತ್ಯರ ತನುವುಂ ಕಳತ್ರಜನಮುಂ ಧನಮುಂ ಬಗೆವಂತು ನೋಟ್ಪಿಡಂ ॥

ಉಪಮೇಯಂ: ಮರ್ತ್ಯರ ತನುವುಂ, ಕಳತ್ರಜನಮುಂ, ಧನಮುಂ
ಉಪಮಾನ: ಪುರಧನು, ಜಳಬುದ್ಬುದ ಪೆರ್ದೆರೆ, ಕಿಸುಸಂಜೆಯ ರಂಜನೆ, ಭೂಧರನಧಿ, ಮುಗಿಲೊಡ್ಡಣದ ಆಕೃತಿ

ಸಾಧಾರಣ ಧರ್ಮ:(ದೇಹ. ಕಳತ್ರ, ಧನಂಗಳ) ಅಧ್ರುವತ್ವ
ಉಪಮಾನ ವಾಚಕ : ಎಂತುಟು–ಅಂತೆ (ಹೇಗೋ–ಹಾಗೆ)

ಇಲ್ಲಿ ಉಪಮೇಯಕ್ಕಿಂತ (ಮೂರು), ಉಪಮಾನಗಳ ಸಂಖ್ಯೆ (ಆರು) ಸಂಖ್ಯೆ ಹೆಚ್ಚಾಗಿದ್ದರೂ, ಸಾಧಾರಣಧರ್ಮ ಅಷ್ಟಕ್ಕೂ ಒಂದೇ ಆಗಿದ್ದು ಅರ್ಥಪ್ರತೀತಿಗೆ ಬಾಧಕವುಂಟಾಗಿಲ್ಲ.

ಈ ಪದ್ಯಕ್ಕೂ, ಇದರ ಹಿಂದಿನ ಹಿಂದಣ (6–1) ಪದ್ಯಕ್ಕೂ ಮೂಲ ಕುಂದಕುಂದಆಚಾರ್ಯ ಕೃತ ಪ್ರಾಕೃತ ಕೃತಿ ಬಾರಸ ಅಣುವೆಕ್ಖ (ದ್ವಾದಶ ಅನುಪ್ರೇಕ್ಷೆ)

03.01 ಜೀವಸಂ. ಪದ್ಯ 11-17ವ

ಮಿಂಚಿನ ಬೆಳಗಂ ನಂಬಿ ಕಟ್ಟಲೆಯೊಳ್ ಪೊಱಮಡುವನಂತೆ ಅಲ್ಪಸುಖದಾಸೆಯಿಂ ಪಾಪಮು ಪೆರ್ಚಿಸಿಕೊಳ್ಳುದೇನೊಳ್ಳಿತ್ತೆ ?

ಉಪಮೇಯ : ಕಟ್ಟಲೆ, ಪಾಪ

ಉಪಮಾನ : ಮಿಂಚಿನ ಬೆಳಗು, ಅಲ್ಪಸುಖದಾಸೆ

ಸಾಧಾರಣಧರ್ಮ : ಅಲ್ಪವಾದದ್ದನ್ನು ಬಯಸುವುದು ವಿವೇಕವಲ್ಲ

ಉಪಮಾನವಾಚಕ : ಅಂತೆ.

ಇವಲ್ಲದೆ ಜೀವ ಸಂಬೋಧನೆಯಲ್ಲಿ ಎಷ್ಟೋ ಕಡೆ ಉಪಮೆಗಳ ಸರಣಿಯೇ ಇದೆ; ಇಡಿಯ ಪದ್ಯ ಉಪಮೆಗಳ ಬಟ್ಟಲಾಗುವುದೂ ಉಂಟು.

ಟಿಪ್ಪಣಿ ೪ : ಪಾಠಪರಿಷ್ಕರಣ

03.02 ಜೀವಸಂಬೋಧನೆಕಾವ್ಯದ ಸಂಪಾದಕರು ಸಂಸ್ಕೃತ ಶ್ಲೋಕ-ಪದ್ಯಗಳನ್ನು ಮತ್ತು ಅವುಗಳಿಗಿರುವ ಕನ್ನಡ ಟೀಕಾ-ತಾತ್ಪರ್ಯದೊಂದಿಗೆ ಅಡಿ ಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ. ಈ ನಿರ್ಧಾರವನ್ನು ಕೈಗೊಳ್ಳಲು ಪ್ರಾಯಃ ಎರಡು ಕಾರಣಗಳಿದ್ದಿರಬಹುದು.

೧. ಕೆಲವು ಓಲೆಪ್ರತಿಗಳಲ್ಲಿ ಈ ಸಂಸ್ಕೃತ ಶ್ಲೋಕ-ಟೀಕೆಗಳಿಲ್ಲದಿರುವುದು

೨. ಇವು ಬಂಧುವರ್ಮನ ಮೂಲರಚನೆಯ ಭಾಗವಾಗಿ ಸೇರಿತ್ತೊ ಇಲ್ಲವೊ ಎಂಬೊಂದು ಅನುಮಾನ. ಆದರೆ ಬಂಧುವರ್ಮನ ಇಡೀ ಜೀವಸಂ. ಕಾವ್ಯವನ್ನು ಎಚ್ಚರದಿಂದ ಮತ್ತು ಅದರ ರಾಚನಿಕ ವಿಶ್ಲೇಷಣೆಯಿಂದ ಅಭ್ಯಾಸ ಮಾಡಿ ನೋಡಿದರೆ ಕೆಲವು ಖಚಿತ ನಿರ್ಧಾರಗಳಿಗೆ ನಾವು ತಲುಪಬಹುದು.

03.03 ಬಂಧುವರ್ಮಕವಿ ಪ್ರತಿಯೊಂದು ಅನುಪ್ರೇಕ್ಷೆಯನ್ನೂ, ಅದಕ್ಕೆ ಹೊಂದಿಕೊಂಡ ದೃಷ್ಟಾಂತಕಥೆಯನ್ನೂ ನಿರೂಪಿಸುವುದಕ್ಕೆ ಒಂದು ನಿರ್ದಿಷ್ಟವಾದ ವ್ಯವಸ್ಥಿತವಾದ ವಿಧಾನವನ್ನು ಅಳವಡಿಸಿಕೊಂಡಿದ್ದಾನೆಂಬುದನ್ನು ನಾವು ಕಂಡುಕೊಳ್ಳಬೇಕಾಗಿದೆ. ಪ್ರತಿಯೊಂದು ಅಧಿಕಾರದಲ್ಲೂ (ಅವತಾರ-ಆಶ್ವಾಸ) ಎರಡು ಘಟ್ಟಗಳಿರುತ್ತವೆ. ಮೊದಲನೆಯ ಹಂತದಲ್ಲಿ ಆಯಾ ಅನುಪ್ರೇಕ್ಷೆಯ ತಾತ್ವಿಕ ನಿರ್ವಚನವಿರುತ್ತದೆ. ಎರಡನೆಯ ಮಜಲಿನಲ್ಲಿ ಆ ಸೈದ್ಧಾಂತಿಕ ಪ್ರತಿಪಾದನೆಯನ್ನು ಪುಷ್ಟೀಕರಿಸುವ ದೃಷ್ಟಾಂತಕಥೆಯಿರುತ್ತದೆ. ಇದು 'ಥಿಯರಿ' ಮತ್ತು 'ಪ್ರಾಕ್ಟಿಕಲ್' ರೀತಿಯನ್ನು ನೆನಪಿಸುವಂತಹುದು. ಅದಕ್ಕನುಗುಣವಾಗಿ ಬಂಧುವರ್ಮ ಪ್ರತಿಯೊಂದು ಅಧಿಕಾರದಲ್ಲೂ ಅಳವಡಿಸಿಕೊಂಡಿರುವ ಕ್ರಮವೆಂದರೆ, ಆಯಾ ಅಧಿಕಾರಾರಂಭದಲ್ಲಿ ಎರಡು ಮೂಲಗಳಿಂದ ಆಯ್ದುತಂದ ಸಂಸ್ಕೃತ ಪದ್ಯಗಳನ್ನು

ಕೊಡುವುದು, ಈ ಸಂಸ್ಕೃತ ಶ್ಲೋಕಗಳಲ್ಲಿ ಕನ್ನಡ ಟೀಕೇ ಬರೆದಿರುವ ಪದ್ಯಗಳು, ಅನುಪ್ರೇಕ್ಷೆಯ ಸ್ವರೂಪವನ್ನು ಅಡಕವಾಗಿ ಹೇಳುವ ಸೈದ್ಧಾಂತಿಕ ಭಾಗಕ್ಕೆ ಸೇರಿದ್ದಾಗಿವೆ. ಇನ್ನು ಕನ್ನಡ ತಾತ್ಪರ್ಯ ಬರೆದಿರುವ ಸಂಸ್ಕೃತ ಶ್ಲೋಕಗಳುಂ ಆಯಾ ಅನುಪ್ರೇಕ್ಷೆಗೆ ಕೊಡುವ ದೃಷ್ಟಾಂತಕ್ಕೆ ಪೀಠಿಕೆಯಾಗಿವೆ.

03.04 ಸಂಸ್ಕೃತ ಶ್ಲೋಕಗಳನ್ನು ಅನ್ಯಾನ್ಯ ಮೂಲದಿಂದ ತಂದು ಸೇರಿಸಿರುವುದುಂ ಬಂಧುವರ್ಮನ ಸಂಯೋಜನೆಯೇ ಆಗಿರುವಂತೆ ಅವುಗಳಿಗೆ ಬರೆದಿರುವ ಟೀಕು-ತಾತ್ಪರ್ಯ ಕೂಡ ಬಂಧುವರ್ಮನ ರಚನೆಯೇ ಆಗಿದೆಯೆಂದು ಆಂತರಿಕ ಆಧಾರದಿಂದ ಹೇಳಬಹುದು. ಸಂಸ್ಕೃತ ಪದ್ಯಗಳಲ್ಲಿ 16 ಪದ್ಯಗಳನ್ನು ಪದ್ಮನಂದಿ ಕವಿಯ ಪಂಚವಿಂಶತಿ ಕಾವ್ಯದಿಂದ ಉದ್ಧರಿಸಲಾಗಿದೆ. ಪುಟ 97 ಮತ್ತು 237ರಲ್ಲಿ ಅಡಿಟಿಪ್ಪಣಿಗೆ ಇಳಿಯದೆ ಮೂಲಪಾಠದ ಭಾಗವಾಗಿ ತೋರಿಸಲಾಗಿರುವ ಶ್ಲೋಕಗಳೆರಡೂ ಜಟಾಸಿಂಹನಂದಿಯ ವರಾಂಗ ಚರಿತೆಗೆ ಸೇರಿದ್ದಾಗಿವೆ. ಪುಟ 97ರಲ್ಲಿರುವ ಇದೇ ಶ್ಲೋಕ ವಡ್ಡಾರಾಧನೆಯಲ್ಲೂ, ಪುಟ 237ರಲ್ಲಿರುವ ಶ್ಲೋಕ ಚಾವುಂಡರಾಯ ಪುರಾಣದಲ್ಲೂ ಉದಾಹೃತಗೊಂಡಿವೆ. ಜೀವಸಂ.ಯ ಏಕತ್ವಾನುಪ್ರೇಕ್ಷೆಗೆ ದೃಷ್ಟಾಂತ ಕಥೆಯಾಗಿ ಉದಾಹೃತವಾಗಿರುವ ವರಾಂಗನ ಕಥೆಗೆ ನೇರ ಆಕರ ಜಟಾಸಿಂಹನಂದಿಯ ವರಾಂಗಚರಿತೆಯೇ ಎಂಬುದನ್ನು ಡಾ. ಆ. ನೇ. ಉಪಾಧ್ಯೆ ಸಾಧಾರವಾಗಿ ತೋರಿಸಿದ್ದಾರೆ.

03.05 ಪುಟ 4, 5, 6, 7, 44, 64 ಮೊದಲಾದ ಕಡೆ ಅಡಿಟಿಪ್ಪಣಿಗಳನ್ನು ಸೂಕ್ಷ್ಮವಾಗಿ ವಿಚಿಕಿತ್ಸಕ ಬುದ್ಧಿಯಿಂದ ಹೆಕ್ಕಿ ನೋಡಬೇಕು. ಉತ್ತಮ ಪುರುಷದ ಅವಧಾರಣೆಯಿರುವುದು ಮಹತ್ವದ ಆಂತರಿಕ ಆಧಾರ. ತನ್ನ ಇಡೀ ಕಾವ್ಯ ನಿರ್ವಹಣ ವಿಧಾನಕ್ಕೆ ಅನ್ವಯಿಸುವ ಸೂತ್ರಪ್ರಾಯವಾದ ಮಾತುಗಳನ್ನು ಬಂಧುವರ್ಮಕವಿ ಇಲ್ಲಿ ಹೇಳಿದ್ದಾನೆ: 'ಕಥಾನಿರೂಪಣೆ ಮಾಡುತ್ತೇನೆ ಕೇಳಿರಿ, ಅನುಪ್ರೇಕ್ಷೆಯನ್ನು ನಿರೂಪಿಸುತ್ತೇನೆ ಆಲಿಸಿರಿ'. ಅದರಂತೆ ಕಥೆಗಳನ್ನು ಹೇಳುವಾಗ ಆರಂಭದಲ್ಲೇ ಮತ್ತೆ ದೃಷ್ಟಾಂತ ನಿರೂಪಣದ ಕಥೆಯೆಂದು ತಿಳಿಸಿರುವುದನ್ನು ನೋಡಬೇಕು. ಪೀಠಿಕಾರೂಪದಲ್ಲಿ ಹೇಳಿರುವ ದೃಷ್ಟಾಂತ ಕಥಾ ನಿರೂಪಣಂಗೆಯ್ವೆನ್—ಎಂಬ ಮಾತಿಗೆ ತಕ್ಕಂತೆ ಇಲ್ಲಿನ ಮಾತೂ ಹೊಂದಿಕೆಯಿಂದ ಬಂದಿದೆ. ಶೈಲಿಯಂ ಲಕ್ಷಣಾನುಸಾರವಾಗಿಯೂ ಅಡಿಟಿಪ್ಪಣಿ ಭಾಗವಷ್ಟೂ ಬಂಧುವರ್ಮನದೆನ್ನುವುದಕ್ಕೆ ಅವಕಾಶವಿದೆ, ಅರ್ಥವಿವರಣೆಯ ಸಮಂಜಸತೆಯಿಂದಲೂ ಇದನ್ನು ಮೂಲ ಪಠ್ಯಭಾಗವೆಂದು ಅಂಗೀಕರಿಸಬೇಕಾಗುತ್ತದೆ. ಪುಟ ಏಳರ ಅಡಿಟಿಪ್ಪಣಿಯಂ ಕಡೆಯ ಮಾತು ಹೀಗಿದೆ-ಪ್ರಥಮಮಪ್ಪ ಅಧ್ರುವಾನುಪ್ರೇಕ್ಷಾ ನಿರೂಪಣಂಗೆಯ್ವನವಧಾರಿಪ್ಪುದು ; ಅನಂತರ ಪುಟ ಐದರಲ್ಲಿರುವ–''ಜೀವಸೇನೀನಿದಂ ಕೇಳ್...' ಎಂಬ

ಉತ್ಪಲಮಾಲಾ ಪದ್ಯ ಬರಬೇಕಾಗುತ್ತದೆ. ಏಕೆಂದರೆ ಆ ತಾತ್ಪರ್ಯ ಗದ್ಯಕ್ಕೂ ಈ ಪದ್ಯಕ್ಕೂ ಹೊಂದಿಕೆಯು ಕೊಂಡಿಯಿದೆ.

03.06 ಪುಟ 44ರಲ್ಲಿ ಏಕ್‌ದಂ ತಾ(ತ್ಪರ್ಯ) ॥ ಎಂದು ಆರಂಭವಾಗಿದೆ. ಹಾಗಾದರೆ ಇದು ಯಾವ ಪದ್ಯದ ತಾತ್ಪರ್ಯವೆಂದು ನೋಡಬೇಕಾಗುತ್ತದೆಯಲ್ಲದೆ ಇದಕ್ಕೂ ಮೊದಲು, ಅಂದರೆ ಈ ಶಬ್ದದ ಹಿಂದೆ ಪದ್ಯವೊಂದು ಇರಲೇಬೇಕು. ವಾಸ್ತವವಾಗಿ ಇದರ ಹಿಂದೆ ಈ ಅಧಿಕಾರದ ಮೊದಲನೆಯ ಪದ್ಯವಾಗಬೇಕಾದ ಒಂದು ಪದ್ಯ ಪುಟ 43ರಲ್ಲಿದೆ, ಆದರೆ ಆ ಪದ್ಯಕ್ಕೂ ಈ ತಾತ್ಪರ್ಯಕ್ಕೂ ಏನೇನೂ ಅನ್ವಯೈಕ್ಯ ಸಂಬಂಧವಿಲ್ಲ. ಹಾಗಾದರೆ ಈ ತಾತ್ಪರ್ಯ ಇನ್ಯಾವ ಪದ್ಯದ್ದು ಎಂಬ ಪ್ರಶ್ನೆಗೆ ಉತ್ತರ 43ನೆಯ ಪುಟದಲ್ಲೇ ಅಡಿಟಿಪ್ಪಣಿಯಲ್ಲಿರುವ ಸಂಸ್ಕೃತ ಶ್ಲೋಕದಲ್ಲಿದೆ. ಅದು ಪದ್ಮನಂದಿ ಪಂಚವಿಂಶತಿಯ ಪದ್ಯ, ಅದಕ್ಕೆ ಬರೆದ ತಾತ್ಪರ್ಯ ಇದು. ಆದ್ದರಿಂದ ಆ ಸಂಸ್ಕೃತ ಪದ್ಯ ಬಂಧುವರ್ಮನ ಪಠ್ಯದ ಅವಿಭಾಜ್ಯ ಅಂಗ. ಅಲ್ಲದೆ ತಾತ್ಪರ್ಯದಲ್ಲಿ ಸ್ಪಷ್ಟವಾಗಿ ಗಂಟೆ ಹೊಡೆದಂತೆ ಹೇಳಿಯೂ ಇದೆ—'ಎಂಬೀ ಸೂತ್ರಾನುಸಾರವಾದ ದೃಷ್ಟಾಂತ ಕಥಾ ನಿರೂಪಣಂಗೆಯ್ವೆನ್ + ಅದೆಂತೆನೆ' (ಪುಟ 44). ಈ ಕಾರಣದಿಂದಲೂ ನಿಶ್ಚಯವಾಗಿಯೂ ಸಂಸ್ಕೃತ ಪದ್ಯವನ್ನು ಅಡಿಟಿಪ್ಪಣಿಯಿಂದೆತ್ತಿ ಮೂಲಪಾಠದ ಕುಂದಣದೊಳಗೆ ಕೂಡಿಸುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

03.07 ಇದೇ ರೀತಿಯಾಗಿ ಪುನರಪಿ ಪುಟ 64ರ ಅಡಿಟಿಪ್ಪಣಿಯಲ್ಲೂ 'ದೃಷ್ಟಾಂತ ಕಥಾನಿರೂಪಣಂಗೆಯ್ವೆನದೆಂತೆನೆ' ಎಂಬ ಕಡೇ ಸಾಲು ಕೂಡ, ಮೇಲೆ ಇದುವರೆಗೆ ಉದಾಹರಿಸಿ ತೋರಿಸಿರುವ ವಾಕ್ಯರಚನೆ ವಸ್ತುವ್ಯವಸ್ಥೆ ಮತ್ತು ವಿಷಯ ವಿಂಗಡಣೆಯ ವಿಧಾನ ಕ್ರಮಕ್ಕೆ ಅನುಗುಣವಾಗಿದೆ. ಇದನ್ನೂ ಮುಖ್ಯಪಾಠ್ಯದೊಳಕ್ಕೆಳೆದುಕೊಳ್ಳದೆ ಗತ್ಯಂತರವಿಲ್ಲ. ಈ ಬಗೆಯಾಗಿ ಇನ್ನುಳಿದ ಅನುಪ್ರೇಕ್ಷಾಧಿಕಾರಗಳ ಆರಂಭದಲ್ಲಿಯೂ ಒಂದು ವ್ಯವಸ್ಥೆಯಿದೆ. ಇದರಿಂದಾಗಿ ಬಂಧುವರ್ಮ ಕವಿ ಏಕಕಾಲದಲ್ಲಿ ಟೀಕಾಕಾರನೂ ತಾತ್ಪರ್ಯಕಾರನೂ ಕವಿಯೂ ಕಥೆಗಾರನೂ ಭಾಷಾವಿದನೂ ಆಗಿ ತನ್ನ ಬಹುಮುಖ ಸೃಷ್ಟಿ ಶಕ್ತಿಯನ್ನು ಪ್ರಕಟಿಸಿದ್ದಾನೆ. ಒಂದೇ ಕಾವ್ಯದೊಳಗೆ ಒಬ್ಬ ಕವಿಯು ಇಷ್ಟೊಂದು ಗುಣಸಾಮರ್ಥ್ಯ ವ್ಯಕ್ತಗೊಳ್ಳುತ್ತಿರುವುದು ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ವಿಶೇಷ ಗಮನಿಕೆಗೆ ಅರ್ಹವಾದ ವಿಷಯ.

03 08 ಜೀವಸಂಬೋಧನೆ ಕಾವ್ಯದಲ್ಲಿ 12 ಅಧಿಕಾರಗಳಿವೆ. ಒಂದೊಂದು ಅಧಿಕಾರದಲ್ಲೂ, ಆರಂಭದಲ್ಲಿ ಒಬ್ಬ ತೀರ್ಥಂಕರನನ್ನೂ ಅಂತ್ಯದಲ್ಲಿ ಇನ್ನೊಬ್ಬ ತೀರ್ಥಂಕರನನ್ನೂ ಸ್ತುತಿಸಿರುವ ಪದ್ಯಗಳಿವೆ; ಈ ನಮೂನೆ ಹನ್ನೆರಡೂ ಕಡೆ ಬಂದಿದೆ. ಈ ಎರಕದಿಂದಾಗಿ (12 × 12 = 24) ಹನ್ನೆರಡು ಅಧಿಕಾರಗಳು ಮುಗಿ

ಯುವ ವೇಳೆಗೆ ಚವ್ವೀಸ (ಚತುರ್ವಿಂಶತಿ 24) ತೀರ್ಥಂಕರರ ಸ್ತುತಿಯಿರುತ್ತದೆ ಈ ರೂಪಿಕೆ ಕೂಡ ಬಂಧುವರ್ಮ ಕವಿಯ ಒಂದು ವ್ಯವಸ್ಥಿತ ಸಂಯೋಜನೆ. ಯಾಗಿದೆ. ಸಾರಾಂಶ : ಕನ್ನಡದ ಸಂದರ್ಭದಲ್ಲಿ ಮಾತ್ರವಲ್ಲದೆ ಒಟ್ಟು ಭಾರತೀಯ ಜೈನ ಸಾಹಿತ್ಯದ ಸಂದರ್ಭದಲ್ಲಿ ಬಂಧುವರ್ಮಕವಿಗೆ ವಿಶಿಷ್ಟವಾದ ಒಂದು ಗಣ್ಯ ಸ್ಥಾನವಿದೆ.

ಯಾದೃಚ್ಛಿಕ ಪ್ರಯೋಗಗಳು

ಟಿ. ವೆಂಕಟರಮಣ

ಎತ್ತರದಿಂದ ವಸ್ತುವೊಂದನ್ನು ಬೀಳಿಸಿದಾಗ ಅದು ನೆಲ ತಲಪಲು ಎಷ್ಟು ಸಮಯ ತಗಲುವುದು, ಯಾವ ವೇಗದಲ್ಲಿ ಅದು ನೆಲಕ್ಕೆ ಅಪ್ಪಳಿಸುವುದು ಇತ್ಯಾದಿ ವಿಚಾರಗಳನ್ನು ನಿಖರವಾಗಿ ಗಣಿಸಲು ಸಾಧ್ಯ. ಆದರೆ ನಾಣ್ಯವೊಂದನ್ನು ಚಿಮ್ಮಿದರೆ ನೆಲದ ಮೇಲೆ ಅದು ತಂಗುವಾಗ ಅದರ ಯಾವ ಮುಖ ಮೇಲೆ ಕಾಣಿಸಿಕೊಳ್ಳುವುದೆಂದು ಮುಂದಾಗಿ ಹೇಳಲು ಬರದು. ಮೊದಲನೆಯದು ನಿಶ್ಚಿತ ಫಲಿತವುಳ್ಳ ಪ್ರಯೋಗ. ಎರಡನೆಯದು ಯಾದೃಚ್ಛಿಕ ಪ್ರಯೋಗ. ಇಲ್ಲಿ ಫಲಿತ ಇದೇ ಎಂಬುದನ್ನು ಮೊದಲೇ ಖಚಿತಪಡಿಸಲು ಸಾಧ್ಯವಿಲ್ಲ. ನವಜಾತ ಶಿಶು ಹೆಣ್ಣೇ ಗಂಡೇ, ಉತ್ಪಾದಿತ ವಸ್ತು ನೂನ್ಯತೆಯುಕ್ತವೇ ಅಲ್ಲವೇ ಎಂಬುದನ್ನು ಗಮನಿಸುವುದು ಇಂಥ ಇನ್ನೆರಡು ನಿದರ್ಶನಗಳು. ಇವುಗಳ ಕುರಿತು ನಮ್ಮ ಆಸಕ್ತಿ ಸಹಜ. ಪ್ರಯೋಗದ ನಿರ್ದಿಷ್ಟ ಕೈಎಸಕ (trial) ದಲ್ಲಿ ಫಲಿತ ಯಾವುದೆಂದು ಮುಂದಾಗಿ ನಿಗದಿಪಡಿಸಲು ಸಾಧ್ಯವಿಲ್ಲದಿದ್ದರೂ ಇಲ್ಲಿ ವ್ಯವಸ್ಥಿತವಾಗಿ ಅಧ್ಯಯಿಸಬಹುದಾದ ಹಲವು ವಿಚಾರಗಳಿವೆ. ಇವೇ ಸಂಭವತೆ ಸಿದ್ಧಾಂತ (Probability theory) ದ ವಸ್ತು.

ಯಾದೃಚ್ಛಿಕ ಪ್ರಯೋಗಗಳಲ್ಲಿ ಸಾಧ್ಯವುಳ್ಳ ಫಲಿತಗಳ ಯಾದಿಯನ್ನು ತಯಾರಿಸಲು ಬರುವುದು ಮೊದಲ ವಿಚಾರ. ಉದಾಹರಣೆಗೆ, ನಾಣ್ಯ ಚಿಮ್ಮುವ ಪ್ರಯೋಗದಲ್ಲಿ ಇದು S = {ತಲೆ,ಬಾಲ} ನಾಣ್ಯ ತನ್ನ ಅಂಚಿನ ಮೇಲೆ ಆಧರಿಸಿ ನಿಲ್ಲುವುದು ಯಾ ಉರುಳುತ್ತ ಹೋಗಿ ನಾಪತ್ತೆಯಾಗುವುದು ಸಾಧ್ಯವಿಲ್ಲ ಎಂದು ಇಲ್ಲಿ ಭಾವಿಸಿದೆ. ಇಂಥ ಯಾದಿಗೆ ಪ್ರಯೋಗದ ಪ್ರತಿಚಯವ್ಯೋಮ (Sample Space) ಎಂದು ಹೆಸರು.

ಪ್ರತಿಚಯವ್ಯೋಮದ ಪ್ರತಿ ಅಂಶದ ಸಂಭವತೆಯೇನು ಎಂಬುದು ಮುಂದಿನ ಪ್ರಶ್ನೆ. ಅಂದರೆ ನಾಣ್ಯವನ್ನು ಚಿಮ್ಮಿದಾಗ ಅದು 'ತಲೆ'ಯನ್ನು ತೋರಿಸುವ ಸಾಧ್ಯತೆಯ ಒಂದು ಸಂಖ್ಯಾಮಾನ ಬೇಕು. ನಾಣ್ಯ ಸಮತೂಕವಾಗಿದ್ದು ಅದರ ಎರಡು ಮುಖಗಳು ಸಮಪ್ರಾಯಿಕ (Equally likely) ಎನ್ನುವಂತಿದ್ದರೆ 'ತಲೆ'ಯ ಸಂಭವತೆ 1/2 ; ಬಾಲದ ಸಂಭವತೆ ಕೂಡ 1/2. ಇದೇ ರೀತಿ ಸಮತೂಕದ ದಾಳವನ್ನು ಉರುಳಿಸಿದಾಗ ಅದರ ಮೇಲ್ಮುಖದಲ್ಲಿ 1, 2, ..., 6 ಚುಕ್ಕಿಗಳಿರಬಹುದು. ಆದ್ದರಿಂದ ಈ ಪ್ರಯೋಗದ ಪ್ರತಿಚಯವ್ಯೋಮ

$S = \left\{1,2,\ldots,6\right\}$ ಮತ್ತು ಯಾವುದೇ ನಿರ್ದಿಷ್ಟ ಮುಖ ಮೇಲೆ ಕಾಣಿಸಿಕೊಳ್ಳುವ ಸಂಭವತೆ 1/6. ದೊರೆತ ಸಂಖ್ಯೆ 4 ಕ್ಕಿಂತ ಹೆಚ್ಚಾಗಿರುವ ಸಂಭವತೆ 2/6, ಯಾಕೆಂದರೆ ಇದಕ್ಕೆ ಅನುಕೂಲಕರ ಸಾಧ್ಯತೆಗಳು (5 6) ಇವೆರಡು. ಇಲ್ಲಿ ಬಳಸಿರುವ ತರ್ಕ, ಸಂಭವತೆಯನ್ನು ಗಣಿಸಲು ಈ ಕೆಳಗಿರುವ ಸೂತ್ರವನ್ನು ನೀಡುತ್ತದೆ.

ನಿರೂಪಣೆ

ಯಾವುದೇ ಯಾದೃಚ್ಛಿಕ ಪ್ರಯೋಗದಲ್ಲಿ n ಪರಸ್ಪರ ವರ್ಜ್ಯ (mutually exclusive) ಮತ್ತು ಸಮಪ್ರಾಯಿಕ ಫಲಿತಗಳು ಸಾಧ್ಯವಾದರೆ, ಆಗ ಒಂದು ನಿರ್ದಿಷ್ಟ ಫಲಿತದ ಸಂಭವತೆ l/n . ಅದಲ್ಲದೆ ಅವುಗಳ ಪೈಕಿ ಒಂದು ಘಟನೆಗೆ m ಫಲಿತಗಳು ಅನುಕೂಲಕರವೆಂದಾದರೆ ಆಗ ಆ ಘಟನೆ ಜರಗುವ ಸಂಭವತೆ m/n.

ಈ ಹಿನ್ನೆಲೆಯಲ್ಲಿ ಕೆಳಗಿನ ಪ್ರಯೋಗವನ್ನು ಗಮನಿಸಿ. ಒಂದರಿಂದ ಇನ್ನೂರರ ವರೆಗಿನ ಪೂರ್ಣಾಂಕಗಳನ್ನು ಒಂದೇ ತೆರನ ಬಿಲ್ಲೆಗಳ ಮೇಲೆ ಬರೆದು ಅವನ್ನು ಚೆನ್ನಾಗಿ ಮಿಶ್ರಗೊಳಿಸಿ ಚೀಲವೊಂದರಲ್ಲಿ ಹಾಕಲಾಗಿದೆ. ಆ ಚೀಲದಿಂದ ಒಂದು ಬಿಲ್ಲೆಯನ್ನು ಯಾದೃಚ್ಛಿಕವಾಗಿ ಆರಿಸಿದರೆ ಅದರಲ್ಲಿರುವ ಸಂಖ್ಯೆ (ಅ) ವಿಷಮವಾಗಿರುವ (ಆ) 5 ರಿಂದ ಭಾಜ್ಯವಾಗಿರುವ, (ಇ) 25 ಕ್ಕಿಂತ ಕಡಿಮೆ ಯಾಗಿರುವ ಸಂಭವತೆಗಳೇನು? ಇಲ್ಲಿ ಬಿಲ್ಲೆಗಳು ಪರಸ್ಪರ ವರ್ಜ್ಯ ಮತ್ತು ಸಮ ಪ್ರಾಯಿಕವೆಂದು ತಿಳಿಯಬಹುದು. ಈ ಚೀಲದಲ್ಲಿರುವ ವಿಷಮ ಸಂಖ್ಯೆಗಳು 1,3,5,..., 199. ಅಂದರೆ ಒಟ್ಟು ಅಂಥ ಸಂಖ್ಯೆಗಳು 100. ಆದ್ದರಿಂದ ವಿಷಮ ಸಂಖ್ಯೆ ದೊರೆಯುವ ಸಂಭವತೆ 100/200 ಅಥವಾ 1/2. ಅದೇ ರೀತಿ 5ರಿಂದ ಭಾಗಿಸಲಾಗುವ ಸಂಖ್ಯೆಗಳು 5, 10, 15, ..., 195, 200. ಅಂದರೆ ಒಟ್ಟು 40. ಹೀಗಾಗಿ ಇಂಥ ಸಂಖ್ಯೆ ದೊರೆಯುವ ಸಂಭವತೆ 40/200 ಅಥವಾ 1/5. ಹೀಗೆಯೇ ಆರಿಸಲಾದ ಸಂಖ್ಯೆ 25ಕ್ಕಿಂತ ಕಡಿಮೆಯಾಗಿರುವ ಸಂಭವತೆ 24/200 ಅಥವಾ 3/25.

ಸಂಭವತೆಯ ಮೇಲಿರುವ ನಿರೂಪಣೆ ಯಾವಾಗಲೂ ಅನ್ವಯಿಸುವುದೇ? ಇದಕ್ಕೆ ಉತ್ತರ ತಿಳಿಯಲು ಆ ನಿರೂಪಣೆಯಲ್ಲಿ ಮೂರು ಅಭಿಗೃಹೀತ (assumption) ಗಳಿರುವುದನ್ನು ಗಮನಿಸಿ. ಅವು ಹೀಗಿವೆ.

(ಅ) ಪ್ರಯೋಗದಲ್ಲಿ ಸಾಧ್ಯ ಫಲಿತಗಳ ಸಂಖ್ಯೆ ಸಾಂತ (finite) ವಾಗಿದ್ದು ಅದು ತಿಳಿದಿರಬೇಕು.

(ಆ) ಫಲಿತಗಳು ಪರಸ್ಪರ ವರ್ಜ್ಯವಾಗಿರಬೇಕು.

(ಇ) ಎಲ್ಲ ಫಲಿತಗಳೂ ಸಮಪ್ರಾಯಿಕವಾಗಿರಬೇಕು. ದತ್ತ ಸಂದರ್ಭದಲ್ಲಿ ಈ ಅಭಿಗೃಹೀತಗಳು ಅನ್ವಯಿಸುವಂತಿದ್ದರೆ ಮಾತ್ರ ಮೇಲೆ ತಿಳಿಸಿರುವ ಸಂಭವತೆಯ ನಿರೂಪಣೆಯನ್ನು ಬಳಸಬಹುದು. ಇಲ್ಲದಿದ್ದರೆ ಅದರ ಬಳಕೆ ಸೂಕ್ತವಲ್ಲ. ಉದಾಹರಣೆಗೆ ಈ ಪ್ರಶ್ನೆಗಳನ್ನು ಪರಿಶೀಲಿಸಿ, ಇಲ್ಲಿ ಆ ಅಭಿಗೃಹೀತಗಳು ಸಿಂಧು ವಲ್ಲದಿರುವುದನ್ನೂ ಗಮನಿಸಿ.

(ಅ) ಯಂತ್ರವೊಂದು ಉತ್ಪಾದಿಸಿದ ವಸ್ತು ನ್ಯೂನತೆಯುಕ್ತವಾಗಿರುವ ಸಂಭವತೆಯೇನು ?

(ಆ) ಮೈಸೂರು ರಸ್ತೆಯಲ್ಲಿ ಬಿ. ಎಚ್. ಇ. ಎಲ್. ಕಾರ್ಖಾನೆಯ ಮುಂದುಗಡೆ ಒಂದು ನಿರ್ದಿಷ್ಟ ದಿನದಂದು ರಸ್ತೆ ಅಪಘಾತ ನಡೆಯುವ ಸಂಭವತೆಯೇನು?

(ಇ) ನಾಳೆಯ ದಿನ, ಜ್ಞಾನಭಾರತಿಯಲ್ಲಿ ಮಳೆ ಬೀಳುವ ಸಂಭವತೆಯೇನು ?

(ಈ) ವ್ಯಕ್ತಿಯೊಬ್ಬನಿಗೆ ಕ್ಯಾನ್ಸರ್‌ರೋಗ ತಗಲುವ ಸಂಭವತೆಯೇನು?

ಈ ಪ್ರಶ್ನೆಗಳಿಗೆ ಉತ್ತರ ಪಡೆಯಲು ಸಂಭವತೆಯ ಮೇಲಿರುವ ನಿರೂಪಣೆ ಸಹಾಯ ನೀಡಲಾರದು ಈ ನಿಟ್ಟಿನಲ್ಲಿ ಮೊದಲು ಆ ನಿರೂಪಣೆಯ ಒಂದು ಅಂಶವನ್ನು ಗಮನಿಸಿ. ಅದರ ಬಳಕೆ ಅಭಿಗೃಹೀತಗಳ ಮೇಲೆ ಮಾತ್ರ ಆದರಿಸಿದೆ. ಪ್ರಯೋಗಗಳಿಂದ ಪಡೆದ ದತ್ತಾಂಶಗಳ ಅವಶ್ಯಕತೆ ಅದಕ್ಕಿಲ್ಲ. ನಾಣ್ಯದ ಚಿಮ್ಮುವಿಕೆಯಲ್ಲಿ 'ತಲೆ'ಯ ಸಂಭವತೆಯನ್ನು ತಿಳಿಯಲು ನಾಣ್ಯವನ್ನು ಚಿಮ್ಮಲೇಬೇಕಾದ್ದಿಲ್ಲ! ನಾಣ್ಯದ ಸ್ವಭಾವದ ಕುರಿತು ಅಭಿಗೃಹೀತಗಳು ಮಾತ್ರ ಅವಶ್ಯ. ಈ ದೃಷ್ಟಿಯಲ್ಲಿ ಆ ನಿರೂಪಣೆ ನೀಡುವುದು ಪ್ರಯೋಗಪೂರ್ವ ಸಂಭವತೆ. ಇದಕ್ಕೆ ಪರ್ಯಾಯವಾಗಿ, ಯಂತ್ರವೊಂದು ಉತ್ಪಾದಿಸಿದ 1000 ವಸ್ತುಗಳನ್ನು ಪರೀಕ್ಷಿಸಿದಾಗ 29 ವಸ್ತುಗಳು ನ್ಯೂನತೆಯುಕ್ತವಾಗಿದ್ದರೆ ಅವುಗಳ ನಿಷ್ಪತ್ತಿ 29/1000ಕ್ಕೆ ಮತ್ತು ಉತ್ಪಾದಿತ ವಸ್ತು ನ್ಯೂನತೆಯುಕ್ತವಾಗಿರುವ ಸಂಭವತೆಗೆ ನೇರ ಸಂಬಂಧವಿದೆಯೆಂದು ತಿಳಿಯಬಹುದು. ಪರೀಕ್ಷಿಸಿದ ವಸ್ತುಗಳ ಸಂಖ್ಯೆ ಸಾಕಷ್ಟಿರುವಾಗ ಇಂಥ ನಿಷ್ಪತ್ತಿಗಳನ್ನು ಅನುರೂಪ ಸಂಭವತೆಗಳ ಅಂದಾಜಾಗಿ ತೆಗೆದುಕೊಳ್ಳಬಹುದು. ಇದು ಅನುಭವಜನ್ಯ (ಪ್ರಯೋಗಾಪರ) ಸಂಭವತೆ. ದೊರೆತ ದತ್ತಾಂಶಗಳನ್ನು ಬಳಸಿ ಗಣಿಸಿದ ನಿಷ್ಪತ್ತಿ (ಸಾಪೇಕ್ಷ ಆವರ್ತಾಂಕ)ಗಳನ್ನು ಸಂಭವತೆಗಳಾಗಿ ಬಳಸುವುದು ರೂಢಿಯಲ್ಲಿ ಸಾಮಾನ್ಯ. ಇಂಥ ಒಂದು ನಿದರ್ಶನ ಈ ರೀತಿಯಿದೆ. ಒಂದು ಕಾರ್ಯಾಲಯದಲ್ಲಿರುವ ಐದು ಜೆರಾಕ್ಸ್ ಯಂತ್ರಗಳ ಕುರಿತು 260 ದಿವಸಗಳ ಅವಧಿಯಲ್ಲಿ ಈ ಮಾಹಿತಿ ದೊರೆತಿದೆ.

ಯಂತ್ರದ ಕ್ರಮ ಸಂಖ್ಯೆ	1	2	3	4	5
ಯಂತ್ರ ಕೆಟ್ಟಿದ್ದ ದಿವಸಗಳ ಸಂಖ್ಯೆ	16	8	23	52	6

ಪ್ರತಿಯಂತ್ರ ಯಾವುದೇ ನಿರ್ದಿಷ್ಟ ದಿನದಂದು ಕೆಟ್ಟಿರುವ ಸಂಭವತೆಗಳೇನು ? ಕೆಟ್ಟಿಲ್ಲದಿರುವ ಸಂಭವತೆಗಳೇನು ? ನೀವೇ ಗಣಿಸಿ.

ಮಂಕ

ಮ. ಸು. ಕೃಷ್ಣಮೂರ್ತಿ,

ಕನ್ನಡದಲ್ಲಿ ಮಂಕ, ಮಂಕು ಒಂದು ಕಾಲಕ್ಕೆ ಉಜ್ವಲವಾದ ಅರ್ಥವಾಹಕ ಶಬ್ದಗಳಾಗಿದ್ದಿರಬೇಕು. ಗಾಂಪರೊಡೆಯರ ಶಿಷ್ಯನಾಗಿ 'ಮಂಕ'ನೇನೋ ಸಾಕಷ್ಟು ಉಜ್ವಲನಾಗಿ ಮೆರೆದದ್ದುಂಟು. ಆದರೆ ಈಗೇಕೋ ಇವರಿಗೆಲ್ಲ ಮಂಕು ಬಡಿದಿರುವಂತೆ ಕಾಣುತ್ತದೆ.

ಕಿಟಲ್ ಅವರು ಮಂಕು ಶಬ್ದವನ್ನು ಕುರಿತು ವಿವೇಚನೆ ಮಾಡಿದ್ದಾರೆ. ಆದರೆ ಮಂಕ ಮಂಕಿಯರನ್ನೇಕೋ ಬಿಟ್ಟಿದ್ದಾರೆ. ನಾನು ತಿಳಿದಂತೆ ಈ ಮಂಕು, ಮಂಕ, ಮಂಕಿಯರ ಇತಿಹಾಸವನ್ನು ಕನ್ನಡದಲ್ಲಿ ಯಾರು ಬರೆದಿಲ್ಲ, ಬಹುಶಃ ಇತಿಹಾಸಕಾರರ ಮುಖಕ್ಕೆ ಯಾರೋ ಮಂಕುಬೂದಿ ಎರಚಿರಬೇಕು.

ನನಗೆ ತಿಳಿದ ಮಟ್ಟಿಗೆ ಈ ಮಂಕ ಶಬ್ದ ಕನ್ನಡದಲ್ಲಿ ಬಳಕೆಯಲ್ಲಿರುವ ಅತ್ಯಂತ ಪ್ರಾಚೀನ ಶಬ್ದಗಳಲ್ಲಿ ಒಂದು. ಮೊದಲಿಗೆ ಅದು ಒಬ್ಬ ವ್ಯಕ್ತಿಯ ಹೆಸರಾಗಿದ್ದು ಅನಂತರ ಅವನ ಮಂಕುಬೂದಿಯ ಪ್ರಭಾವಕ್ಕೆ ಸಿಲುಕಿ Dimner, want of lustre, obscurity of intellectual perception, Confusion of mind stupidity stubbrnness, ಎಂಬ ಅರ್ಥ ಪರಂಪರೆಯನ್ನು ಪಡೆಯಿತು. 'ಮಂಕು ಬೂದಿ'ಗೆ A powder that confuses the mind ಎಂಬ ಅರ್ಥವನ್ನು ಕಿಟಲ್ ನೀಡಿದ್ದಾರೆ.

ಬನ್ನಿರಿ ಈಗ ಈ ಮಂಕ ಮತ್ತು ಆತನ ಮಂಕು ಬೂದಿಯ ಪರಿಚಯ ಮಾಡಿಕೊಳ್ಳೋಣ.

"ನಾನೇ ಈ ಅವಸರ್ಪಿಣೀ ಕಾಲದ ಚರಮ ತೀರ್ಥಕರ, ನಾನೇ ಹೌದು, ನಾನೇ ಅವಸರ್ಪಿಣಿಯ ದಂಶದ ಚರಮ ವೈದ್ಯ! ವೈದ್ಯ, ವೈದ್ಯ!

'ಅವಸರ್ಪಿಣೀ' ಎಂದರೆ ಕಾಲದ ಅಧೋಮುಖೀಗತಿ. ಕ್ರಿಸ್ತಪೂರ್ವ ಆರನೆಯ ಶತಮಾನ ಶ್ರಾವಸ್ತಿ ನಗರದ ಒಂದು ರಾಜಪಥದಲ್ಲಿ ಗಡ್ಡ ಮೀಸೆಗಳನ್ನು ಕೆದರಿಕೊಂಡು, ಕೆದರಿದ ತಲೆಯ ಒಬ್ಬ ಪುರುಷ ಕೂಗುತ್ತ ಹೋಗುತ್ತಿದ್ದ–'ವೈದ್ಯ ವೈದ್ಯ ಕಿವಿಯವೈದ್ಯ, ಕಣ್ಣಿನವೈದ್ಯ, ಕಪಾಲದವೈದ್ಯ, ಲಲಾಟವೈದ್ಯ, ಲಲಾಟರೇಖೆಯ

ವೈದ್ಯ! ಪಂಚೇಂದ್ರಿಯಗಳ ವೈದ್ಯ, ಬಳಲಿದ ಕಾಲಿನ ವೈದ್ಯ! ಕೈವೈದ್ಯ, ಮುರಿದ ಮನದ ಮದ್ದುಗಾರ, ಒಡೆದ ಭಾಗ್ಯದ ವೈದ್ಯ!'.

'ಈ ರೀತಿ ಆ ಕ್ಷಪಣಕ ವೇಷಧಾರಿ ವೈದ್ಯ ತನ್ನ ಮಸ್ಕರ ದಂಡವನ್ನು ಅಲ್ಲಾಡಿಸಿ ಅಲ್ಲಾಡಿಸಿ ಕೂಗುತ್ತಿದ್ದಾನೆ 'ಬನ್ನಿ ಬನ್ನಿ ನನ್ನ ಬಳಿಗೆ ಬನ್ನಿ! ನಾನು ಭಿಷಗ್ರತ್ನ! ದೃಷ್ಟಿದಾತ ಕವಿ, ಪದಕರ್ತ, ನಾನು ವಿಶಲ್ಯಕರಣಿಯನ್ನು ನೀಡುತ್ತೇನೆ ಸಂಜೀವನಿಯನ್ನು ಕೊಡುತ್ತೇನೆ, ನಾನೇ ಈ ಅವಸರ್ಪಿಣೀ ಯುಗದ ಚರಮ ತೀರ್ಥಂಕರ!'

ಆತನ ಮೈಮೇಲೆ ಒಂದು ನೀಲಿಯ ಅಧೋವಸ್ತ್ರವನ್ನು ಬಿಟ್ಟರೆ ಬೇರೆ ಬಟ್ಟೆ ಯಿರಲಿಲ್ಲ, ಅವನ ಹೆಗಲಮೇಲೆ ಒಂದು ಜೋಳಿಗೆ, ಕೈಯಲ್ಲಿ ಒಂದು ಮಸ್ಕರದಂಡ ಎಂದರೆ ಬಿದಿರಿನಗಳುವನ್ನು ಕಡಿದು ಮಾಡಿಕೊಂಡ ದಂಡ. ಆತನ ಮಾತುಗಳೇ ನೋ ವಿಲಕ್ಷಣ! ಆದರೆ ವದನ ಕೆಂಡದಂತೆ ಉಜ್ವಲ!

ಅವನು ಬಾಯಿಂದ ಹೇಳುತ್ತಲೇ ಇದ್ದಾನೆ ವೈದ್ಯ ವೈದ್ಯ! ನಾನೊಂದು ಅಂಜನ ತಯಾರಿಸಿದ್ದೇನೆ. ಕಾಳರಾತ್ರಿಯಲ್ಲಿ ಮಿಸುನಿಯಂತೆ ಮಿನುಗುವ ಮಾಲಿಕೆ ಗಳನ್ನು ಸಂಗ್ರಹಿಸಿ, ಸರ್ಪಮಣಿ, ಬೆಕ್ಕಿನ ಉಗುರು, ಮುಳ್ಳುಹಂದಿಯಮುಳ್ಳು, ಗೇಂಡಾಮೃಗದಕೊಂಬು, ಇವೆಲ್ಲದರ ಪುಟಪಾಕವನ್ನು ತಯಾರಿಸಿದ್ದೇನೆ. ಅದಕ್ಕೆ ಶುದ್ಧ ಹಸುವಿನ ತುಪ್ಪ ಬೆರೆಸಿದ್ದೇನೆ. ಅದರಿಂದ ಈ ನೇತ್ರಾಂಜನವನ್ನು ತಯಾರಿಸಿದ್ದೇನೆ. ನನ್ನ ಬಳಿ ಅಂಜನವಿದೆ ಶಲಾಕೆಯಿದೆ ನಿಮ್ಮ ಬಳಿ ರುಗ ಚಕ್ಷುವಿದೆ ನಾನು ಶಲಾಕಾಪುರುಷ, ನೀವು ರೋಗ ವಿದ್ಧ ಜೀವಿಗಳು. ಬನ್ನಿ ನೀವು ಶಲಾಕಾ ಪುರುಶನ ಬಳಿಗೆ ಬನ್ನಿ! ನನ್ನ ಬಳಿಗೆ ಬನ್ನಿ, ವೈದ್ಯ! ವೈದ್ಯ!

ಶ್ರಾವಸ್ತಿಯ ಬೀದಿಯಲ್ಲಿ ಈ ಅದ್ಭುತ ಪುರುಷನ ಹಿಂದೆ ಜನ ಕಿಕ್ಕಿರಿದರು. ಕೊನೆಗೆ ಅವನು ಮಕರಂದ ಶೆಟ್ಟಿಯ ಮಾವಿನ ತೋಪಿನಲ್ಲಿ ಬೀಡುಬಿಟ್ಟ. ತನ್ನ ಜೋಳಿಗೆಯಿಂದ ಒಂದು ಬಟ್ಟೆತೆಗೆದು ಹಾಸಿದ, ಅದರ ಮೇಲೆ ಮುಪ್ಪು, ಮೃತ್ಯು ಮತ್ತು ದುಃಖದ ಚಿತ್ರವಿತ್ತು. ಅದನ್ನು ತೋರಿಸಿ ಅವನು ಹೇಳಿದ, 'ಈ ಜಗತ್ತು ದುಃಖಮಯ, ತೃಷ್ಣಾಮಯ, ಎಲ್ಲೆಲ್ಲೂ ನೋವಿದೆ ಕ್ರೌರ್ಯವಿದೆ, ತ್ರುಟಿಯಿದೆ, ಸೋಲಿದೆ ಈ ರೀತಿ ಇರುವುದೆಲ್ಲ ತಲೆಬೇನೆ, ಚಕ್ಷುಶೂಲೆ, ಜ್ವರದಾಹ, ಇದಕ್ಕೆಲ್ಲ ನಾನು ಮದ್ದು ನೀಡುತ್ತೇನೆ.'

ಜೈನರಲ್ಲಿ ಕಾಲವನ್ನು ಉತ್ಸರ್ಪಿಣಿ ಮತ್ತು ಅವಸರ್ಪಿಣಿ ಎಂದು ಎರಡು ವಿಧವಾಗಿ ವಿಂಗಡಿಸುತ್ತಾರೆ. ಅವಸರ್ಪಿಣಿ ಧರ್ಮದ ಇಳಿಗಾಲ. ಇಂಥ ಅವ ಸರ್ಪಿಣಿಯಲ್ಲಿ ನಿಜಕ್ಕೂ ಜನರಿಗೆ ಕಣ್ಣುಬೇನೆ ಕರ್ಮಕಾಂಡದ ಹೊಗೆಯಿಂದ

ಎಲ್ಲರಿಗೂ ಕಣ್ಣು ಬೇನೆ ಮುಂದೇನು ಎಂಬ ಪ್ರಶ್ನೆ ಅವರಿಗೆ ತಲೆನೋವು ತಂದಿತ್ತು ಎಲ್ಲರಲ್ಲೂ ತೃಷ್ಣೆ ಮತ್ತು ಸಂಚಯದ ಭೀಕರ ಜ್ವರದಾಹ! ಒಂದು ಕಾಲಕ್ಕೆ ಅಲ್ಲಿ ಗಣತಂತ್ರಗಳಿದ್ದವು ಈಗ ಅದು ಹೋಗಿ ರಾಜತಂತ್ರ ಬಂದಿತ್ತು. ಕೇವಲವಜ್ಜಿ ಮತ್ತು ಮಲ್ಲ ಗಣತಂತ್ರ ಮಾತ್ರ ಉಳಿದಿದ್ದವು. ಈ ಗಣತಂತ್ರದಲ್ಲಿ ಬದುಕುಸರಳ, ಪ್ರಾಮಾಣಿಕ ಹಾಗೂ ಸಾಮತ್ವಾಧಾರಿತ. ಆದರೆ ಕೋಶಲ ಮತ್ತು ಮಗಧದ ರಾಜತಂತ್ರದಲ್ಲಿ ಸಾಮಂತಶಾಯಿ ತಾನೇತಾನಾಗಿತು, ಹಿಂದಿನ ನೈತಿಕತೆ ಕಣ್ಮರೆಯಾಗಿತ್ತು. ಒಂದೆಡೆ ಸರ್ವ ಸಂಗ್ರಹಿಗಳಾದ ವ್ಯಾಪಾರಿಗಳು, ಮತ್ತೊಂದೆಡೆ ಸ್ವೇಚಾಚಾರಿ ವಿಷಯಲೋಲುಪರಾದ ಕ್ಷತ್ರಿಯರು. ಇವರ ನಡುವೆ ಸಮಾಜ ಸುಟ್ಟು ಉರಿಯುತ್ತಿತ್ತು.ಧರ್ಮ ಪುರೋಹಿತಶಾಹಿಯ ಕೈಯಲ್ಲಿ ಸಿಕ್ಕಿ ನರಳುತ್ತಿತ್ತು. ಈ ರೀತಿ ಎಲ್ಲೆಲ್ಲೂ ಅನವಸ್ಥೆ, ಅಶಾಂತಿ! ಇತಿಹಾಸ ಹೊಸಯುಗದ ಪ್ರಸವ ವೇದನೆಯಿಂದ ಒದ್ದಾಡುತ್ತಿತ್ತು.

ಇಂಥ ಪರಿಸ್ಥಿತಿಯಲ್ಲಿ ಯಾವನಾದರೂ ಮನೆಬಾಗಿಲಿಗೆ ಬಂದು ಮದ್ದು ಕೊಡುತ್ತೇನೆಂದರೆ ಒಲ್ಲೆನೆನ್ನುವರಾರು? ಆದ್ದರಿಂದ ಸಹಜವಾಗಿಯೇ ಅಂದು ಶ್ರಾವಸ್ತಿಯಲ್ಲಿ ಎಲ್ಲಿಲ್ಲದ ಜನ! ಆ ವೈದ್ಯ ತನ್ನ ದೊಣ್ಣೆ ಅಲ್ಲಾಡಿಸಿ ಅಲ್ಲಾಡಿಸಿ ತನ್ನ ದರ್ಶನವನ್ನು ಬಿತ್ತರಿಸತೊಡಗಿದ. ಜನ ಮೈಯೆಲ್ಲ ಕಿವಿಯಾಗಿ ಕೇಳತೊಡಗಿತು.

ವೈದ್ಯನೆಂದು ಹೇಳಿಕೊಂಡ ಈ ಮಾತುಗಾರ ಬುದ್ಧ ಮತ್ತು ಮಹಾವೀರ ಇವರಿಬ್ಬರ ಸಮಕಾಲೀನ! ಪ್ರತಿದ್ವಂದ್ವಿ! 'ಕೋಣವೆರಡುಂ ಹೋರೆ ಗಿಡುವಿಂಗೆ ಮೃತ್ಯು' ಎನ್ನುತ್ತಾನೆ ರಾಘವಾಂಕ. ಆದರೆ ಈ ಇಬ್ಬರು ಘಟಾನುಘಟಿಗಳಿಗೂ ಸವಾಲುಹಾಕಿ ಸಡ್ಡು ಹೊಡೆದುನಿಂತ ಈ ಮಹಂತನೇ ಮಂಕ! ಮಂಕಪುತ್ರ ಮಕ್ಖಲಿ (ಮಂಖಲಿ) ಗೋಶಾಲಕ ಎಂದು ಆತನ ಪೂರ್ತಿಹೆಸರು. ಅವನು ಆಜೀವಕ ಸಂಪ್ರದಾಯದ ಅಚೇಲಕ ಶಾಖೆಯಾಗುರು ಮತ್ತು ಒಬ್ಬ ಬಡ ಭಟ್ಟಂಗಿ (ಮಂಖಿ) ಇಲ್ಲವೆ ಕ್ಷಪಣಕನ ಮಗ. ಮಕ್ಖಲಿ ಗೋಶಾಲಕನ ಹೆಸರು ಬೌದ್ಧಗ್ರಂಥ 'ಸಾಮಂಜ ಫಲಸುತ್ತ' (ದೀರ್ಘನಿಕಾಯ) ಹಾಗೂ ಜೈನಗ್ರಂಥ 'ಭಗವತೀ ಸೂತ್ರ' ಹಾಗೂ ವೈದಿಕರ 'ಮಹಾಭಾರತ'ದ ಶಾಂತಿಪರ್ವ (ಮಂಕಿ ಗೀತಾ ಅಧ್ಯಾಯ 177) ಈ ಮೂರರಲ್ಲೂ ದೊರೆಯುತ್ತದೆ. ಈ ಮೂರರಲ್ಲೂ ಅವನ ಬಾಯಿಂದ ಒಂದೇ ಮಾತನ್ನು ಹೇಳಿಸಿದೆ, 'ನಿಯತಿವಾದ'. ಅವನ ಮೂಲಸಿದ್ಧಾಂತವೆಂದರೆ 'ನತ್ಥಿ ಪುರಿಸ್ಕಾರೇ! ನಾಸ್ತಿ ಪುರುಷಕಾರಂ (ಪುರುಷಾರ್ಥತ್ರಥಿ)'.

ಮೌರ್ಯಯುಗದಲ್ಲಿ ಅವನ ಶಿಷ್ಯರು ಸಾಕಷ್ಟು ಸಂಖ್ಯೆಯಲ್ಲಿದ್ದರು. ಬಹಳ ದಿನದವರೆಗೆ ಆಜೀವಕ ಸಂಪ್ರದಾಯ ದಕ್ಷಿಣ ಭಾರತದ ಕೆಲವು ಭಾಗಗಳಲ್ಲಿ ಹಾಗೂ ಮಗಧದ ಸುತ್ತಮುತ್ತ ಅಸ್ತಿತ್ವದಲ್ಲಿತ್ತು ಮಂಖಿರ ವೇಷ ಗಡ್ಡ ಮೀಸೆಯಿಂದ ಕೂಡಿ ಚಿತ್ರ ವಿಚಿತ್ರವಾಗಿರುತ್ತಿತ್ತು. ಗೋಶಾಲಕ ಮಂಖಿ ಬುದ್ಧನನ್ನು

ಬಿಟ್ಟು ಮಹಾವೀರನ ಶಿಷ್ಯನಾದಾಗ ಅವನ ಬಳಿ ಸಾಟಿಕ, ಪಾಟಿಕ, ಕುಂಡಿಕಾ, ಉಪಾನಹ ಹಾಗೂ ಚಿತ್ರಫಲಕಗಳಿದ್ದವಂತೆ. ಈ ವಿವರಗಳು ಮೇಲಣ ಗ್ರಂಥಗಳಿಂದ ದೊರೆಯುತ್ತವೆ. ಆದರೆ ಅಲ್ಲಿ ಮಸ್ಕರದಂಡದ ಉಲ್ಲೇಖವಿಲ್ಲ. ಆಜೀವಕರ ಅಚೇಲಕ ಶಾಖೆಯಲ್ಲಿ ಬೊಂಬಿನ (ಮಸ್ಕರ) ದಂಡ ಹಿಡಿದುಕೊಳ್ಳುವ ಪದ್ಧತಿಯಿತ್ತು. ಕೆಲವರ ಪ್ರಕಾರ ಗೋಶಾಲಕನಿಗೆ 'ಮಂಖಲಿ' ಅಥವಾ 'ಮಕ್ಕಲಿ' ಎಂಬ ಬಿರುದು ಬರಲು ಕಾರಣ ಅವನು ಮಂಖ (ಚಾರಣ) ಪುತ್ರನಾದುದರಿಂದಲೇ ಅಲ್ಲ ಆದರ ಜೊತೆಗೆ ಮಸ್ಕರ (ಮಕ್ಖಲ)ಗಳು ಹಿಡಿದುಕೊಂಡುದರಿಂದಲೂ ಬಂದಿರಬೇಕು. ಹಾಡು ಹೇಳಿ ಭಿಕ್ಷಾಟನೆ ಮಾಡುತ್ತಿದ್ದ ಕಥಾಜೀವಿ ಜನರನ್ನು ಆಗ 'ಮಂಖ'ರೆಂದು ಕರೆಯುತ್ತಿದ್ದರು. ಅಂತೂ ಯಾವ ಕಾರಣದಿಂದಲಾದರೂ ಆಗಲಿ ಗೋಶಾಲಕನಿಗೆ ಮಂಖ (ಕ) ಎಂಬ ಹೆಸರು ಬಂದುದಂತೂ ಸ್ಪಷ್ಟ.

'ಮಂಖ' ಶಬ್ದ (ಮಕ್ಕ-ತಿರುಗಾಡು, ಪರಿವ್ರಜನ ಮಾಡು) ಮಕ್ಷ (ಸುತ್ತಿ ಸುತ್ತಿ ಸಂಗ್ರಹ ಮಾಡು) (ಮಧುಮಕ್ಷಿ ಶಬ್ದ ನೋಡಿ) ದಿಂದ ಬಂದಿದೆಯೆಂದೂ ಹೇಳಲಾಗುತ್ತದೆ. ಅಂತೂ ಮಂಖ ಅಥವಾ ಮಕ್ಷ ಮಧುಕರೀವೃತ್ತಿಯಿಂದ, ಮಧುಕರಿಗಳಂತೆ. ಗೀತ ಗುಂಜನದಿಂದ ಜೀವಿಸುವ ಅಲೆಮಾರಿ ಜನರಿರಬೇಕು. ಗೋಶಾಲಕನ ತಂದೆ ಮಗಧದ ಸರವಣ ಗ್ರಾಮದಲ್ಲಿ 'ಗೋಬಹುಲ' ಎಂಬ ಬ್ರಾಹ್ಮಣನ ಗೋಶಾಲೆಯಲ್ಲಿ ವಾಸವಾಗಿದ್ದ. ಅವನ ಹೆಂಡತಿ ಭದ್ರೆ. ಗಂಡ ಹೆಂಡಿರಿಬ್ಬರೂ ಅಲೆಮಾರಿಗಳು. ಕಾಲಾನಂತರದಲ್ಲಿ ಅವರಿಗೆ ಒಬ್ಬ ಮಗ ಹುಟ್ಟಿದ 'ಗೋಶಾಲಕ' ಎಂದು ಹೆಸರಿಡಲಾಯಿತು.

ಕೊಂಚ ದೊಡ್ಡವನಾದ ಅಲ್ಪಸ್ವಲ್ಪ ವಿದ್ಯೆ ಕಲಿತು ಈ ಗೋಶಾಲಕ ತಾನೂ ಅಲೆಮಾರಿಯಾಗಿ ಹೊರಟ. ಹೊಸದನ್ನು ಯೋಚಿಸುವ, ಕಾಣುವ ಗೀಳು ಅವನ ತಲೆಯಲ್ಲಿತ್ತು. ಈ ಗೋಶಾಲಕನ ಬಾಲ್ಯ, ಯೌವನದ ಬಗೆಗೆ ಯಾವ ವಿವರವೂ ದೊರೆಯುವುದಿಲ್ಲ. ಒಬ್ಬ ದರಿದ್ರ ಭಟ್ಟಂಗಿಯ ಹುಡುಗನ ಬಾಲ್ಯ, ಯೌವನ ಯಾರಿಗೆ ಬೇಕು ? ಅವನ ಈ ಕಾಲ ತೀವ್ರವಾದ ಅಭಾವ, ನಿರಾಶೆ, ಸೋಲು, ಕ್ಷುದ್ಧ ಪಿಪಾಸೆ, ಗ್ಲಾನಿಯಿಂದ ತುಂಬಿದ್ದಿರಬೇಕು. ತಲೆಯಲ್ಲಿ ಚಿಂತೆಯು ತೀವ್ರ ಕಿಡಿಯಿದುದ್ದರಿಂದ ಅವನಿಗೆ ಬದುಕಿನಲ್ಲಿ ಯಾವುದರಲ್ಲೂ ಆಸ್ಥೆಯುಂಟಾಗದೆ ಸಹಜವಾಗಿಯೇ ಅವನು ಪುರುಷಾರ್ಥ ಇಲ್ಲವೆ ಕರ್ಮದಲ್ಲಿ ನಂಬಿಕೆ ಕಳೆದುಕೊಂಡು ನಿಯತಿವಾದದ ಜನಕನಾದ.

ಶ್ರಾವಸ್ತಿಯ ಆ ಮಾವಿನ ತೋಪಿನಲ್ಲಿ ಎಂದಿನಂತೆ ಜನಸಂದಣಿ ಸೇರಿದೆ. ಕ್ಷಪಣಿಕ ವೇಷದಾರಿ ಮಂಖ ಒಂದು ಹೊಸ ಚಿತ್ರಪಟವನ್ನು ಹರಡಿಕೊಂಡು ಪುರುಷಾರ್ಥಕ್ಕೆ ವ್ಯಾಖ್ಯಾನ ನೀಡುತ್ತಿದ್ದಾನೆ. ಆ ಚಿತ್ರದ ಮೇಲುಗಡೆ ಒಂದು

ಒಂಟೆಯಿದೆ. ಒಂಟೆಯ ಹೆಗಲ ಮೇಲೆ ಒಂದು ನೊಗಯಿದೆ. ನೊಗದ ಅತ್ತಿತ್ತ ಎರಡು ಹೋರಿಗರುಗಳಿವೆ. ಅವು ಒಂಟೆಯ ಹೆಗಲಿಗೆ ನೇತಾಡುತ್ತಿರುವಂತೆ ಕಾಣುತ್ತವೆ. ಚಿತ್ರ ನೋಡಿದರೆ ಈ ಮರಿ ಎತ್ತುಗಳು ಕಾಲು ಬಡಿಯುತ್ತಿರುವಂತೆ ಕಂಡರೆ ಒಂಟೆ ಗಾಭರಿಗೊಂಡಂತೆ ಕಾಣುತ್ತದೆ. ಅವುಗಳ ಹಿಂದೆ ಒಬ್ಬಾತ ಕೈ ಎತ್ತಿ ಕೂಗಿಕೊಳ್ಳುತ್ತಿರುವಂತೆ ಚಿತ್ರಿಸಲಾಗಿದೆ.

ಆ ಕ್ಷಪಣಕ ವೇಷಧಾರಿ ಮಂಕ ಚಿತ್ರಪಟವನ್ನು ಮೇಲಕ್ಕೆ ಹಿಡಿದು ಹೇಳತೊಡಗಿದ, "ಓ ಜನರೇ, ಕುಂಬಾರರೇ, ರಥಕಾರರೇ,ಧನುಷ್ಕಾರರೇ,ವಿವಿಧ ಶಿಲ್ಪಕರ್ಮದಲ್ಲಿ ನಿರತರಾದ ಮಾನಿಸರೇ, ನನ್ನ ಮಾತುಕೇಳಿ. 'ನತ್ಥಿ ಪುರಿಸ್ಕಾರೇ ! ನಾಸ್ತಿ ಪುರುಷಕಾರಂ–ಪುರುಷಾರ್ಥಕರ್ಮ ಇವೆಲ್ಲ ಅರ್ಥವಿಲ್ಲದ ಮಾತುಗಳು, ಇವಕ್ಕೆ ಯಾವ ಬೆಲೆಯೂ ಇಲ್ಲ. ನಾನು ಮಂಕ(ಖಿ) ನನ್ನನ್ನು ಮಂಕಿಋಷಿ ಎಂದೂ ಕರೆಯುತ್ತಾರೆ. ನೈಮಿಷಾರಣ್ಯದ ಬ್ರಾಹ್ಮಣರು ನನ್ನನ್ನು ಟಂಕಿಋಷಿ ಎಂದು ಕರೆಯುತ್ತಾರೆ. ಇದರಲ್ಲಿ ನನ್ನ ಖ್ಯಾತಿ–ಅಪಖ್ಯಾತಿಗಳೆರಡೂ ಇವೆ. ನನಗಾಗದವರು ನನಗೆ ಈ ಹೆಸರು ಕೊಟ್ಟಿದ್ದಾರೆ. ಈ ಕರ್ಮವಾದೀ ಬ್ರಾಹ್ಮಣರ ಮಾತು ಕೇಳಿಕೊಂಡು ನಾನು ಧನೋಪಾರ್ಜನೆಗೆ ಏನೇನು ಮಾಡಲಿಲ್ಲ ? ಜನಗಳ ಮನೆ ಮನೆಯ ಬಾಗಿಲಿಗೆ ಹೋಗಿ ನಾಯಿಯಂತೆ ಅಲೆದೆ. ಆದರೆ ಅದರಿಂದ ನನ್ನ ಬಯಕೆ ಈಡೇರಲಿಲ್ಲ. ನನ್ನ ಸ್ಥಿತಿ ಸುಧಾರಿಸಲಿಲ್ಲ. ಬಹುಶಃ ವಿಧಿವಿಧಾನವೇ ಹೀಗೆಂದು ಕಾಣುತ್ತದೆ. ನಿಯತಿ ನಿಯಾಮಕವೇ ಸರ್ವಸ್ವ, ಪುರುಷಾರ್ಥ ವ್ಯರ್ಥ! ಇಷ್ಟಾದರೂ ನಾನು ಹತಾಶನಾಗಲಿಲ್ಲ. ನನ್ನಲ್ಲಿ ಕೊನೆಯದಾಗಿ ಉಳಿದಿದ್ದ ಹಣ ಹಾಕಿ ಎರಡು ಸಣ್ಣ ವಯಸ್ಸಿನ ಎತ್ತುಗಳನ್ನೂ ಕೊಂಡುಕೊಂಡೆ. ನನ್ನ ಪೈತೃಕ ಕಸುಬು ಕವಿತೆ ಮತ್ತು ವೈದ್ಯ; ವೃತ್ತಿ ಭಿಕ್ಷಾಟನೆ. ಆದರೂ ನಾನು ಕಾಯಕದಿಂದ ಬದುಕ ಬಯಸಿದೆ. ಆದರೆ ನನ್ನ ನಿಯತಿ ನಗುತ್ತಿತ್ತು. ನಾನು ಕೃಷಿಯ ಉಪಕರಣಗಳನ್ನು ಕಲೆ ಹಾಕುತ್ತಿದ್ದೆ. ಆದರೆ ನನ್ನ ನಿಯತಿ ನಗುತ್ತಿತ್ತು. ನನ್ನ ಈ ಎತ್ತುಗಳನ್ನು ಕಳ್ಳಕಾಕರು ಕದಿಯಲಿಲ್ಲ, ಗಂಧರ್ವರು ಅಪಹರಿಸಲಿಲ್ಲ, ಒಂದು ಕೆಟ್ಟ ಮೋರೆಯ ಒಂಟೆ ಹಾದೆ ಹಗಲಿನಲ್ಲಿ ಇವುಗಳನ್ನು ಹಾರಿಸಿಕೊಂಡು ಕಾಡಿಗೆ ಓಡಿ ಹೋಯಿತು. ನಾನು ಮರದ ಬೊಂಬೆಯಂತೆ ನೋಡುತ್ತ ನಿಂತಿದ್ದೆ.

ಹೀಗೆ ಹೇಳಿ ಮಂಕ ಆ ಚಿತ್ರವನ್ನು ಎತ್ತರಿಸಿ ತೋರಿಸಿದ. ಅನಂತರ ಶ್ಲೋಕದ ಮೇಲೆ ಶ್ಲೋಕ ಹೇಳಿ ತನ್ನ ಸಿದ್ಧಾಂತ ಪ್ರತಿಪಾದನೆ ಮಾಡತೊಡಗಿದ ;

"ನ ಚೈವ ವಿಹಿತಂ ಶಕ್ಯಂ ದಕ್ಷೇಣಾಪಿ ಹಿತುಂ ಧನಮ್
ಯುಕ್ತೇನ ಶ್ರದ್ಧಯಾ ಸಮ್ಯನೀಹಾಂ ಸಮನುಸಿಷ್ಠತಾ ॥
ಉದ್ಯಮ್ಯೋದ್ಯಮ್ಯಮೇ ದಮ್ಯೇ ವಿಷಮೇ ಚೈವ ಗಚ್ಛತಃ
ಉತ್ಥಿಪ್ಯ ಕಾಕತಾಲೀಯಮುತ್ಪಥೇ ನೈವ ಧಾವತ।

ಮಣೀವೋಷ್ಟ್ರಸ್ಯ ಲಂಬ್ಯೇತೇ ಪ್ರಿಯವೌವತ್ಸತರೌ ಮಮ ॥
ಶುದ್ಧಂ ಹಿ ದೈವಂ ವೇದಂ ಹತೇ ನೈವಾಸ್ತಿ ಪೌರುಷಮ್

ಶಾಂತಿಪರ್ವ 177.

ಅರ್ಥಾತ್ ಮನುಷ್ಯ ಎಷ್ಟೇ ಚತುರನಾಗಿರಲಿ, ಅವನ ಹಣೆಯಲ್ಲಿ ಬರೆದಿಲ್ಲದ ಹಣವನ್ನು ಎಷ್ಟೇ ನಿಷ್ಠೆ, ಶ್ರದ್ಧೆಯಿಂದ ದುಡಿದರೂ, ಪುರುಷಾರ್ಥ ಮಾಡಿದರೂ ಪಡೆಯಲಾರ. ಈ ಒಂಟೆ ನನ್ನ ಎಳೆ ಎತ್ತುಗಳನ್ನು ಕೆಟ್ಟ ಹಾದಿಯಲ್ಲಿ ಕೊಂಡೊಯ್ಯುತ್ತಿದೆ. ಕಾಕತಾಳೀಯವಾಗಿ ಇವುಗಳನ್ನು ಹೆಗಲ ಮೇಲೆ ಎತ್ತಿಕೊಂಡು ಕೆಟ್ಟ ಹಾದಿಯಲ್ಲೇ ಓಡುತ್ತಿದೆ. ಈ ಒಂಟೆಯ ಮಣಿಕುಂಡಲವೋ ಎಂಬಂತೆ ನನ್ನ ಹೋರಿಗರುಗಳು ನೇತಾಡುತ್ತಿವೆ. ಇದು ದೈವಲೀಲೆ ಹಠದಿಂದ ಮಾಡಿದ ಪುರುಷಾರ್ಥದಿಂದ ಏನೂ ಆಗದು.

ಈ ಶ್ಲೋಕಗಳ ಮೂಲಕ ಜನರನ್ನು ಮರುಳುಗೊಳಿಸಿದ ಬಳಿಕ ಮಂಕ ತನ್ನ ಮುಕ್ತಿರಹಸ್ಯವನ್ನು ಬಿತ್ತರಿಸುತ್ತಿದ್ದ. ಮೋಕ್ಷಕ್ಕಾಗಿ ತಪಸ್ಸು ಮೊದಲಾದವು ವ್ಯರ್ಥವೆಂದು ಸಾರಿ "ನತ್ಥಿ ಪುರಸ್ಕಾರೇ" ಎಂದು ಪ್ರತಿಪಾದಿಸುತ್ತಿದ್ದ, ಮನುಷ್ಯ 14 ಸಾವಿರಯೋನಿಗಳಲ್ಲಿ 84 ಸಾವಿರ ಮಹಾಕಲ್ಪಗಳಲ್ಲಿ ಸುತ್ತಿ ತೊಳಲಾಡುವುದು ಅನಿವಾರ್ಯ. ಈ ಚಕ್ರ ಮುಗಿವ ತನಕ ಹುಟ್ಟು ಸಾವುಗಳನ್ನು ತಡೆಯುವ ಕಲ್ಪನೆ ವ್ಯರ್ಥ. ಈ ಜನ್ಮಚಕ್ರ ಮುಗಿದಂದೇ ಆವಾಗಮನವೂ ನಿಂತೀತು. ತನ್ನಷ್ಟಿಗೆ ತಾನೆ 'ವಿಶುದ್ಧತೆ' ಒದಗುವುದು. ಆಗ ಮುಕ್ತಿ ತನಗೆ ತಾನೆ ದೊರೆಕೊಳ್ಳುವುದು. ಅದಕ್ಕೆ ಮುನ್ನ ಚಡಪಡಿಸುವುದು ವ್ಯರ್ಥ. ಪ್ರತಿಯೊಬ್ಬ ವ್ಯಕ್ತಿಯೂ ನಲವತ್ತೊಂಬತ್ತು ನೂರು ಸಾರಿ ಆ ಜೀವಕನಾಗಿ ಜನ್ಮತಳೆಯಬೇಕಾಗುತ್ತದೆ. ಯಾವ ಘಟನೆಗೂ ಕಾರ್ಯ ಕಾರಣ ಸಂಬಂಧವಿಲ್ಲ.

ಈ ರೀತಿ ತನ್ನ ಸಿದ್ಧಾಂತ ಪ್ರತಿಪಾದನೆ ಮಾಡುತ್ತ ಕೊನೆಗೆ ಮಂಕ ಹೀಗೆ ಉಪಸಂಹಾರ ಮಾಡುತ್ತಿದ್ದ. 'ಪ್ರಾಣಿಗಳ ಕ್ಲೇಶಗಳಿಗೆ 'ಹೇತು' ಪ್ರತ್ಯಯವಲ್ಲ. ಹೇತುವಿಲ್ಲದೆಯೆ, ಪ್ರತ್ಯಯವಿಲ್ಲದೆಯೇ ಪ್ರಾಣಿಗಳು ಕ್ಲೇಶಕ್ಕೊಳಗಾಗುತ್ತವೆ. ಹುಟ್ಟುವುದೇ ಒಂದು ದೊಡ್ಡ ವ್ಯಥೆ. ಕ್ಲೇಶ ತೊಲಗುವುದು 'ವಿಶುದ್ಧತೆ' ಯುಂಟಾದಾಗ. ಈ ವಿಶುದ್ಧತೆಗೆ ಯಾವ ಹೇತುವೂ ಇಲ್ಲವೆ ? ಹೇತು ಪ್ರತ್ಯಯ ವಿಲ್ಲದೆಯೇ ಪ್ರಾಣಿ ಶುದ್ಧನಾಗುತ್ತಾನೆ. ಆತ್ಮಕಾರವೂ ಇಲ್ಲ, ಪುರುಷಾಕಾರವೂ ಇಲ್ಲ, ಬಲವೂ ಇಲ್ಲ, ವೀರ್ಯವೂ ಇಲ್ಲ, ಎಲ್ಲ ಸತ್ವ ಪ್ರಾಣ, ಭೂತ, ಜೀವ ಗಣಗಳು ವಿವಶ. ಎಲ್ಲವೂ ಬಲ ವೀರ್ಯವಿರಹಿತ. ನಿಯತಿ ನಿರ್ಮಿತ ಅವಸ್ಥೆಯನ್ನು, ಮುಟ್ಟಿ ಜೀವ ಆರು ಸಾವಿರ ಜನ್ಮಗಳಲ್ಲಿ ಸುಖ ದುಃಖವನ್ನು ಅನುಭವಿಸುತ್ತದೆ 14 ಸಾವಿರ ಪ್ರಮುಖ ಯೋನಿಗಳಿವೆ, ಮತ್ತೆ 800 ಮತ್ತೆ 600 ಐನೂರು ಕರ್ಮ

ಗಳಿವೆ. 14 ಸಾವಿರ ಮಹಾಕಲ್ಪಗಳಲ್ಲಿ ಹುಟ್ಟಿ ಸತ್ತು ಮಾಡಿದ ಮೇಲೆ ದುಃಖದ ಅಂತ್ಯ.

ಶ್ರಾವಸ್ತಿಯ ಜನಕ್ಕೆ ಮಂಕನ ಈ ಮಾತು ಎಷ್ಟು ಅರ್ಥವಾಯಿತೋ ! ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತಾಗಿರಬೇಕು. ಆದರೆ ಜನ ಮರುಳೋ ಜಾತ್ರೆ ಮರುಳೋ ಎಂಬಂತೆ ಅರ್ಥವಾಗದಷ್ಟೂ ಆಕರ್ಷಣೆ ಹೆಚ್ಚಿತು. 'ನತ್ಥಿ ಪುರಿಸ್ಕಾರೇ' ಪುರುಷಾರ್ಥವೆಂಬುದಿಲ್ಲ, ನಡೆ ಮಜಾ ಮಾಡೋಣ ಎಂಬ ಮಾತು ಜನಕ್ಕೆ ತುಂಬ ಅಪ್ಯಾಯಮಾನವಾಗಿರಬೇಕು. ಗಾನ–ಪಾನ-ನೃತ್ಯ ಹಾಗೂ ವೀಣಾವಾದನದ ನಡುವೆ ಈ ಸಂಪ್ರದಾಯ ಬೆಳೆಯಿತು. ಅದರ ಅಂತರ್ವಾಸ ನೀಲ 'ಸಾಟಿಕ' (ಬಟ್ಟೆ) ಮತ್ತು ಮಸ್ಕರ (ಗಳು) ದಂಡ ಇಡೀ ಉತ್ತರ ಭಾರತ ದಲ್ಲಿ ಜನಪ್ರಿಯವಾಯಿತು. ಅವರು ತಮ್ಮ ಭೋಗಾಚಾರವನ್ನು ಚಿತ್ರವಿಚಿತ್ರ ಶಬ್ದಗಳಿಂದ ವ್ಯಕ್ತಪಡಿಸುತ್ತಿದ್ದರು.

ಮಂಕನ ನಿಯತಿವಾದದ ಉಲ್ಲೇಖವನ್ನು ಮಹಾಭಾರತದ ಶಾಂತಿಪರ್ವದಲ್ಲಿ ಕಾಣಬಹುದು. ಆದರೆ ವೇದವ್ಯಾಸರು ಈ ನಿಷ್ಕರ್ಮ ದರ್ಶನವನ್ನು ಕರ್ಮ ದರ್ಶನವನ್ನಾಗಿ ಮಾರ್ಪಡಿಸಿದ್ದಾರೆ. ಶಾಂತಿಪರ್ವದಲ್ಲಿ ಈ ಪ್ರಕರಣವನ್ನೇ 'ಮಂಕಿಗೀತಾ' ಎಂದು ಕರೆದಿದೆ. ಅಲ್ಲಿ ಮಂಕಿಋಷಿ ತನ್ನ ಎತ್ತುಗಳನ್ನು ಒಂಟೆ ಅಪಹರಿಸಿದ ಕಥೆಯನ್ನು ಹೇಳಿ ನಿಯತಿವಾದವನ್ನು ಪ್ರತಿಪಾದಿಸುತ್ತಾನೆ. 'ಮಂಕಿಗೀತೆ'ಯಂ ಪೂರ್ವಪಕ್ಷ ಬೌದ್ಧ ಹಾಗೂ ಜೈನರಲ್ಲಿರುವ ನಿಯತಿವಾದೀ ದಾರ್ಶನಿಕ ಮಂಖಗೋಶಾಲಕನದೇ. ಆದರೆ ಉತ್ತರ ಪಕ್ಷಮಾತ್ರ ಬೇರೆ. ಅಲ್ಲಿ ವ್ಯಾಸರು ಈ ನಿಯತಿವಾದ ಹಾಗೂ ನಿಷ್ಕರ್ಮದೊಂದಿಗೆ ವೈರಾಗ್ಯ ಹಾಗೂ ಬ್ರಹ್ಮ ಜಿಜ್ಞಾಸೆಗೆ ಸಂಬಂಧಕಲ್ಪಿಸುತ್ತಾರೆ. ಅವರ ಪ್ರಕಾರ, ಎಲ್ಲ ಕರ್ಮಗಳೂ ವ್ಯರ್ಥ ಆದ್ದರಿಂದ ಕರ್ಮತ್ಯಾಗಮಾಡಿ ಬ್ರಹ್ಮಸತ್ತ್ವ ಮುಖಮಾಡಬೇಕು. ಮಂಕನ ಮಹಾ ಭಾರತದ ಈ ಹೇಳಿಕೆ ನಿರಾಶೆಯನ್ನು ತೊಡಿದುಹಾಕಿ ಒಂದು ಸ್ವೀಕಾರಾರಾತ್ಮಕ ದರ್ಶನದ ರೂಪ ತಳೆಯುತ್ತದೆ. "ತಸ್ಮಾನ್ನಿರ್ವೇದರಪ್ವೇಹ ಗಂತವ್ಯ ಸುಖ ವಿಪ್ಸತಾ ಸುಖಂ ಸ್ವಪಿತಿ ನಿರ್ವಿಣ್ಣೋ ನಿರಾಶಾಶ್ಚಾರ್ಥ ಸಾಧನೇ". (ಆದ್ದರಿಂದ ಸುಖವನ್ನು ಬಯಸುವಾತ ಧನ ಮೊದಲಾದ ಬಗೆಗೆ ವೈರಾಗ್ಯ ತಳೆಯಬೇಕು. ಯಾರು ಧನೋಪಾರ್ಜನೆಯ ಪ್ರಯತ್ನದಿಂದ ವಿರತರಾಗಿ ಆಶಾ ರಹಿತರಾಗಿರುವರೋ ಅವರು ನೆಮ್ಮದಿಯ ನಿದ್ದೆ ಮಾಡಬಲ್ಲರು).

ಆತ ಹೇಳುತ್ತಾನೆ 'ಕಾಮಂ ಜಾನಾಮಿ ತೇಮೂಲಂ ಸಂಕಲ್ಪಾತ್ ಕಿಲ ಜಾಯತೇ' ಆದ್ದರಿಂದ ಆತ ಸಂಕಲ್ಪಹೀನ ಹಾಗೂ ಇಚ್ಛಾಹೀನನಾಗುವ ಪ್ರತಿಜ್ಞೆಮಾಡುತ್ತಾನೆ. ತಸ್ಮಾತ್' ಉತ್ಸೃಜ್ಯ ಕಾಮಾನ್ ವೈ ಸತ್ವಮೇವಾ ಶ್ರಮಾಮ್ಯಹಂ' ನಾನು ಸತ್ವವನ್ನು ಆಶ್ರಯಿಸುತ್ತೇನೆ, ಬ್ರಹ್ಮನಲ್ಲಿ ಪ್ರವೇಶಿಸುತ್ತೇನೆ.

ಆದರೆ ಇದು ವ್ಯಾಸರು ಮಂಕದರ್ಶನಕ್ಕೆ ಕೆಟ್ಟ ತಿರುವೇ ಹೊರತು ಮಂಕ ದರ್ಶನವಲ್ಲ. ಮಂಕಿಗೀತೆಯಲ್ಲಿ ಪ್ರತಿಪಾದಿತವಾಗಿರುವಂತೆ ಅದು ಬ್ರಹ್ಮವಾದ ವಾಗಿದ್ದರೆ ಮಂಕನನ್ನು ಯಾರೂ ಬೈಯುತ್ತಿರಲಿಲ್ಲ.

ಮಂಕನ ಜೀವನದರ್ಶನ 'ಮಂಕಿ ಗೀತಾ'ದಲ್ಲಿ ಪ್ರತಿಪಾದಿತವಾದ ಬ್ರಹ್ಮವಾದ ವಾಗಿದ್ದರೆ ಅವನ ಅಜೀವಕ ಸಂಪ್ರದಾಯ ಇಷ್ಟೊಂದು ಸ್ವೇಚ್ಛಾಚಾರಿಯಾಗಿರು ತ್ತಿರಲಿಲ್ಲ. ಮಂಕನ ದರ್ಶನದ ಮೂಲರೂಪ ಹೀಗಿದೆ.

ಪೂರ್ವಪಕ್ಷ: ಎಲ್ಲವೂ ನಿಯತಿಯಿಂದ ಚಾಲಿತ, ಆದ್ದರಿಂದ ಕರ್ಮ ಇಲ್ಲವೆ ಪುರುಷಾರ್ಥಕ್ಕೆ ಯಾವ ಅರ್ಥವೂ ಇಲ್ಲ. ನಿಯತಿಯೇ ಸರ್ವಸ್ವ.

ಉತ್ತರಪಕ್ಷ : ಆದ್ದರಿಂದ ಏನೂ ಮಾಡಬೇಡ, ಮಜಮಾಡು ವೀಣೆಬಾರಿಸು.

ಆಗ ಪ್ರಚಲಿತವಿದ್ದ ಎಲ್ಲ ಸಂಶಯವಾದಿಗಳ ಅಸ್ತಿತ್ವವಾದಿಗಳ ದರ್ಶನದ ಪೂರ್ವಪಕ್ಷ ಸರಿಯಾಗಿದೆ, ಆದರೆ ಉತ್ತರ ಪಕ್ಷ ನಕಾರಾತ್ಮಕ, ಅತಿಚಾರವಾದಿ. ಈ ರೀತಿ ಅವರೆಲ್ಲರ ದರ್ಶನ ಅಕರ್ಮಕ. ಜಗದ ಜಂಜಡದಿಂದ, ತಾಪತ್ರಯಗಳಿಂದ ಬಿಡುಗಡೆ ಹೊಂದಲು ಕರ್ಮಣ್ಯಾದರ್ಶನವೊಂದರ ಅಗತ್ಯವಿತ್ತು. ಬುದ್ಧ ಮತ್ತು ಮಹಾವೀರ ಈ ಸಂತ್ರಾಸದಿಂದ ಮುಕ್ತಿಹೊಂದಲು ಒಂದು ದಾರಿತೋರಿದರು ಕರ್ಮ ಪ್ರಧಾನ ದರ್ಶನವನ್ನು ನೀಡಿದರು, ದ್ವಂದ್ವದಿಂದ ಮೇಲೆಳಲು ವ್ಯಕ್ತಿತ್ವದ ಪುನರ್ಘಟನೆಯ ದರ್ಶನವನ್ನು ಆಚರಣಪ್ರಧಾನ ಜೀವನವನ್ನು ಬೋಧಿಸಿದರು.

ಆಜೀವಕರ ಗುರುವಾಗುವ ಮುನ್ನ ಮಂಕ ವರ್ಧಮಾನ ಮಹಾವೀರರ ಬಳಿ ಅಧ್ಯಾತ್ಮಿಕ ಶಿಕ್ಷಣ ಪಡೆದಿದ್ದ. ಆತ ಮಾಹಾವೀರನ ಜೊತೆ ಏಳೆಂಟು ವರ್ಷ ಇದ್ದನಂತೆ. ಅದಕ್ಕೆ ಮುಂಚೆ ಅವನು ದಾಸನಾಗಿದ್ದ, ದಾಸ್ಯದಿಂದ ಬಿಡುಗಡೆ ಹೊಂದಲು ಅವನು ಜೈನ ಶ್ರಾವಕನಾಗಿರಬೇಕು. ಏಕೆಂದರೆ ಭಿಕ್ಷು ಇಲ್ಲವೆ ಶ್ರಾವಕ ನನ್ನು ಗೃಹಪತಿ ಮತ್ತೆ ಹಿಡಿದುಕೊಂಡು ಹೋಗುವಂತಿರಲಿಲ್ಲ. ಬೌದ್ಧಗ್ರಂಥ 'ಸುಮಂಗಲಾವಿಲಾಸಿನೀ'ಯ ಪ್ರಕಾರ ಅವನು ದಾಸನಾಗಿದ್ದ, ಮಹಾಭಾರತದ ಪ್ರಕಾರ ಕೃಷಿಕ.

ಏನಾದರೂ ಆಗಲಿ ಇಷ್ಟೆಲ್ಲ ಅವತಾರಗಳಾದ ಮೇಲೆ ಅವನು ಮಹಾವೀರನ ಬಳಿ ಇರತೊಡಗಿದ. ಆತನ ಜೊತೆ ಆರೆಂಟು ವರ್ಷಕಾಲ ಆಡ್ಡಾಡುತ್ತ ಮೈಕೈ ತುಂಬಿಕೊಂಡ ಮೇಲೆ ಅವನಿಗೆ ಅನ್ನಿಸಿತು. ಈ ಅವಸರ್ಪಿಣೀಕಾಲದ ಚರಮ ತೀರ್ಥಂಕರ ಮಹಾವೀರನಲ್ಲ, ನಾನೇ. ಅವದಮತ ಪ್ರವಾದಿ ವ್ಯಕ್ತನಾದರೆ ವಿದೂಷಕನ ರೂಪದಲ್ಲಿ ಮೈದೋರುತ್ತಾನೆ. ಮಂಕನ ಬದುಕಿನ ದುರಂತವೂ ಇದೇ !

ಜೈನ ಗ್ರಂಥಗಳ ಪ್ರಕಾರ ಮಂಕ ಮಹಾವೀರರನ್ನು ಕಂಡದ್ದು ವಿಜಯಂ ಗಾಥಾಪತಿ ಎಂಬ ಗೃಹಸ್ಥನ ಮನೆಯಲ್ಲಿ. ಅಲ್ಲಿ ಭಗವಾನ್ ಮಹಾವೀರನಿಗೆ ದಾನಮಾಡಿದ ಪುಣ್ಯಫಲದಿಂದಾಗಿ ಗಾಥಾಪತಿಯ ಮನೆಯಲ್ಲಿ ಪಂಚ ದಿವ್ಯವಸ್ತುಗಳು ವೈದೋರಿದವು, ಅದನ್ನು ಕಂಡು ಮಂಕ ತನಗೆ ದೀಕ್ಷೆ ಕರುಣಿಸಬೇಕೆಂದು ಮಹಾವೀರರಲ್ಲಿ ಯಾಚಿಸಿದ. ಆದರೆ ಆಗ ಭಗವಾನ್ ಮಹಾವೀರ ಮೌನತಳೆದರು. ಅನಂತರ ಮಂಕನ ಪ್ರತಿಭೆಯನ್ನು ಗುರುತಿಸಿ ಆತನ ಬುದ್ಧಿ ಸದ್ಧರ್ಮ ಪ್ರಚಾರದಲ್ಲಿ ತೊಡಗಲಿ ಎಂದು ಅವನಿಗೆ ದೀಕ್ಷೆ ನೀಡಿದರು. ಅವನು ಮಂಡೆಬೋಳಿಸಿ ತನ್ನ ಸಮಸ್ತವಸ್ತುಗಳನ್ನೂ ದಾನಮಾಡಿದ, ಆದರೆ ಆತನ ಅಹಂಕಾರ ತಾನೇ ತೀರ್ಥಂಕರನಾಗಬೇಕೆಂದು ಚಡಪಡಿಸಿತು.

"ಯಾವ ಲಾಭಕ್ಕಾಗಿ ಈ ಮಾನಸಿಕ ದಾಸ್ಯವನ್ನು ಸ್ವೀಕರಿಸಲಿ ? ಎಲ್ಲವೂ ನಿಯತಿಯಿಂದ ನಿಶ್ಚಿತವಾಗಿರುವಾಗ ಯಾರಹಂಗು ಏಕೆ ? ಯಾವ ಗುರುತಾನೇ ಏನು ಕೊಟ್ಟಾನು ? ನಿಜವಾದ ದಾತ ನಿಯತಿ" ಈ ರೀತಿ ಅವನು ಯೋಚಿಸಿದ. ಭಗವಾನ್ ಮಹಾವೀರನ ಜೊತೆ ಇದ್ದರೂ ಅಂಟಿಯೂ ಅಂಟದಂತಿತ್ತು ಅವನ ನಂಟು. ಭಗವಾನ್ ಮಹಾವೀರರ ಮರ್ಮದೃಷ್ಟಿಗೆ ಇದು ವೇದ್ಯವಾಗದಿರಲಿಲ್ಲ, ಅವರಿಗೆ ಅಯ್ಯೋ ಎನಿಸುತ್ತಿತ್ತು. ಅವರು ಮಂಕನ ಅಹಂಕಾರ ವಿಗಲಿತವಾಗಲಿ ಎಂದು ತಮ್ಮ ಅನುಭವಗಳನ್ನು ಹೇಳುತ್ತಿದ್ದರು. ಆದರೆ ಮಹಾವೀರರು ಹೇಳಿದ್ದೆಲ್ಲ ಗೋರ್ಕಲ್ಲಮೇಲೆ ನೀರೆರೆದಂತಾಗುತ್ತಿತ್ತು. ಅವನು ಕಪಟನಾಟಕ ಮಾಡುತ್ತ ಹೇಳುತ್ತಿದ್ದ. "ಭಗವಂತ ತಮ್ಮ ಧರ್ಮವನ್ನು ಆಶ್ರಯಿಸಿ ನಾನು ಕೃತಾರ್ಥನಾದೆ. ನಿಮ್ಮ ಅಮೃತವಾಣಿಯಿಂದ ನಾನು ಪುನೀತನಾದೆ" ಅನಂತರ ಅವರಿಗೆ ಮೂರು ಸಲ ಪ್ರದಕ್ಷಿಣೆಮಾಡಿ ತನ್ನ ಕೋಣೆಗೆ ಹೋಗುತ್ತಿದ್ದ, ಇಲ್ಲವೆ ಹಿಪ್ಪೆಯ ತೋಪಿಗೋ, ಅಥವಾ ವೇಣುವನಕ್ಕೋ ಹೋಗುತ್ತಿದ್ದ. ಈ ರೀತಿ ಮಂಕನನ್ನು ಜೊತೆಯಲ್ಲಿಟ್ಟುಕೊಂಡು ಮಹಾವೀರರು ಆರುವರ್ಷಕಾಲ ವಿಹರಿಸಿದರು.

ಒಮ್ಮೆ ಭಗವಾನ್ ಮಹಾವೀರರು ಗೋಶಾಲಕನೇ ಮೊದಲಾದ ಶಿಷ್ಯರೊಂದಿಗೆ ಕೂರ್ಮಗ್ರಾಮದಲ್ಲಿ ವಿಹರಿಸುತ್ತಿದ್ದರು. ಹಾದಿಯಲ್ಲಿ ಒಂದು ಎಳ್ಳಿನ ಗಿಡ ಸಿಕ್ಕಿತು. ಅದರಲ್ಲಿ ಎಳು ಹೂ ಬಿಟ್ಟಿತ್ತು. ಮಂಕ ಕೇಳಿದ, ''ಭಗವನ್ ಈ ಏಳು ಹೂಗಳಲ್ಲಿರುವ ಜೀವ ಈ ಹೂಗಳು ನಾಶವಾದಮೇಲೆ ಎಲ್ಲಿಗೆ ಹೋಗುತ್ತದೆ ?

ಮಹಾವೀರರು ಉತ್ತರ ಕೊಟ್ಟರು ''ಇದೇ ಗಿಡದ ಕಾಯಿಗಳಲ್ಲಿ ಬೀಜವಾಗಿ ವೈದೋರುವುದು'', ಮಂಕನ ಮನಸ್ಸಿಗೆ ಸಮಾಧಾನವಾಗಲಿಲ್ಲ. ಮಹಾವೀರರು ತಮ್ಮ ಇತರ ಶಿಷ್ಯರೊಂದಿಗೆ ಮುಂದೆ ಸಾಗಿದಾಗ ಅವನು ಹಿಂದುಳಿದ, ಆ ಗಿಡವನ್ನು ಕಿತ್ತೊಗೆದ. ಅನಂತರ ಮಹಾವೀರರ ವಿಹಾರಸಮಾರೋಹದಲ್ಲಿ ಸೇರಿಕೊಂಡ.

ಯಾರೂ ಅವನು ಮಾಡಿದುದನ್ನು ಗಮನಿಸಲಿಲ್ಲ. ಸಂಯೋಗದಿಂದ ಅಂದೇ ಮಳೆ ಬಂದಿತು. ಕಿತ್ತು ಬಿಸಾಡಿದ ಗಿಡ ಹೇಗೋ ಚಿಗುರಿಕೊಂಡಿತು ಕಾಲಾಂತರದಲ್ಲಿ ಅದರಲ್ಲಿ ಕಾಯಿಬಿಟ್ಟಿತು ; ಬೀಜ ಹುಟ್ಟಿಕೊಂಡಿತು. ಆದರೆ ಮಂಕನಿಗೆ ಇದೊಂದೂ ಗೊತ್ತಾಗಲಿಲ್ಲ. ಕೆಲಕಾಲಾನಂತರ ಮಹಾವೀರರು ಕೂರ್ಮಗ್ರಾಮಕ್ಕೆ ಮರಳಿ ಬಂದರು. ಅವರ ಮಾತು ಸುಳ್ಳೆಂದು ಸಾಬೀತುಮಾಡಲು ಮಂಕ ಎಳ್ಳಿನ ಗಿಡದ ಮಾತೆತ್ತಿದ.

ಮಹಾವೀರರು ಹೇಳಿದರು, ''ಸತ್ಯವೆಂದಿಗೂ ಸೋಲದು. ಗಿಡ ಅಲ್ಲೇ ಇದ್ದೀತು. ಆ ಎಳ್ಳು ಹೂಗಳಿಂದ ಬೀಜ ಹುಟ್ಟಿರಬೇಕು.'' ಹುಡುಕಿದಾಗ ಅವರ ಮಾತು ನಿಜವಾಗಿತ್ತು. ಗಿಡ ಹತ್ತಿರದಲ್ಲೇ ಇತ್ತು. ಮಂಕ ಎಲ್ಲರೆದುರಿಗೂ ತಲೆ ತಗ್ಗಿಸಬೇಕಾಯಿತು. ಆದರೆ ಆ ತರುವಾಯ ಅವನು ತನ್ನ ದಾರ್ಶನಿಕ ನಿಷ್ಕರ್ಷೆಯನ್ನು ಹೀಗೆ ಹೇಳಿದ, ''ನಿಯತಿಗೆ ಎಂದೂ ಸೋಲಿಲ್ಲ. ಮಳೆ ಬಂದದ್ದು ನಿಯತಿ. ಹೂವುದುರಿ ಅದರಿಂದ ಬೀಜ ಮೂಡಿದ್ದೂ ನಿಯತಿಯೇ. ಆದ್ದರಿಂದ ಎಲ್ಲವೂ ನಿಯತಿ ! ನಾನು ಗಿಡ ಕಿತ್ತುಹಾಕಿದ್ದು ಸತ್ಕರ್ಮವೂ ಅಲ್ಲ'ಅಪಕರ್ಮ'ವೂ ಅಲ್ಲ ; ಅದೊಂದು ನಿರರ್ಥಕತೆ' ಅನಂತರ ಅವನು ಪರಿವರ್ತನವಾದ ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದ ಅದರಂತೆ ಪ್ರತಿಯೊಂದು ಜೀವವೂ ಸತ್ತು ಮತ್ತೆ ಅದೇ ಶರೀರದಲ್ಲಿ ಜನ್ಮತಳೆಯುತ್ತದೆ, ಹೂವು ಕಾಯಿಯಾದಂತೆ ಜೀವದ ಈ ಪರಿವರ್ತನೆ ಚರಮ ಸತ್ಯ. ಅದು ನಿಯತಿಯ ವಿಧಾನದಂತೆ ಘಟಿಸುತ್ತದೆ. ಆದ್ದರಿಂದ ಸುಮ್ಮನೆ ಕೈಕಾಲು ಬಡಿದರೇನು ಪ್ರಯೋಜನ ? 'ನಾಸ್ತಿಪುರುಷಕಾರಂ.'

ಮಂಕ ಉದ್ದಂಡನಾಗಿ ವೇಶ್ಯಾಯನ ಎಂಬ ತಪಸ್ವಿಯನ್ನು ಬಹಳ ಕಾಡುತ್ತಿದ್ದ, ಒಮ್ಮೆ ವೇಶ್ಯಾಯನ ಸಿಟ್ಟಿಗೆದ್ದು 'ತೇಜೋಲೇಶ್ಯಾ' ಎಂಬ ದಾಹಕ ಶಕ್ತಿಯನ್ನು ಛೂಬಿಟ್ಟ. ಅದರಿಂದ ನರಳಿದ ಮಂಕ ಮಹಾವೀರರಿಗೆ ಶರಣಾದ, ಅವರು ಅವನ ಮೇಲೆ ಮರುಕಗೊಂಡು ಶೀತೋಲೇಶ್ಯಾ ಎಂಬ ಶಕ್ತಿಯನ್ನು ಆಹ್ವಾನಿಸಿ ಅವನ ಉರಿಯನ್ನು ಶಮನಗೊಳಿಸಿದರು.

ಮಂಕ ಮಹಾವೀರರಿಂದ ತೇಜೋಲೇಶ್ಯಾ ಶಕ್ತಿಯ ಸಿದ್ಧಿಗಳಿಸುವುದನ್ನು ಕಲಿತ, ಆರುತಿಂಗಳು ತಪಸ್ಸು ಮಾಡಿ ಅದನ್ನು ಗಳಿಸಿದ, ಆದರೆ ಅದರ ಅಹಂ ಕಾರದಲ್ಲಿ ಮೆರೆಯ ತೊಡಗಿದ. ಮಹಾವೀರರು ಆತನಿಗೆ ಧ್ಯಾನಸ್ಥನಾಗುವಂತೆ ಸಂಶಯ ಕೀಟವನ್ನು ತೊರೆಯುವಂತೆ ಬುದ್ಧಿವಾದ ಹೇಳಿದರು.

ಆದರೆ ಗೋಶಾಲಕನ ಹಮ್ಮು ಹೆಚ್ಚುತ್ತಲೇ ಹೋಯಿತು, ಅವನು ನಿಶ್ಚಯಿಸಿದ ಧ್ಯಾನದ ಬದಲು ಪಾನ ರೂಪ ರಸದ ಚರಮಪಾನದಲ್ಲಿ ವರ್ತಮಾನವನ್ನು ಗಟ್ಟಿ

ಯಾಗಿ ಹಿಡಿದುಕೊಳ್ಳಬೇಕು ಗತಕಾಲ ದುಃಖದ ಕರ್ತೃ. ಭವಿಷ್ಯ ದುಃಖದದಾತ. ವರ್ತಮಾನ, ಕೇವಲ ವರ್ತಮಾನ ಒಂದೇ ನಚ್ಚಬಹುದಾದದ್ದು. ಆದರೆ ಅದೂ ಕೂಡ ಕಾಲದ ಅನಂತ ಪ್ರವಾಹದಲ್ಲಿ ಒಂದು ಬಿಂದು ಮಾತ್ರ. ಅದಕ್ಕೆ ಯಾವ ದಿಕ್ಕು ನೆಲೆಯೂ ಇಲ್ಲ. ನಿಯತಿಯ ಅಂಗುಲಿ ನಿರ್ದೇಶದಂತೆ ಅದು ಹರಿಯುತ್ತಿರುತ್ತದೆ. ಆದ್ದರಿಂದ ಎಲೆಮನವೆ, ಈ ಇಂದಿನ ಬಿಂದು ಹರಿದು ಹೋಗುವ ಮುನ್ನ ಅದನ್ನು ಹಿಡಿದುಕೋ. ಅದನ್ನು ಪ್ರೀತಿಸು, ಚರಮಪಾನದ ಮೂಲಕ; ಈ ರೀತಿ ಯೋಚಿಸಿ ಮಂಕ ಮಹಾವೀರರ ಆಶ್ರಮವನ್ನು ತೊರೆದು ಆಜೀವಕ ಸಂಪ್ರದಾಯವನ್ನು ಸೇರಿದ, ಅಲ್ಲಿ ತನ್ನ ದರ್ಶನವನ್ನು ಸ್ಥಾಪಿಸಿದ, ಅದರ ಪ್ರತೀಕ ನಿಯತಿಯ ಮಸ್ಕರದಂಡ.

'ಪ್ರತಿಯೊಂದು ಜೀವಿಗೂ ಈ ಮಸ್ಕರ ದಂಡರನ್ನು ಹೊರುವಶಾಪ' ಇದೇ ಮಂಕನ ಮೂಲಭೂತ ದರ್ಶನ.

ಮಂಕ ಕ್ರಮೇಣ ಮಹಾವೀರರ ಕಡುವೈರಿಯಾಗಿಬಿಟ್ಟ. ಅವನು ಮತ್ತೆ ಔಷಧಿ ಪೆಟ್ಟಿಗೆ ಚಿತ್ರಫಲಕ ಹಾಗೂ ಮಸ್ಕರದಂಡವನ್ನು ಹಿಡಿದು ಕಾಶಿ, ಕೋಶಲ, ಮಗಧ ವಿದೇಹಗಳಲ್ಲಿ ವಿಹರಿಸತೊಡಗಿದ. ಕೊನೆಗೆ ಶ್ರಾವಸ್ತಿಯನ್ನೇ ತನ್ನ ಕೇಂದ್ರವನ್ನಾಗಿ ಮಾಡಿಕೊಂಡು ತಾನು ಈ ಅವಸರ್ಪಿಣೀ ಯುಗದ ಚರಮ ತೀರ್ಥಂಕರನೆಂದು ಘೋಷಿಸಿಕೊಂಡು, ಹೀಗೆ ಪ್ರಚಾರ ಮಾಡತೊಡಗಿದ, ಆಜೀವಕ ಗೋಶಾಲಕನೇ ಚರಮಶಾಸ್ತೃ ಚರಮ ಆಚಾರ್ಯ ಆಜೀವಕಮತವೇ ಚರಮ ಮತ 'ನಾಸ್ತಿಪುರುಷಕಾರಂ' ಚರಮಸತ್ಯ. 'ಸಂಸಾರಶುದ್ಧಿ' ಇಲ್ಲವೆ 'ಜನ್ಮನಿರೋಧ'ವೇ ಚರಮನಿಯತಿ, ಆದರೆ ಇದು ಕರ್ಮ ಅಥವಾ ಪುರುಷಾರ್ಥದಿಂದಾಗದು, ತನ್ನಷ್ಟಿಗೆ ತಾನೆ ಆಗುವುದು, ಆದ್ದರಿಂದ ಓ ಭದ್ರಮುಖ ಮಾನಿಸರೇ, ಚರಮಪಾನ, ಚರಮ ಗಾನ, ಚರಮನೃತ್ಯ, ಚರಮಪುಷ್ಪಾಂಜಲಿ–ಉತ್ಸವ, ಚರಮಸ್ನಾನ, ಚರಮಗಂಧ ಸಿಂಚನ ಹಾಗೂ ಚರಮ ಪುನುಗು ಸಂಗ್ರಾಮದ ನಡುವೆ ನಿಯತಿ ದಂಡವನ್ನು ಹಿಡಿದು ಅನ್ಯಶಂಕೆಗಳಿಂದ ಅದಂಡ್ಯರಾಗಿ ನೀವು ನಿರ್ಭಯರಾಗಿ ವಿಚರಿಸಿ.

ಆಗ ಉತ್ತರ ಭಾರತದಲ್ಲಿ ಬೌದ್ಧ, ಜೈನಧರ್ಮಗಳಿಂದಾಗಿ ಜನಸಾಮಾನ್ಯರ ಮನಸ್ಸು ಸಂದೇಹ ಸಂದೋಹದಲ್ಲಿ ತೊಳಲಾಡುತ್ತಿತ್ತು. ಸಹಜವಾಗಿಯೇ ಈ ಹೊಸ ದರ್ಶನವೂ ಮುಗ್ಧರನ್ನು ಆಕರ್ಷಿಸಿತು. ಮೊತ್ತ ಮೊದಲು ಗೋಶಾಲಕನಿಗೆ ಆರುಮಂದಿ ಜೈನರು ಶಿಷ್ಯರಾಗಿ ದೊರೆತರು. ಅವರಿಗೆ ಮಹಾವೀರರ ಶಿಸ್ತು ಒಗ್ಗಲಿಲ್ಲ ಹೀಗಾಗಿ ಅವರು ಈ ಸಹಜ ಮಾರ್ಗದತ್ತ ಒಲಿದರು, ಒಂದೇ ಕಾಲದಲ್ಲಿ ಇಬ್ಬಿಬ್ಬರು ತೀರ್ಥಂಕರರು ಬಂದುದನ್ನು ಕಂಡು ಇವರಲ್ಲಿ ನಿಜವಾದ ತೀರ್ಥಂಕರ ಯಾರು ನಕಲಿ ತೀರ್ಥಂಕರ ಯಾರು ಎಂಬ ಶಂಕೆ ಜನರಲ್ಲಿ ಮೂಡಿತು.

ಒಮ್ಮೆ ಮಂಕ ತನ್ನ ಶಿಷ್ಯರೊಂದಿಗೆ ರಾಜಗೃಹಕ್ಕೆ ಬಂದ, ಮಗಧ ಸಮ್ರಾಜ ಅಜಾತ ಶತ್ರುವಿನ ಮನದಲ್ಲಿ ಜಿಜ್ಞಾಸೆ ಮೂಡಿತು. ಆತ ಕೇಳಿದ 'ಭನ್ತೇ, ಗಜಾರೋಹಣ, ಅಶ್ವಾರೋಹಣ, ರಥಿಕ ಧನುರ್ಗ್ರಾಹ, ಯುದ್ಧ ಧ್ವಜಧಾರಣ, ವ್ಯೂಹ ರಚನೆ, ವೀರ ರಾಜಪುತ್ರರು, ಮಹಾನಾಗ, ಶೂರ, ಸೂದ, ನಾಪಿತ, ಸ್ನಾಪಿಕ, ವಾಚಕ, ಮೂಲಕಾರ, ಕುಂಬಾರ, ರಜಕ, ಗಣಕ, ಇವರೆಲ್ಲ ಕಷ್ಟಪಟ್ಟು ದುಡಿಯುತ್ತಾರೆ. ತಮ್ಮ ಹೆಂಡತಿ ಮಕ್ಕಳನ್ನು ಸುಖಿಗಳನ್ನಾಗಿ ಮಾಡುತ್ತಾರೆ. ಶ್ರಮಣರಿಗೆ, ಬ್ರಾಹ್ಮಣರಿಗೆ ದಾನ ನೀಡುತ್ತಾರೆ. ಆದರೆ ಶ್ರಮಣರಾದರೂ ಇಂಥದೇ ಫಲ ಈ ಜನ್ಮದಲ್ಲೇ ಅವರಿಗೆ ದೊರೆಯುವುದೇ ಹಾಗೇ ದೊರೆಯುವುದಾದರೆ ಆ ಫಲ ಯಾವುದು?'

ಅಜಾತ ಶತ್ರುವಿನ ಈ ಪ್ರಶ್ನೆ ಬೌದ್ಧಗ್ರಂಥ ಸಾಮಂಜ ಫಲಸುತ್ತ'ದಲ್ಲಿ ಉಲ್ಲಿಖಿತವಾಗಿದೆ, ಆದರ ಪ್ರಕಾರ ಸಮ್ರಾಟ ತನ್ನಕಾಲದ ಮಂಖಲಿ ಗೋಶಾಲ, ಪುರಾಣಕಶ್ಯಪ, ಅಜಿತಕೇಶಕಂಬಲಿ, ಪರ್ಷ ಕಾಚ್ಚಾಯನ, ಸಂಜಯ ವೇಲಟ್ಟಿಪುತ್ರ ಹಾಗೂ ನಿಗ್ರಗಂಥ ಮಹಾವೀರ ಈ ಆರುಮಂದಿಗೆ ಈ ಪ್ರಶ್ನೆ ಹಾಕಿದನಂತೆ, ಆದರೆ ಆವರಲ್ಲಿ ಯಾರ ಉತ್ತರದಿಂದಲೂ ಅವನಿಗೆ ತೃಪ್ತಿ ದೊರೆಯಲಿಲ್ಲ ಕೊನೆಗೆ ಬುದ್ಧನ ಉತ್ತರ ಅವನಿಗೆ ತೃಪ್ತಿ ನೀಡಿತಂತೆ.

ಮಹಾವೀರರಿಂದ ಬೇರಾದ ಮೇಲೆ ಗೋಶಾಲಕ ಘೋಷಿಸತೊಡಗಿದ, ''ಈ ಅವಸರ್ಪಿಣೀಯುಗದ ತೀರ್ಥಂಕರ ನಾನೊಬ್ಬನೆ" ಆದರೆ ಕಾಲಪುರುಷ ಅವನನ್ನು ತೀರ್ಥಂಕರನಲ್ಲ, ಪ್ರತಿತೀರ್ಥಂಕರ ಅಥವಾ ವಿದೂಷಕನ ರೂಪದಲ್ಲಿ ಸ್ವೀಕರಿಸಿದ.

ಕಾಲದ ಮಹಾವೇದಿಕೆಯ ಮೇಲೆ ಮಂಕ ತನ್ನ ಕೊನೆಯ ನಾಟ್ಯವಾಡತೊಡಗಿದ. ಶ್ರಾವಸ್ತಿಯ ಒಬ್ಬ ರೂಪಸಿ ತರುಣಿ, ಒಬ್ಬ ರುಂಭಕಾರ ಕನ್ಯೆಯ ರೂಪ ಲಾವಣ್ಯಕ್ಕೆ ಹಾಗೂ ಧನ ಸಂಪತ್ತಿಗೆ ಮಂಕ ಮರುಳಾದ. ನೀಲವಾರುಣಿಯಂಥ ಆ ಹೆಣ್ಣನ್ನು ಅವನು 'ಹಾಲಾಹಲ' ಎಂದು ಕರೆಯುತ್ತಿದ್ದ. ಭೌದ್ಧ ಜೈನಗ್ರಂಥಗಳಲ್ಲೂ ಆಕೆಯನ್ನು ಇದೇ ಹೆಸರಿನಿಂದ ಕರೆಯಲಾಗಿದೆ. ಆಕೆ ಅಲೌಕಿಕ ಸುಂದರಿ. ಚೆಲುವು ಅವಳ ಮೈಯಿಂದ ತೊಟ್ಟಿಕ್ಕುತ್ತಿತ್ತು. ಅವಳ ಈ ಚೆಲುವಿಗೆ ಮಾರು ಹೋದ ಪ್ರತಿತೀರ್ಥಂಕರ. ಅವನೇನೋ ಹೇಳುತ್ತಿದ್ದ 'ನತ್ಥಿ ಪುರಸ್ಕಾರೇ' ಎಂದು. ಆದರೆ ಅವನು ತನ್ನ ಚರಮ ಪುರುಷಾರ್ಥನನ್ನು ಆ ಕುಂಬಾರ ಹೆಣ್ಣು ಹಾಲಾಹಲಳ ರೂಪಚಕ್ರದಲ್ಲಿ ಅರಸುತ್ತಿದ್ದ ಈ ರೀತಿ ಅವನ ದರ್ಶನವೆಲ್ಲ ಕೊನೆಗೆ ಹೆಣ್ಣಿನಲ್ಲಿ ಕೇಂದ್ರಿತವಾಯಿತು.

ಮಂಕ ಭಗವಾನ್ ಮಹಾವೀರರೊಂದಿಗೆ ಅನಿಮಿತ್ತ ವೈರ ಸಾಧಿಸಿದ. ಕಾಲು ರೆದುಕೊಂಡು ಹೋಗಿ ಕದನಕ್ಕಿಳಿದ. 'ತೇಜೋ ಲೇಶ್ಯಾದ'ವ ಕಥೆಯನ್ನು ನೋಡಿ

ದೆವು. ಈಗ ಅವನು ಅವರ ಶಿಷ್ಯರನ್ನು ಕಾಡತೊಡಗಿದ. ಅವನು ಅವರ ಮೇಲೆ ತೇಜೋಲೇಶ್ಯಾ ಶಕ್ತಿಯನ್ನು ಛೂಬಿಟ್ಟ. ಅದರ ಫಲವಾಗಿ ಅವರಿಬ್ಬರೂ ಜ್ವರ ಪೀಡಿತರಾಗಿ ಅಸುನೀಗಿದರು, ಇದರಿಂದ ಪ್ರಮತ್ತನಾಗಿ ಮಂಕ ಮಹಾವೀರರ ಬಳಿಗೆ ಬಂದು ಅವರನ್ನು ಮೂದಲಿಸಿದ ನಾನು ಗೊಶಾಲಕನಲ್ಲ. ನಿಮ್ಮ ಶಿಷ್ಯ ಗೋಶಾಲಕ ಎಂದೋ ಸತ್ತು ಹೋದ. ಅವನು ಈಗ ದೇವಲೋಕದಲ್ಲಿದ್ದಾನೆ. ನಾನು ಕೌಂಡಿ ನ್ಯಾಯನ ಗೋತ್ರದ ಉದಾಯಿ ಎಂಬುವನು. ನಾನು ಶರೀರಾಂತರ ಪ್ರವೇಶ ಕಲೆಯನ್ನು ಬಲ್ಲೆ. ನಾನು ಗೋಶಾಲಕನ ವೃತ ಶರೀರವನ್ನು ಹೊಕ್ಕು ಈ ಏಳನೆಯ ಶರೀರವನ್ನು ಪಡೆದಿದ್ದೇನೆ. ಇದಕ್ಕೆ ಮುಂಚೆ ನಾನು ಗೊವಾಯಃ ಪುತ್ರ ಅರ್ಜುನನ ಶರೀರದಲ್ಲಿದ್ದೆ.

ಮಹಾವೀರರು ತಮ್ಮ ಅಮೋಘ ದೃಷ್ಟಿಯಿಂದ ಅವನ ಸುಳ್ಳನ್ನು ಭೇದಿಸಿ ಅಂಥ ಸೋಗುಸಲ್ಲದೆಂದು ಅವನಿಗೆ ಹೇಳಿದರು. ಆದರೆ ಅವನು ಅವರನ್ನೇ ಗೇಲಿ ಮಾಡಿ ಹೊರಟುಹೋದ. ಮತ್ತೆ ಮಾರನೆಯ ದಿನವೇ ಅವನು ಕಾಲು ಕೆರೆದು ಕೊಂಡು 'ಯುದ್ಧಂದೇಹಿ' ಎಂಬ ಧೋರಣೆಯಿಂದ ಬಂದ. ಆದರೆ ಮಹಾವೀರರು ವೀತರಾಗಿಗಳು. ಅವರು ಮಿಸುಕಲೂ ಇಲ್ಲ. ಆವರೆ ಮಂಕ ಅಹಂಕಾರದಿಂದ 'ತೇಜೋಲೇಶ್ಯಾ' ಶಕ್ತಿಯನ್ನು ಅವರ ಮೇಲೆ ಛೂಬಿಟ್ಟ. ಅದರ ಜ್ವಾಲೆಯನ್ನು ಕಂಡು ಮಹಾವೀರರ ಶಿಷ್ಯರು ಹಾಹಾಕಾರ ಮಾಡತೊಡಗಿದರು ಆದರೆ ಆ ಶಕ್ತಿ ಚೇತನ ತರುವಂಥ ಶೀತಲ ಸುಗಂಧಿತ ಮಹಾವೀರರ ಶರೀರಕ್ಕೆ ಮೂರು ಸುತ್ತು ಪ್ರದಕ್ಷಿಣೆ ಹಾಕಿ ಮರಳಿತು. ಅಷ್ಟೇ ಅಲ್ಲ, ತನ್ನನ್ನು ಛೂಬಿಟ್ಟ ಮಂಕನ ಶರೀರ ವನ್ನೇ ಹೊಕ್ಕಿತು. ಅದನ್ನು ತಿನ್ನತೊಡಗಿತು. ಆದರೂ ಅವನು ನಿರ್ಲಕ್ಷನಾಗಿ ಹೇಳಿದ, 'ಆಯುಷ್ಮಂತ ಮಹಾವೀರನೆ, ನೀನು ನನ್ನ ತೇಜೋಲೇಶ್ಯಾದಿಂದ ಹತ ನಾಗಿದ್ದಿಯೇ. ಇನ್ನು ಆರು ತಿಂಗಳೊಳಗಾಗಿ ಸಾಯುವೆ'.

ಮಹಾವೀರರು ಹೇಳಿದರು 'ಗೋಶಾಲಕ ನಾನು ಇನ್ನೂ ಹದಿನಾರು ವರ್ಷ ಜನತ್ವದೊಂದಿಗೆ ಈ ಧರಿತ್ರಿಯಲ್ಲಿ ವಿಚರಿಸುವೆ. ಆದರೆ ನೀನು ಕೇವಲ ಏಳು ರಾತ್ರಿಯ ಅತಿಥಿ.

ಗೋಶಾಲಕ ತನ್ನ ಚರಮ ಆಶ್ರಯವಾದ ಹಾಲಾಹಲಾ ತರುಣಿಯ ಬಳಿಗೆ ಮರಳಿದ. ಅವನ ದೇಹವೆಲ್ಲ ಪ್ರಚಂಡ ಜ್ವರದಿಂದ ಉರಿಯುತ್ತಿತ್ತು. ಭಯಂಕರ ಪಿತ್ತಜ್ವರ ! ಶರೀರದ ತಾಪವನ್ನು ಶಮನಗೊಳಿಸಲು ಅವನು ಮಾವಿನ ಹಣ್ಣನ್ನು ತಿನ್ನತೊಡಗಿದ. ಮತ್ತೆ ತಾಪ ವ್ಯಥೆಯನ್ನು ಮರೆಯಲು ಮದ್ಯಪಾನ ಅನಂತರ ಅರ್ಧವಿಕ್ಷಿಪ್ತ ಶಬ್ದಗಳಲ್ಲಿ ಲಾಲಸೆಯ ಸಾಕ್ಷಾತ್‌ಮೂರ್ತಿ ಆ ಹಾಲಾಹಲಳನ್ನು ಕುರಿತು ಗೀತರಚನೆಮಾಡುತ್ತಿದ್ದ, ಆಮೇಲೆ ನರ್ತನ, ಮತ್ತೆ ಸುಗಂಧಿತ ವಾಸಂತೀ

ಪುಷ್ಪಗಳ ಅಂಜಲಿಯನ್ನು ಹಾಲಾಹಲಾಗೆ ಅರ್ಪಿಸುತ್ತಿದ್ದ. ಇಷ್ಟೆಲ್ಲ ಮಾಡುತ್ತ ಅವನು ಉರಿಯಿಂದ ಚೀರುತ್ತಿದ್ದಾಗ ಹಾಲಾಹಾಲಾಳ ದಾಸದಾಸಿಯರು ಅವನ ಮೇಲೆ ಬಿಂದಿಗೆಗಟ್ಟಲೆ ನೀರು ಸುರಿಯುತ್ತಿದ್ದರು, ಇಲ್ಲದಿದ್ದರೆ ಆವನೇ ಛಿದ್ರಧಾರಾ ಯಂತ್ರದಡಿಯಲ್ಲಿ ಕುಳಿತು ಕೂಗಿಕೂಗಿ ಹೇಳತೊಡಗುತ್ತಿದ್ದ. 'ನಾನು ಅಂತಿಮ ತೀರ್ಥಂಕರ, ಪುಷ್ಪ ಜಲವನ್ನು ಮಳೆಗೆರೆಯುವ ಮೇಘಗಳಿಗೆ ಅಪ್ಪಣೆ ಮಾಡುತ್ತೇನೆ. ನಾನು ಇಂದ್ರನಿಗೆ ಆದೇಶ ನೀಡುತ್ತೇನೆ. ಚರಾಚರಗಳೆಲ್ಲ ನನಗೆ ದಿವ್ಯ ಪುಷ್ಪಜಲದಿಂದ ಅಭಿಷೇಕ ಮಾಡಲಿ. ವೈದೇಹೀ ಪುತ್ರ ಅಜಾತ ಶತ್ರುವಿಗೆ ಅವನ ಕ್ಷುದ್ರ ಅನುಚರಗಣಗಳು ಗಂಧಪುಷ್ಪಾಭಿಷೇಕ ಮಾಡುವಂತೆ ಇಂದ್ರ ನನಗೆ ಪುಷ್ಪಾಭಿಷೇಕ ಮಾಡಲಿ'.

ಇಷ್ಟಾದರೂ ಅವನ ದೇಹತಾಪ ಶಮನವಾಗದಿದ್ದರೆ ಅವನು ಅಗರು ಚಂದನಾದಿಗಳನ್ನು ಮೈಗೆ ಲೇಪಿಸಿಕೊಳ್ಳುತ್ತ ತಾನು ದೇವತುಲ್ಯ 'ಗಂಧ ಹಸ್ತಿ'ಯೆಂದು ಹೇಳಿಕೊಳ್ಳುತ್ತಉಪದೇಶ ನೀಡುತ್ತಿದ್ದ, 'ಗಂಧಸಿಂಧುರದಂತೆ ನಿರ್ಲಕ್ಷದಿಂದಿರು. ಓ ಅಚೇಲಕ, ಓ ಆಜೀವಕ ನೀನು ಸೃಷ್ಟಿಯ ಎಲ್ಲ ಸುಗಂಧವನ್ನೂ ಮೈಗೆ ಲೇಪಿಸಿಕೊಳ್ಳುತ್ತ ನಡೆ, ನಿರ್ಲಕ್ಷದಿಂದ ಮತ್ತ ಹಸ್ತಿಯಂತೆ ಅಲೆ.

ದೇಹದಲ್ಲಿ ಉರಿಹೆಚ್ಚಾದಾಗ ಅವನು ಆರ್ತನಾದ ಮಾಡುತ್ತಿದ್ದ, "ಸಂಗ್ರಾಮ ವಿಕಳ ಸಂಗ್ರಾಮ! ಮಹಾಶಿಲಾಕಂಟಕ ಸಂಗ್ರಾಮ, ಸಂಘಟ್ಟಿಸಿದೆ. ರಥಮುಸಲಗಳ ಹೊಯ್ಲು! ಆದರೆ ಈ ಇಂದ್ರ ಪ್ರದತ್ತ ವಜ್ರಗಳು, ಈ ಮಹಾಶಿಲಾ ಕಂಟಕಿಗಳು, ಈ ರಥ ಮುಸಲಗಳು ನಿನ್ನ ಕೂದಲನ್ನೂ ಕೊಂಕಿಸಲಾರವು ತೀರ್ಥಂಕರನಾದ ನಾನು ನಿನಗೆ ಅಭಯ ನೀಡುತ್ತಿದ್ದೇನೆ. ನನ್ನ ಉಪದೇಶ ಕೇಳು-ಚರಮ ಪಾನವೇ ಸತ್ಯ, ಚರಮಗಾನವೇ ಸತ್ಯ! ಚರಮ ನೃತ್ಯ ಸತ್ಯ! ಚರಮ ಅಂಜಲಿ ಕರ್ಮ ಸತ್ಯ! ಪುಷ್ಪ ಸಂವರ್ತ ಮಹಾಮೇಘದ ಚರಮ ಅಭಿಷೇಕ ಸತ್ಯ, ಚರಮ ಗಂಧಹಸ್ತಿಯಂಥ ವಿಹಾರ ಸತ್ಯ, ಚರಮಮಹಾ ಶಿಲಾಕಂಟಕ ಸಂಗ್ರಾಮ ಸತ್ಯ ಹಾಗೂ ಚರಮ ರಥಮುಸಲದ ಹೊಯ್ಲು ಸತ್ಯ. ಮತ್ತೆ ಚರಮತೀರ್ಥಂಕರ ಸತ್ಯ. ಇದೆಲ್ಲ ಅಷ್ಟ ಚರಮಗಳು! ಇವುಗಳನ್ನರಿತು ಮನುಷ್ಯ ಅಭ್ಯಾಸ ಪಡೆಯಬಲ್ಲ, ಇದೇ ನನ್ನ ಚರಮ ಅಷ್ಟಾಂಗ."

ಮಂಕನ ಈ ಅಷ್ಟ ಚರಮವಾದ ಬುದ್ಧನ ಅಷ್ಟಾಂಗ ಮಾರ್ಗದ ಸಂಯಮ ಪ್ರಧಾನ ಉಪದೇಶಕ್ಕೆ ವಿಲೋಮವಾದ ಸ್ವಚ್ಛಂದಮಾರ್ಗ.

ಈ ರೀತಿ ಆಜೀವಕರ ದರ್ಶನ ನಿಯತಿವಾದ, ಧರ್ಮ ನಿಷ್ಕರ್ಮವಾದ ಆಚಾರ ಅಷ್ಟಚರಮವಾದ. ಆದರೆ ಈ ಅಷ್ಟಚರಮವಾದ ಮಂಕಿನ ಜ್ವರಪ್ರಲಾಪ

ಅಷ್ಟೆ. ಅವನ ದುಃಸ್ವಪ್ನ ಪೀಡಿತ ಮನದ ಕಳವಳ. ಆದರೆ ಅವನ ಈ ದುಃಸ್ವಪ್ನ ಪೀಡಿತ ಪ್ರಲಾಪದ ಕೆಲವು ಮಾತುಗಳು ಮುಂದೆ ನಿಜವಾಗಿ ಪರಿಣಮಿಸಿದವು, ಆದ್ದರಿಂದ ಅವನ ಶಿಷ್ಯರು ಅವನ ಈ ಪ್ರಲಾಪವನ್ನು ಗಂಭೀರವಾಗಿ ತೆಗೆದುಕೊಂಡರು.

ಮಂಕ ಕಂಡ ಕನಸು ನೂರಕ್ಕೆ ನೂರರಷ್ಟು ನಿಜವಾದದ್ದು ನಿಜಕ್ಕೂ ಒಂದು ವಿಸ್ಮಯವೇ ಸರಿ, ಅಜಾತ ಶತ್ರು ಮತ್ತು ಲಿಚ್ಛವಿಗಳ ನಡುವೆ ಭಯಂಕರ ಕಾಳಗ ಕೈಗಟ್ಟಿತು, ಅಜಾತ ಶತ್ರು ಆ ಯುದ್ಧದಲ್ಲಿ 'ಮಹಾಶಿಲಾ ಕಂಟಕ' ಹಾಗೂ 'ರಥ ಮುಶಲ' ಯಂತ್ರ ಆಯುಧಗಳನ್ನು ಬಳಸಿದ ಕೋಸಲ ವಿದೇಹದ ಗಣಸಂಘ ಧನುರ್ಧರ ಲಿಚ್ಛವಿಗಳ ನೇತೃತ್ವದಲ್ಲಿ ಮಗಧ ಸಮ್ರಾಟ ಅಜಾತ ಶತ್ರುವಿನೊಡನೆ ಐದುವರ್ಷಗಳ ಕಾಲ ದೀರ್ಘಯುದ್ಧ ಮಾಡಿದರು. ಅಂತಿಮ ಯುದ್ಧದಲ್ಲಿ ಮಹಾ ಶಿಲಾ ಕಂಟಕ ಹಾಗೂ ರಥಮುಶಲ ಯಂತ್ರಗಳ ಪ್ರಯೋಗದ ಮೂಲಕ ಅಜಾತ ಶತ್ರು ವಿಜಯಗಳಿಸವ ಉತ್ತರ ಭಾರತದಲ್ಲಿ ಗಣತಂತ್ರ ಈ ರೀತಿ ಪರಾಜಯಗೊಂಡಿತು.

ಮಂಕನ ಅವಸಾನ ಸಮೀಪಿಸುತ್ತ ಬಂತು. ಅವನು ಹಾಲಾಹಲಾಳಿದುರಿಗೆ ಮಣ್ಣಿನ ಪಾತ್ರೆಯಲ್ಲಿ ತುಂಬಿ ತುಂಬಿ ಪಾನ ಮಾಡುತ್ತಿದ್ದ, ಪ್ರಲಾಪ ಮಾಡುತ್ತಿದ್ದ. 'ಚರಮೋ ಪಾನೇ, ಚರಮೆನಟ್ಟೇ, ಚರಮೋ ಅಂಜಲಿ ಕ್ರಮ್ಮೇ...!' ಅವನು ಮಾವಿನ ಹಣ್ಣಿನ ರಸ ಹೀರುತ್ತಿದ್ದ, ಮೈಮೇಲೆ ಪುಷ್ಪಮಿಶ್ರಿತ ತಣ್ಣೀರನ್ನು ಸುರಿದುಕೊಳ್ಳುತ್ತಿದ್ದ, ಅನಂತರ ತರುಣಿ ಹಾಲಾಹಲಾಳಿದುರು ವಿನತನಾಗಿ ಬೇಳುತ್ತಿದ್ದ; ಅಥವಾ ಕೆಲವೊಮ್ಮೆ ವೀಣೆಯನ್ನು ಹಿಡಿದುಕೊಂಡು ಯಾವುದೋ ರಾಗದ ಒಂದು ಚರಣ ನುಡಿಸುತ್ತಿದ್ದ ಕೊನೆಗೆ ವಿಕೃತಸ್ವರಾಲಾಪದ ಸ್ವರದಲ್ಲಿ ಕಣ್ಣು ಕುಣಿಸಿ, ತಲೆಯಲ್ಲಾಡಿಸುತ್ತಿದ್ದ. ಕೊನೆಗೆ ಸುಸ್ತಾಗಿ ನೆಲಕ್ಕುರುಳುತ್ತಿದ್ದ. ಈ ರೀತಿ ದೃಶ್ಯ ನಡೆಯುತ್ತಿತ್ತು. ಅದೇ ಹೊತ್ತಿಗೆ ಅವನ ಒಬ್ಬ ಪ್ರಿಯಶಿಷ್ಯ ವಟುಕ ದಿಶಾಚರ ಅವನ ಬಳಿಗೆ ಬಂದು ಬಿನ್ನವಿಸಿ ಕೊಂಡ, "ಮಹಾ ಮಂಕ ಒಂದು ಪ್ರಶ್ನೆ ನನ್ನನ್ನು ಕಾಡುತ್ತಿದೆ. ಅದರ ಸಮಾಧಾನಕ್ಕಾಗಿ ನಿನ್ನಲ್ಲಿಗೆ ಬಂದಿದ್ದೇನೆ."

ಮಂಕನ ಧ್ಯಾನ ಭಂಗವಾಯಿತು. ಅವನು ಕ್ರುದ್ಧನಾಗಿ ತನ್ನ ಚರ್ಮರವನ್ನು ಅವನತ್ತ ಎಸೆದು ಹೇಳಿದ "ನಡೆ, ತೊಲಗಾಚೆ ಇಲ್ಲಿಂದ. ಪ್ರಶ್ನೆಯಂತೆ, ಸಮಾಧಾನವಂತೆ! ಅಯ್ಯೋ ಮೂರ್ಖ, ನನ್ನನ್ನು ಕೇಳುವೆಯಾ? ಈ ವೀಣೆಯನ್ನು ಕೇಳು. ಟಿಂಗ್, ಟಿಂಗ್, ಟಾಂಗ್, ಮೂರ್ಖ ವೀಣೆಯನ್ನು ಬಾರಿಸು ಎಲ್ಲ ಉತ್ತರವೂ ನಿನಗೆ ವೀಣೆಯಿಂದ ದೊರೆಯುತ್ತದೆ. ಅನಂತರ ಗೋಶಾಲಕ ವೀಣೆಯ ತಂತಿಗಳನ್ನು

ಟಿಂಗ್ ಟಿಂಗ್ ಎಂದು ಮಿಡಿಯುತ್ತ ತನ್ನ ಅಷ್ಟ ಚರಮವಾದವನ್ನು ಪುನರುಚ್ಚರಿಸಿದ ಚರಮೇಪಾನೇ (ಟಿಂಗ್) ಚರಮೇನಟ್ಟೇ (ಟಿಂಗ್) ಚರಮೇ ಗಯೇ (ಟಿಂಗ್) ಚರಮೇ ಅಂಜಲಿಕಮ್ಮೆ (ಟಿಂಗ್) ಟಿಂಗ್ ಚರಮೇ ಪುಷ್ಪಸಂವರ್ತನಮಹಾಮೇಘೇ (ಟಿಂಗ್ ಟಿಂಗ್) ಚರಮೇ ಶ್ರೇಯಂಸ್‌ನಾಗಗಂಧಹಸ್ತೀ (ಟಿಂಗ್ ಟಿಂಗ್) ಚರಮೇ ಮಹಾಶಿಲಾ ಕಂಟಕ ಸಂಗ್ರಾಮೇ ಚರಮರಥಮುಸಲೇ (ಟಿಂಗ್ ಟಿಂಗ್) ಕೊನೆಗೆ ಚರಮೇ ತೀರ್ಥಂಕರೇ.

ಈ ರೀತಿ ಮಂಕ ವೀಣೆಯನ್ನು ಮಿಡಿದು, ತನ್ನ ದರ್ಶನವನ್ನು, ಐತಿಹಾಸಿಕ ದುಸ್ವಪ್ನವನ್ನು ಬಡಬಡಿಸಿದ.

ಅವನ ಅಂತಿಮ ಉಪದೇಶವನ್ನು ಪಡೆದು ಶಿಷ್ಯ ಧನ್ಯನಾಗಿ ಬಂದದಾರಿ ಹಿಡಿದ.

ಅದೇ ದಿನ ರಾತ್ರಿ ಮಂಕನ ಜ್ವರ ಇನ್ನೂ ಉಲ್ಬಣಿಸಿತು; ಅವನ ಮೈ ಕೆಂಡದಂತೆ ಉರಿಯುತ್ತಿತ್ತು. ಮಹಾವೀರರ ವಾಣಿಯಂತೆ ಅದು ಅವನ ಕೊನೆಯ ರಾತ್ರಿ. ಅಂದಿಗೆ ಏಳು ದಿನ ಹಿಂದೆ, ಅವನು ಮಹಾವೀರರ ಮೇಲೆ ಮಂತ್ರ ಪ್ರಯೋಗ ಮಾಡಿದ್ದ ಇಂದು ಅವನ ಕಾಳರಾತ್ರಿ. ಅವನು ತನ್ನ ಶಿಷ್ಯರನ್ನು ಸೂರ್ಯಾಸ್ತವಾದ ಮೇಲೆ ಕರೆದು ಹೇಳಿದ, 'ನೋಡಿರಿ, ಇಂದು ನಾನು ಕಾಲಕವಲಿತನಾದರೆ ನನ್ನ ಶವವನ್ನು ಸುಗಂಧಿತ ಗಂಧೋದಕದಲ್ಲಿ ತೊಳೆಯಿರಿ, ಚಂದನವನ್ನು ನನ್ನ ಮೈಗೆ ಬಳಿಯಿರಿ, ಬಹುಮೂಲ್ಯವಾದ ಹಂಸದುಕೂಲವನ್ನು ಉತ್ತರೀಯವಾಗಿ ಅಧೋವಸ್ತ್ರವಾಗಿ ತೊಡಿಸಿ ನಾನಾ ರೀತಿಯಲ್ಲಿ ಅವನ್ನು ಅಲಂಕರಿಸಿ ರಾಜಮಾರ್ಗದಲ್ಲಿ ಮೆರವಣಿಗೆಯಲ್ಲಿ ಕೊಂಡೊಯ್ಯಿರಿ. ಶವಯಾತ್ರೆಯಲ್ಲಿ ಹೀಗೆ ಘೋಷಿಸಿ "ಮಂಖ ಪುತ್ರ ಭಗವಾನ್‌ಗೋಶಾಲಕ ಅವಸರ್ಪಿಣೀಯುಗದ ಚರಮ ತೀರ್ಥಂಕರ!"

ಶಿಷ್ಯರು ಅದರಂತೆ ನಡೆಸಲು ತೀರ್ಮಾನಿಸಿದರು. ಹಾಲಾಹಾಲಾಳ ಹತ್ತಿರ ಅಪಾರ ಧನಸಂಪತ್ತಿತ್ತು ಆದ್ದರಿಂದ ಶೀಘ್ರವೇ ಎಲ್ಲ ಸಾಮಗ್ರಿಗಳೂ ಸಿದ್ಧವಾದವು. ಎಲ್ಲರೂ ಚರಮ ಅನಿವಾರ್ಯ ಘಟನೆ ಮೃತ್ಯುವಿನ ನಿರೀಕ್ಷೆಯಲ್ಲಿ ಕುಳಿತರು.

ರಾತ್ರಿ ಉರುಳಿದಂತೆಲ್ಲ ಜ್ವರತಾಪ ಹೆಚ್ಚುತ್ತ ಹೋಯಿತು; ಮಂಕನ ಪ್ರಲಾಪವೂ ಹೆಚ್ಚಿತು. ಜೈನಗ್ರಂಥಗಳ ಪ್ರಕಾರ ಕೊನೆಗಾಲದಲ್ಲಿ ಮಂಕನಿಗೆ ಸತ್ಯ ಗೋಚರಿಸಿತು, ಭಗವಾನ್ ಮಹಾವೀರರಕರುಣ ಶ್ರಾವಣ ಅವನನ್ನು ತೋಯಿಸಿತು. ಅವನಿಗೆ ಪಶ್ಚಾತ್ತಾಪವಾಯಿತು. ಅವನು ಅವಬದ್ಧ ಕಂಠದಿಂದ ಹೇಳ ತೊಡಗಿದ, "ಅಯ್ಯೋ, ನಾನು ಜಿನನಲ್ಲದಿದ್ದರೂ ಜಿನೇಂದ್ರನೆಂದು ಜಂಭ ಕೊಚ್ಚಿದೆ. ನನ್ನ ಬಾಳೆಲ್ಲ ಹುಸಿ, ಮೋಸ! ಬಾಳಿನುದ್ದಕ್ಕೂ ಮುಖವಾಡ ತೊಟ್ಟು ಬಹುರೂಪಿ

ಯಾಗಿ ಕುಣಿದೆ. ನಾನು ಅವ ಸರ್ಪಿಣೀಯುಗದ ತೀರ್ಥಂಕರನಲ್ಲ, ವಿದೂಷಕ. ತೀರ್ಥಂಕರರೆಂದರೆ ಭಗವಾನ್ ಮಹಾವೀರರು,ಅವರು ಪರಮಕಾರುಣಿಕಜಿನೇಂದ್ರರು"

ಅನಂತರ ಆವನು ಆಜೀವಕ ಮತದ ಪ್ರಧಾನ ಶಿಷ್ಯರನ್ನು ಕರೆದು ಹೇಳಿದ, "ನೋಡಿ, ನಾನು ಜೀವನದುದ್ದಕ್ಕೂ ಪಾಪ ಮಾಡುತ್ತಿದೆ. ತೀರ್ಥಂಕರನಲ್ಲದಿದ್ದರೂ ತೀರ್ಥಂಕರನೆಂಬ ಸೋಗು ಹಾಕಿದೆ. ಆದ್ದರಿಂದ ಈಗ ನಾನು ಕಾಲವಾದರೆ ನನ್ನ ಎಡಗಾಲಿಗೆ ಹಗ್ಗ ಕಟ್ಟಿ ಮೂರು ಸಾರಿ ಉಗುಳಿ, ನನ್ನ ಮುಖಕ್ಕೆ ಮೂರು ಸಾರಿ ಉಗುಳಿ, ಅನಂತರ ಶ್ರಾವಸ್ತಿಯ ರಾಜಮಾರ್ಗದಲ್ಲಿ ನನ್ನನ್ನು ಎಳೆದುಕೊಂಡು ಹೋಗಿ. ಹೀಗೆ ಹೇಳುತ್ತ ಹೋಗಿ–ಮಂಕಜಿನನಲ್ಲ, ತೀರ್ಥಂಕರನಲ್ಲ, ತೀರ್ಥಂಕರ ಭಗವಾನ್ ಮಹಾವೀರರು ಈ ಗೋಶಾಲಕ ಶ್ರವಣ ಘಾತುಕ, ಸತ್ಯಘಾತಕನಾಗಿದ್ದ, ವಿದೂಷಕನಾಗಿದ್ದ."

ಶಿಷ್ಯರು ಅವನ ಅಭಿಲಾಷೆಯನ್ನು ಈಡೇರಿಸಿದರು, ಅವನ ಎಡಗಾಲಿಗೆ ಹಗ್ಗ ಕಟ್ಟಿ ಮುಖದ ಮೇಲೆ ಮೂರು ಸಲ ಉಗುಳಿದರು. ಅನಂತರ ಮೇಲೆ ಹೇಳಿದಂತೆ ಮೂರು ಸಾರಿ ಘೋಷಿಸಿದರು. ಆ ತರುವಾಯ ಶವವನ್ನು ಮತ್ತೊಮ್ಮೆ ಗಂಧೋದಕದಿಂದ ತೊಳೆದರು. ಚಂದನಲೇಪಿಸಿದರು. ಹೊಸದ ಗುರುತಿನ ಉತ್ತರೀಯ ಹೊದಿಸಿದರು. ಅಮೂಲ್ಯ ಕುಂಡಲ, ತೋಳಬಂದಿ ಮೊದಲಾದ ಒಡವೆ ತೊಡಿಸಿ ಶವವನ್ನು ಅಲಂಕರಿಸಿದ ಪುಷ್ಪ ರಥದಲ್ಲಿರಿಸಿ ವೈಭವದಿಂದ ಮೆರವಣಿಗೆ ಮಾಡಿದರು. ಹಾದಿಯಲ್ಲಿ ಹೋಗುವಾಗ 'ಅಜೀವಕ ಗುರು ಮಂಕ ಗೋಶಾಲಕನಿಗೆ ಜಯವಾಗಲಿ' ಎಂದು ಘೋಷಿಸಿದರು ಕೊನೆಗೆ ಅವನ ಅಂತ್ಯಕ್ರಿಯೆ ಮಾಡಿದರು.

ಈ ರೀತಿ 2½ ಸಾವಿರ ವರ್ಷ ಹಿಂದೆ ಮೂಡಿದ ಒಬ್ಬ ಪ್ರತಿತೀರ್ಥಂಕರನ ಪ್ರತಿಭೆ ಅಸ್ತಂಗತವಾಯಿತು. ಭಾರತೀಯ ದರ್ಶನದಲ್ಲಿ ಮಂಕ ಚಾರ್ವಾಕರೊಂದಿಗೆ ಭೌತಿಕವಾದಿ ನಾಸ್ತಿಕ ದಾರ್ಶನಿಕ ಎಂದು ಹೇಳಿದೆ ಅವನನ್ನು ಆಧುನಿಕ ಅರ್ಥದಲ್ಲಿ ಅಸ್ತಿತ್ವವಾದಿ, ಕಾಮೂಸಾರ್ತ್ರೆ ಮೊದಲಾದವರ ಪೂರ್ವಪುರುಷನೆನ್ನಬಹುದು. ಜೈನ. ಬೌದ್ಧ, ಬ್ರಾಹ್ಮಣರೆಲ್ಲ ಮಂಕನದರ್ಶನವನ್ನು ಹಿಡಿದು ಎಳೆದಾಡಿದ್ದಾರೆ. ಮಂಕ ಜೈನ ಪರಂಪರೆಯಂತೆ ಕೊನೆಯಲ್ಲಿ ಪಶ್ಚಾತ್ತಾಪ ಪಟ್ಟ ಕಥೆ ಬರಿಯ ಕಥೆಯಾಗಿರಬೇಕು, ಏಕೆಂದರೆ ಆತನದು ಸ್ವತಂತ್ರ ಮನೋವೃತ್ತಿ, ಎಂಥ ಮಹಾ ಮಹಿಮರನ್ನೂ ಲಕ್ಷಿಸದೆ ತನ್ನ ವಿಚಾರಗಳನ್ನು ನಿರ್ಭಯನಾಗಿ ಪ್ರಚಾರ ಮಾಡಿದ ಧೀಮಂತ. ಆತನ ವಿಚಾರವನ್ನು ನಾವು ಒಪ್ಪಲಿ, ಬಿಡಲಿ, ಅವೈದಿಕ, ಸ್ವತಂತ್ರ ವಿಚಾರ ಪರಂಪರೆಯೇನು ಎನ್ನುವುದನ್ನು ಅರ್ಥಮಾಡಿಕೊಳ್ಳುವುದರಲ್ಲಿ ಆತನ ದರ್ಶನ ಸಹಕಾರಿ. ಆಜೀವಕರು ದಕ್ಷಿಣ ಭಾರತದಲ್ಲೂ ಇದ್ದರೆಂಬುದನ್ನು ಮೇಲೆ ನೋಡಿದೆವು, ಕನ್ನಡನಾಡಿನಲ್ಲೂ ಅದರ ಪ್ರಚಾರ ನಡೆದಿತ್ತೇ, ಮಂಕನಿಗೂ ಕನ್ನಡದ ಮಂಕಿಗೂ ಏನಾದರೂ ಸಂಬಂಧವಿದೆಯೇ ಎಂಬ ಬಗಗೆ ವಿದ್ವಾಂಸರು ವಿಚಾರ ಮಾಡಬೇಕು.

ಪಶ್ಚಿಮ ಸಮುದ್ರಾಧೀಶ್ವರ: ಒಂದು ವಿವೇಚನೆ

ಡಾ. ಎಂ. ಎ. ಜಯಚಂದ್ರ

ದರ್ಶನಕವಿ ರತ್ನಾಕರನ ಕೃತಿಗಳಲ್ಲಿ ಒಂದು—ರತ್ನಾಕರ ಶತಕ. ಈ ಶತಕದ ಪ್ರತಿಪದ್ಯದ ಅಂತ್ಯದಲ್ಲಿ 'ರತ್ನಾಕರಾಧೀಶ್ವರಾ' ಎಂಬ ಅಂಕಿತ ಬರುವುದು. ಸಮ್ಯಗ್ದರ್ಶನ ಜ್ಞಾನಚಾರಿತ್ರಗಳೆಂಬ ರತ್ನತ್ರಯಕ್ಕೆ ಗಣಿಯಾದ ಸ್ವಾಮಿ ; ಸಮುದ್ರಾಧಿಪತಿ ; ರತ್ನಾಕರ ಕವಿಯ ಒಡೆಯ—ಎಂಬ ಮೂರು ಅರ್ಥಗಳನ್ನು ಈ ಅಂಕಿತಕ್ಕೆ ಕೊಡಬಹುದು. ವಚನಗಳಲ್ಲಿ ವಚನಕಾರರು ತಮ್ಮ ಇಷ್ಟದೈವದ ಹೆಸರನ್ನು ಅಂಕಿತವಾಗಿ ಉಪಯೋಗಿಸಿರುವಂತೆ, ಈ ಶತಕದಲ್ಲಿ ಕವಿ ರತ್ನಾಕರ ತನ್ನ ಇಷ್ಟದೈವದ ಹೆಸರನ್ನು ಅಂಕಿತವಾಗಿ ಬಳಸಿದ್ದಾನೆ ಎಂದು ಭಾವಿಸುವುದು ಅಸಹಜವಾದುದೇನಲ್ಲ. ಅಂದರೆ ರತ್ನಾಕರಾಧೀಶ್ವರ ಅಥವಾ ಸಮುದ್ರಾಧೀಶ್ವರ ಎನ್ನುವುದು ರತ್ನಾಕರನ ಇಷ್ಟ ದೇವರ ಹೆಸರಾಗಿದ್ದಿರಬೇಕು. ಹಾಗಿದ್ದ ಪಕ್ಷದಲ್ಲಿ ಇದು ಯಾವ ದೇವರ ಅಥವಾ ಯಾವ ತೀರ್ಥಂಕರನ ಹೆಸರು ? ಎಂಬುದು ಮುಂದಿನ ಪ್ರಶ್ನೆ.

ದೇವಚಂದ್ರ ತನ್ನ 'ರಾಜಾವಳಿ ಕಥಾಸಾರ'ದಲ್ಲಿ ರತ್ನಾಕರ ಕವಿಯ ಬಗ್ಗೆ ಬರೆಯುವಾಗ, "ತುಳುವದೇಶದ ಮೂಡಬಿದರೆಯೊಳು ಸೂರ್ಯವಂಶದರಸುಗಳನ್ವಯದೊಳೆ ದೇವರಾಜನ ಪುತ್ರಂಗೆ ಕಡಲಾದಿ ಪರಮೇಶನ ಪೆಸರಿಡೆ...ರತ್ನಾಕರನೆಂಬಭಿದಾನದಿಂ..." ಎಂದಿದ್ದಾನೆ.[1] ಇಲ್ಲಿ 'ಕಡಲಾದಿ ಪರಮೇಶನ ಪೆಸರು' ಎಂಬುದು ಮುಖ್ಯವಾದುದು. 'ಆದಿ ಪರಮೇಶ' ಎಂದರೆ ಆದಿನಾಥ, ವೃಷಭನಾಥ. ಈ ಜಿನನ ವಿಗ್ರಹವೊಂದು ಕಡಲಿನಲ್ಲಿತ್ತು, ಅದು ಪ್ರಸಿದ್ಧವಾಗಿತ್ತು. ಅದರ ಹೆಸರನ್ನು ಕವಿಗಿಟ್ಟರೆಂದು ಮೇಲಿನ ದೇವಚಂದ್ರನ ವಚನದಿಂದ ವೇದ್ಯವಾಗುವುದು. ಈ, ಹಿನ್ನೆಲೆಯಲ್ಲಿ 'ರತ್ನಾಕರಾಧೀಶ್ವರ' 'ಸಮುದ್ರಾಧೀಶ್ವರ' ಎಂದರೆ ಆದಿನಾಥ ವೃಷಭನಾಥ ಎಂದು ಅರ್ಥವಾಗುವುದು. ಈ ಪ್ರಥಮ ಜಿನೇಶನನ್ನೇ ಕವಿ ತನ್ನ ಮೇರುಕೃತಿ ಭರತೇಶವೈಭವದ ಪ್ರಥಮ ಪದ್ಯದಲ್ಲಿ ಸ್ತುತಿಸಿರುವುದನ್ನು ಇಲ್ಲಿ ನೆನೆಯಬಹುದಾಗಿದೆ.[2]

'ರತ್ನಾಕರಾಧೀಶ್ವರ' ಎಂಬುದಕ್ಕೆ ಪರ್ಯಾಯಪದವಾದ 'ಸಮುದ್ರಾಧೀಶ್ವರ' ಎಂಬುದನ್ನು ದೇವರ ಹೆಸರಿನ ರೂಪದಲ್ಲಿ ಈ ಶತಕದ ಕೆಳಗಿನ ಪದ್ಯವೊಂದರಲ್ಲಿ ಪ್ರಯೋಗಿಸಿರುವುದನ್ನು ಗುರುತಿಸಬಹುದು :

ನಡೆವಾಗಳ್ನಡೆ ಕೊಂಕಿದಾಗಳಿಳೆಯೊಳ್ಬೀಳ್ವಾಗಳೇಳ್ವಾಗಳುಂ
ನುಡಿವಾಗಳ್ನುಡಿದಪ್ಪಿದಾಗಳೆರ್ದೆಗೆಟ್ಟಾಗಳ್ಸುಖಾವಾಪ್ತಿಯೊಳ್
ಬಿಡದರ್ಹತ್ಪ್ರಭು ಸಿದ್ಧ ಶಂಕರ ಸಮುದ್ರಾಧೀಶ್ವರ ತ್ರಾಹಿಯೆಂ-
ದೊಡನಭ್ಯಾಸಿಸುವಾತನೇ ಸುಖಿಯಲಾ ರತ್ನಾಕರಾಧೀಶ್ವರಾ ॥ 54 ॥

(ರತ್ನಾಕರಾಧೀಶ್ವರನೆ! ನಡೆಯುವಾಗಲೂ ಕಾಲೆಡವಿದಾಗಲೂ ಭೂಮಿಯಲ್ಲಿ ಬೀಳುವಾಗಲೂ ಏಳುವಾಗಲೂ ಮಾತನಾಡುವಾಗಲೂ ತಪ್ಪಿ ಮಾತನಾಡಿದಾಗಲೂ ಭಯಪಟ್ಟಾಗಲೂ ಸುಖಪ್ರಾಪ್ತಿಯಲ್ಲಿಯೂ ಕೂಡಲೆ "ಅರ್ಹತ್ಪರಮೇಶ್ವರನೆ! ಸಿದ್ಧ ಪರಮೇಷ್ಠಿಯೇ! ಶಂಕರನೆ! ಸಮುದ್ರಾಧಿಪತಿಯೇ!" ಎಂದು ಬಿಡದೆ ಅಭ್ಯಾಸಮಾಡುವವನೇ ಸುಖಿಯಲ್ಲವೆ ?)

ಈ ದೇವ, ಸಮುದ್ರದಲ್ಲಿ ಮುಳುಗಿರುವ ಅದ್ರಿಯಲ್ಲಿ ಅಂದರೆ ಬೆಟ್ಟದಲ್ಲಿ ಪಲ್ಯಂಕಾಸನ (ಪದ್ಮಾಸನ) ದಲ್ಲಿದ್ದು ಸ್ಫಟಿಕದಂತೆ ಉಜ್ವಲನಾಗಿದ್ದಾನೆ ಎಂಬ ಅಂಶವನ್ನು ಇದೇ ಶತಕದ ಕೆಳಗಿನ ಪದ್ಯ ತಿಳಿಸುವುದು—

ಮೊಲೆಯುಂ ಮುದ್ದು ಮೊಗಂ ಬೆಡಂಗೆಸೆಯೆ ಪೆಣ್ಣಿಂತಿರ್ದಳಿಂತಿರ್ದಳೆಂ-
ದೊಲವಿಂ ಭಾವಿಸಿ ಕಾಣ್ಬುದೇ ನರಕಮುಬ್ಬಿಪ್ರಾಂತಮಗ್ನಾದ್ರಿಯೊಳ್
ಸಲಿಲಂ ತನ್ನುಡೆ ಮುಟ್ಟೆ ತೋರ್ಪನ ಪಲ್ಯಂಕಾಸನಂ ಸ್ಫಾಟಿಕೋ-
ಜ್ಜ್ವಲನೆಂದಾಗಳ್ ನಿಮ್ಮ ಕಂಡೊಡೆ ಸುಖಂ ರತ್ನಾಕರಾಧೀಶ್ವರಾ ॥ 69 ॥

(ರತ್ನಾಕರಾಧೀಶ್ವರನೆ! ಕುಚವೂ ಪ್ರಿಯವಾದ ಮುಖವೂ ಸೊಗಸೂ ಪ್ರಕಾಶಿಸುತ್ತಿರಲು ಹೆಣ್ಣು ಹಾಗಿದ್ದಳು ಹೀಗಿದ್ದಳು ಎಂದು ಪ್ರೀತಿಯಿಂದ ಭಾವಿಸಿ ನೋಡುವುದೇ ನರಕವು; ಪದ್ಮಾಸನವುಳ್ಳವನೂ ಸ್ಫಟಿಕದಂತೆ ಪ್ರಕಾಶಮಾನನೂ ಆದ ಸ್ವಾಮಿಯು ಸಮುದ್ರದ ಸಮೀಪದಲ್ಲಿ ಮುಳುಗಿರುವ ಪರ್ವತದಲ್ಲಿದ್ದು ತನ್ನ ಸೊಂಟವನ್ನು ಮುಟ್ಟಿ ನೀರನ್ನು ತೋರಿಸುತ್ತಾನೆ ಎಂದು ಆಗಲೇ ನಿಮ್ಮನ್ನು ನೋಡಿದರೆ ಸುಖವು)

ಈ ಸಮುದ್ರಾಧೀಶ್ವರ ಜಿನ ಯಾವ ಸಮುದ್ರದಲ್ಲಿ ನೆಲಸಿದ್ದಾನೆ ? ಎಂಬ ಪ್ರಶ್ನೆಗೆ, 'ಪಶ್ಚಿಮ ಸಮುದ್ರ' (ಅರಬ್ಬಿ ಸಮುದ್ರ) ಎಂಬ ಉತ್ತರವನ್ನು ಇದೇ ಶತಕದ ಕೆಳಗಿನ ಪದ್ಯ ನೀಡುವುದು—

ತ್ರಿಜಗತ್ಸ್ವಾಮಿ ಜಿನೇಂದ್ರ ಸಿದ್ಧ ಶಿವಲೋಕಾರಾಧ್ಯ ಸರ್ವಜ್ಞ ಶಂ-
ಭು ಜಗನ್ನಾಥ ಜಗತ್ಪಿತಾಮಹ ಹರ ಶ್ರೀಕಾಂತ ವಾಗೀಶ ವಿ-
ಷ್ಣು ಜಿತಾನಂಗ ಜಿನೇಶ ಪಶ್ಚಿಮ ಸಮುದ್ರಾಧೀಶ್ವರಾ ಬೇಗದಿಂ
ನಿಜಮಂ ತೋರು ದಯಾಳುವೇ ತಳುವಿದೇಂ? ರತ್ನಾಕರಾಧೀಶ್ವರಾ ॥ 126 ॥

(ಮೂರು ಲೋಕಕ್ಕೆ ಪ್ರಭೂ ಜಿನೇಶ್ವರನೂ ಸಿದ್ಧಿಯನ್ನು ಹೊಂದಿದವನೂ ಸಿದ್ಧಕ್ಷೇತ್ರದಲ್ಲಿರುವ ಪೂಜ್ಯನೂ ಸಮಸ್ತ ವಿಷಯವನ್ನು ತಿಳಿಯುವವನೂ ಸುಖಿಕ್ಕೆ

ಉತ್ಪತ್ತಿಸ್ಥಾನನೂ ಲೋಕಾಧಿಪತಿಯೂ ಲೋಕಕ್ಕೆ ಪಿತಾಮಹನೂ ಕರ್ಮವನ್ನು ನಾಶ ಮಾಡುವವನೂ ಜ್ಞಾನಾದಿ ಸಂಪತ್ತುಗಳಿಗೆ ಸ್ವಾಮಿಯೂ ಸರಸ್ವತಿಗೆ ಸ್ವಾಮಿಯೂ ಜ್ಞಾನ ಮೂಲಕ ವ್ಯಾಪಕನೂ ಕಾಮನನ್ನು ಜಯಿಸಿದವನೂ ಕರ್ಮವನ್ನು ಕೆಡಿಸುವವರಿಗೆ ಸ್ವಾಮಿಯೂ ಪಶ್ಚಿಮ ಸಮುದ್ರಾಧಿಪತಿಯೂ ಆದ ರತ್ನಾಕರಾಧೀಶ್ವರನೆ ! ಶೀಘ್ರವಾಗಿ ಯಥಾರ್ಥವಾದ ಸ್ವರೂಪವನ್ನು ತೋರಿಸು. ದಯಾಶೀಲನೆ ! ಇದೇಕೆ ಸಾವಕಾಶ ?)[3]

ಮೇಲಿನ ಪದ್ಯಗಳಿಂದ ಕೆಲವು ಉಪಯುಕ್ತ ಮಾಹಿತಿಯನ್ನು ಈ ರೀತಿ ಸಂಗ್ರಹಿಸಬಹುದು. ಮೂಡಬಿದ್ರೆ ಸಮೀಪದ ಸಮುದ್ರತಟದಲ್ಲಿ ಮೂಲೆಗಡೆಯಾಗಿದ್ದ ಒಂದು ಬೆಟ್ಟದಲ್ಲಿ ಪದ್ಮಾಸನದ ಆದಿ ತೀರ್ಥಂಕರನ ವಿಗ್ರಹವೊಂದಿತ್ತು. ಅದು ಸಮುದ್ರದ ನಡುವೆ ಇದ್ದುದರಿಂದ ಅದನ್ನು ಸಮುದ್ರಾಧೀಶ್ವರ, ರತ್ನಾಕರಾಧೀಶ್ವರ, ಕಡಲಾದಿ ಪರಮೇಶ ಎಂದು ಕರೆಯುತ್ತಿದ್ದರು. ಈ ಜಿನೇಶ್ವರ ರಾಜಾನ್ವಯದ ರತ್ನಾಕರನ ಮನೆತನದವರಿಗೆ ಆರಾಧ್ಯ ದೈವವಾಗಿತ್ತು. ಆದ್ದರಿಂದಲೇ ಆ ದೇವರ ಹೆಸರನ್ನೇ ಕವಿಗೆ ಇಟ್ಟರು. ಬಹುಶಃ ಆ ದೇವರ ದರ್ಶನವನ್ನು ಕವಿ ರತ್ನಾಕರ ಮಾಡಿದ್ದಿರಬಹುದು. ಈ ಪಶ್ಚಿಮ ಸಮುದ್ರಾಧೀಶ್ವರ ಈಗ ಎಲ್ಲಿದೆ ಎಂಬುದು ಕಡಲಿನಲ್ಲಿ ಸಂಶೋಧನೆ ಮಾಡುವವರಿಗೆ ಅರ್ಹ ವಸ್ತುವಾಗಿದೆ.

ರತ್ನಾಕರನ ಅನಂತರದ ಸು. 1700ರ ಕವಿ ನಾಗವ, 'ಮಾಣಿಕಸ್ವಾಮಿ ಚರಿತೆ' ಎಂಬ ಷಟ್ಪದಿ ಕಾವ್ಯವೊಂದನ್ನು ರಚಿಸಿದ್ದಾನೆ.[4] ಇದೊಂದು ಪುರಾಣ, ಇತಿಹಾಸ, ಜಾನಪದೀಯ ಅಂಶಗಳಿಂದ ಕೂಡಿದ ಕೃತಿ. ಇದರಲ್ಲಿ ಪರಮ ಪತಿವ್ರತೆಯಾದ ಗುಣವತಿಯೆಂಬ ಹರದನ ಮಡದಿ ಸಮುದ್ರ ಮಧ್ಯದಿಂದ ಮಾಣಿಕ್ಯಸ್ವಾಮಿಯನ್ನು ಹೊರತಂದ ಹಾಗೂ ಅದನ್ನು ಶಂಕರಗಂಡ ಮಹಾರಾಜ ಕೊಲ್ಲಿಪಾಕಿಯಲ್ಲಿ ಪ್ರತಿಷ್ಠಾಪಿಸಿದ ವಿಷಯವಿದೆ.[5] ಆದಿಪರಮೇಶ್ವರನಿಗೆ ಪ್ರಾಪ್ತವಾಗಿರುವ ಮತ್ತೊಂದು ಹೆಸರು ಮಾಣಿಕ್ಯಸ್ವಾಮಿ. ಕೊಲ್ಲಿಪಾಕಿ, ಬಂಗಾಳಕೊಲ್ಲಿಗೆ ಸಮೀಪದಲ್ಲಿದೆ. ಆದ್ದರಿಂದ ಬಂಗಾಳಕೊಲ್ಲಿಯಲ್ಲೊಂದು ಆದಿತೀರ್ಥಂಕರ ಮೂರ್ತಿಯಿದ್ದು—ಅದು ಪೂರ್ವ ಸಮುದ್ರಾಧೀಶ್ವರ ಎಂದು ಹೆಸರು ಪಡೆದಿದ್ದಿರಬಹುದಾದುದರಿಂದ, ಮೂಡಬಿದ್ರೆಯ ಸನಿಹದ ಅರಬ್ಬೀ ಸಮುದ್ರದ ವಿಗ್ರಹಕ್ಕೆ ಪಶ್ಚಿಮ ಸಮುದ್ರಾಧೀಶ್ವರ ಎಂಬ ಅಭಿದಾನ ಬಂದಿದ್ದರೆ ಆಶ್ಚರ್ಯವಿಲ್ಲ.

ರತ್ನಾಕರ ಹಾಗೂ ಕವಿ ನಾಗವನಿಗಿಂತ ಹಿಂದೆ, 12ನೇ ಶತಮಾನದಲ್ಲಿದ್ದ ನಯಸೇನ ಕವಿಯ ಧರ್ಮಾಮೃತದ 9ನೇ ಆಶ್ವಾಸದ ಪ್ರಭಾವನಾಂಗದ ಕಡೆಯಾದ ವಿಷ್ಣುಕುಮಾರ ಹಾಗೂ ಬಲಿ ಮಹಾರಾಜನ ಕಥೆಯಲ್ಲಿ ಪ್ರಾಸಂಗಿಕವಾಗಿ ಕಡಲಿನಲ್ಲಿ ನಿಂತ ಜಿನನ ಪ್ರಸ್ತಾಪ ಬರುವುದು[6] ಆ ಕಥೆಯಲ್ಲಿ ವಾಮನ ವೇಷದ ವಿಷ್ಣುಕುಮಾರ

ಮುನಿ ಗಗನದೆತ್ತರ ಬೆಳೆದು ಕಂಗೊಳಿಸಿದಾಗ, ಆ ಮುನಿಯ ಕೋಪವನ್ನು ಶಮನ ಗೊಳಿಸುವ ಸಂದರ್ಭದಲ್ಲಿ ಬರುವ ರಗಳೆ ಛಂದಸ್ಸಿನ ಸ್ತುತಿಯ ಒಂದು ಭಾಗ ಹೀಗಿದೆ—

ಮೈಲಾಪದೊಳ್‌ನಿಂದ ನೇಮಿಜಿನಪತಿಯಿಂದ
ವಾರಿನಿಧಿಯೊಳ್‌ನಿಂದ ನೇಮಿಜಿನಪತಿಯಿಂದ
ಚೋಳಮಹಿಯೊಳ್‌ನಿಂದ ದಿವಿಜವಲ್ಲಭನಿಂದ
ಲಲಿತಪುರದೊಳ್‌ನಿಂದ ಶಾಂತಿಜಿನಪತಿಯಿಂದ
ಬಂದಣಿಕೆಯೊಳ್‌ನಿಂದ ಶಾಂತಿಜಿನಪತಿಯಿಂದ
ಶಾರಿಯೂರೊಳ್‌ನಿಂದ ಶಾಂತಿಜಿನಪತಿಯಿಂದ
ಹಾನುಗಲ್ಲೊಳ್‌ನಿಂದ ಮಲ್ಲಿನಾಥಜಿನನಿಂದ
ಎಳವತ್ತಿಯೊಳ್‌ನಿಂದ ಚಂದ್ರಜಿನಪತಿಯಿಂದ
ಮಾಳವದ ನೆಲೆನಿಂದ ಸಕ್ಷೀರಜಿನನಿಂದ
ಆಶ್ರಮದೊಳೊಪ್ಪಿರ್ದ ಸುವ್ರತೇಶ್ವರನಿಂದ
ಗೌಳಮಹಿಯೊಳ್‌ನಿಂದ ಶಂಭುಜಿನಪತಿಯಿಂದ
ತವನಿಧಿಯೊಳ್‌ನಿಂದ ಪಾರ್ಶ್ವಜಿನಪತಿಯಿಂದ
ಕೌಶಾಂಬಿಯೊಳ್‌ನಿಂದ ಪದ್ಮಪರಿವೃಢನಿಂದ
ಅಹಿಚ್ಛತ್ರದೊಳ್‌ನಿಂದ ಪಾರ್ಶ್ವಜಿನಪತಿಯಿಂದ
ಸಾಮರ್ಥ್ಯಮುಂಟೆಂದು ತಾವರಿವುದಿದನೆಂದು

ವಿವಿಧ ಸ್ಥಳಗಳ ನೇಮಿ, ಶಾಂತಿ, ಮಲ್ಲಿನಾಥ, ಚಂದ್ರನಾಥ ಸುವ್ರತ, ಶಂಭು, ಪಾರ್ಶ್ವ ಜಿನಪರ ಸ್ತುತಿ ಮೇಲಿನ ರಗಳೆಯ ಭಾಗದಲ್ಲಿದೆ. ಇವರೆಲ್ಲ ತೀರ್ಥಂಕರರು. ಚೋಳಮಹಿಯ 'ದಿವಿಜವಲ್ಲಭ' ಜಿನ, ಮಾಳವದ 'ಸಕ್ಷೀರಜಿನ', ಕೌಶಂಬಿಯ 'ಪದ್ಮಪರಿವೃಢ' ಜಿನ ಯಾರೆಂದು, ಅಂದರೆ ಯಾವ ತೀರ್ಥಂಕರರೆಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಆದರೆ ನಾನಾ ಸ್ಥಳಗಳ ಈ ಜಿನರ ಜಿನಾಲಯಗಳೆಲ್ಲ ನಯಸೇನನ ಕಾಲದಲ್ಲಿ ಪ್ರಸಿದ್ಧವಾಗಿದ್ದುವೆಂದು ತಿಳಿಯಬಹುದಾಗಿದೆ.[7] ಹಾಗೆಯೇ 'ವಾರಿನಿಧಿ ಯೊಳನಿಂದ ನೇಮಿಜಿನಪತಿ'ಯೂ ಪ್ರಸಿದ್ಧವಾಗಿತ್ತು. ಈ ನೇಮಿಜಿನೇಂದ್ರ ಯಾವ ಕಡಲಿನಲ್ಲಿ ನೆಲಸಿದ್ದನು ? ಈ ಪ್ರಶ್ನೆಗೆ ಈ ಗ್ರಂಥದಲ್ಲಿ ಉತ್ತರವಿಲ್ಲ. ಬೇರೆ ಆಧಾರಗಳನ್ನು ಹುಡುಕಬೇಕಾಗುವುದು.

ಒಟ್ಟಿನಲ್ಲಿ ದಕ್ಷಿಣ ಭಾರತವನ್ನು ಆವರಿಸಿರುವ ಸಮುದ್ರ ಪ್ರದೇಶದಲ್ಲಿ ಅಲ್ಲಲ್ಲಿ ತೀರಕ್ಕೆ ಹತ್ತಿರವಾಗಿದ್ದ ನಡುಗಡ್ಡೆ ಅಥವಾ ಚಿಕ್ಕ ದ್ವೀಪಗಳಲ್ಲಿ ಜಿನಾಲಯಗಳಿದ್ದವು. ಅವುಗಳಲ್ಲಿ ಆದಿನಾಥ, ನೇಮಿನಾಥರ ವಿಗ್ರಹಗಳು ವಿರಾಜಮಾನವಾಗಿದ್ದವು. ವಿಶೇಷವಾಗಿ ಸಮುದ್ರ ವ್ಯಾಪಾರ ಮಾಡುತ್ತಿದ್ದ ಹರದರು ಅವುಗಳ ದರ್ಶನ ಲಾಭ ಪಡೆಯುತ್ತಿದ್ದರು ಎಂದು ಭಾವಿಸಬಹುದಾಗಿದೆ.

ಅಡಿಟಿಪ್ಪಣಿ

1. ಬಿ. ಎಸ್. ಸಣ್ಣಯ್ಯ (ಸಂ.), ರಾಜಾವಳಿ ಕಥಾಸಾರ, 11ನೇ ಅಧಿಕಾರ, ಪು. 272, 1988.
2. ಪರಮ ಪರಂಜ್ಯೋತಿ ಕೋಟಿಚಂದ್ರಾದಿತ್ಯ । ಕಿರಣ ಸುಜ್ಞಾನ ಪ್ರಕಾಶ ॥
ಸುರರ ಮುಕುಟಮಣಿ ರಂಜಿತ ಚರಣಾಬ್ಜ । ಶರಣಾಗು ಪ್ರಥಮ ಜಿನೇಶ ॥
3. ಎತ್ತರ್ಮರು ಶಾಂತಿರಾಜಶಾಸ್ತ್ರಿ (ಸಂ.), ಶತಕತ್ರಯ, 4ನೇ ಮುದ್ರಣ 1988. ಈ ಪುಸ್ತಕದಿಂದ ರತ್ನಾಕರ ಶತಕದ ಮೂರು ಪದ್ಯಗಳನ್ನು ಹಾಗೂ ಅನುವಾದ ಭಾಗವನ್ನು ತೆಗೆದುಕೊಂಡಿದೆ.
4. ಜಿ. ಜಿ. ಮಂಜುನಾಥನ್ (ಸಂ.), ಮಾಣಿಕಸ್ವಾಮಿ ಚರಿತ್ರೆ, 1982.
5. ಕೊಲ್ಲಿಪಾಕಿ, ಆಂಧ್ರ ಪ್ರದೇಶದ ನಲಗೊಂಡ ಜಿಲ್ಲೆಯಲ್ಲಿದೆ. ಗುಣವತಿ ಮತ್ತು ಶಂಕರಗಂಡ ಮಹಾರಾಜ ಯಾರಿರಬಹುದು ಎಂಬ ವಿಶೇಷ ವಿಚಾರಕ್ಕೆ ಅಡಿಟಿಪ್ಪಣಿ 4ರ ಪುಸ್ತಕದ ಪೀಠಿಕೆಯನ್ನು ಮತ್ತು 1958ರ ಸೆಪ್ಟೆಂಬರ್ ಹಾಗೂ ನವೆಂಬರ್ ತಿಂಗಳ 'ಗುರುದೇವ' ಮಾಸಪತ್ರಿಕೆಯ ರಾ.ಧ. ಟೀಕಣ್ಣನವರ ಲೇಖನ ಹಾಗೂ ಪಂ. ಕೆ. ಭುಜಬಲಶಾಸ್ತ್ರಿ ಅವರ ಟಿಪ್ಪಣಿಯನ್ನು ನೋಡಿ. ಶೀಲವಿಜಯ ಮುನಿಯ 'ತೀರ್ಥಮಾಲಾ' ಎಂಬ ಗ್ರಂಥದಲ್ಲಿ ಮಾಣಿಕಸ್ವಾಮಿ ಪ್ರತಿಮೆಯ ಪ್ರಸ್ತಾಪವಿದೆ.
6. ಕೆ. ವೆಂಕಟರಮಣಪ್ಪ (ಅನು), ಧರ್ಮಾಮೃತಂ, 1977, ಪುಟ 654.
7. ಧರ್ಮಾಮೃತದ ಮತ್ತೊಂದು ಪ್ರತಿಯಲ್ಲಿ, "ಹುಲಿಗೆರೆಯ ಶಂಭುಜಿನಪತಿ, ಶ್ರೀಕೊಪಣದ ಶಶಿನಾಥ ಜಿನೇಂದ್ರ, ಮುಳುಗುಂದದ ಚಂದ್ರಕ್ಷ ಜಿನನಾಥ"— ಇವುಗಳು ಪಾಠಾಂತರವಾಗಿ ಕಂಡುಬರುತ್ತವೆ.

ಯುರಿಪಿಡೀಸ್ ಕವಿಯ ಮೀಡಿಯ ನಾಟಕದ ಆಶಯ

ಶಿವರಾಮಯ್ಯ

ಯುರಿಪಿಡೀಸ್ ಕವಿಗೆ ಮೀಡಿಯಳಂಥ ನಿಷ್ಕರುಣೆ ಅತಿಸ್ವಾರ್ಥಿ ಕೊಲೆಪಾತಕಿಯಾದ ಹೆಣ್ಣುರಕ್ಕಸಿಯನ್ನು ಕುರಿತು ನಾಟಕ ಬರೆಯುವ ಅಗತ್ಯವಾದರೂ ಏನಿತ್ತು ? ನಾಟಕಕ್ಕೆ ಅವಳದೇ ಹೆಸರಿಟ್ಟು ಕರೆದಿರುವುದಕ್ಕೆ ಸಮರ್ಥನೆ ಏನು ? ನಾವಾದರೂ ಈಗ ಎರಡೂವರೆ ಸಾವಿರ ವರ್ಷಗಳಷ್ಟು ಹಿಂದಿನ ಈ ನಾಟಕವನ್ನು ಅಡಿ ನೋಡಿ ಓದಿ ಚರ್ಚಿಸುತ್ತಾ ಉಳಿಸಿಕೊಂಡು ಬಂದಿರುವುದಾದರೂ ಏತಕ್ಕೆ ? ಹಳೆಯದಾದುದೆಲ್ಲಾ ಅಮೂಲ್ಯ ಎಂಬ ಕಾರಣಕ್ಕಾಗಿಯೇನಾದರೂ ಈ ಸೇಡಿನ ಮಾರಿಯ ಕಥೆಗೆ ಸಾಹಿತ್ಯ ಲೋಕದಲ್ಲಿ ಒಂದು ಸ್ಥಾನ ಉಂಟೆ ? ಪ್ರಪಂಚದಲ್ಲಿ ಕೆಟ್ಟ ತಂದೆ ಇರಬಹುದು, ಆದರೆ ಕೆಟ್ಟ ತಾಯಿ ಇದ್ದಿರಲಾರಳು ಎಂಬ ನಾಣ್ಣುಡಿಗೆ ಅಪವಾದ ಎಂಬಂತಿರುವ ಮೀಡಿಯಳ ಕಥೆಯನ್ನು ಕುರಿತು ಏಕೆ ನಾಟಕವನ್ನು ರಚಿಸಿದ ? ಸ್ತ್ರೀಸ್ವಾತಂತ್ರ್ಯ, ಸಮಾನತೆಗಳ ಬಗೆಗೆ ಆಧುನಿಕರಾದ ನಾವೂ ಮೆಚ್ಚಿ ಬೆಚ್ಚಿಬೀಳುವಂತೆ ಮಾಡಿ ಮೀಡಿಯಳನ್ನು ಹಾಡಿ ಹೊಗಳಿರುವುದರಲ್ಲಿ ಅರ್ಥವೇನು ? ಕವಿಯೊಬ್ಬ ತನ್ನ ಕೃತಿಯೊಂದರ **ಆಶಯ** ಏನಿದೆ ಎಂಬುದನ್ನು ತನ್ನ ಮೆಚ್ಚಿನ ಪಾತ್ರ ಒಂದರಲ್ಲಿ ಒಲವುತೋರುತ್ತ ಸುಳುಹು ಕಾಣಿಸುತ್ತಾ ಹೋಗುತ್ತಾನೆಂಬ ಮಾತುಂಟು. ಹಾಗಿದ್ದರೆ ಯುರಿಪಿಡೀಸ್ ಮೀಡಿಯ ಪಾತ್ರದಲ್ಲಿ ಕಂಡ ಕಾಣ್ಕೆ ಯಾವುದು ? ಯಾವ ಆದರ್ಶವನ್ನು ಸಾದರ ಪಡಿಸಲು ತವಕಿಸಿದ್ದಾನೆ ? ಯಾವ ಆಶಯವನ್ನು ಬಿಂಬಿಸಲು ಹೊರಟಿದ್ದಾನೆ ? ಎಂಬಿತ್ಯಾದಿ ಕುತೂಹಲಭರಿತ ಹಲವಾರು ಪ್ರಶ್ನೆಗಳು, ಅನುಮಾನಗಳು, ಊಹೆಗಳು ಒಗಟಿನಂತೆ, ನನ್ನನ್ನು ಆಗಾಗ ಮುತ್ತಿ ಕಾದಾಡಿದ್ದುಂಟು. ಒತ್ತಿ ಚಿಂತನೆಗೆ ಗುರಿಪಡಿಸಿದ್ದುಂಟು. ಆದ್ದರಿಂದ ಈ ಎಲ್ಲ ಚಿಂತನೆಯ ಫಲವಾಗಿ ಈ ಗ್ರೀಕ್ ಕವಿಯ **ನಾಟಕದ ಆಶಯ** ಏನಿರಬಹುದು ಎಂಬುದನ್ನು ಕುರಿತು ಶೋಧಿಸಲು ಈ ಬರವಣಿಗೆಯಲ್ಲಿ ಪ್ರಯತ್ನಿಸಿದ್ದೇನೆ.

ನಾಟಕದ ಚೌಕಟ್ಟಿನಿಂದ ಆಚೆಗೆ ನಿಂತು ದೂರಕ್ಕೆ ಕಣ್ಣು ಹಾಯಿಸಿದರೆ ಯುರಿಪಿಡೀಸನಿಗೆ ಬಹುಶಃ ಮೀಡಿಯ ಮತ್ತು ಜೇಸನ್ನರ ವಿಚ್ಛಿದ್ರ ರೂಪದ ದಾಂಪತ್ಯ ಜೀವನವನ್ನು ಚಿತ್ರಿಸುವುದರ ಮೂಲಕ ಅಂದಿನ ಕುಟುಂಬ ಜೀವನದ ವಿಘಟಿತ ಸ್ವರೂಪವನ್ನು ಚಿತ್ರಿಸುವುದೇ ಆಗಿರಬೇಕು. ಮೀಡಿಯ ಒಂದು

ಸಾಮಾಜಿಕ ನಾಟಕ. ಬೌದ್ಧಿಕವಾಗಿ ಅತ್ಯುನ್ನತಿಗೇರಿದ ಒಂದು ನಾಗರಿಕ ಸಮಾಜ ಭಾವನೆಯ ಬೇರುಗಳಿಗೆ ಬೆಲೆ ಕೊಡದೆ ತೀರ ವ್ಯವಹಾರದಿಂದ ವರ್ತಿಸಿದಾಗ ಅದು ಎಂಥ ಅವನತಿಗೆ ಇಳಿಯುತ್ತದೆ. ಎಂಬುದನ್ನು ತಿಳಿಯಪಡಿಸುವುದೇ ಈ ನಾಟಕದ ಉದ್ದೇಶವಾಗಿರಬಹುದು. ಅಲ್ಲದೆ ವಿವೇಕಶೂನ್ಯಳಾದ ಕಾಮುಕ ಹೆಣ್ಣು ಎಂಥ ದಾರುಣ ದುರಂತಕ್ಕೆ ದಾರಿ ಮಾಡಬಲ್ಲಳು ಎಂಬುದನ್ನು ತೋರಿಸಿಕೊಡುವ ಇನ್ನೊಂದು ಆಶಯವೂ ಕವಿಗಿದ್ದಿರಬೇಕು. ಒಂದು ಕಡೆ, ಗಂಡು-ಹೆಣ್ಣಿನ ಮಧ್ಯೆ ಉಂಟಾದ ವಿರಸದಿಂದ ಉದ್ಭವಿಸಿದ ವಿಲೋಮ ದಾಂಪತ್ಯ ; ಇನ್ನೊಂದು ಕಡೆ ನಾಗರಿಕ ಅನಾಗರಿಕ ಸಂಸ್ಕೃತಿ ಮೌಲ್ಯಗಳೆರಡರ ಮಧ್ಯೆ ಉಂಟಾದ ತಿಕ್ಕಾಟ; ಇವೆರಡೂ ಒಂದು ಘಟ್ಟವಲ್ಲಿ ಸಂಧಿಸಿ ಎಂಥ ದುರಂತವನ್ನು ತಂದೊಡ್ಡಬಹುದು ಎಂಬುದಕ್ಕೆ ಮೀಡಿಯ ನಾಟಕ ಒಂದು ಸ್ಪಷ್ಟ ನಿದರ್ಶನವನ್ನೊದಗಿಸುತ್ತದೆ ಎಂಬುದು ನನ್ನ ಅನಿಸಿಕೆ. ಅಲ್ಲದೆ ಪುರುಷಪ್ರಧಾನವಾದ ಸಮಾಜಕ್ಕೆ ತಿರುಗಿಬಿದ್ದು ದಂಗೆ ಎದ್ದ ಹೆಣ್ಣೊಬ್ಬಳ ಭೀಕರ ಕ್ರೌರ್ಯ ಹೇಗಿರುತ್ತದೆ ಎಂಬುದನ್ನು ನಾವಿಲ್ಲಿ ಕಾಣಬಹುದು. ಮತ್ತು ಕಾಡುಕಾಮವು ನಾಡಿನ ರೀತಿನೀತಿಗಳಿಗೆ ಒಗ್ಗಿಕೊಳ್ಳಲಾರದೆ ಭೀಕರ ಕೇಡಾಗಿ ಪರಿವರ್ತಿತವಾಗುವ ಬಗೆಯನ್ನು ನಾವಿಲ್ಲಿ ಕಾಣಬಹುದಾಗಿದೆ.

ಮೀಡಿಯಳಿಗೆ ಜೇಸನ್ನನ ಮೇಲೆ ಇನ್ನಿಲ್ಲದ ಆಕ್ರೋಶ ಯಾಕೆಂದರೆ ತಾನಿನ್ನೂ ಬದುಕಿದ್ದು, ತನಗೆರಡು ಗಂಡು ಸಂತಾನವಿದ್ದೂ ಸಹ ತನ್ನ ಗಂಡ ಇನ್ನೊಬ್ಬಳನ್ನು ಕಟ್ಟಿಕೊಂಡದ್ದು, ಇದರಿಂದ ಸ್ತ್ರೀಸಹಜವಾದ ಅಸೂಯೆ ಅವಳಲ್ಲಿ ಮೇಲೇಳುತ್ತದೆ. ದುಃಖದುಮ್ಮಾನಗಳಿಂದ ಕಾಲನ್ನಪ್ಪಳಿಸಿ ಕ್ರೋಧಾಗ್ನಿಯಿಂದ ಕುದಿಗೊಳ್ಳುತ್ತಾಳೆ. ಈಗ ಜೇಸನ್ನನ ಹಿಂದೆ ಓಡಿಬಂದುದನ್ನು ಸ್ಮರಿಸುತ್ತಾಳೆ; ಅದಕ್ಕಾಗಿ ಕಹಿಯ ತುಂಬಿಕೊಳ್ಳುತ್ತಾಳೆ; ಮಿಂಚಿ ಹೋದುದಕ್ಕೆ ಚಿಂತಿಸಿ, ಚಿಂತಿಸಿ ಬೇಯುತ್ತಾಳೆ.

ಜೇಸನ್ ಒಮ್ಮೆ ಮೀಡಿಯಳಿದ್ದ ದ್ವೀಪಾಂತರಕ್ಕೆ ತನ್ನೊಡೆಯನಿಗೆ ಹೊನ್ನ-ತುಪ್ಪಟವನ್ನು ತಂದೊಪ್ಪಿಸುವ ಕಾರ್ಯನಿಮಿತ್ತ ಬಂದಿರುತ್ತಾನೆ. ಅವನನ್ನು ಕಂಡು ಮೋಹಗೊಂಡ ಮೀಡಿಯ, ಬೆಂಕಿಯ ಉಸಿರಾಡುವ ಗೂಳಿಗಳಿಂದಲೂ, ಹೊನ್ನ-ತುಪ್ಪಳವನ್ನು ಬಚ್ಚಿಟ್ಟುಕೊಂಡಿದ್ದ ಸರ್ಪದಿಂದಲೂ, ಹೀಗೆ ಅನೇಕ ಭೀಕರ ಆಪತ್ತುಗಳಿಂದ ಅವನನ್ನು ರಕ್ಷಿಸಿದ್ದಳು. ಅಷ್ಟಲ್ಲದೆ ಸೋದರನನ್ನು ಕೊಂದು, ತಂದೆಯನ್ನು ವಂಚಿಸಿ, ತವರು ನೆಲವನ್ನು ತೊರೆದು ಜೇಸನ್ನನ ಬೆನ್ನು ಬಿದ್ದು ಓಡಿ ಬಂದಿದ್ದಳು. ಅನಂತರ ಜೇಸನ್ನನ ಹಿತಕ್ಕಾಗಿ ಪೆಲಿಯಾಸ್ ದೊರೆಯನ್ನು ಅವನ ಹೆಣ್ಣುಮಕ್ಕಳಿಂದಲೇ ಕೊಲ್ಲಿಸಿದ್ದಳು. ಒಂದಲ್ಲ ಎರಡು ಗಂಡು ಮಕ್ಕಳನ್ನು ಹಡೆದು ಅವನ ಸಂತಾನವನ್ನು ಬೆಳಸಿದ್ದಳು. ಇಷ್ಟೆಲ್ಲ ಉಪಕಾರ ಮಾಡಿದ್ದರೂ ಮೀಡಿಯಳಿಗೆ ಸಿಕ್ಕ ಬಹುಮಾನ ಎಂದರೆ ತನ್ನ ಸವತಿ ಹೆಣ್ಣಿನ ತಂದೆ ಕ್ರಿಯಾನ್‌ನಿಂದ

ದೇಶಭ್ರಷ್ಟಳಾಗಿ ಹೋಗಬೇಕೆಂಬ ರಾಜಾಜ್ಞೆ. ಮೊದಲೆ ಪರದೇಶಿಯಾದ ಈ ಬಡ ಮಕ್ಕಳ ತಾಯಿ ಇನ್ನೆಲ್ಲಿಗೆ ತಲೆಮರೆಸಿಕೊಂಡು ಹೋಗಬೇಕು? ಆಗ ಅವಳ ಕಂಬನಿ ಕೋಡಿ ಹರಿದು, ಸಂಕಟ ಸೇಡಾಗಿ, ದುಃಖ ರೋಷವಾಗಿ, ಮೇರೆ ಮೀರಿ ಪ್ರತೀಕಾರಕ್ಕಾಗಿ ಸಮಯ ಕಾಯುತ್ತಿರುತ್ತದೆ.

ಆದರೆ ಅವಳ ಒಂದೊಂದು ಉಪಕಾರವನ್ನು ಜೇಸನ್ನನು ಅಲ್ಲಗಳೆದು ಅವಳಿಂದ ತಾನೇನೂ ಸಹಾಯ ಪಡೆಯಲಿಲ್ಲವೆಂದೇ ವಾದಿಸುತ್ತಾನೆ. ದೇವತೆಯಿಂದ ಕಡಲ ಪ್ರಯಾಣ ನಿರ್ವಿಘ್ನವಾಯಿತು; ಮೋಹಾತಿರೇಕದಿಂದ ಹುಚ್ಚೆದ್ದು ನನ್ನ ಹಿಂದೆ ಓಡಿ ಬಂದೆ; ಕೊಟ್ಟುದಕ್ಕಿಂತ ಹೆಚ್ಚಾಗಿ ನನ್ನಿಂದ ಪಡೆದಿದ್ದೀಯೆ; ಅನಾಗರಿಕ ಬರ್ಬರನಾಡನ್ನು ಬಿಟ್ಟು ನಾಗರಿಕ ದೇಶಕ್ಕೆ ಬಂದೆ: ನ್ಯಾಯ ನೀತಿ ಕಾನೂನು ಗಳೇನೆಂಬುದನ್ನು ಕಂಡೆ; ನಿನ್ನ ಪ್ರತಿಭೆಗೆ ಇಲ್ಲಿ ಮನ್ನಣೆ ಸಿಕ್ಕಿ ಪ್ರಸಿದ್ಧಳಾದೆ; ನನ್ನ ರಾಜಮನೆತನದ ಸಂಬಂಧ ಮೋಹದಿಂದ ಕೂಡಿದ್ದಲ್ಲ ವಿವೇಕದಿಂದ ಓಡಿದದ್ದು ನಿನ್ನ ಆಕರ್ಷಣೆ ಕಡಿಮೆಯಾಗಿ ನಾನೇನು ಬೇರೆ ಸಂಬಂಧ ಮಾಡಲಿಲ್ಲ; ಬಡತನ ವೆಂಬುದು ಪರಮಶತ್ರು; ಮುಂದೆ ನನ್ನ ಮಕ್ಕಳು ಅಂಥ ಬಡತನಕ್ಕೀಡಾಗಿ ಲೋಕವಲ್ಲಿ ಅವಮಾನಿತರಾಗಬಾರದೆಂದೂ, ಸಮಾಜದಲ್ಲಿ ಅವರಿಗೊಂದು ಸ್ಥಾನ-ಮಾನ ಇರಲಿ ಎಂದೂ, ಯೋಚಿಸಿ ಈ ಸಂಬಂಧ ಮಾಡಿದೆ; ಪ್ರೇಮ ಮಾತ್ಸರ್ಯವಿಲ್ಲದೆ ವಿವೇಕದಿಂದ ನೋಡಿದರೆ ನೀನೂ ಸಹ ಒಪ್ಪುವೆ; ಆದರೆ ನೀವು-ಹೆಂಗಸರು ನಿಮ್ಮ ರಾತ್ರಿ ಜೀವನಕ್ಕೆ ಭಂಗಬಂದುದಾದರೆ ಜಗತ್ತೇ ನಿಮಗೆ ತಲೆಕೆಳಗಾಗಿ ಬಿಡುತ್ತದೆ; ಎಂದು ಮುಂತಾಗಿ ಹಂಗಿಸಿ, ಟೀಕಿಸಿ ಮೀಡಿಯಳ ಹೃದಯಕ್ಕೆ ಬರೆ ಎಳೆಯುತ್ತಾನೆ. ಅಲ್ಲದೆ ಹೆಂಗಸರಿಲ್ಲದೆ ಮಕ್ಕಳನ್ನು ಪಡೆಯು ವಂತಿದ್ದರೆ, ಕಡೆಗೆ ಹೆಣ್ಣು ಜಗತ್ತಿನಲ್ಲಿ ಹುಟ್ಟದೇ ಇದ್ದಿದ್ದರೆ, ಗಂಡಿನ ಬಾಳು ಎಷ್ಟು ಸುಖಮಯವಾಗಿರುತ್ತಿತ್ತು ಎಂದು ತನ್ನ ಅನೈಸರ್ಗಿಕವಾದ ಬಯಕೆಯಿಂದ ಅವಳ ಗಾಯದ ಮೇಲೆ ಉಪ್ಪುನೀರು ಸುರಿಯುತ್ತಾನೆ; ಜಾರಿಕೆಯ ನುಡಿ ಆಡಿ ಅವಳನ್ನು ಚೇಳಿನಂತೆ ಕುಟುಕುತ್ತಾನೆ.

ಮೀಡಿಯ ಏಷ್ಯಾಟಿಕ್ ದ್ವೀಪಾಂತರದ ಬರ್ಬರ ಜನಾಂಗದಲ್ಲಿ ಜನಿಸಿ ಸ್ವಚ್ಛಂದವಾಗಿ ಬೆಳೆದು ಬಂದವಳು; ನಗರನಾಗರಿಕತೆಯ ಥಳಕುಬಳಕುಗಳನ್ನು ಕಂಡು ಮೊದಲು ಬೆರಗಾಗಿದ್ದವಳು; ಆಕರ್ಷಣೆಯ ಬೆರಗಿನಿಂದ ಭ್ರಮನಿರಸನ ಗೊಂಡ ಅವಳು ಈಗ ಅಸಹಾಯಕಳಾಗಿ ಸುಮ್ಮನೆ ಅದನ್ನೆಲ್ಲ ಒಪ್ಪುವವಳಲ್ಲ. ಭಾವಮುಗ್ಧಳಾಗಿದ್ದ ಆಕೆ ಈಗ ತುಳಿದ ಸರ್ಪಿಣಿಯಂತೆ ಹೆಡೆ ಎತ್ತಿ ಭೋರ್ಗರೆ ಯುತ್ತಾಳೆ. ತನ್ನ ಆತ್ಮಗೌರವಕ್ಕೆ ಆದ ಅವಮಾನವನ್ನು ಸೇಡಾಗಿ ಪರಿವರ್ತಿಸಿ ಕೊಳ್ಳುತ್ತಾಳೆ. ಪ್ರಾಣಹೋದರೂ ಮಾನ ಬಿಡರು ಆದಿಮ ಜನರು. ಆದ್ದರಿಂದ ತಮ್ಮ ಜನಾಂಗದತ್ತವಾಗಿ ಬಂದ ಕೊಲೆಯ ಸಾಧನ ತಂತ್ರಗಳ ನೆನಪಿನ ಕಣಜಕ್ಕೆ

ಕೈ ಹಾಕುತ್ತಾಳೆ; ಅದು ಅಂತೆಯೇ ಅಕ್ಷಯವಾದ ಕಣಜ. ಸಂದರ್ಭೋಚಿತವಾದ ಅನ್ವೇಷಣಾತ್ಮಕವಾದ ಅವಳ ಬುದ್ಧಿವಂತಿಕೆ, ಜಾಣ್ಮೆ. ಸೂಕ್ಷ್ಮ ವಿಚಾರಗಳು ಗರಿಗೆದರುತ್ತವೆ. ಮದ್ದು ಮಾಟಗಳನ್ನು ವಿಧಿವತ್ತಾಗಿ ಬಳಸಿ ನಿರ್ವಹಿಸಿ ಫಲ ಸಾಧಿಸುವ ದಿಸೆಯಲ್ಲಿ ಅವಳು ಯಾವತ್ತೂ ಹಿಂದೆ ಬಿದ್ದವಳಲ್ಲ. ಪ್ರಣಯಭಂಗದ ನಂತರ ಮೀಡಿಯ ತುಂಬಾ Explorer ಆಗಿ ಬಿಡುತ್ತಾಳೆ, ದೇಶಭ್ರಷ್ಟಳಾಗಿ ಹೋಗಬೇಕೆಂಬ ರಾಜಾಜ್ಞೆಯನ್ನು ಕೇಳಿದನಂತರ ಪಾದರಸದಂತೆ ಅವಳ ಬುದ್ಧಿ ಕೆಲಸ ಮಾಡುತ್ತದೆ. ಮಕ್ಕಳೊಂದಿಗಾದ ಆ ಬಡ ತಾಯಿಯ ಹುನ್ನಾರ, ತಾಳ್ಮೆ, ಜಾಣತನಗಳು ನಮ್ಮನ್ನು ರೋಮಾಂಚನ ಚಕಿತಗೊಳಿಸುತ್ತವೆ. ಮೀಡಿಯ ಈಗೀಗ ಹೆಚ್ಚೆಚ್ಚು ಉಜ್ವಲವೂ ಸಂಕೀರ್ಣವೂ ಆಗಿ ಕಂಡು ಬರುತ್ತಾಳೆ. ಇದಕ್ಕೆ ಕೆಲವು ನಿದರ್ಶನಗಳನ್ನು ಮುಂದೆ ನೋಡ ಬಹುದು :

ಮೊದಲಿಗೆ ದೊರೆ ಕ್ರೆಯಾನ್ ಗಡೀಪಾರು ಆಜ್ಞೆಯನ್ನು ಜಾರಿಗೊಳಿಸುವ ಪ್ರಸಂಗ; ಜೇಸನನ ಹಾಸುಗೆಯ ಸುಖದಿಂದ ವಂಚಿತಳಾದ ಮೀಡಿಯ, ಜೇಸನ್, ಅವನ ನವವಧು ಮತ್ತು ಅವಳ ತಂದೆಯ ಮೇಲೆ ಸೇಡು ತೀರಿಸಿಕೊಳ್ಳಲು ಈಗ ಸಿದ್ಧಳಾಗಿದ್ದಾಳೆ ಎಂಬ ವರದಿಯ ಆಧಾರದ ಮೇಲೆ ಕ್ರಿಯೊನ್ ಅವಳನ್ನು ವೈರಿಯೆಂದು ಬಗೆದು ನಿವಾರಿಸಿಕೊಳ್ಳಲು ಗಡಿಪಾರು ಆಜ್ಞೆಯನ್ನು ಹೊರಡಿಸಿ ಅದನ್ನು ಸ್ವತ: ತಾನೇಕಾರ್ಯಗತಗೊಳಿಸಲು ಅವಳ ಬಳಿಗೆ ಬರುತ್ತಾನೆ ಮೀಡಿಯ ತಾನು ಮಾಡಿದ ಅಪರಾದವಾದರೂ ಏನು? ಏಕೆ ಈ ಶಿಕ್ಷೆ? ಇತ್ಯಾದಿಯಾಗಿ ಪರಿಪರಿ ಯಾಗಿ ಪರಿತಪಿಸಿದರೂ, ವಾದಹೂಡಿದರೂ ಪ್ರಯೋಜನವಾಗಲಿಲ್ಲ. ಕಡೆಗೆ ಅವಳು ಅತ್ಯಂತ ದೈನ್ಯದಿಂದ, ಅವನ ಮಗಳ ಹೆಸರಹೇಳಿ, ಮೊಣಕಾಲೂರಿ ಗೋಗರೆದು, ನೀನೂ ಮಕ್ಕಳ ತಂದೆ ಅಲ್ಲವೆ? ನನ್ನ ಮಕ್ಕಳಿಗೆ ಏನಾದರೂ ವ್ಯವಸ್ಥೆ ಮಾಡಬೇಕಾಗಿದೆ, ಆದ್ದರಿಂದ ಒಂದು ದಿನ ತಂಗಿ ಹೋಗಲು ಅವಕಾಶ ವನ್ನು ಕೊಡು ಎಂದು ಬೇಡಿಪಡೆದುಕೊಳ್ಳುತ್ತಾಳೆ. ಸ್ವತಃ ಕೆಟ್ಟವನಲ್ಲದ ಕ್ರೆಯಾನ್ ಮೀಡಿಯಳ ಇಷ್ಟು ಬೇಡಿಕೆಗೆ ಮನ್ನಣೆ ಕೊಟ್ಟಿದ್ದು ಮುಂದಿನ ಎಲ್ಲ ದುರಂತಕ್ಕೆ ಅದು ದಾರಿಮಾಡಿಕೊಟ್ಟಿತು. ಅವಳ ದೂರದೃಷ್ಟಿ ಸಮಯಸಾಧಕ ಪ್ರಜ್ಞೆ ಇಲ್ಲಿ ಎದ್ದು ಕಾಣುವುವು.

ಎರಡನೆಯದಾಗಿ, ಏಜಿಯಸನ ಭೇಟಿಯ ಪ್ರಸಂಗ: ದೆಲ್ಫಿಯ ಅಪಲೋ ದೈವವಾಣಿಯನ್ನು ಕೇಳಿ ಅಥೆನ್ಸಿಗೆ ಹೋಗುವ ಮಾರ್ಗಮಧ್ಯದಲ್ಲಿ ಏಜಿಯಸ್ ಕಾರಿಂಥ್ ಪಟ್ಟಣಕ್ಕೆ ಭೇಟಿ ಕೊಡುತ್ತಾನೆ. ಇವನ ಭೇಟಿಯ ಸಂದರ್ಭವನ್ನು ಚತುರೆಯಾದ ಮೀಡಿಯ ಅತ್ಯಂತ ಸದುಪಯೋಗ ಪಡಿಸಿಕೊಳ್ಳುತ್ತಾಳೆ. ಬಂದ ಸ್ನೇಹಿತನನ್ನು ಚೆನ್ನಾಗಿ ಮಾತನಾಡಿಸಿ, ಅವನ ಕಷ್ಟಸುಖಗಳನ್ನು ವಿಚಾರಿಸಿ, ಅತಿಥಿ ಸತ್ಕಾರಮಾಡಿ ಅವನನ್ನು ಮೆಚ್ಚಿಸಿ ಕೊಳ್ಳುತ್ತಾಳೆ. ಮೀಡಿಯಳ ಕಥೆಯ ವ್ಯಥೆಯನ್ನು ಕೇಳಿ ಏಜಿಯಸ್ ತುಂಬಾ ಮರಗುತ್ತಾನೆ. ಕಾರಿಂಥಿನಿಂದ ಗಡಿಪಾರು

ಗೊಂಡು ಸೀನಾಗಿಯೋ ಅಥೆನ್ಸಿಗೆ ಬಂದರೆ ನಾನು ಖಂಡಿತ ನಿನಗೆ ಆಶ್ರಯಕೊಡ ಬಲ್ಲೆನೆಂದು ಆಶ್ವಾಸನೆ ಕೊಡುತ್ತಾನೆ. ಇದಕ್ಕಾಗಿ ಅವನ ದಾಡಿಯನ್ನು ಹಿಡಿದು, ದೀನಳಾಗಿ ಕಾಲುಮುಟ್ಟಿ ಕೇಳುತ್ತಾಳೆ ಮೀಡಿಯ. ನಿನ್ನ ಗೆಳೆತನಕ್ಕೆ ಪ್ರತಿಯಾಗಿ ನಿನಗೆ ಮಕ್ಕಳಾಗುವಂತೆ ಮದ್ದು ಮಾಡುತ್ತೇನೆ ಎಂದು ಭರವಸೆಯನ್ನೂ ನೀಡುತ್ತಾಳೆ. ಜೇಸನನಿಂದ ವಂಚಿತಳಾದ ಅವಳು ಅನುಭವದಿಂದ ಈಗ ಪಾಠ ಕಲಿತಿದ್ದಾಳೆ. ಆದ್ದರಿಂದ ಭೂಮಿ, ಸೂರ್ಯದೇವನ ಆಣೆಯಿಟ್ಟು, ಏಜಿಯಸನಿಂದ ಆಶ್ರಯಕ್ಕಾಗಿ ಭಾಷೆ ಪಡೆದುಕೊಳ್ಳುತ್ತಾಳೆ. ಹೀಗೆ ಮದ್ದಿನ ವಿದ್ಯೆಯನ್ನು ಮುಂದೆ ಮಾಡಿ, ಮುಂದಿನ ಹಂಗಿಲ್ಲದ ಆಶ್ರಯದ ಬಗ್ಗೆ ಗ್ಯಾರಂಟಿ ಮಾಡಿಕೊಂಡು ಆ ಬಗ್ಗೆ ಆತಂಕರಹಿತಳಾಗುತ್ತಾಳೆ.

ಮೂರನೆಯದಾಗಿ, ನವವಧು ಮತ್ತು ಅವಳ ತಂದೆಯನ್ನು ಕೊಲ್ಲುವ ಪ್ರಸಂಗ: ಮೀಡಿಯ ಈ ಪ್ರಸಂಗದಲ್ಲಿ ಅಸಾಧಾರಣ ಬುದ್ಧಿವಂತೆಯೂ ಕಾರ್ಯತತ್ಪರೆಯೂ ಆಗಿ ಕಂಡುಬರುತ್ತಾಳೆ. ಅವಳು ಜನರನ್ನು ಕೊಲ್ಲುವ ಉಪಾಯಗಳನ್ನು ನಿಯೋಜಿಸುವ ರೀತಿ ಅಪೂರ್ವ. ಮಂಚಿನೋಪಾದಿಯಲ್ಲಿ ಉಪಾಯದ ಅಪಾಯಗಳನ್ನು ಲೆಕ್ಕಹಾಕಿ ಅವುಗಳ ಸಾಧಕ ಬಾಧಕಗಳನ್ನು ಪರಿಶೀಲಿಸುತ್ತಾಳೆ. ಕಡೆಗೆ, ವಿಷಲೇಪನದ ಉಡುಗೊರೆಯನ್ನು ಕಳುಹಿಸಿ ರಾಜಕುಮರಿ ಗ್ಲಾಸೆ ಮತ್ತು ಅವಳ ತಂದೆ ಕ್ರಿಯಾನನನ್ನು ಕೊಲ್ಲಲು ತೀರ್ಮಾನಿಸುತ್ತಾಳೆ. ಮೀಡಿಯಳಿಗೆ ಆ ಕಾಲಕ್ಕೆ ಬಳಕೆಯಲ್ಲಿದ್ದ, ಮೋಸದಿಂದ ಕೊಲ್ಲುವ ಎಲ್ಲ ತಂತ್ರಸಾಧನಗಳ ಪೂರ್ಣ ಪರಿಚಯವೂ ಇತ್ತು. ಅವಳ ಬುದ್ಧಿ ಚಾತುರ್ಯಕ್ಕೆ ಇಲ್ಲಿ ಒಳ್ಳೆಯ ಪುರಾವೆಗಳಿವೆ. ಜೇಸನನನ್ನು ಹಿಂದೆ ಕರೆಕಳುಹಿಸಿ, ಅವನೆದುರು ಒಂದು ಹೊಸ ನಾಟಕವನ್ನೇ ಅಭಿನಯಿಸುತ್ತಾಳೆ; ಮುಂಚೆ ಮುದುಕಿ ಆಡಿದ ಮಾತುಗಳಿಗೆ ಕ್ಷಮೆ ಬೇಡುವಂತೆ ನಟಿಸುತ್ತಾಳೆ; ತನ್ನ ಮೂರ್ಖತನ ಅರಿವಿಗೆ ಬಂದಿದೆ ಎಂದು ಪಶ್ಚಾತ್ತಾಪ ಪಟ್ಟಂತೆ ಅವನನ್ನು ನಂಬಿಸಿಬಿಡುತ್ತಾಳೆ. ಅದಕ್ಕೆ ಜೇಸನ್ ತನ್ನ ಹೊಸ ಹೆಂಡತಿಗೆ ಹೇಳಿ ಮೀಡಿಯಳ ಕೋರಿಕೆಯ ಪ್ರಕಾರ, ತನ್ನ ಮಕ್ಕಳನ್ನು ಕಾರಿಂಥಿನಲ್ಲಿಯೆ ಉಳಿಸಿಕೊಳ್ಳಲು ಏರ್ಪಾಟು ಮಾಡುತ್ತೇನೆ ಎಂದು ಮಾತು ಕೊಡುತ್ತಾನೆ. ಬಂಗಾರಕ್ಕೆ ಬಾಯಿ ಬಿಡದ ಮಾನವರಿಲ್ಲ ಎಂಬುದನ್ನು ಬಲ್ಲ ಮೀಡಿಯ, ಇದಕ್ಕಾಗಿ ರಾಜಕುಮಾರಿಯನ್ನು ಪ್ರಸನ್ನಗೊಳಿಸಲು, ಜೇಸನ್ ಬೇಡ ಬೇಡ ಎಂದರೂ ಕೇಳದೆ ಚಿನ್ನದ ಕಿರೀಟ ಮತ್ತು ಉಡುಪುಗಳನ್ನು ಮಕ್ಕಳ ಕೈಯಲ್ಲಿ ಕಳುಹಿಸುವ ವ್ಯವಸ್ಥೆ ಮಾಡುತ್ತಾಳೆ. ಯಾವ ಅನುಮಾನಕ್ಕೂ ಎಡೆಗೊಡದಂತೆ, ಮಕ್ಕಳ ಮೇಲಿನ ಗಡೀಪಾರು ಆಜ್ಞೆಯನ್ನು ಹಿಂದೆಗೆದುಕೊಳ್ಳುವಂತೆ ಮಾಡಿ ವಿಷಲೇಪಿತ ಉಡುಗೊರೆಯನ್ನು ಅವಳು ಕಳುಹಿಸುವ ಈ ಏರ್ಪಾಟು ಮಾಡುವುದನ್ನು ಕಂಡರೆ ಜೇಸನನ ಮೊದಲ ನಗರ ನಾಗರಿಕ ನಯವಂಚನೆಯೂ ನಾಚಿ ತಲೆ ತಗ್ಗಿಸಬೇಕು ಅಷ್ಟು ಮೋಹಕವಾಗಿರುತ್ತದೆ. ಈ ಸಂದರ್ಭಗಳಲ್ಲಿ ಮೀಡಿಯ ಹೇಗೆ ಮತ್ತು ಎಷ್ಟು ಭರವಸೆಯಿಂದ ಆತ್ಮವಿಶ್ವಾಸದಿಂದ ತೊಡಗಿಕೊಳ್ಳುತ್ತಾಳೆಂದರೆ, ಅವಳಿಗೆ

ಸೋಲಿನ ಭಯುವಾಗಲೀ ಸಂದೇಹವಾಗಲೀ ಕಿಂಚಿತ್ತೂ ಇಲ್ಲ ಅನ್ನಿಸುತ್ತದೆ. ನಿಶ್ಚಿತ ಗುರಿಯೆಡೆಗೆ ಸಾಗುವ ಬಾಣದಂತೆ ನಿಶಿತಮತಿಯಾಗಿ ಶೀಘ್ರಗತಿಯುಲ್ಲಿ ಎಲ್ಲವನ್ನೂ ದಕ್ಷರೀತಿಯಲ್ಲಿ ನಿರ್ವಹಿಸುತ್ತಾಳೆ. ಈಗಾಗಲೇ ಮೋಳದವರ ಮನ ಕರಗಿಸಿ ಒಲಿಸಿ ಕೊಂಡು ತನ್ನ ಆಪ್ತವರ್ಗದಲ್ಲಿ ಸೇರಿಸಿಕೊಂಡಂ ಬಿಟ್ಟಿದ್ದಾಳೆ ಸಿಕ್ಕಷ್ಟೇ ಸಮಯದಲ್ಲಿ ಇರುವಷ್ಟೇ ಸಾಧನ ಸಾಮಗ್ರಿಗಳಲ್ಲಿ ತಕ್ಕಷ್ಟು ಕಾರ್ಯಸಾಧನೆ ಮಾಡಿಕೊಳ್ಳುವ ಸಾಮರ್ಥ್ಯ ಮೀಡಿಯಾಳಿಗಿದೆ. ಆದ್ದರಿಂದ ಗ್ಲಾಶೆ ಮತ್ತು ಕ್ರಿಯೂನನನ್ನು ಮೀಡಿಯು ತಾನಂ ಎಣಿಸಿದ್ದುದಕ್ಕಿಂತ ಬೇಗನೆ ಕೊಂದಂ ಮುಗಿಸುತ್ತಾಳೆ. ವಿಷಲೇಪಿತ ಉಡುಗೊರೆಗಳನ್ನು ಉಟ್ಟು ತೊಟ್ಟು, ಅದರಿಂದ ಹುಟ್ಟಿದ ನಂಜು ನೆಕ್ಕಿ ಸುಟ್ಟು ಯಮಯಾತನೆ ಪಟ್ಟು ಸಾಯುತ್ತಿರುವ ಮಗಳನ್ನು ಮುಟ್ಟಿದ ತಂದೆಯೂ ಸಹ ಹಾಗೆಯೆ ಸತ್ತನು ಎಂಬ ದೂತನ ವರ್ಣನೆಯುನ್ನು ಕೇಳಿ ಕೇಳಿ ಹಿಗ್ಗಿ, ತೃಪ್ತಿಪಟ್ಟು ಕೊಳ್ಳುತ್ತದೆ ಮೀಡಿಯುಳ ಪೈಶಾಚಿಕ ಬಯಕೆ ಹೀಗೆ ಜನರನ್ನು ಮರುಳುಗೊಳಿಸಿ ಮೋಡಿಮಾಡಿ ಗೋರಿಗೊಳಿಸುವ ಮೀಡಿಯಳ ಕೊಲೆಯ ಕಲೆಗಾರಿಕೆಗೆ ಹೆದರಿದ ಜನ ಅವಳನ್ನು ಮಾಟಗಾತಿ ಎಂದು ಭ್ರಮಿಸಿ ಕರೆದಿದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ. ಅವಳ ಎಲ್ಲ ಯೋಜನೆಗಳೂ ಜೇಸನನನ್ನು ಸಂಕಟಕ್ಕೆ ಈಡಮಾಡುವತ್ತ ಗುರಿ ಇಟ್ಟಿದ್ದವು.

ಆದ್ದರಿಂದ ಗ್ಲಾಶೆ ಮತ್ತು ಕ್ರಿಯೂನರ ಕೊಲೆಯನಂತರ ಕೊನೆಯದಾಗಿ ಮೀಡಿಯಳ ಗಮನವೆಲ್ಲ ಮಕ್ಕಳನ್ನು ಕೊಲ್ಲುವತ್ತ ತಿರುಗಿತು. ಜೇಸನನಿಗೆ ಮರ್ಮಾಘಾತ ಮಾಡುವ ಕೊನೆಯ ಅಸ್ತ್ರಗಳನ್ನಾಗಿ ತನ್ನ ಮಕ್ಕಳನ್ನು ಬಳಸಿ ಕೊಳ್ಳುತ್ತಾಳೆ. ಅಸಹಾಯಕರಾದ ಅಪಾಯಕರಾದ ಹಸುಳೆ ಕಂದಮ್ಮಗಳನ್ನು ಕದವಿಕ್ಕಿಕೊಂಡು ಎಳೆಯ ಮರಿಹಕ್ಕಿಗಳನ್ನು ಕರಿದು ಹಾಕುವಂತೆ ತರಿದುಬಿಡುತ್ತಾಳೆ. ತನ್ನ ಗಂಡನ ಮೇಲಿನ ಸೇಡು ತನ್ನ ಮಕ್ಕಳನ್ನೇ ಕೊಲ್ಲುವಲ್ಲಿ ಮುಕ್ತಾಯಗೊಳ್ಳು ತ್ತದೆ; ಕ್ಷಮಾಶೀಲವಾದ ತಾಯ್ತನ ಹಿಂದೆ ಸರಿದು ಹಠ ಮೇಲೆ ನಿಲ್ಲುತ್ತದೆ. "ಅಯ್ಯೋ, ಅಮ್ಮಾ, ನಮ್ಮನ್ನು ಬಿಟ್ಟುಬಿಡು! ನಮ್ಮನ್ನು ಸಾಯಿಸಬೇಡ ಅಮ್ಮ!" ಎಂದು ಮಕ್ಕಳು ಚೀರಿಡುತ್ತಿರುವಾಗಲೆ ಚೂರಿ ನೆಟ್ಟು ಬಿಡುತ್ತದೆ. ಗಂಡನ ಮೇಲೆ ಹಠದ ಕಣ್ಣು ನೆಟ್ಟ ತಾಯಿಗೆ ಮಕ್ಕಳ ಆರ್ತನಾದ ಕಿವಿ ಮುಟ್ಟಲೇ ಇಲ್ಲ. ಇಲ್ಲಿ ನಮ್ಮ ಹೃದಯಗಳೇ ಸ್ತಂಭನಗೊಂಡಂತೆ ಭಾಸವಾಗುತ್ತದೆ! ಮೀಡಿಯಳ ಗಂಡನ ಮೇಲಿನ ಸಿಟ್ಟು ತನ್ನ ಮಕ್ಕಳ ಮೇಲಿನ ವಾತ್ಸಲ್ಯಭಾವವನ್ನೇ ಅಳಿಸಿಹಾಕಿ ಬಿಡುತ್ತದೆ; ಮಕ್ಕಳ ಕೊಲೆಗೆ ಆ ಕಟುಕ ತಾಯಿಕೊಡುವ ಕಾರಣ ಅಷ್ಟೇ ಸಮರ್ಥನೀಯವಾಗಿದೆ. ಮುಂದೆ ಪರದೇಶಿ ಮಕ್ಕಳು ಹಗೆಗಳ ಕೈಗೆ ಸಿಕ್ಕಿ ಅವ ಮಾನಿತರಾಗಿ ಸಾಯುವುದಕ್ಕಿಂತ ಈಗ ತಮ್ಮ ತಾಯಿಯ ಕೈಯಲ್ಲಿ ಗೌರವದಿಂದ ದಿಂದ ಸಾಯುವುದು ಲೇಸಲ್ಲವೆ? ಇದು ಅವಳ ತರ್ಕ. ಅಂತೂ ಜೇಸನ್ ಮತ್ತೆ ಬರುವಷ್ಟರಲ್ಲಿ ಎಲ್ಲವನ್ನು ಮಾಡಿ ಮುಗಿಸಿ, ಮಕ್ಕಳ ಶವಗಳನ್ನು ಸೂರ್ಯ ದೇವನು ಕಳುಹಿಸಿದ ರಥದಲ್ಲಿ ಮಲಗಿಸಿಕೊಂಡು ಮನೆಯ ಮಾಳಿಗೆಯ ಮೇಲೆ

ಕಾಯುತ್ತಾ ನಿಲ್ಲುತ್ತಾಳೆ. ಅವಳು ಕಾಯುವುದು ಏಕೆಂದರೆ ಜೇಸನನಿಗೆ ಇನ್ನೂ ಕರಳು ಕಿತ್ತು ಬರುವಂತೆ ಆಡಿ ತೋರುವುದು ಇದೆ ಚಿರದುಃಖಿಯಾಗಿ ಅಲೆಯುತ್ತಾ ಹಡಗಿನ ಹಲಗೆಯ ಸೀಳೊಂದು ತಾಗಿ, ತಲೆ ಸೀಳಾಗಿ ಹೋಳಾಗಿ ನೀನು ಸಾಯುವೆ-ಎಂದುಅವನಿಗೆ ಭವಿಷ್ಯವನ್ನು ಬೇರೆ ಹೇಳಿ ಹೋಗುತ್ತಾಳೆ. ಪುತ್ರವಿರಹದ ದುಃಖದ ಮುಂದೆ ಅವಳ ಭವಿಷ್ಯದ ಭೀಕರತೆ ಏನೇನೂ ಅಲ್ಲ ಎನಿಸುತ್ತದೆ. ದೇವರ ರಥದಲ್ಲಿ ಅದೃಶ್ಯಳಾಗಿ ಹೋದಳೆಂದು – ನಾಟಕ ಮುಗಿಯುವುದರಲ್ಲಿ ವಿಶೇಷ ಏನೇನೂ ಇದ್ದಂತೆ ಇಲ್ಲ. ಅದು ಕಾಲಕ್ಕೆ ಬದ್ಧನಾದ ಕವಿ ದೈವ, ಪವಾಡ, ಭವಿಷ್ಯ ಇತ್ಯಾದಿಗಳನ್ನು ತಂದಿಕ್ಕಿದಂತೆ ತೋರುತ್ತದೆಯಷ್ಟೆ. ಎಂದರೆ ಮೀಡಿಯಳ ಬುದ್ಧಿ ಚಾತುರ್ಯ ಎಷ್ಟು ಚುರುಕಾಗಿತ್ತೆಂದರೆ ಅವಳು ಮನಸ್ಸು ಮಾಡಿದ್ದರೆ ಇಂಥ ಪವಾಡ ಸದೃಶವಾಗಿ, ತಪ್ಪಿಸಿಕೊಳ್ಳಲೂ ಸಮರ್ಥಳಿತ್ತು. ಹೀಗಾಗಿ ಮೀಡಿಯ ನಾಟಕ ಆಧುನಿಕ ಯುಗಕ್ಕೂ ಆಶ್ಚರ್ಯಕರ ಎನಿಸುವಷ್ಟು ವಾಸ್ತವವಾದ ಸಾಮಾಜಿಕವಾದ ನೆಲಗಟ್ಟಿನ ಮೇಲೆ ನಿಂತಂತೆ ಕಾಣುತ್ತದೆ. [ನಾಟಕದ ಮುಕ್ತಾಯ ಈಗ ಇರುವಂತಲ್ಲದೆ ಮೀಡಿಯಳ ಸಾವಿನಿಂದ ಏನಾದರೂ ಕೂಡಿದ್ದರೆ, ಜೇಸನನು ಬರುವಷ್ಟರಲ್ಲಿ ಮಕ್ಕಳನ್ನು ಕೊಂದ ತಾಯಿ ಪಶ್ಚಾತ್ತಾಪದಿಂದ ತಾನೂ ಕೊಂದು ಕೊಂಡು ಸತ್ತಿದ್ದರೆ, ಈ ರುದ್ರನಾಟಕದ ಪರಿಣಾಮ ಹೇಗಿರುತ್ತಿತ್ತು ? ಹೀಗೊಂದು ಊಹೆ ಮಾಡಬಹುದು - ಅದಿರಲಿ.

ಮೀಡಿಯ ನಾಟಕದಲ್ಲಿ, ಪಟ್ಟಭದ್ರ ಹಿತಾಸಕ್ತಿಯಿಂದ ಕೂಡಿದ ನಾಗರಿಕ ಸಮಾಜದ ಒಂದು ಗಂಡಿಗೂ, ಪರದೇಶಿಯಾಗಿ ಪ್ರಾಕೃತ ಸಮಾಜದಿಂದ ಬಂದ ಒಂದು ಹೆಣ್ಣಿಗೂ ಪರಸ್ಪರ ಸ್ಪರ್ಧೆ ಏರ್ಪಡುತ್ತದೆ. ಹೆಣ್ಣಿಗೆ ಗಂಡಿನ ಮೇಲಿದ್ದ ಒಲವೆಲ್ಲ ಸೇಡಾಗಿ ಪರಿವರ್ತಿತವಾಗುತ್ತದೆ. ಹೆಣ್ಣು ಗಂಡನ್ನು ಎಷ್ಟೆಷ್ಟು ತೀವ್ರ ವಾಗಿ ಕಾಮಿಸಿದ್ದಳೊ ಅಷ್ಟಷ್ಟೇ ತೀವ್ರವಾಗಿ ದ್ವೇಷಿಸತೊಡಗುತ್ತಾಳೆ. ಅವಳ ಸಂಕಟವೇ ಸೇಡಾಗಿ ಸಣ್ಣ ಮಕ್ಕಳನ್ನು ಬಲಿ ತೆಗೆದುಕೊಳ್ಳುವುದರಲ್ಲಿ ಎಲ್ಲವೂ ಪರ್ಯವಸಾನವಾಯಿತು ; ಕಡೆಗೆ ಆದದ್ದೇನು ? ಸರ್ವನಾಶ ! ಇದು ಮೀಡಿಯ ನಾಟಕದ ಪ್ರಧಾನ ವ್ಯಂಗ್ಯ. ಗಂಡ ಹೆಂಡಿರು ಯಾರು ಯಾರಿಗೂ ಮಣಿಯು ವುದಿಲ್ಲ ; ಸೋತು ಗೆಲ್ಲುವುದಿಲ್ಲ, ತ್ಯಾಗಮೂಲವಾದ ಪ್ರೇಮದ ಭಾವಕ್ಕೆ ಇಲ್ಲಿ ಎಡೆಯೇ ಇಲ್ಲ. ಮೇಳದವರ ಅನುಭವಾತ್ಮಕವಾದ ಸದುಚಿತ್ತದ ಉಪದೇಶಕ್ಕೆ ಮೀಡಿಯ ಜೇಸನನಿಬ್ಬರೂ ಕಿವುಡರಾಗುತ್ತಾರೆ. ಹೆಣ್ಣನ್ನು ಭೋಗವಸ್ತುವೆಂದು ಪರಿಗಣಿಸಿ ಅವಳನ್ನು ಗುಲಾಮಳನ್ನಾಗಿ ನಡೆಸಿಕೊಂಡು, ದುಡಿಸಿಕೊಂಡು ಶೋಷಣೆಗೊಳಪಡಿಸಿದ ಗ್ರೀಕ್ ಪುರುಷ ಪ್ರಪಂಚಕ್ಕೆ, ಪಟಿಗೆಪಟಿ ರೇಟು ಹಾಕುವ, ಆದಿಮ ಸಮಾಜದ ಹೆಣ್ಣು ಸಡ್ಡು ಹೊಡೆದು ಸವಾಲು ಹಾಕಿ ಬಂಡೆದ್ದು ನಿಲ್ಲು ತ್ತಾಳೆ ; ಪ್ರತಿಷ್ಠೆಯೇ ಪ್ರಬಲವಾಗಿ ಮಾನವತೆ ಮಣ್ಣು ಮುಕ್ಕುತ್ತದೆ ; ಇದರ ಪರಿಣಾಮವೇ ಮೀಡಿಯ ನಾಟಕ.

ಮತ್ತು ಎರಡು ಸಂಸ್ಕೃತಿಗಳ ನೀತಿ ಮೌಲ್ಯಗಳನ್ನು ತಿಕ್ಕಿ ಹೆಕ್ಕಿ ನೋಡುವ, ಬೆಲೆಗಟ್ಟುವ ಪ್ರಕ್ರಿಯೆಯನ್ನು ನಾವಿಲ್ಲಿ ನೋಡಬಹುದು. ತನ್ನ ಸಂಖಿವನ್ನು ಕಿತ್ತುಕೊಂಡು ತನ್ನನ್ನು ಹತಾಶೆಗೊಳಿಸಿದ ಗಂಡಿನ ಕುಟುಂಬವನ್ನೇ ಛಿದ್ರಗೊಳಿಸಿ, ಅವರ ಹುಸಿ ಪವಿತ್ರತೆಯನ್ನು ಹಾಳುಮಾಡಿ, ದೌರ್ಜನ್ಯದ ಗಂಡಿನ ವಿರುದ್ಧ ಇಲ್ಲಿ ವ್ಯಕ್ತವಾಗಿರುವ ಹೆಣ್ಣಿನ ಪ್ರತಿರೋಧ ಒಂದು ಮೈಲಿಗಲ್ಲು. ದೇವರಥದಲ್ಲಿ ಮೀಡಿಯ ಅದೃಶ್ಯಳಾಗಿ, ಹೋದಳು ಎಂಬುದು ಕೇವಲ ಕಾಲ್ಪನಿಕವಾಗಿ, ದೈವ ನ್ಯಾಯವನ್ನು ಯುರಿಪೀಡಿಸ್ ಅಣಕಕ್ಕೆ ಗುರಿಪಡಿಸಿದ್ದಾನೆ ಎನಿಸುತ್ತದೆ. ಇದರಿಂದ ಯುರಿಪಿಡೀಸ್ ಕವಿ ತನ್ನ ಕಾಲಕ್ಕಿಂತ ಎಷ್ಟೋ ಯುಗಗಳ ಮುಂದಿದ್ದಾನೆ; ಆದುದರಿಂದ ಇಂದಿಗೂ ಪ್ರಸ್ತುತನಾಗಿದ್ದಾನೆ. ಮನುಷ್ಯನ ಸಕಲ ಕರ್ಮಗಳಿಗೂ ಮನುಷ್ಯನೇ ಹೊಣೆಗಾರ ಎಂಬುದನ್ನು ಸಾರ್ವಕಾಲಿಕ ಸತ್ಯವನ್ನಾಗಿಸಿದ್ದಾನೆ.

ಅಥೆನ್ಸಿನ ಪ್ರೇಕ್ಷಕ ವೃಂದಕ್ಕೆ ಮೀಡಿಯದಂಥ ಸಾಮಾಜಿಕ ನಾಟಕವನ್ನು ರಚಿಸಿ, ಕಲಿಸಿ, ಆಡಿಸಿ, ತೋರಿಸಿ. ತಮ್ಮ ಸಮಾನ ಬುದ್ಧಿವಂತರಿಲ್ಲ ಎಂದು ಬೀಗಿದ ಅವರ ಅಹಂಕಾರಕ್ಕೆ ಮರ್ಮಾಘಾತ ಮಾಡಿ, ಕೈಗೆ ಕನ್ನಡಿ ಹಿಡಿದಿದ್ದಾನೆ ಯುರಿಪೀಡಿಸ್. ಹೆಣ್ಣು ಹೊನ್ನುಗಳನ್ನು ವಶಪಡಿಸಿಕೊಂಡು ಭೋಗ ವಿಲಾಸದಲ್ಲಿ ಮೈಮರೆತ ಗಂಡಿನ ಗತಿ ಏನಾಗಬಹುದು ಎಂಬುದನ್ನು ಜೇಸನನ ಪಾತ್ರಗತಿಯಲ್ಲಿ ನೋಡಿ ತಿಳಿಯಬಹುದಾಗಿದೆ ; ಹೆಣ್ಣನ್ನು ಕೀಳಾಗಿ ಕಂಡು, ಅವಳ ಸಾಮರ್ಥ್ಯವನ್ನು ಗೌರವಿಸದೆ, ಅವಳನ್ನು ಮೋಸಗೊಳಿಸಿದರೆ ಗಂಡು ತಲುಪುವ ಅವನತಿಯನ್ನು ಜೇಸನನ ಸ್ಥಿತಿಯಿಂದ ಅರಿಯಬಹುವಾಗಿದೆ. ಜೀವನ ಪರ್ಯಂತ ಎಡೆಯೊಡೆದು ಗೋಳಿಡುವ ಜೇಸನನ ದುಃಖವನ್ನು ಕಂಡು ನಮ್ಮಲ್ಲಿ ಭಯ–ಕರುಣೆಗಳು ಮೂಡುತ್ತವೆ ; ತನ್ಮೂಲಕ ಅಹಂಕಾರ ಶೋಧನೆಗೆ ದಾರಿ ಮಾಡಿಕೊಡುತ್ತದೆ. ಬುದ್ಧಿ ಭಾವನೆಗಳು ಮತ್ತು ಪ್ರೇಮ ಪಾವಿತ್ರ್ಯಗಳು ಮುಂತಾದ ದ್ವಂದ್ವ ಪ್ರವೃತ್ತಿಗಳಲ್ಲಿ ತಿಕ್ಕಾಟ ಏರ್ಪಟ್ಟು, ಬುದ್ಧಿಯು ಭಾವನೆಯನ್ನು ಮೆಟ್ಟಿ, ಭಾವನೆಯು ವಿವೇಕವನ್ನು ನುಂಗಿಹಾಕಿದರೆ ಪರಿಣಾಮ ಏನೆಂಬುದನ್ನು ನಾವಿಲ್ಲಿ ಕಾಣಬಹುದಾಗಿದೆ. ಇದರಿಂದ ಹೆಚ್. ಡಿ. ಎಫ್. ಕಿಟ್ಟೊ ಎಂಬ ವಿಮರ್ಶಕ ಅಭಿಪ್ರಾಯ ಪಡುವಂತೆ ಮೀಡಿಯ ನಾಟಕ, ವೈಯಕ್ತಿಕ ನಾಶವನ್ನಷ್ಟೇ ಅಲ್ಲದೆ ಸಾರ್ವಜನಿಕ ನಾಶವನ್ನು ಸಹ ತಿಳಿಸುತ್ತದೆ.[1]

ಮೀಡಿಯಳ ಪಾತ್ರವನ್ನು ಮತ್ತೊಮ್ಮೆ ನಿಧಾನಕ್ಕೆ ಪರಿಶೀಲಿಸಿದರೆ ಅವಳಲ್ಲಿ ಕೇವಲ ಸ್ವಾರ್ಥಸುಖಭಾವವಲ್ಲದೆ ತ್ಯಾಗಮೂಲವಾದ ಯಾವ ಎಳೆಯೂ ಇದ್ದಂತೆ ತೋರುವುದಿಲ್ಲ. ಮೀಡಿಯಳದು, ಈಸ್ಕಿಲಸನ ಬದ್ಧ ಪ್ರಮಿತ್ಯುಸನಂತೆ ದೇವ ಲೋಕದಿಂದ ಮಾನವರಿಗಾಗಿ ಬೆಂಕಿಯನ್ನು ತಂದುಕೊಟ್ಟ ತಪ್ಪಿಗಾಗಿ ಸಮಾಧಾನ ದಿಂದ ನೋವು ತಿನ್ನುವ ಉದಾರ ಚರಿತೆಯಲ್ಲ; ಸಾಫೋಕ್ಲಿಸನ ಈಡಿಪಸನಂತೆ

ಅರಿವಿಲ್ಲದೆ ಮಾಡಿದ ತಪ್ಪಿಗೆ ತನ್ನ ಕಣ್ಣುಗಳನ್ನೇ ಕಿತ್ತುಕೊಂಡು ಯಮಯಾತನೆಯನ್ನು ಪಡುವ ಪಾಪಭೀರುವಿನ ಸಹಿಷ್ಣುತೆಯ ಗುಣವಿಲ್ಲ: ಅಂತಿಗೊನೆಯಂತೆ ರಾಜಾಜ್ಞೆಯನ್ನು ಧಿಕ್ಕರಿಸಿ ಸೋದರನ ಸಂಸ್ಕಾರ ಮಾಡಲು ಹೋಗಿ ತಾನೇ ಮಣ್ಣಾಗಿ ಹೋಗುವ ಸೋದರ ಪ್ರೇಮವಿಲ್ಲ; (ಬದಲಾಗಿ ಸೋದರನನ್ನು ಕೊಂದು ಬಂದಿದ್ದಾಳೆ) ಅಥವಾ ಎಲೆಕ್ಟ್ರಳಂತೆ ಪಾತಕಿಯಾದ ತಾಯಿ ಮತ್ತು ಅವಳ ಪ್ರಿಯಕರನನ್ನು ತಮ್ಮನಿಂದ ಕೊಲ್ಲಿಸಿ ಅರಮನೆಯನ್ನು ಉಳಿಸಿದ ಪುಣ್ಯವೆಂಬುದಿಲ್ಲ; ಮೇಲಾಗಿ ಏಜಾಕ್ಸನಲ್ಲಿದ್ದಂತೆ ಮಾನಾಭಿಮಾನದ ಛಲವಂತಿಕೆಯಿಲ್ಲ; ಬದಲಾಗಿ ತನ್ನ ಇರುಳ ಹಾಸಿಗೆಯ ಸುಖ ಇನ್ನೊಬ್ಬಳ ಪಾಲಾಯಿತೆಂದು ಅಸೂಯೆಯಿಂದ ತನ್ನ ಹಸುಳೆ ಮಕ್ಕಳನ್ನೂ ಬಿಡದೆ ಕೊಂದವಳು ಮೀಡಿಯ. ತನ್ನ ಸರ್ವಸ್ವವನ್ನು ತ್ಯಜಿಸಿ ಜೇಸನನ ಹಿಂದೆ ಓಡಿ ಬಂದೆನೆಂದು ದೊಡ್ಡದಾಗಿ ಹೇಳಿಕೊಳ್ಳುವ ಮೀಡೀಯಳ ಮಾತಿಗೆ ಈಗ ಬೆಲೆ ಎಲ್ಲಿದೆ? ಏಕೆಂದರೆ ಅವಳಿಗೆ ಜೇಸನನ ಮೇಲೆ ಯಾವತ್ತೂ ಒಲವಿಗಿಂತ ಅವನ ಅಂಗಸಂಗದಿಂದ ಬರುವ ಸುಖವೇ ಪ್ರಮುಖವಾಗಿದ್ದಂತೆ ತೋರುತ್ತದೆ. ಆ ಸುಖದಿಂದ ವಂಚಿತಳಾದಾಗ ತನ್ನ ತೋಳನ್ನು ತೊಡೆಗಳನ್ನು ಕುರಿತು ಮೋಸ ಹೋದೆನೆಂದು ಕೊರಗಿ ಹಂಬಲಿಸುತ್ತಾಳೆ. ಬಯಕೆಯ ಹೆಣ್ಣಿನ ಕಾಮಕೇಳಿಯ ವಾಸನೆ ಇಲ್ಲಿ ಬೀಸಿ ಹೊಡೆಯುತ್ತದೆ; ಮೀಡಿಯಳ ಪ್ರಣಯದ ಮಾತುಗಳಲ್ಲಿ ಕಾಮದ ಗೊತ್ತು ಮುತ್ತುತ್ತದೆ. ಬಹುಶಃ ತನ್ನ ಸುಖಕ್ಕೆ ಅಡ್ಡ ಬಂದ ಅಣ್ಣನನ್ನು ಕೊಂದು ಬಂದಿದ್ದ ಮೀಡಿಯ ಈಗ ಯಾರನ್ನು ಬೇಕಾದರೂ, ಹೇಗೆ ಬೇಕಾದರೂ ಕೊಲ್ಲಲು ಸಿದ್ಧಳಿದ್ದಳು. ದೊರೆ ಪೆಲಿಯಾಸ್ ಮೊದಲುಗೊಂಡು ತನ್ನ ಸ್ವಂತ ಮಕ್ಕಳವರೆಗೆ ಯಾರನ್ನೂ ಆಕೆ ಬಿಡಲಿಲ್ಲ. ಮೀಡಿಯ, ಹೀಗೆ ಕೊಲ್ಲುವ ಕಲೆಯಲ್ಲಿ ಸೇಡಿನ ಮಾರಿಯೋ ಎಂಬಂತೆ ಚಿತ್ರಿತಳಾಗಿದ್ದಾಳೆ. ಕಾಮವಿಕಾರಕ್ಕೊಳಗಾದ ಹೆಣ್ಣು ಎಂಥ ಪಾತಕಕ್ಕೂ ಸಿದ್ಧಳಾಗುತ್ತಾಳೆ ಎಂಬುದನ್ನು ನಾವಿಲ್ಲಿ ಕಾಣಬಹುದು. ಆದ ಅಲ್ಪ ಅನ್ಯಾಯಕ್ಕೆ ಮೀಡಿಯ ಕೊಂಡ ಬೆಲೆ ಅಪಾರ ಮಾಡಿದ ಅನರ್ಥ ಹೇಳಬಾರದು. ಗಂಡನಾದವನು ತನ್ನೊಡನೆ ಮಲಗುವುದನ್ನು ಬಿಡುವುದು ಹೆಂಗಸಿಗೆ ಸಣ್ಣ ನೋವಿನ ಸಂಗತಿಯಲ್ಲ-ಎಂಬುದು ಮೀಡಿಯಳ ವಾದ. ಉದಾತ್ತ ಗುಣಗಳಿಂದ ಕೂಡಿದ ವ್ಯಕ್ತಿಯೊಬ್ಬ ತನ್ನಲ್ಲಿದ್ದ ಸಣ್ಣ ದೌರ್ಬಲ್ಯದಿಂದ ಪತನ ಹೊಂದುತ್ತಾನೆ-ಎಂಬ ರುದ್ರನಾಟಕದ ಸೂತ್ರ ಮೀಡಿಯಳ ಪಾತ್ರದಲ್ಲಿ ವಿಲೋಮಗೊಂಡಂತಿದೆ. ಇದರ ಫಲಶ್ರುತಿ ದುರಂತವೇ? ಅಲ್ಲವಾದರೆ ಮತ್ತೇನು? ಎಂದು ಕೇಳುವಂತಾಗಿದೆ.

ಮೀಡಿಯ ಜೇಸನನ ಹಿಂದೆ ಹೇಳದೆ ಕೇಳದೆ ಓಡಿಬಂದುದಕ್ಕೆ ಸ್ವಲ್ಪ ಬೆಲೆ ತೆರಬೇಡವೆ? ಆದರೆ ಅದನ್ನು ಅವಳು ಒಪ್ಪಲು ಸಿದ್ಧಳಿಲ್ಲ. ಮೀಡಿಯ ತೀವ್ರವಾಗಿ ಪ್ರೀತಿಸಿ ತೀವ್ರವಾಗಿ ದ್ವೇಷಿಸಿದಳು– ಎಂದರೆ, ಅವಳ ಪ್ರೀತಿಯ ತೀವ್ರತೆ

ಗಿಂತ ದ್ವೇಷದ ದಳ್ಳುರಿಯೆ ಹೆಚ್ಚಾಯಿತಲ್ಲ! ಪ್ರೀತಿಗಿಂತ ದ್ವೇಷ, ಪ್ರೇಮಕ್ಕಿಂತ ಕಾಮ ತಾನೇ ತಾನಾಗಿ ಮೆರೆಯುತ್ತದೆ. ಜೇಸನನಿಂದ ವಂಚಿತಳಾದ ಆಕೆ ಕಾಮಾಂಧೆಯಾಗಿ ಹೋದಳು. ಅವಳ ಸಕಲ ಪಾಪಕೃತ್ಯಗಳಿಗೂ ಇದೇ ಮೂಲ ಬೀಜ. ಇದನ್ನು ಆವಳಿಂದ ಹತ್ತಿಕ್ಕಲಾಗಲಿಲ್ಲ. ಹೆಣ್ಣಿನ ಉಳಿದೆಲ್ಲ ಮರ್ಯಾದೆ, ಮಾರ್ದವತೆಗಳನ್ನು ಕಳೆದುಕೊಂಡು ಭಯಂಕರ ರಕ್ಕಸಿಯಾಗಿ ಹೋದಳು. ಕಾಮವು ಈಡೇರದಾಗ ಕ್ರೋಧವೂ, ಕ್ರೋಧದಿಂದ ಅನರ್ಥವೂ ಸಂಭವಿಸುತ್ತವೆ, ನಿಜ. ಆದರೆ ಅಂಥ ಅನರ್ಥ ಪರಂಪರೆಗೆ ತಾನೇ ಕಾರಣವಾಗಿದ್ದು ಕೊನೆಗೂ ಆಕೆ ಪಾಶ್ಚಾತ್ತಾಪ ಪಡುವುದೇ ಇಲ್ಲ. ಮೀಡಿಯ ಯಾವತ್ತೂ ಆತ್ಮನಿಂದೆಯಿಂದ, ಪಾಪಪ್ರಜ್ಞೆಯಿಂದ ಅಳಲೇ ಇಲ್ಲ. ಆದ್ದರಿಂದ ಮೀಡಿಯಾಳ ಪಾತ್ರ ನಮಗೆ ದುರಂತ ಅನ್ನಿಸುವುದೇ ಇಲ್ಲ. ಮಾನವ ಸಹಜವಾದ ಪಶ್ಚಾತ್ತಾಪವನ್ನಾಗಲೀ, ನೋವನ್ನಾಗಲೀ, ಸಾವನ್ನಾಗಲೀ ಅನುಭವಿಸದೆ ಆಕಾಶಗಾಮಿನಿಯಾಗಿ ಅದೃಶ್ಯಳಾಗಿ ಹೋಗುವ ಮೀಡಿಯಾಳನ್ನು ಕಂಡಾಗ ನಾವು ಕಿತ್ತುತಿನ್ನುವ ಭಾವನೆಗೆ ಒಳಗಾಗುವುದೇ ಇಲ್ಲ: ಬದಲಾಗಿ ಸಮಾಧಾನಕರವಾಗಿಯೆ ಉಳಿಯುತ್ತೇವೆ. ತನ್ನ ಕರುಳ ಕುಡಿಗಳನ್ನು ಇರಿದು ಕೊಂದ ಆ ತಾಯಿಯ ಕಣ್ಣೀರಿನ ತೊಟ್ಟು ಮಕ್ಕಳ ಶವದಮೇಲೆ ಬೀಳಲೇ ಇಲ್ಲ. ಮುಂದೆ ತಾನು ಏಜಿಯಸನ ಆಶ್ರಯದಲ್ಲಿ ಅಥೆನ್ಸಿನಲ್ಲಿ ವಾಸಿಸುತ್ತೇನೆ– ಎಂದು ಜಂಭದಿಂದ ಹೇಳಿ ಹೋಗುತ್ತಾಳೆ. ಮತ್ಯಾವ ಪುರುಷಾರ್ಥಕ್ಕೆ ಅಲ್ಲಿ ಹೋಗಿ ಕೂಳಗೇಡಿಗೆ ಒಡಲ ಪೊರೆಯುತ್ತಾಳೋ ? ಕಲ್ಪನೆಗೂ ಸಾಧ್ಯವಿಲ್ಲ. ಯುರಿಪಿಡೀಸ್ ಕವಿ ಇವಳ ಕಥೆಯನ್ನು ಹೇಳಿ ತೋರಿಸಿ ಸಾಧಿಸಿದ್ದಾದರೂ ಏನು ? ಇರಲಿ.

ಇತ್ತ ಜೇಸನನು ಚಿರದುಃಖಿಯಾಗಿ ಉಳಿಯುವುದರಿಂದ ನಮ್ಮ ಸಹಾನುಭೂತಿಗೆ ಹೆಚ್ಚು ಪಾತ್ರನಾಗಿ ಬಿಡುತ್ತಾನೆ. ಅವನು ಮಾಡಿದ ಅಲ್ಪ ಅನ್ಯಾಯಕ್ಕೆ ತೆತ್ತಬೆಲೆ ಅಪಾರ ಎನಿಸುತ್ತದೆ, ನಿಜ. ಆದರೆ ಯುರಿಪಿಡೀಸ್ ಈ ಎರಡು ಪಾತ್ರಗಳನ್ನು ಮೀರಿ ಅವುಗಳನ್ನು ನಿಮಿತ್ತಮಾಡಿಕೊಂಡು ಬೇರೊಂದು ಜೀವನತತ್ತ್ವವನ್ನು ಹೇಳ ಹೊರಟಿದ್ದಾನೆ ಎಂಬುದನ್ನು ಮರೆಯಬಾರದು.

ಬೌದ್ಧಿಕತೆಯಲ್ಲಿ ಅತ್ಯುನ್ನತ ಮಟ್ಟಕ್ಕೇರಿ, ಭೋಗವಿಲಾಸದಲ್ಲಿ ಮೈಮರೆತ ಗ್ರೀಕರು ತಮ್ಮ ಸಮಾನರಿಲ್ಲ ಎಂದು ಬೀಗಿದರು. ಅವರ ಅತಿಬೌದ್ಧಿಕತೆಯ ವ್ಯವಹಾರ ಚತುರತೆಯ ದುರಂತ ಮೀಡಿಯ ನಾಟಕದ್ದು. ಅವರ ನಾಗರಿಕ ಸಮಾಜವೆ ದುರಂತದತ್ತ ಮುಖಮಾಡಿತು. ಸಂಪತ್ಸಮೃದ್ಧಿಯಲ್ಲಿ ನಗರನಾಗರಿಕತೆಯಲ್ಲಿ ಅತ್ಯುನ್ನತಿಗೇರಿದ ಮೈಮರೆತ ಗ್ರೀಕರು ಯಾವ ರೀತಿಯ ದಂಡನೆ ತೆರಬೇಕಾದೀತು ಎಂಬುದನ್ನು ಯುರಿಪಿಡೀಸ್ ತನ್ನ ನಾಟಕದಲ್ಲಿ ಬೊಟ್ಟು ಮಾಡುತ್ತಿದ್ದಾನೆ. ದಾಂಪತ್ಯ ಜೀವನವು ವಿಚ್ಛಿನ್ನಗೊಂಡು, ಕುಟುಂಬ ಜೀವನದಲ್ಲಿ ಬಿರುಕುಬಿಟ್ಟು ಸುಖೀಸಮಾಜ

ಸರ್ವನಾಶದತ್ತ ಸಾಗುತ್ತಿದೆ–ಎಂಬ ಸ್ಪಷ್ಟ ಚಿತ್ರವನ್ನು ಆತ ಮೂಡಿಸುತ್ತಿದ್ದಾನೆ. ಮೀಡಿಯಂ ಜೇಸನ್ನರ ಭಿತ್ತಿ ಚಿತ್ರದಲ್ಲಿ ಸಮಕಾಲೀನ ಗ್ರೀಕರ ಅಹಂಕಾರದ ಭೀಕರ ಪತನ ದುರಂತವನ್ನು ಕಣ್ಣಿಗೆ ಕಟ್ಟುತ್ತಿದ್ದಾನೆ. ತನ್ಮೂಲಕ ಆಕಾಲದ ಗ್ರೀಕರ ಸಾಮಾಜಿಕ ಜೀವನಕ್ಕೊಂದು ಬೆಳಕಿಂಡಿಯನ್ನು ಏರ್ಪಡಿಸಿದ್ದಾನೆ. ಅಥೆನ್ಸಿನ ಪ್ರೇಕ್ಷಕ ವೃಂದಕ್ಕೆ ಅವರದೇ ಆದ ಜೀವನವೃತ್ತವನ್ನು ಕಲೆಯ ಮೂಲಕ ರಂಗದ ಮೇಲೆ ತಂದು ಅನಾವರಣ ಮಾಡಿದ್ದಾನೆ. ಆದ್ದರಿಂದ ಅವರಲ್ಲಿ ಭಯ ಕರುಣೆಗಳು ಮೂಡಿ ಅಂತರಂಗದ ಶೋಧನೆಗೆ ಸಹಾಯಮಾಡಿದ್ದಾನೆ. ಹೀಗೆ ನೋಡಿದರೆ ಯುರಿಪಿಡೀಸ್ ಕವಿಯ ಈ ಆಶಯ ಹೆಚ್ಚು ಅರ್ಥಪೂರ್ಣವಾಗಿದೆಯೆನಿಸುತ್ತದೆ. ತತ್ತ್ವಜ್ಞಾನಿ ಸಾಕ್ರಟೀಸನ ಕಾಲಕ್ಕೆ ಗ್ರೀಕ್‌ನಲ್ಲಿ ಅಪೂರ್ವ ವಿಚಾರವಂತಿಕೆ ಹುಟ್ಟಿ ಬೆಳೆಯಿತೇನೊ ನಿಜ. ಆದರೆ ಅದರ ಬೆನ್ನಿನಲ್ಲಿಯೆ ಕೂದಲು ಸೀಳುವ ಅತಿ ಜಾಣ್ಮೆಯೂ ಬೆಳೆದು ದುರುಪಯೋಗವೂ ಆಯಿತು. ಅದರ ಕೆಟ್ಟ ಪರಿಣಾಮದ ಸ್ಪಷ್ಟನಿದರ್ಶನ ಮೀಡಿಯ ನಾಟಕ. ಅತ್ತ ಗಂಡಿನ ನಯವಂಚನೆ ಮರ್ಯಾದೆ ಮೀರಿ ನಡೆದರೆ, ಇತ್ತ ಅವಮಾನಗೊಂಡ ಹೆಣ್ಣಿನ ಕ್ರೌರ್ಯ ರಕ್ತಬಲಿ ಬೇಡುತ್ತಾ ನಡೆಯಿತು. ಅವಳ ಸೇಡು ಯಾವ ಪರಮಾವಧಿ ಭಯಂಕರ ಸ್ವರೂಪ ತಾಳಿತು ಎಂದರೆ ಗಂಡಿನ ವಂಶವನ್ನೇ ನಿರ್ವಂಶ ಮಾಡಲು ಹೊರಟಿತು. ಜೇಸನನ ನವ ವಧುವನ್ನು ಆತನ ಎರಡು ಗಂಡುಮಕ್ಕಳನ್ನೂ ಮೀಡಿಯ ಕೊಂದು ಮುಗಿಸಿದಳು. ಒಲಿದರೆ ನಾರಿ ಮುನಿದರೆ ಮಾರಿ ಎಂಬುದನ್ನು ಪ್ರತ್ಯಕ್ಷ ಮಾಡಿ ತೋರಿಸಿದಳು. ಇಲ್ಲಿ ಹೆಣ್ಣಿಗೆ ಗಂಡಿನ ವ್ಯವಹಾರ ಬುದ್ಧಿಯನ್ನು ಗ್ರಹಿಸುವ ವಿವೇಕವಿಲ್ಲ ; ಗಂಡಿಗೆ ಹೆಣ್ಣಿನ ಭಾವನೆಗಳನ್ನು ಮನ್ನಿಸುವ ದೊಡ್ಡತನವಿಲ್ಲ. ಹೀಗೆ ಪರಸ್ಪರ ಹೊಂದಿಕೊಳ್ಳುವ ಗುಣವಿಲ್ಲದೆ ನಾನ್ಹೆಚ್ಚು ತಾನ್ಹೆಚ್ಚು ಎಂದು ಬೀಗಿ ತಮ್ಮ ದುರಂತವನ್ನು ತಾವೇ ತಂದುಕೊಂಡರು.

ಅಪ್ಪಅಮ್ಮನ ಜಗಳದಲ್ಲಿ ಕೂಸು ಬಡವಾಗಲಿಲ್ಲ, ಇಲ್ಲಿ ಸರ್ವನಾಶವೇ ಆಯಿತು. ಗಂಡು ಹೆಣ್ಣು ಕೂಡಿ ಸಂತಾನವನ್ನು ಪಡೆದು ಜೀವಕ್ಕೆ ಜೀವ ತೆತ್ತು ಆ ಸಂತಾನವನ್ನು ಸಂರಕ್ಷಿಸಿ ಬೆಳೆಸುವುದು ನಿಸರ್ಗನಿಯಮ. ಸಂತಾನವನ್ನು ಹೆತ್ತು ಹೊತ್ತು ಆಡಿಸುವ ಕೈ ಹೀಗೆ ಕತ್ತಿ ಹಿಡಿದರೆ ಮಕ್ಕಳಿಗೆ ಗತಿ ಎಲ್ಲಿ ? ಗಂಡಿನ ವೀರ್ಯವಂತಿಕೆ ನಶಿಸಿ ಹೋಗಿ, ಹೆಣ್ಣಿನ ಕ್ಷೇತ್ರ ಬಂಜೆಯಾಗಿ ಕಾಲಹರಣ ಮಾಡಿ ಬಾಳು ಮುರಿದರೆ ಸೃಷ್ಟಿಕ್ರಮ ಮುಂದುವರಿಯುವುದಾದರೂ ಹೇಗೆ ? ಇಂಥ ಕಳವಳಕಾರಕ ಚಿಂತನೆಯನ್ನು ಮೀಡಿಯ ನಾಟಕ ಮೂಡಿಸುತ್ತದೆ. ಇದೇ ಇಲ್ಲಿಯ ದೊಡ್ಡ ದುರಂತವೂ ಕೂಡ. ಆಧುನಿಕರ ದೃಷ್ಟಿಯಲ್ಲಿ ಅನೈಸರ್ಗಿಕವಾದ ಇಂಥ ವಿಚಾರದಿಂದ ಮೀಡಿಯ ನಾಟಕ ಸಂಪೂರ್ಣ ಪ್ರತಿಗಾಮಿ ಎನಿಸಿಬಿಡುತ್ತದೆ. ಆದರೆ ಕವಿಯ ಆಶಯ ಇದಲ್ಲವೇ ಅಲ್ಲ. ಆದ್ದರಿಂದ ಮೀಡಿಯಳ ಪಾತ್ರವನ್ನು

“ಭಾವಾತಿರೇಕದ ಹೆಣ್ಣೊಬ್ಬಳ ಉತ್ಕಟ ಪ್ರೇಮವು ತೀವ್ರ ದ್ವೇಷಕ್ಕೆ ತಿರುಗುವ ಕಥೆ”[2] ಎಂದು ಸರಳೀಕರಿಸಿ ಬಿಟ್ಟರೆ ಸಾಲದೆನಿಸುತ್ತದೆ. ಅದರ ಆಚೆಗೆ ಚಾಚಿರುವ ಇದರ ದುರಂತ ವಸ್ತುವನ್ನು ಗುರ್ತಿಸಿದಾಗ ಅರ್ಥಪೂರ್ಣವೆನಿಸುತ್ತದೆ. ಮೀಡಿಯು ಮಗಳಾಗಿ, ಸೋದರಿಯಾಗಿ, ಪ್ರಣಯಿನಿಯಾಗಿ, ಹೆಂಡತಿಯಾಗಿ, ಸ್ನೇಹಿತೆಯಾಗಿ, ಪ್ರಜೆಯಾಗಿ, ಸವತಿಯಾಗಿ ಯಾವ ಪಾತ್ರದಲ್ಲಿ ಎದ್ದು ಕಾಣುತ್ತಾಳೆ? ಯಾವ ಸ್ತರದಲ್ಲಿ ಅವಳು ಹೆಚ್ಚು ಶೋಭಿಸುತ್ತಾಳೆ? ಎಂದು ಯೋಚಿಸುವಾಗ ಯಾವುದೂ ಮುಖ್ಯವೆನಿಸುವುದಿಲ್ಲ. ಅವಳಲ್ಲಿ ಹೊತ್ತಿ ಉರಿಯುವ ದ್ವೇಷಜ್ವಾಲೆಯಲ್ಲಿ ಅವಳೇ ಹೇಳಿಕೊಳ್ಳುವ ಪ್ರಣಯಿನಿಯ ಚಿತ್ರವೂ ಮಸುಕಾಗಿ ಬಿಡುತ್ತದೆ. ಹೀಗೆ ಯುರಿಪಿಡೀಸ್ ಕವಿ ಎರಡು ವ್ಯಕ್ತಿಗಳ ನಡುವಿನ ವಿರಸವನ್ನು ಹೇಳಹೇಳುತ್ತ, ಎರಡು ಸಂಸ್ಕೃತಿಗಳ ನಡುವಿನ ಸಂಘರ್ಷವನ್ನು ಮುಖಾಮುಖಿ ಮಾಡುತ್ತ,[3] ಎರಡು ಜನಾಂಗಗಳ ನಡುವಿನ ನೀತಿ ಮೌಲ್ಯಗಳನ್ನು ತಿಕ್ಕಿನೋಡುತ್ತ ಒರೆಗೆ ಹಚ್ಚಿ ಬೆಲೆ ಗಟ್ಟಲು ಹೊರಟಿದ್ದಾನೆ. ಆದುದರಿಂದ ನಾನು ಈ ಮೊದಲೆ ಶಂಕಿಸಿರುವಂತೆ, ಪ್ರಶ್ನಿಸಿರುವಂತೆ, ಯುರಿಪಿಡೀಸ್ ಮಹಾಕವಿಗೆ ಮೀಡಿಯಳಂಥ ಹೆಣ್ಣು ರಕ್ಕಸಿಯ ಕಥೆಯನ್ನಾಗಲಿ ಜೇಸನ್ನನಂಥ ನಯವಂಚಕನ ಕಥೆಯನ್ನಾಗಲಿ ಹೇಳುವುದು ಮುಖ್ಯವಲ್ಲ. ಆದರೆ ಇವರಿಬ್ಬರ ಕಥೆಯ ನಿಮಿತ್ತದಲ್ಲಿ, ನಾಟಕದ ಚೌಕಟ್ಟಿನ ಆಚೆಗೂ ದೃಷ್ಟಿಚಾಚಿ ಅಂದಿನ ಗ್ರೀಕರ ಕೌಟುಂಬಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ಚಿತ್ರಿಸುವುದೇ ಆಗಿದೆ. ಸಂಸಾರಜೀವನದಲ್ಲಿ ಗಂಡು ಹೆಣ್ಣಿನ ಮಧ್ಯೆ ಸಹನೆ, ತ್ಯಾಗ ಮುಂತಾದ ಗುಣಗಳಿಲ್ಲವಾದರೆ, ಎರಡು ಸಂಸ್ಕೃತಿಗಳ ನಡುವೆ ಪರಸ್ಪರ ಕೊಡುಕೊಳುಗೆಯ ಉದಾರಗುಣ ಬೆಳೆಯದಿದ್ದರೆ, ಎಂಥ ದುರಂತ ಒದಗಬಹುದು ಎಂಬ ಸಾರ್ವಕಾಲಿಕ ಸತ್ಯವನ್ನು ಸ್ಪಷ್ಟಪಡಿಸುವುದೇ ಆಗಿದೆ. ಮತ್ತು ಮಾನವಕುಲ ಇಂಥ ಆದರ್ಶಗಳನ್ನು ಮರೆತು ಅಹಂಕರಿಸಿದರೆ ಹೇಗೆ ಸರ್ವನಾಶದ ಅಂಚಿಗೆ ತಲುಪುತ್ತದೆ ಎಂಬುದನ್ನೂ ಹೇಳಲಾಗಿದೆ. ಅಣ್ವಸ್ತ್ರಗಳ ಪೈಪೋಟಿಯಿಂದ ತತ್ತರಿಸಿಹೋಗುತ್ತಿರುವ ಇಂದಿನ ಜಗತ್ತಿಗೆ ಯುರಿಪಿಡೀಸ್ ಈ ದೃಷ್ಟಿಯಿಂದ ಪ್ರಸ್ತುತವಾಗುತ್ತಾನೆ.

1 ನೋಡಿ-ಕೆ.ಎಸ್.ಎನ್. ಅವರ ಮೀಡಿಯ ನಾಟಕದ ಕನ್ನಡಾನುವಾದ, ಸಾಹಿತ್ಯ ಅಕಾಡೆಮಿ, ನವದೆಹಲಿ.

2 ನೋಡಿ-ಕೆ. ಮರುಳಸಿದ್ದಪ್ಪನವರ ಎಲೆಕ್ಟ್ರ-ಮೀಡಿಯ ಪುಸ್ತಕದ ಪೀಠಿಕೆ.

3 23–3–89ರಂದು ದೂರದರ್ಶನದಲ್ಲಿ ನಡೆಸಿದ್ದ ಕಿ. ರಂ. ನಾಗರಾಜರ ಚರ್ಚೆಯ ಆಧಾರದಿಂದ.

ವಿಜ್ಞಾನೇಶ್ವರನ ಚರಿತ್ರೆಯ ಮೇಲೆ ಹೊಸ ಬೆಳಕು

ಡಾ. ಜಿ. ಎಂ. ನಾಗಯ್ಯ

ಭಾರತೀಯ ಸಾಹಿತ್ಯಕ್ಕೆ ಕರ್ನಾಟಕ ತನ್ನದೇ ಆದ ಕೊಡುಗೆಗಳನ್ನು ನೀಡುತ್ತಾ ಬಂದಿದೆ. ಅನೇಕ ಖ್ಯಾತ ಕವಿಗಳು ದಾರ್ಶನಿಕರು, ಪಂಡಿತರು, ವೈಯ್ಯಾಕರಣಿಗಳು ಈ ನೆಲದಲ್ಲಿ ಆಗಿ ಹೋಗಿದ್ದಾರೆ. ಅವರಲ್ಲಿ ಧರ್ಮಶಾಸ್ತ್ರ ಸಾಹಿತ್ಯಕ್ಕೆ ಕೊಡುಗೆ ನೀಡಿದ ವಿಜ್ಞಾನೇಶ್ವರನೂ ಒಬ್ಬ. ಈತನು ಬರೆದ 'ಮಿತಾಕ್ಷರ'ವೆಂಬ ಧರ್ಮಶಾಸ್ತ್ರ ಗ್ರಂಥವು ಸಮಗ್ರ ಭಾರತದಲ್ಲಿ ಅಂದಿನಿಂದ ಇಂದಿನವರೆಗೂ ಪ್ರಸಿದ್ಧಿಯನ್ನು ಪಡೆದಿದೆ. ಈಗಲೂ ಭಾರತದ ಅನೇಕ ಶ್ರೇಷ್ಠ ನ್ಯಾಯಾಲಯಗಳಲ್ಲಿ ದತ್ತು ಸ್ವೀಕಾರ, ದಾಯಾದಿ ವಿಭಾಗ ಇತ್ಯಾದಿ ಹಿಂದೂ ಧರ್ಮೀಯರಿಗೆ ಸಂಬಂಧಿಸಿದ ಕೆಲವು ವಿಷಯಗಳನ್ನು ನಿರ್ಣಯಿಸುವಲ್ಲಿ 'ಮಿತಾಕ್ಷರ'ವನ್ನು ಪ್ರಮುಖ ಆಧಾರ ಗ್ರಂಥವಾಗಿ ಬಳಸಲಾಗುತ್ತಿದೆ. ಇದು ಯಾಜ್ಞವಲ್ಕ್ಯಸ್ಮೃತಿಗೆ ವ್ಯಾಖ್ಯಾನವಾಗಿದೆಯೆಂದು ಸ್ವತಃ ವಿಜ್ಞಾನೇಶ್ವರನೇ ಕೃತಿಯಲ್ಲಿ ಹೇಳಿಕೊಂಡಿದ್ದಾನೆ. 'ಮಿತಾಕ್ಷರ' ಗ್ರಂಥದ ಮಹತ್ವವನ್ನು ವಿವರಿಸುತ್ತಾ ಪಿ. ಬಿ. ಕಾಣೆಯವರು "ಧರ್ಮಶಾಸ್ತ್ರ ಸಾಹಿತ್ಯದಲ್ಲಿ ಮಿತಾಕ್ಷರವು ಅಪೂರ್ವವಾದ ಸ್ಥಾನವನ್ನು ಪಡೆದಿದೆ. ಪತಂಜಲಿಯ 'ಮಹಾಭಾಷ್ಯ'ವು ವ್ಯಾಕರಣದಲ್ಲಿ ಅಥವಾ ಮಮ್ಮಟನ 'ಕಾವ್ಯಪ್ರಕಾಶ'ವು ಕಾವ್ಯಮೀಮಾಂಸೆಯಲ್ಲಿ ಸ್ಥಾನ ಪಡೆದ ರೀತಿಯಲ್ಲಿಯೇ ಧರ್ಮಶಾಸ್ತ್ರ ಸಾಹಿತ್ಯದಲ್ಲಿ 'ಮಿತಾಕ್ಷರ'ವು ಸ್ಥಾನವನ್ನು ಹೊಂದಿದೆ. ಇದು 2000 ವರ್ಷಗಳಿಂದ ಬಂದ ಧರ್ಮಶಾಸ್ತ್ರಗಳ ತಿರುಳೂ ಆಗಿದೆ; ಅಲ್ಲದೆ ಮುಂಬರುವ ಕೃತಿಗಳಿಗೆ ಆಧಾರ ಗ್ರಂಥವೂ ಆಗಿದೆ" ಎಂದು ತಮ್ಮ ಗ್ರಂಥವಾದ 'ಧರ್ಮಶಾಸ್ತ್ರಗಳ ಇತಿಹಾಸ' (ಸಂಪುಟ 1 ಪುಟ 287)ದಲ್ಲಿ ಹೇಳಿದ್ದಾರೆ. ಇದು ಮಿತಾಕ್ಷರದ ಶ್ರೇಷ್ಠತೆಯನ್ನು ಎತ್ತಿ ತೋರಿಸುತ್ತದೆ. ವಿಜ್ಞಾನೇಶ್ವರನಲ್ಲದೆ ಶೂಲಪಾಣಿ, ವಿಶ್ವರೂಪ, ಅಪರಾರ್ಕರೂ ಯಾಜ್ಞವಲ್ಕ್ಯಸ್ಮೃತಿಗೆ ಟೀಕಾವ್ಯಾಖ್ಯಾನಗಳನ್ನು ರಚಿಸಿದ್ದಾರೆ. ಆದರೆ ಇವುಗಳಲ್ಲಿ ವಿಜ್ಞಾನೇಶ್ವರನ ಮಿತಾಕ್ಷರವೇ ಹೆಚ್ಚು ಪ್ರಸಿದ್ಧಿ ಪಡೆದು ಪ್ರಮಾಣಭೂತ ಗ್ರಂಥವೆನಿಸಿದೆ. ಇದರ ಖ್ಯಾತಿ ಕೇವಲ ದಕ್ಷಿಣ ಭಾರತಕ್ಕೆ ಮಾತ್ರ ಮೀಸಲಾಗಿಲ್ಲ. ಉತ್ತರ ಭಾರತದಲ್ಲೂ ಇದು ಹೆಚ್ಚು ಜನಪ್ರಿಯವಾಗಿದೆ. ಇಂಥ ಶ್ರೇಷ್ಠ ಕೃತಿಯ ಕರ್ತೃವಿನ ಜೀವನದ ಬಗ್ಗೆ ಕುರುಹುಗಳನ್ನು ಹುಡುಕಲು ಹೊರಟ ಅನೇಕ ವಿದ್ವಾಂಸರು ಬಸವಕಲ್ಯಾಣಕ್ಕೆ ಹೋಗಿ ಅಲ್ಲಿ ಏನೂ ಕಾಣದೆ ನಿರಾಶರಾಗಿ ಮರಳಿದ್ದಾರೆ. ಹೀಗಾಗಿ ವಿಜ್ಞಾನೇಶ್ವರನ ಜನ್ಮಸ್ಥಳ, ನಿಜನಾಮ,

ಹೆಂಡತಿ ಪುತ್ರರ ಮೊದಲಾದ ವಿಷಯ ಕುರಿತು ವಿವರಿಸುವುದೇ ಈ ಲೇಖನದ ಉದ್ದೇಶವಾಗಿದೆ.

'ಮಿತಾಕ್ಷರ' ಗ್ರಂಥದಲ್ಲಿ ವಿಜ್ಞಾನೇಶ್ವರನು ತನ್ನನ್ನು 'ವಿಜ್ಞಾನೇಶ್ವರ ಭಟ್ಟಾರಕ' 'ವಿಜ್ಞಾನೇಶ್ವರ-ಯೋಗಿನ್' 'ವಿಜ್ಞಾನೇಶ್ವರ ಪಂಡಿತ' ಎಂದು ಕರೆದು ಕೊಂಡಿದ್ದಾನೆ. ವಿಜ್ಞಾನೇಶ್ವರ ಯೋಗಿನ್ ಎಂದು ಹೇಳಿಕೊಂಡಿರುವುದರಿಂದ ಅನೇಕರು ಈತನನ್ನು ಸನ್ಯಾಸಿಯೆಂದೇ ತಪ್ಪಾಗಿ ಗ್ರಹಿಸಿದ್ದಾರೆ ಅಲ್ಲದೆ ಇವನು ಶ್ರೀ ಭಾರದ್ವಾಜ ಗೋತ್ರದ ಪದ್ಮನಾಭಭಟ್ಟೋಪಾಧ್ಯಾಯರ ಮಗನೆಂದು ಹೇಳಿ ಕೊಂಡಿದ್ದಾನೆ. ಇಲ್ಲಿಯೂ ಅನೇಕ ವಿದ್ವಾಂಸರು ಭಾರದ್ವಾಜ ಗೋತ್ರದ ಈ ಪದ್ಮನಾಭ ಭಟ್ಟೋಪಾಧ್ಯಾಯರನ್ನೇ ವಿಜ್ಞಾನೇಶ್ವರನ ನಿಜವಾದ ತಂದೆಯೆಂದು ಪರಿಗಣಿಸಿದ್ದಾರೆ. ಈ ಪದ್ಮನಾಭಭಟ್ಟೋಪಾಧ್ಯಾಯರು ವಿಜ್ಞಾನೇಶ್ವರನ ಗುರು ಗಳಾಗಿದ್ದಾರೆ. ಈ ಗುರುವಿನ ಶಿಷ್ಯನೇ ವಿಜ್ಞಾನೇಶ್ವರ.

ಇವನು ಮಿತಾಕ್ಷರ ಗ್ರಂಥದಲ್ಲಿ

"ನಾಸೀದಸ್ತಿ ಭವಿಷ್ಯತಿ ಕ್ಷಿತಿತಲೇ ಕಲ್ಯಾಣ ಕಲ್ಪಂಪುರಂ. ನೋದ್ರಷ್ಟಃ ಶ್ರುತ ಏವ ವಾಕ್ಷಿತಿಪತಿಃ ಶ್ರೀ ವಿಕ್ರಮಾರ್ಕೋಪಮಃ" ಎಂದು ಹೇಳಿ ದ್ದಾನೆ. ಅಂದರೆ ಭೂಮಿಯ ಮೇಲೆ ಕಲ್ಯಾಣದಂಥ ಮತ್ತೊಂದು ನಗರ ಈ ಹಿಂದೆ ಇರಲಿಲ್ಲ ಇಂದೂ ಇಲ್ಲ ಮುಂದೆಯೂ ಇರುವುದಿಲ್ಲ ವಿಕ್ರಮಾದಿತ್ಯಸಂಥ ಚಕ್ರವರ್ತಿ ಬೇರೆ ಯಾರೂ ಇಲ್ಲ. ಹೀಗೆ ವಿಕ್ರಮಾದಿತ್ಯನನ್ನೂ ಕಲ್ಯಾಣ ನಗರ ವನ್ನೂ ಅನೇಕ ಸಲ ಹೊಗಳಿದ್ದಾನೆ. ಸ್ತುತಿಸಿದ್ದಾನೆ. ಇಲ್ಲಿಯ ವಿಕ್ರಮಾದಿತ್ಯನು ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನಾಗಿದ್ದಾನೆ. ಇವನ ರಾಜಧಾನಿ ಕಲ್ಯಾಣ ನಗರವಾಗಿದ್ದು ಅದು ಈಗಿನ ಬಸವಕಲ್ಯಾಣವಾಗಿದೆ. ಇದರಿಂದ ವಿಜ್ಞಾನೇಶ್ವರನು ವಿಕ್ರಮಾದಿತ್ಯನ ಕಾಲದಲ್ಲಿ (ಕ್ರಿ.ಶ. 1076–1126) ಅವನ ಆಸ್ಥಾನ ಪಂಡಿತನಾಗಿದ್ದುದು ಸ್ಪಷ್ಟವಾಗುತ್ತದೆ. ಇಷ್ಟು ಅವನ ಬಗ್ಗೆ 'ಮಿತಾಕ್ಷರ' ಗ್ರಂಥದಿಂದ ತಿಳಿಯುಬರುತ್ತದೆ.

ಆದರೆ ಈತನ ಬಗ್ಗೆ ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಮಂತರ್ಗಾರಿನ ಕ್ರಿ ಶ. 1123 ಜನೇವರಿ 6ರ ಶಾಸನದಲ್ಲಿ (APGAS select stone inscriptions No. 22) ಹೆಚ್ಚಿನ ವಿಷಯುಗಳು ತಿಳಿದುಬರುತ್ತವೆ. ಈ ಶಾಸನದಲ್ಲಿ ವಿಕ್ರಮಾದಿತ್ಯನ ವರ್ಣನೆಯ ನಂತರ

"ಆ ರಾಯ ಮಕುಟ ತಾಟಿತ
ಚರಣನೆನಲು ನೆಗಟ್ದ ವಿಕ್ರಮಾಂಕನ ರತ್ನೋ
ತ್ಕರ ನಿಚಿತ ಮಕುಟ ತಾಟಿತ
ಚರಣ ವಿಜ್ಞಾನ ದೇವರೇಂ ಕೇವಟಮೋ"

ಎಂದು ಹೇಳಲಾಗಿದೆ. ವಿಕ್ರಮಾದಿತ್ಯನಂಥ ಶ್ರೇಷ್ಠ ಚಕ್ರವರ್ತಿಯು ವಿಜ್ಞಾನೇಶ್ವರನ ಪಾದಗಳಿಗೆ ಶಿರಹಚ್ಚಿ ನಮಸ್ಕರಿಸುತ್ತಿದ್ದನೆಂದರೆ ಇವನು ಸಾಮಾನ್ಯ ಪಂಡಿತನಾಗಿದ್ದಿಲ್ಲವೆಂಬುದು ಗೊತ್ತಾಗುತ್ತದೆ. ಇದರಿಂದ ವಿಜ್ಞಾನೇಶ್ವರನು ವಿಕ್ರಮಾದಿತ್ಯನ ಆಸ್ಥಾನದಲ್ಲಿ ಒಳ್ಳೆಯ ಸ್ಥಾನಮಾನವನ್ನು ಹೊಂದಿದ್ದುದು ಸ್ಪಷ್ಟವಾಗುತ್ತದೆ.

ಇದೇ ಶಾಸನದಿಂದ ಅವನ ವೈಯಕ್ತಿಕ ವಿವರಗಳು ತಿಳಿದುಬರುತ್ತಿದ್ದು ಅವು ಹೀಗಿವೆ: ಅಟ್ಟಳಿ ನಾಡಿನ 'ಮಾಸೆಯುಮಡು' ಗ್ರಾಮದಲ್ಲಿದ್ದ ಸೋಮರಾಜ ಮತ್ತು ಆತನ ಹೆಂಡತಿಗೆ ಕೌಶಿಕಗೋತ್ರ ಲಲಾಮನೆನಿಸಿ ಈ ವಿಜ್ಞಾನೇಶ್ವರನು ಜನಿಸುತ್ತಾನೆ. ಇಲ್ಲಿ ವಿಜ್ಞಾನೇಶ್ವರನನ್ನು 'ಕಂಚ' ಎಂದು ಕರೆಯಲಾಗಿದೆ. ಶಾಸನದ ಆಂತರಿಕ ಆಧಾರಗಳಿಂದ 'ಕಂಚ' ಎನ್ನುವುದೇ ನಿಜನಾಮವಾಗಿದ್ದು 'ವಿಜ್ಞಾನೇಶ್ವರ' ಎನ್ನುವುದು ಕಾವ್ಯನಾಮವಾಗಿರುವುದು ತಿಳಿದುಬರುತ್ತದೆ. ಇವನ ಹೆಂಡತಿ ಕೇತಿಕಬ್ಬೆ. ಇವರಿಬ್ಬರಿಗೆ ಕ್ರಮವಾಗಿ ಕಾಮದೇವ, ಸೋಮದೇವ, ಮಾರಸಿಂಗ ಮತ್ತು ಬೀಚಿರಾಜರು ಜನಿಸುತ್ತಾರೆ. ಇವರಲ್ಲಿ ಕೊನೆಯವನಾದ ಬೀಚಿರಾಜನು ಹೆಚ್ಚು ಪ್ರಸಿದ್ಧನಾಗಿ 'ಪೆರ್ಗಡೆ' ವೃತ್ತಿಯನ್ನು ಕೈಕೊಂಡು 'ಪೆರ್ಗಡೆ ಬೀಚಿರಾಜ' ಎನಿಸಿದ್ದಾನೆ. ಇವನು ಅಲಂದೆ 1000ದ ಉಪ ವಿಭಾಗವಾದ ಗೊಂಕನಾಡಿನಲ್ಲಿಯ 'ಮಜಿತೂರ' ಗ್ರಾಮದಲ್ಲಿದ್ದು ಶಿವಾಲಯವನ್ನು ಕಟ್ಟಿಸುತ್ತಾನೆ. ಇದರ ವಿವರ ಶಾಸನದಲ್ಲಿ ಹೀಗೆ ಬರುತ್ತದೆ "ಸ್ವಸ್ತಿ ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೌನಾನುಷ್ಠಾನ ಜಪ ಸಮಾಧಿಶೀಲ ಸಂಪನ್ನರುಂ ಶ್ರೀಮತ್ರಿಭುವನಮಲ್ಲ ದೇವರ ಪರಮಾರಾಧ್ಯರುಮಪ್ಪ ಶ್ರೀಮತ್ ವಿಜ್ಞಾನೇಶ್ವರ ಭಟ್ಟಾರಕದೇವರ ಮಗಂ ಸ್ವಸ್ತಿ ಸಮಸ್ತ ಗುಣ ಸಂಪನ್ನರಪ್ಪ ಶ್ರೀಮತು ಪೆರ್ಗ್ಗಡೆ ಬೀಚಿರಾಜ ಮಜಿತೂರಲು ಪ್ರತಿಷ್ಠೆಯಂ ಮಾಡಿಸಿದ ಮಹಾ ದೇವರ್ಗ್ಗಂ ಕೇಶವದೇವರ್ಗ್ಗಂ" ಮಹಾಮಂಡಳೇಶ್ವರ ಬಿಬ್ಬರಸ ಮತ್ತಿತರರು ದಾನ ಬಿಡುತ್ತಾರೆ. ಒಟ್ಟಾರೆ ಈ ಶಾಸನದಿಂದ ವಿಜ್ಞಾನೇಶ್ವರನ ನಿಜನಾಮ, ಜನ್ಮಸ್ಥಳ, ತಂದೆ, ಹೆಂಡತಿ, ಪುತ್ರರ ಬಗ್ಗೆ ಮಾಹಿತಿ ಸಿಗುತ್ತದೆ.

ಬೀಚಿರಾಜ ಇದ್ದ 'ಮಜಿತೂರ' ಎಂಬುದು ಈಗಿನ ಗುಲಬರ್ಗಾ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಮತ್ತೂರು ಆಗಿದೆ. . ಈ ಗ್ರಾಮಕ್ಕೆ ಹೋಗಿ ನೋಡಲಾಗಿ ಶಾಸನವಿರುವ ಸ್ಥಳದಲ್ಲಿ ಅಕ್ಕಪಕ್ಕದಲ್ಲಿ ಅಂದರೆ ಜೋಡಿಯಾಗಿ ಎರಡು ದೇವಾಲಯಗಳಿವೆ. ಅವುಗಳಲ್ಲಿ ಒಂದನ್ನು ಈಗ ಕಾಶಿವಿಶ್ವನಾಥ ದೇವಸ್ಥಾನವೆಂತಲೂ, ಇನ್ನೊಂದನ್ನು ಕಾಳಿಂಗೇಶ್ವರ ದೇವಸ್ಥಾನವೆಂತಲೂ ಕರೆಯಲಾಗುತ್ತಿದೆ. ಇವುಗಳು ಚಾಲುಕ್ಯ ಶೈಲಿಯಲ್ಲಿರುವುದರಿಂದ ಹಾಗೂ ಶಾಸನವೂ ಇಲ್ಲಿಯೇ ಇರುವುದರಿಂದ ಇವುಗಳೇ ಪೆರ್ಗಡೆ ಬೀಚಿರಾಜ ಕಟ್ಟಿಸಿದ ಮಹಾದೇವ ಹಾಗೂ ಕೇಶವ ದೇವರ ದೇವಾಲಯಗಳಾಗಿವೆ. ಆದರೆ ಈಗ ಎರಡೂ ದೇವಾಲಯಗಳಲ್ಲಿ

ಶಿವಲಿಂಗಗಳಿವೆ. ಈ ದೇವಾಲಯಗಳ ಹೊರಗಡೆ ಭಗ್ನಗೊಂಡ ಗಣಪತಿ ಮತ್ತು ವಿಷ್ಣುವಿನ ಮೂರ್ತಿಗಳಿವೆ. ವಿಷ್ಣುವಿನ ಮೂರ್ತಿಯೆಂದು ಗುರುತಿಸಲು ಆ ಮೂರ್ತಿಯ ಕೈಯಲ್ಲಿ ಶಂಖ, ಗದೆಗಳಿರುವುದು ಆಧಾರಗಳಾಗಿವೆ. ಈ ಮೂರ್ತಿಯೇ ಕೇಶವನ ಮೂರ್ತಿಯಾಗಿದ್ದು ಕಾಲಾಂತರದಲ್ಲಿ ಅದು ಭಗ್ನಗೊಂಡ ಮೇಲೆ ಅದನ್ನು ತೆಗೆದು ಅಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿರಬೇಕು.

ಮರ್ತೂರ ಗ್ರಾಮವು ಈಗಲೂ ಅನೇಕ ಪುರಾತನ ದೇವಾಲಯಗಳಿಂದಲೂ, ಹಳೆಯ ಮನೆಗಳಿಂದಲೂ, ಕೋಟೆ ಕೊತ್ತಲಗಳಿಂದಲೂ ಕಂಗೊಳಿಸುತ್ತದೆ. ಅಲ್ಲಿಗೆ ಹೋದಾಗ 11ನೆಯ ಶತಮಾನದ ಅರಸರ ವೈಭವದಲ್ಲಿದ್ದಂತೆ ಭಾಸವಾಗುತ್ತದೆ. ಈಗ ಇಲ್ಲಿ ಬೀಚಿರಾಜನ ವಂಶಸ್ಥರು ಯಾರೂ ಇಲ್ಲ. ಆದರೆ ಅವನಿದ್ದ ಮನೆ ಮಾತ್ರ ಇಂದಿಗೂ ಇದೆ. ಆ ಮನೆಯನ್ನು ಈಗ 'ಹಿರೇಗೌಡರ' ಮನೆಯೆಂದು ಕರೆಯಲಾಗುತ್ತಿದೆ. ಹಿರೇಗೌಡರು ಎಂದರೆ ಪೆರ್ಗಡೆ ಎಂದೇ ಅರ್ಥ. ಈ ಮನೆಯು ಭವ್ಯವಾಗಿದ್ದು ವಿಶಾಲವಾಗಿದೆ ಇದರಲ್ಲಿ ನೆಲಮಾಳಿಗೆಯೂ ಇದ್ದು ಹೊರನೋಟದಿಂದ ಈ ಮನೆ ತುಂಬ ಸೊಗಸಾಗಿ ಕಾಣುತ್ತದೆ.

ಈ ಪೆರ್ಗಡೆ ಬೀಚಿರಾಜನ ತಂದೆ 'ಕಂಚ' (ವಿಜ್ಞಾನೇಶ್ವರ)ನು ಹುಟ್ಟಿ ಬೆಳೆದದ್ದು ಅಟ್ಟಳಿನಾಡಿನ 'ಮಾಸೆಯಮಡು' ಗ್ರಾಮದಲ್ಲಿ ಶಾಸನದಲ್ಲಿ "ಎನೆ ನೆಗಟ್ದವರಾನ್ವಯವೆನ್ತು ಲಟ್ಟಟಿನಾಡೊಳೆಸೆವ ಮಾಸೆಯಮಡು ಸದ್ವಿನುತ ಶಿವಾಲಯಂ ಚಯದಿಂದನುಪಮಿತವ ನಾಟೀಯಿಂದೆ ಸೊಗಯಿಸಿ ತೋರ್ಕುಂ" ಎಂದು ಆ ಗ್ರಾಮದ ವರ್ಣನೆ ಬರುತ್ತದೆ. 'ಅಟ್ಟಳಿನಾಡು' ಎಂಬುದು 300 ಗ್ರಾಮಗಳ ಒಂದು ವಿಭಾಗ. ಇದು ಈಗಿನ ಬಸವಕಲ್ಯಾಣ, ಭಾಲ್ಕಿ, ಬೀದರ ಮತ್ತು ಆಂಧ್ರಪ್ರದೇಶದ ಝಹೀರಾಬಾದ ತಾಲೂಕಿನ ಕೆಲವು ಗ್ರಾಮಗಳನ್ನು ಒಳಗೊಂಡು ಒಟ್ಟು 300 ಗ್ರಾಮಗಳ ವಿಭಾಗವಾಗಿತ್ತು. ಇಷ್ಟು ಹಿನ್ನೆಲೆಯೊಂದಿಗೆ 'ಮಾಸೆಯಮಡು' ಗ್ರಾಮವನ್ನು ಹುಡುಕಲು ಹೊರಟಾಗ ಭಾಲ್ಕಿ ತಾಲೂಕಿನಲ್ಲಿಯ 'ಮಾಶಿಮಡು' ಗ್ರಾಮವು ಗೋಚರಿಸಿತು. ಇದು ದೊಡ್ಡ ವಳ್ಳಿ ವೇಡದಿಂದ 12 ಕಿ.ಮೀ ಅಂತರದಲ್ಲಿದೆ. ಈ ಗ್ರಾಮಕ್ಕೆ ಭೇಟಿ ಕೊಟ್ಟಾಗ ಇದೊಂದು ಪ್ರಾಚೀನ ಗ್ರಾಮವೆಂದು ಮೇಲ್ನೋಟದಿಂದಲೇ ಗೊತ್ತಾಯಿತು. ಕಾರಂಜಾ ನದಿಯ ದಡದ ಮೇಲಿರುವ ಈ ಗ್ರಾಮದಲ್ಲಿ ಶಾಸನದಲ್ಲಿ ಹೇಳಲಾದ ಶಿವಾಲಯವು ಈಗ ಇಲ್ಲ. ಅಲ್ಲಿಯ ಹಿರಿಯರನ್ನು ವಿಚಾರಿಸಿದಾಗ ಪ್ರಾಚೀನ ಕಾಲದಲ್ಲಿ ಮಾಶಿಲಿಂಗವೆಂಬ ಶಿವಾಲಯವಿತ್ತೆಂದು ಅದು ಈಗ ಹಾಳಾಗಿ ಹೋಗಿದೆಯೆಂದು ಹೇಳುತ್ತಾರೆ. ಇಲ್ಲಿ ಶಿವಾಲಯವಿದ್ದ ಕುರುಹಾಗಿ ಅಲ್ಲಲ್ಲಿ ಬಿದ್ದಿರುವ ಕಂಬದ ಕಲ್ಲುಗಳನ್ನು, ಭಗ್ನಗೊಂಡ ವಿಗ್ರಹಗಳನ್ನು ತೋರಿಸುತ್ತಾರೆ. ಅಲ್ಲದೇ ಈ ದೇವಾಲಯದ ಕಲ್ಲುಗಳನ್ನು ಬೀದರ ಕೋಟೆಗೂ ಮತ್ತಿತರ ಕಟ್ಟಡಗಳಿಗೆ ಬಳಸಲಾಗಿದೆಯೆಂದು ಆ ಗ್ರಾಮದಲ್ಲಿ ಪ್ರತೀತಿ ಇದೆ. ಒಟ್ಟಾರೆ ಇದೊಂದು ಪ್ರಾಚೀನ ಕಾಲದ ಗ್ರಾಮವೆಂಬುದು ಮಾತ್ರ ಸತ್ಯ. ಈ ಗ್ರಾಮದಲ್ಲೂ

ವಿಜ್ಞಾನೇಶ್ವರನ ಬಗ್ಗೆ ಯಾವುದೇ ತೆರನಾದ ಕುರುಹುಗಳು ಸಿಗಲಿಲ್ಲ. ಅಲ್ಲಿ ಅವನ ವಂಶಸ್ಥರಾರೂ ಇಲ್ಲ. ಬಹುಶಃ ಅವರು ನಾಶವಾಗಿರಬೇಕು ಇಲ್ಲವೆ ಬೇರೆ ಸ್ಥಳಕ್ಕೆ ವಲಸೆ ಹೋಗಿರಬೇಕು. ಆದರೆ ಈ ಗ್ರಾಮವೇ ವಿಜ್ಞಾನೇಶ್ವರನು ಹುಟ್ಟಿ ಬೆಳೆದ ‘ಮಾಸಿಯುಮಡು’ ಗ್ರಾಮವೆಂಬುದರಲ್ಲಿ ಸಂಶಯವಿಲ್ಲ. ಮಾಸಿಯು ಮಡು ಎಂಬುದೇ ಸಂಕುಚಿತಗೊಂಡು ‘ಮಾಸಿಮಡು’ ಎಂದಾಗಿದೆ.

* ನನ್ನ ಈ ಲೇಖನ ಪೂರ್ಣಗೊಂಡ ಮೇಲೆ ಶ್ರೀ ಬಿ. ಎಸ್. ಕುಲಕರ್ಣಿಯವರು ‘Epigraphical References to Vijnanesvara’ ಎಂಬ ಲೇಖನವನ್ನು ಭಾರತದ ಶಾಸನಶಾಸ್ತ್ರ ಸಂಘದ ಪ್ರಥಮ ವಾರ್ಷಿಕ ಸಮ್ಮೇಳನದಲ್ಲಿ ಓದಿದ್ದುದು ತಿಳಿದುಬಂತು. ಆ ಲೇಖನವು ನನಗೆ ನೋಡಲು ಸಿಗಲಿಲ್ಲ. ಅಲ್ಲದೆ ಅದು ಎಲ್ಲಿಯೂ ಪ್ರಕಟವಾಗಿಲ್ಲವೆಂದು ತಿಳಿದುಬಂತು. ಹೀಗಾಗಿ ನನ್ನ ಈ ಲೇಖನವನ್ನು ಪ್ರಕಟಿಸುತ್ತಿದ್ದೇನೆ.

ಮಾತೃಭಾಷೆ ಮತ್ತು ಶಿಕ್ಷಣ ಮಾಧ್ಯಮ*

ಶಂಕರ ಮೊಕಾಶಿ ಪುಣೇಕರ

– 1 –

'ಮಾತೃಭಾಷೆ ಮತ್ತು ಶಿಕ್ಷಣ ಮಾಧ್ಯಮ' ಬಹುಭಾಷಿಕ ಭಾರತದಲ್ಲಿ ಹಲವಾರು ಸಮಸ್ಯೆಗಳನ್ನು ಒಡ್ಡುತ್ತದೆ. ಇದು ಕೇವಲ ಅಭಿಮಾನದ ವಿಷಯ ವಾಗಬಾರದು. ಶೈಕ್ಷಣಿಕ ವಿಷಯದಲ್ಲಿ ಅಭಿಮಾನವೊಂದೇ ಸಾಲದು, ಆದಗೆ ಬಹುಭಾಷಿಕ ಸಮಾಜದಲ್ಲಿ ಅದು ಅಭಿಮಾನದ ಭಾವುಕ ಸಮಸ್ಯೆಯಾಗುವದು ಸ್ವಾಭಾವಿಕ. ಬಹುಭಾಷಿಕ ನೆಲದಲ್ಲಿ ಬೇರೆ ಭಾಷೆಗಳ ದಬ್ಬಾಳಿಕೆಯ ಬಗ್ಗೆ ಜನರು ಹೆಚ್ಚು ಹೆಚ್ಚು ಸಂವೇದನಾಶೀಲರೂ, ಭಾವುಕರೂ ಆಗುತ್ತಾರೆ. ಈ ಮನೋವೃತ್ತಿ ಭಾರತದಲ್ಲಿ ಒಂದೇ ಎಂದು ತಿಳಿಯಬಾರದು. ಇದು ಸಾಮಾನ್ಯ ಅನುಭವ. ಒಂದೆರಡು ವಾರಗಳ ಕೆಳಗೆ ಬೆಲ್ಜಿಯಂನ ಪ್ರಧಾನಮಂತ್ರಿ ಭಾಷೆಯ ಶಿಕ್ಕಾಟದಲ್ಲಿ ಸಿಲುಕಿ ರಾಜೀನಾಮೆ ಸಲ್ಲಿಸಿದರೆಂದು ವರದಿಯಾಯಿತು. ಹಾಲೆಂಡ್‌ದಂಥ ಚಿಕ್ಕ ರಾಷ್ಟ್ರದಲ್ಲೂ ನಾಲ್ಕೈದು ಭಾಷೆಗಳನ್ನು ಜನರು ಮಾತಾಡುತ್ತಾರೆ. ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋದಾಗ ಅವರ ಭಾಷೆಯೇ ಅರ್ಥವಾಗುವುದಿಲ್ಲ. ಹಾಲೆಂಡಿನ ವಿದ್ಯಾರ್ಥಿಗಳು ಶಾಲೆ-ಕಾಲೇಜುಗಳಲ್ಲಿ ಕನಿಷ್ಠಪಕ್ಷ ನಾಲ್ಕು-ಐದು ಭಾಷೆಗಳನ್ನು ಕಲಿಯುತ್ತಾರೆಂದು ಅಲ್ಲಿಯವರೇ ಹೇಳುತ್ತಾರೆ. ಸಾಮಾನ್ಯವಾಗಿ ಎಲ್ಲ ಹಾಲೆಂಡ್ ಭಾಷೆಗಳು, ಜರ್ಮನ್, ಇಂಗ್ಲೀಷ್ ಅಲ್ಲದೇ ಒಂದೆರಡು ಪೌರ್ವಾತ್ಯ ಸ್ಪ್ಯಾನಿಶ್ ಭಾಷೆಗಳ ಪರಿಚಯವೂ ಒಳ್ಳೆ ವಿದ್ಯಾರ್ಥಿಗಳಿಗೆ ಇರುತ್ತದೆ.

1984ರಲ್ಲಿ 'ಸ್ಟ್ರೂಗಾ ಪೊಯಿಟ್ರಿ ಈವಿನಾಗ್ಸ' ಎಂಬ ಅಂತರರಾಷ್ಟ್ರೀಯ ಕವಿ ಸಮ್ಮೇಳನದಲ್ಲಿ ಭಾಗವಹಿಸಲು ನಾನು ಹೋಗಿದ್ದೆ. ಈ ಊರು ಯುಗೋಸ್ಲಾವಿಯ ದಲ್ಲಿದೆ. ಯುಗೋಸ್ಲಾವಿಯದಲ್ಲಿ ನಾಲ್ಕು ಭಾಷೆ ಚಾಲ್ತಿಯಲ್ಲಿವೆ. ಬಿಯೋಗ್ರಾಡ್ (ಬೆಲ್‌ಗ್ರೇಡ್)ದಲ್ಲಿ ಚಾಲ್ತಿ ಇರುವುದು ಸರ್ಬೋಕ್ರೋಟ್. ಸ್ಟ್ರೂಗಾ. ಶಹರದಗಳಲ್ಲಿ ಚಾಲ್ತಿ ಇರುವದು ಮ್ಯಾಕಿಡೋನಿಯನ್ ಭಾಷೆ. ಅಲ್ಲಿಯ ಒಂದು ವಾರಪತ್ರಿಕೆ 'ಸಂಜೆ' ಯಲ್ಲಿ ನನ್ನ ದೀರ್ಘ ಸಂದರ್ಶನ ಪ್ರಕಟವಾಯಿತು. ಎರಡು ತಿಂಗಳ ಮೇಲೆ ನನಗೆ ಅದರ ಪ್ರತಿ ಕಳಿಸಲ್ಪಟ್ಟಿತು. ಏನು ಬರೆದಿದ್ದಾರೆ ಎಂಬ ಕುತೂಹಲದಿಂದ ದಿಲ್ಲಿಯಲ್ಲಿ ಇರುವ ಯುಗೋಸ್ಲಾವಿಯದ ರಾಯಭಾರಿ ಕಚೇರಿಗೆ ಹೋಗಿ ತೋರಿಸಿದೆ. ಆ ಕಚೇರಿಯಲ್ಲಿ ಮ್ಯಾಕಿಡೋನಿಯನ್ ಭಾಷೆ ಓದಲು ಬಲ್ಲ ಒಬ್ಬರೂ ಇರಲಿಲ್ಲ. ಅಲ್ಲಿಂದ ಅವರ ವ್ಯಾಪಾರೀ ಪ್ರತಿಷ್ಠಾನದಲ್ಲಿ ಮಾತ್ರ ಒಬ್ಬರೇ ಇದ್ದಾರೆಂದು

---

*ತಳುಕಿನ ವೆಂಕಯ್ಯ ದತ್ತಿ ಸ್ಮಾರಕ ಉಪನ್ಯಾಸ ಮಾಲೆಯ ಅಂಗವಾಗಿ ಓದಿದ ಲೇಖನ.

ತಿಳಿಯಿತು. ಅದು ದೂರ ಆ ಅಧಿಕಾರಿ ಅಂದು ರಜೆ. ಅಲ್ಲಿಯೇ ಬಿಟ್ಟು ಅದರ ಸಾರ ನನಗೆ ಕಳುಹಿಸಿಕೊಡಬೇಕೆಂದು ವಿನಂತಿಸಿಕೊಂಡು ಅಲ್ಲಿಂದ ಬಂದೆ. ಇನ್ನೂ ಬಂದಿಲ್ಲ. ಇದುಂ ಟೀಕೆಯೆಂದಾಗಿ ಹೇಳುತ್ತಿಲ್ಲ. ಸ್ಕೊಗಾದ (ಸೋಫಿಯಾದ) ಆ ಸಂದರ್ಶನ ತೆಗೆದುಕೊಂಡ ಸಂಪಾದಕ ಮಿತ್ರ ಅಲ್ಲಿಯ Mocedonian Review ಪತ್ರಿಕೆ ಎರಡು ತಿಂಗಳಿಗೊಮ್ಮೆ ಕಳಿಸುತ್ತಾನೆ. ಅವರ ಮಾತೆಲ್ಲ ಮ್ಯಾಕಿಡೋನಿಯ. ಬೇರೆ ರಾಷ್ಟ್ರವೆಂದೇ ಪ್ರಚುರಪಡಿಸಲ್ಪಡುತ್ತದೆ. ಅವರು ಕೂಡ. ಟಿಟೋಗೈಡ್ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವನ ಜೊತೆಗೂಡಿ ನಾಜಿ ಜರ್ಮನಿಯ ಜೊತೆ ಹೋರಾಡಿ, ಯುಗೋಸ್ಲಾವಿಯದ ಸ್ವಾತಂತ್ರ್ಯಗಳಿಸಿಕೊಟ್ಟರು. ಟಿಟೋ ಕಳಿಸಿದ ಒಂದು ಟಲಿಗ್ರಾಂ ಮಾತ್ರ ಅವರು ರಾಷ್ಟ್ರೀಯ ಸೊತ್ತಾಗಿ ನೋಡುತ್ತಾರೆ.

ಅಲ್ಲಿಂದ ನಂತರ ನಾನು (ICCR ಕೊಟ್ಟ ನಿರ್ದೇಶನದ ಪ್ರಕಾರ) ಬಲ್ಗೇರಿಯಾಕ್ಕೆ ಬಂದೆ. ಅಲ್ಲಿಯ ಗೈಡ್ ಮ ೂಲತಃ ಮ್ಯಾಕಿಡೋನಿಯನ್ ಭಾಷೆಯವಳು-ಆದರೆ ತಮ್ಮ ಸಂಸ್ಕೃತಿ ಬಲ್ಗೇರಿಯನ್ ಎಂದು ಭಾವಿಸುವವರು. ಯುಗೋಸ್ಲಾವಿಯಾದ ಮ್ಯಾಕಿಡೋನಿಯನ್‌ರು ಬಲ್ಗೇರಿಯಂದ ಮ್ಯಾಕಿಡೋನಿಯನ್‌ರ ಮೇಲೆ ಒತ್ತಡ ತಂದು 'ನಾವೂ ನೀವೂ ಜೊತೆಗೂಡಿ ಮ್ಯಾಕಿಡೋನಿಯ ರಾಷ್ಟ್ರ ಕಟ್ಟೋಣ ಎಂದು ಹೇಳುತ್ತಾರೆ ; ಅದು ನಮಗೆ ಒಪ್ಪಿಗೆಯಿಲ್ಲ ; ಎಂದು ಹೇಳಿದರು.

ಐರ್ಲೆಂಡಿನ ವಿಭಜನೆಯಾದ ಮೇಲೆ, ಉತ್ತರ ಐರ್ಲೆಂಡ್ ಮತ್ತು ಸ್ವತಂತ್ರ ಐರ್ಲೆಂಡ್‌ಗಳ ಭಾಷೆ ಒಂದೇ ಆದರೂ, ಉಪಭಾಷೆಯ ಅಭಿಮಾನ, ಜಾತೀಯ ಅಭಿಮಾನ, ಐತಿಹಾಸಿಕ ಅಭಿಮಾನಗಳ ಮೂಲಕ ಇನ್ನೂ ಕಾಳಗ ನರಮೇಧ ನಡೆದಿದೆ.

ಕ್ಯಾನಡಾದಲ್ಲಿ ಫ್ರೆಂಚ್ ಭಾಷೆ ಬಳಸುವ ನ್ಯೂ ಬರ್ಲಿನ್ಸ್ನದ ಕ್ಯಾನೆಡಿಯನ್‌ರಿಗೂ ಇಂಗ್ಲಿಷ್ ಬಳಸುವ ಕ್ಯಾನೇಡಿಯನ್‌ರಿಗೂ ತಿಕ್ಕಾಟ ನಿಂತಿಲ್ಲ.

ಒಟ್ಟಿನ ಮೇಲೆ, ಭಾಷೆ ಅಭಿವ್ಯಕ್ತಿ ಮಾಧ್ಯಮ, ನಿಜ. ಭಾಷೆ ಸಂಸ್ಕೃತಿಯ ಮಾಧ್ಯಮವೂ ಹೌದು. ಜೊತೆಗೆ ಭಾವನಾ ಮಾಧ್ಯಮ ಕೂಡ. ಭಾವುಕಮಾಧ್ಯಮವಾದಾಗ, ಮೇಲೆ ಉದಾಹರಿಸಿದ ಆತಂಕಗಳು ಉದ್ಭವಿಸುತ್ತವೆ. ಇಂಥವು ಆತಂಕಗಳೇನೂ ಅಲ್ಲ, ಎಂದು ಅನಿಸಬಹುದು. ತಮ್ಮ ತಮ್ಮ ಭಾಷೆ-ಸಂಸ್ಕೃತಿಗಳನ್ನು ಬೆಳೆಸಿಕೊಳ್ಳುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯ. ಅದರ ಬಗ್ಗೆ ಅಭಿಮಾನಗಳು ಸ್ವಾಭಾವಿಕ. ಆದರೆ ಈ ಭಾವುಕ ನಿಲುವುಗಳು ವಿಘಟನೆಗೆ ಕಾರಣವಾಗಬಾರದು, ಹಾಗೆ ಆದಲ್ಲಿ, ಜಗತ್ತಿನ ಬಲಿಷ್ಠ ರಾಜಕೀಯ ಶಕ್ತಿಗಳು ತಮ್ಮ ತಮ್ಮ ರಾಜಕೀಯ ಲಾಭಕ್ಕಾಗಿ ಅದನ್ನು ಬಳಸಿಕೊಳ್ಳುವ ಭಯ ಇದೆ. ಅವು ಜಪ್ಪಿಸಿ ಕಾಳಿತಿವೆ. ಇದು ನಿತ್ಯ ಭಯ. ದೂರ ದುರೂಹ ಭಯವಲ್ಲ, ಎಂದಿಷ್ಟೇ ಸೂಚಿಸಬಯಸುತ್ತೇನೆ. ಇಲ್ಲಿಗೆ ಈ ವಿಷಯ ಮುಗಿಸುತ್ತೇನೆ. ಇನ್ನು ಮುಖ್ಯ ವಿಷಯ.

– 2 –

ಜಗತ್ತಿನ ಯಾವ ಶಿಕ್ಷಣತಜ್ಞನೂ ಒಪ್ಪುವ ಮಾತೆಂದರೆ ಶಿಕ್ಷಣ ಮಾಧ್ಯಮ ಮಾತೃಭಾಷೆಯೇ ಇರಬೇಕು. ಇದರ ಬಗ್ಗೆ ಯಾವ ಭಿನ್ನಾಭಿಪ್ರಾಯಗಳೂ ಇಲ್ಲ. ಕನ್ನಡನಾಡಿನಲ್ಲಿ ಕನ್ನಡವೇ ಬೋಧಭಾಷೆ ಇರಬೇಕೆಂಬುದು ನಿರ್ವಿವಾದ.

ಇಷ್ಟಕ್ಕೂ ಒಪ್ಪದವರು ನಮ್ಮಲ್ಲಿ ಇದ್ದಾರೆ, ಎಂಬುದೂ ನಿಜ. ಆದರೆ ಶೈಕ್ಷಣಿಕ ಸಂದರ್ಭದಲ್ಲಿ, ವೈಜ್ಞಾನಿಕವಾಗಿ ಎಲ್ಲ ವೈಚಾರಿಕರು ಸಮ್ಮತಿಸಬಹುದೆಂದು ನಾನು ಗ್ರಹಿಕೆ ಹಿಡಿದು ಮುಂದುವರಿಸುತ್ತೇನೆ. ಶಿಕ್ಷಣಶಾಸ್ತ್ರವು ಇದನ್ನು ಒಪ್ಪುತ್ತದೆ. ಇತರ ಚಾರಿತ್ರಿಕ–ರಾಜಕೀಯ–ಸಾಮಾಜಿಕ ಒತ್ತಡಗಳೇನೇ ಇದ್ದರೂ ಈ ಗ್ರಹಿಕೆ ಯನ್ನು ಯಾರೂ ವಿರೋಧಿಸುವಂತಿಲ್ಲ.

ಇದನ್ನು ಒಪ್ಪದವರು ಬಹಳ ಬುದ್ಧಿವಂತರಿರಬೇಕು. ಇಲ್ಲವೇ, ಶಿಕ್ಷಣ ವಿಷಯದಲ್ಲಿ ಅಜ್ಞಾನಿಗಳಿರಬೇಕು. ವಿದೇಶಗಳಿಗೆ (ಉದಾ. ರಶ್ಯ, ಇಟಲಿ, ಜಪಾನ್) ಹೋಗುವವರು 15 ದಿನಗಳ ಕ್ರ್ಯಾಶ್ ಕೋರ್ಸ್ ಕಲಿತು ಹೋಗುತ್ತಾರೆ. ಬಿಚ್ಚು ಮನಸ್ಸಿನವರಾದರೆ, ಆಯಾ ದೇಶದ ಭಾಷೆಯನ್ನು ಅದರ ಭಾಷಾ ಪರಿಸರ (Language Enviornment) ದಿಂದಲೇ ಕಲಿತು, ವಾಪಸ್ಸು ಬಂದಮೇಲೆ ಆ ಭಾಷೆ ಸುಲಭ ಎಂದು ಹೇಳಬಹುದು. ಅದು ನಿಜವಲ್ಲ, ಪ್ರದರ್ಶನ ಮಾತ್ರ.

ಭಾರತದಲ್ಲಿ ಅನೇಕ ವರ್ಷಗಳವರೆಗೆ ಇಂಗ್ಲಿಷ್ ಶಿಕ್ಷಣಮಾಧ್ಯಮವಾಗಿತ್ತು. ಆ ಪರಿಸರದಲ್ಲಿ ಶಿಕ್ಷಕರು ತರಬೇತಿ ಪಡೆದು ಇಂಗ್ಲಿಷನ್ನೂ ಬೋಧಭಾಷೆಯೆಂದು ಬಳಸತೊಡಗಿದರು. ಸ್ವಾತಂತ್ರ್ಯ ಸಿಕ್ಕನಂತರವೂ ಅವರು ಇಂಗ್ಲಿಷನ್ನು ಬೋಧಭಾಷೆ ಯೆಂದು ಉಳಿಸಬೇಕೆಂದು ಒಳಸಂಚು ಮಾಡುತ್ತಾರೆ. ಕನ್ನಡದಲ್ಲಿ ಆ ಬಗೆಯ ಚತುರ, ಅಭಿವ್ಯಂಜನಾರ್ಥದ ಪರಿಭಾಷೆ ಬೆಳೆದುಬಂದಿಲ್ಲವೆಂದು ಗೊಣಗುತ್ತಾರೆ. ಒಮ್ಮೆ ತಮ್ಮ ವಿಷಯದಲ್ಲಿ ಪಳಗಿದ ಬೋಧಭಾಷೆ ಇಂಗ್ಲೀಷದಲ್ಲೇ ಇದೆಯೆಂದೂ, ಅದನ್ನು ಬದಲಿಸಿ ಕನ್ನಡದಲ್ಲಿ ತಂದರೆ ಸ್ವೀಕೃತ ಸರ್ವಸಮ್ಮತ ಪರಿಭಾಷೆಯ ಅಭಾವದಿಂದಾಗಿ ಶಿಕ್ಷಣವೇ ಸೊರಗುವದೆಂದು ಶಂಕಿಸುತ್ತಾರೆ. ಈ ವಾದದಲ್ಲಿ ಹುರುಳಿಲ್ಲವೆಂದಲ್ಲ. ಆದರೆ ಹೀಗೆ ಹೇಳುವಾಗ ಒಂದು ಮುಖ್ಯ ಮಾತನ್ನು ಮರೆಯುತ್ತಾರೆ. ಇಂಗ್ಲಿಷ್ ಭಾಷೆಯಲ್ಲಿ ಪರಿಣತಿ ಪಡೆಯಲಿಕ್ಕಾಗಿ ಇವರೇ ಎಷ್ಟು ವರ್ಷ ಕಷ್ಟಪಟ್ಟರು ? ತಮ್ಮ ತಮ್ಮ ವಿಷಯಗಳಲ್ಲೇ ಪರಿಣತಿ ಪಡೆದ ಮೇಲೂ, ಆ ಪರಿಣತರಲ್ಲೇ ಇವರ ಸ್ಥಾನ ಮಾನ ಏನು ? ತಮ್ಮ ಸ್ಥಾನಮಾನದ ಸಾಟಿಯಾದ ಸಂಪಾದನೆ-ಆವೇದನೆ ಇವರಿಂದ ಎಷ್ಟಾಯಿತು ? ಕಾಲೇಜು-ಯುನಿವರ್ಸಿಟಿಗಳಲ್ಲಿ ಕಲಿತ ಕಟ್ಟಿದ ಬುತ್ತಿ ವಿದ್ಯೆಯನ್ನು ಸ್ವತಂತ್ರವಾಗಿ ಇವರು ಮುಂದುವರೆಸಿ, ಆಯಾ ವಿಜ್ಞಾನಕ್ಕೆ ಮೇಲ್ಮಟ್ಟದ ಕೊಡುಗೆ ನೀಡಿದರೇ ? ಅಥವಾ ತಮ್ಮ ಇಂಗ್ಲಿಷ್ ಅಭಿವ್ಯಕ್ತಿಯ ಭಯದಲ್ಲೇ, ಇದ್ದಷ್ಟನ್ನೇ 40 ವರ್ಷ ಪುನರುಚ್ಚರಿಸುತ್ತ ದೊಡ್ಡ ವಿದ್ವಾಂಸರೆಂದು ಕೀರ್ತಿ ಪಡೆದರೇ ? ಆಗಿನ

ಕಾಲಕ್ಕೆ ಹೊಸ ಹೊಸ ಸಂಶೋಧನೆಗೆ ತಕ್ಕ ಸಲಕರಣೆಗಳಿದ್ದಿಲ್ಲ, ನಿಜ. ಆದರೆ, ಇದ್ದಷ್ಟು ಸಲಕರಣೆಗಳಿಂದ ಹೊಸ ಸಂಶೋಧನೆ ಮಾಡಿದವರು ಇದ್ದಾರೆ. ಇವರಿಗೂ ಕೂಡ, ಇಂಗ್ಲೀಷ್ ಅಭಿವ್ಯಕ್ತಿಯು ಕಷ್ಟಗಳಿಂದ ಕುತ್ತಿಗೆ ಹಿಡಿದುಕೊಂಡಂತೆ ಆಗಿಲ್ಲವೇ ? ಇನ್ನು, ಇಂಗ್ಲೀಷ್ ಅಭಿವ್ಯಕ್ತಿಯ ಅಭಾವದಿಂದ ಮೂಕರಾದ ವಿಜ್ಞಾನಿಗಳು ನಮ್ಮಲ್ಲಿ ಎಷ್ಟಿಲ್ಲ ? ಇಂಗ್ಲೀಷಿನಲ್ಲಿ ಶಿಕ್ಷಣ ಪಡೆದವರು, ಕೊಡುವವರು ಸಮಾನವಾಗಿಯೇ ಈ ಕಷ್ಟಕ್ಕೆ ಗುರಿಯಾಗಿದ್ದಾರೆ. ಮಾತಾಡಲೊಲ್ಲದು (conspiracy of silence) ಮಾಡಿದ್ದಾರೆ.

ಮಾತೃಭಾಷೆಯಲ್ಲೇ ಶಿಕ್ಷಣ ಪಡೆದು ಖ್ಯಾತಿವೆತ್ತ ಟಿಳಕ, ಗಾಂಧಿ, ಲಜಪತರಾಯ, ವಿವೇಕಾನಂದ, ಇಂಥವರ ಕೊಡುಗೆಗೂ ಇಂಗ್ಲಿಷಿನಲ್ಲೇ ವ್ಯಾಸಂಗ ಮಾಡಿದವರ ಕೊಡುಗೆಗೂ ಇಷ್ಟು ಅಂತರ ಏಕೆ ಬರುತ್ತದೆ ? ವಿಚಾರ ಮಾಡಬೇಕು.

ಮಾತೃಭಾಷೆಯಲ್ಲಿ ಪಡೆದ ಶಿಕ್ಷಣವು ಮುಕ್ತ ಚಿಂತನೆಯನ್ನು ಕುದುರಿಸುತ್ತದೆ. ಬೇರೆ ಭಾಷೆಯಲ್ಲಿ ವ್ಯಾಸಂಗ ಮಾಡಿದವರ ಶಿಕ್ಷಣ ಬದ್ಧವಾಗುತ್ತದೆ ಆಯಾ ಭಾಷೆಯ ಸರಣಿಗೇ ಜೋತು ಬೀಳುತ್ತದೆ. ಆಯಾ ಶಬ್ದಗಳಲ್ಲದೆ ವಿಚಾರಶಕ್ತಿ ವಿಹಾರ ಮುಕ್ತವಾಗುವದೇ ಇಲ್ಲ. ಇದು ಎಲ್ಲರ ಬಗ್ಗೆ ಹೇಳಲು ಶಕ್ಯವಿಲ್ಲ. ಶ್ರೀ ಅರವಿಂದರು ಚಿಕ್ಕಂದಿನಿಂದಲೂ ಇಂಗ್ಲೇಂಡಿನಲ್ಲೇ ಇದ್ದು ಶಿಕ್ಷಣ ಪಡೆದರು. ಅವರಿಗೆ ಪಾಶ್ಚಾತ್ಯ ಜೀವನದ ಬಗ್ಗೆ ಸಂದೇಹ ಉಂಟಾಯಿತು. ಭಾರತಕ್ಕೆ ಮರಳಿದ ಮೇಲೆ, ಮೊದಲನೇ ಕೆಲಸ ಮಾಡಿದ್ದು ಸಂಸ್ಕೃತ-ಭಾಷೆಯ ವ್ಯಾಸಂಗ. ಅದರ ಸಹಾಯದಿಂದ ಉನ್ಮುಕ್ತವಾದ ಅವರ ವಿಚಾರವಿಹಾರ ಭಾರತೀಯ ತತ್ವಜ್ಞಾನವನ್ನೆಲ್ಲ ವ್ಯಾಪಿಸಿ ಅದಕ್ಕೆ ತಮ್ಮದೇ ಆದ ಕೊಡುಗೆ ನೀಡುವವರೆಗೆ ಮುಂದುವರೆಯಿತು. ಇದು ಅಪವಾದ ಮಾತ್ರ. ಸಾಮಾನ್ಯ ಅನುಭವ ಪರಕೀಯ ಶಿಕ್ಷಣಮಾಧ್ಯಮ ಪರಾವಲಂಬನ.

ಈ ಉದಾಹರಣೆಗಳಿಂದ ನಾವು ಕಲಿಯುವದೇನಂದರೆ, ಶಿಕ್ಷಣ ಕಟ್ಟಿದ ಬುತ್ತಿಯಾಗಬಾರದು, ಮುಂದಿನ ಜ್ಞಾನವಿಸ್ತಾರಕ್ಕೆ ಒಂದು ಸಾಧನವಾಗಬೇಕು. ಇಲ್ಲವಾದರೆ, ಡಾ. ರಾಧಾಕೃಷ್ಣನ್ ಹೇಳಿದಂತೆ, ಇಡೀ ಜೀವನವು ಒಂದು ಅವತರಣಿಕೆ (quotation) ಆಗಿ ಬಂಧನವಾಗುತ್ತದೆ. ಹಲವಾರು ಬುದ್ಧಿಶಾಲಿಗಳು ತಮ್ಮ ಉನ್ಮುಕ್ತ ವಿಚಾರವಿಹಾರದ ಮೂಲಕವೇ ಈ ಬೀಸುಕಲ್ಲನ್ನು ಕೊರಳಲ್ಲಿ ಕಟ್ಟಿಕೊಂಡೇ ದೂರ ಮುಂದೆ ಸಾಗಿದ ಉದಾಹರಣೆಗಳು ಇಲ್ಲದಿಲ್ಲ. ಆದರೆ ವಿದೇಶೀಯ ಬೋಧಭಾಷೆಯಲ್ಲಿ ಪಡೆದ ಶಿಕ್ಷಣ ಇಂಥ ಕೊರಳಲ್ಲಿಯ ಗುಂಡುಕಲ್ಲಾಗಿ ಪರಿಣಮಿಸಿದ್ದ ಉದಾಹರಣೆಗಳೇ ಅಗಣಿತ. ಇದೂ ಒಂದು ಸಾಮಾನ್ಯಸತ್ಯ.

ಜಪಾನದಲ್ಲಿ ಬೋಧಭಾಷೆ ಜಪಾನೀ. ಜಪಾನ ಹುಟ್ಟಿಸಿದ ಅಣುವಿಜ್ಞಾನಿಗಳು, ಇಲೆಕ್ಟ್ರಾನಿಕ್ ವಿಜ್ಞಾನಿಗಳು, ಜಗತ್ತಿನ ಯಾವ ದೇಶದ ವಿಜ್ಞಾನಿಗಳಿಗಿಂತ

ಕಡಿಮೆಯಲ್ಲ. ತದ್ವಿರುದ್ಧ. ಕಳೆದ 40–50 ವರ್ಷಗಳಲ್ಲಿ ಭಾರತೀಯರು ಎಲ್ಲಾ ಬೌದ್ಧಿಕ ಚಟುವಟಿಕೆಗಳಲ್ಲಿ ಹಿಂದೆ ಬಿದ್ದಿದ್ದಾರೆ. ಇದರ ಕಾರಣ ಹೇಳಲೇ? ಮುಕ್ತ ವಿಚಾರಸರಣಿ ಭಾರತದಲ್ಲಿ ಎಲ್ಲ ವಿಷಯಗಳಲ್ಲೂ–ಕಲೆ–ಸಾಹಿತ್ಯ–ವಿಜ್ಞಾನಗಳಲ್ಲೂ ಹಿಮ್ಮೋಡು ಯಾಕೆ ಅನುಭವಿಸಿದೆ ?

ಅಧೋಗತಿಯ ತಾರೀಖು ಹೇಳಬಲ್ಲೆ, ಯಾ ದಿನ ಇಂಗ್ಲೆಂಡಿನಲ್ಲಿ Direct Method ದ ತತ್ವ ಪ್ರತಿಪಾದಿಸಲ್ಪಟ್ಟಿತೋ, ಆ ದಿನದ ಐದು ವರ್ಷಗಳಲ್ಲಿ ಭಾರತದ ಬುದ್ಧಿ ಜೀವನದ ಅಧಃಪತನ ಶುರುವಾಯಿತು. ಅಲ್ಲಿಯವರೆಗೆ ನಾವೆಲ್ಲ ಸ.ಮ. ಅಂತಲೆಯ 'ಭಾಷಾಂತರ ಪಾಠಮಾಲೆ' ಓದುತ್ತಿದ್ದೆವು. 1938ರ ಸುಮಾರಿಗೆ ಸ್ಕೂಲ್ ಇನ್ಸ್‌ಪೆಕ್ಟರರು ಶಾಲೆ ಹೊಕ್ಕು 'ಭಾಷಾಂತರಮಾಲೆ'ಯ ಕಾಪಿಗಳನ್ನು ಶಾಲೆಯಲ್ಲಿ ತರಬಾರದೆಂದು ನಿಷ್ಠುರವಾಗಿ ಹೇಳಿಬಿಟ್ಟರು. ನಾನು ಆಗ ಧಾರವಾಡದ ಕೆ.ಇ. ಬೋರ್ಡ ಹೈಸ್ಕೂಲಿನಲ್ಲಿ ಓದುತ್ತಿದ್ದೆನು. ನಮ್ಮದು ಹೇಳೀಕೇಳೀ ರಾಷ್ಟ್ರೀಯ ಶಾಲೆ. ಕಾನವೆಂಟ್ ಎಂದು ಈಗ ತಿಳಿಯಲಾಗುತ್ತಿದ್ದ ಧಾರವಾಡದ ಮಿಶನ್ ಹೈಸ್ಕೂಲಿನಲ್ಲೂ ಇದೇ ಕತೆ. ಏಕೆಂದರೆ, ಹೊಸ ಪದ್ಧತಿಯು ಡೈರೆಕ್ಟ ಮೆಥಡ್ ಬಂದಿದೆಯೆಂದು, ಗ್ರಾಮರ್–ಟ್ರಾನ್ಸ್ಲೇಶನ್ ಮೆಥಡ್ ಸಿಷಿದ್ಧವೆಂದೂ ಸಾರಲಾಯಿತು. ಬಿ.ಎಡ್, (ಈ.ಬಿ ಎಡ್.) ಕಾಲೇಜಿನಲ್ಲಿ ಈ ಹೊಸ ಮೇಥಡ್ ಕಲಿಸಿ ಧಡ್ಡ ಮಾಸ್ತರರನ್ನು ಒಂದೇ ವರ್ಷದಲ್ಲಿ ಜಾಣರಾಗಿ ಮಾಡಿ, 'ಟ್ರೇಂಡ್ ಟೀಚರ' ಮಾಡಿ ಶಾಲೆಗೆ ಕಲಿಸುವ ಪದ್ಧತಿ ಬಂದಿತು. ಈಗಾಗಲೇ ಶಾಲೆಯಲ್ಲಿ ಟೀಚರ್ ಎಂದು ಕಲಿಸುತ್ತಿದ್ದ ಜನರ ಇನ್‌ಕ್ರಿಮೆಂಟ್ ನಿಲ್ಲಿಸಿ, ಒಂದು ವರ್ಷ ಸ್ವಂತ ಖರ್ಚಿನಿಂದ ಬೆಳಗಾಂವಿ ಬಿ. ಎಡ್. ಕಾಲೇಜಿನಲ್ಲಿ ಡಿಗ್ರೀ ಪಡೆದರೇನೇ ಮೋಕ್ಷವೆಂದು ಸಾರಲಾಯಿತು. 1938 ರಿಂದ 48ರ ವರೆಗೆ ಇದೇ ಪದ್ಧತಿ ಚಾಲ್ತಿಯಲ್ಲಿ ಇತ್ತು. ಯುದ್ಧಕಾಲದಲ್ಲಿ ಸರಕಾರದವರು ಬೆಲೆಯುಬ್ಬರ ಪ್ರತಿರೋಧಕ್ಕಾಗಿ ಘಾಟೆ–ಪರುಳೇಕರ್ ಸಮಿತಿ ನೇಮಿಸಿತು. ಅಲ್ಲಿಯವರೆಗೆ ಸೆಕಂಡರಿ ಶಾಲಾ ಮಾಸ್ತರರಿಗೆ ಬಿ. ಎ. ಆದವರಿಗೆ 20 ರೂ. ಆಗದವರಿಗೆ 15ರೂ. ಸಂಬಳ ಕೊಡುತ್ತಿದ್ದರು. ಮಾಸ್ತರರು ಕಡಿಮೆಬಿದ್ದ ಮನೆ ಖರ್ಚನ್ನು ಟ್ಯೂಶನ್ ಮಾಡಿ ತುಂಬಿಕೊಳ್ಳುತ್ತಿದ್ದರು. ಘಾಟೆ–ಪರುಳೆಕರ ವರದಿ ಸರಕಾರ ಒಪ್ಪಿಕೊಂಡಮೇಲೆ ಮಾಸ್ತರರ ಸಂಬಳ-ತುಟ್ಟಿಭತ್ಯೆ ಕೂಡಿ ರೂ. 115ರೂ. ಅಷ್ಟೊತ್ತಿಗೆ, ಬಿ. ಎ. ಪದವೀಧರರ ಸ್ವರೂಪ ಬದಲಾಗಿತ್ತು. ಸಮಿತಿಯವರು ಬಿ. ಎ. ಆನರ್ಸ (II Class) ಇದ್ದವರಿಗೆ ಪ್ರಾಶಸ್ತ್ಯ ಕೊಟ್ಟ ನಂತರ ಸರಕಾರೀ ಖರ್ಚಿನಿಂದ ಬಿ. ಎ. ಕಲಿಯಲಿಕ್ಕೆ ಒಂದು ವರ್ಷ ಬೆಳಗಾಂವಿಯ ಸರದಾರ ಹೈಸ್ಕೂಲು ಬಿ.ಎ. ಕಾಲೇಜಿಗೆ ಕಲಿಸಬೇಕೆಂದು ವಿಧಿಸಿದರು. ಪಾರಂ ಇಲ್ಲದೆ ಆರು ತಿಂಗಳು ಅಲೆಯುತ್ತಿದ್ದ ವಿವಾಹಿತನಾದ ನನಗೆ ಡಿಸೆಂಬರ್ ತಿಂಗಳಲ್ಲಿ ಅನಪೇಕ್ಷಿತವಾಗಿ ಡಿ. ಇ. ಸಾಹೇಬರಿಂದ ನೇಮಕಾತಿ ಪತ್ರ ಬಂದಿತು.

ಘಾಟೇ-ಪರುಳೇಕರ್ ವಿಧಿಸಿದ ನಿಯಮದಂತೆ, ಎರಡೇವರ್ಷ ಈ ಪದ್ಧತಿ ಚಾಲ್ತಿಯಲ್ಲಿ ಇತ್ತು. ಈ ಅವಕಾಶದಲ್ಲೇ ನಾನು ವಿಜಾಪುರದ ಗವರ್ಮೆಂಟ್ ಅಗ್ರಿಕಲ್ಚರಲ್ ಶಾಲೆಯಲ್ಲಿ ಮಾಸ್ತರನಾದೆ, ಒಳ್ಳೇ ಶಿಕ್ಷಕನೆಂದೂ ಹೆಸರು ಪಡೆದೆ.

ನನ್ನ ದುರ್ದೈವಕ್ಕೆ ಇನ್ಸ್‌ಪೆಕ್ಷನ್ ಟೀಮು ಶಿಕ್ಷಕರನ್ನು ಪರೀಕ್ಷಿಸಲಿಕ್ಕೆ ಬಂತು.

ಏನೂ ಗೊತ್ತಿಲ್ಲದೆ ಕಲಿಸುತ್ತಿದ್ದ ನನಗೆ ಹಿರಿಯ ಮಾಸ್ತರರು ಉಪದೇಶ ಕೊಟ್ಟರು. ಅವೆರಡು ದಿನ ಮಾತ್ರ ನೀನು ಡೈರೆಕ್ಟ ಮೆಥಡ್ ಬಳಸಲೇಬೇಕು! ಇಂಗ್ಲಿಷ್ ಇಂಗ್ಲಿಷಿನಲ್ಲೇ ಕಲಿಸಬೇಕು: ಕನ್ನಡದಲ್ಲಿ ಅರ್ಥ ಹೇಳಬಾರದು; ಕೇಳಬಾರದು, 50 ನಿಮಿಷದ ವರ್ಗದಲ್ಲಿ ಒಂದೂ ಕನ್ನಡ ಶಬ್ದ ನಿನ್ನ ಬಾಯಿಂದ ಬರಕೂಡದು ವಿದ್ಯಾರ್ಥಿಗಳೂ ಇಂಗ್ಲೀಷಿನಲ್ಲೇ ಉತ್ತರ ಹೇಳತಕ್ಕದ್ದು.

ನಾನು ಇಂಗ್ಲಿಷ್ ಗ್ರಾಜ್ಯುಏಟ್ ಆದದ್ದರಿಂದ ಇಂಗ್ಲಿಷ್ ವರ್ಗ ಹೇಗಾದರೂ ಸಂಭವಿಸಬಹುದಿತ್ತು. ಮುನ್ನಾದಿನವೇ ಕೆಲವು ಪ್ರಶ್ನೆಗಳನ್ನು ಕೊಟ್ಟು ಅವುಗಳಿಗೆ ತಕ್ಕ ಉತ್ತರವನ್ನೂ ಕೆಲವು ಒಳ್ಳೇ ವಿದ್ಯಾರ್ಥಿಗಳಿಂದ ರಿಹರ್ಸ ಮಾಡಿಸಿ ಇಟ್ಟುಕೊಂಡಿದ್ದೆ. ಅದೇ ವರ್ಷ ಖೇರ್ ಮುಖ್ಯಮಂತ್ರಿಗಳು ತಮ್ಮದೇ ಬುದ್ಧಿಯ ಕೈಗೂಸಾದ 'ಲೋಕಶಾಳಾ No. 1'ಕ್ಕೆ ಸಂಸ್ಕೃತ ಕಲಿಸುವದೂ ನನ್ನ ಪಾಲಿಗೆ ಬಂದಿತು, ಅಲ್ಲಿಯೂ ಈ ರೀತಿ ರಿಹರ್ಸ ಮಾಡಿಸಿ ಕೆಲವು ವಿದ್ಯಾರ್ಥಿಗಳನ್ನು ತಯಾರು ಮಾಡಿಇಟ್ಟುಕೊಂಡಿದ್ದೆ. ಹಿರಿಯ ಮಾಸ್ತರರು ನೀಡಿದ ಉಪದೇಶವೇನೆಂದರೆ, 'ನಿನಗೆ ಸಂಸ್ಕೃತದ ಬಗ್ಗೆ ಚಿಂತೆ ಬೇಡ. ನಿರೀಕ್ಷಣಕ್ಕೆ ಶ್ರೀ ಟಿಕ್ಕರಮಠ ಸಾಹೇಬರು ಬರುತ್ತಾರೆ. ತುಂಬ ಒಳ್ಳೆಯವರು'. 'ನಾನು ಸಂಸ್ಕೃತದಲ್ಲೇ ಪ್ರಶ್ನೆ ಕೇಳುವದೇ ?' 'ಹೌದು ಅದೇ ಡೈರೆಕ್ಟ ಮೆಥಡ್' ಮತ್ತೆ ಕೆಲವು ವಿದ್ಯಾರ್ಥಿಗಳಿಗೆ 'ನಾನು ಹೀಗೆ ಕೇಳುತ್ತೇನೆ. ನೀವು ಈ ಉತ್ತರ ಕೊಡಬೇಕು' ಎಂದು ರಿಹರ್ಸ ಮಾಡಿಸಿದೆ.

ಸಾಹೇಬರು ಬಂದರು. ಪ್ರಶ್ನೋತ್ತರ ಶುರುವಾದವು 'ಕಿಂ ತವ ನಾಮ ಧೇಯಂ?' ಇತ್ಯಾದಿ ಕೆಲವು ಪ್ರಶ್ನೆಗಳನ್ನು ಸಲೀಸಾಗಿ ವ್ಯಾಕರಣ ಶುದ್ಧ ಸಂಸ್ಕೃತದಲ್ಲಿ ಕೇಳಿದೆ. ಅಪೇಕ್ಷಿತ ಉತ್ತರಗಳೂ ಬಂದವು. ಇದರಿಂದ ಉತ್ಸಾಹಗೊಂಡ ನನಗೆ ಏನು ದುರ್ಬುದ್ಧಿ ಹೊತ್ತಿತೋ ಏನೋ! ಅದೇ ಓಘದಲ್ಲೇ ಜಗತ್ತಿನಲ್ಲಿ ಇಲ್ಲದ ಪ್ರಶ್ನೆಯನ್ನು ಕೇಳಲು ಯತ್ನ ಮಾಡಿದೆ. 'ನೀನು ನಿಮ್ಮಪ್ಪನ ಎಷ್ಟನೆಯ ಮಗನು ?" ಉದ್ದಿಷ್ಟ ಪ್ರಶ್ನೆ ಇದು. 'ಎಷ್ಟನೆಯ' ಎಂಬುದಕ್ಕೆ ಸಂಸ್ಕೃತದಲ್ಲಿ ಶಬ್ದವೇನು, ನೆನಪಾಗಲೊಲ್ಲದು. ಈ ಪ್ರಶ್ನೆ ಸಂಸ್ಕೃತದಲ್ಲಾಗಲೀ, ಇಂಗ್ಲೀಷಿನಲ್ಲಾಗಲೀ ಕೇಳುವದು ಬಲು ಕಠಿಣ. ತಬ್ಬಿಬ್ಬಾಗಿ ಏದುತ್ತ ನಿಂತೆ.

ಸಾಹೇಬರು ಮುಗುಳ್ನಗೆ ನಕ್ಕು, 'ಚೆನ್ನಾಗಿ ಕಲಿಸುತ್ತೀಯಲ್ಲ!' ಎಂದು ಎದ್ದರು. ಇನ್‌ಸ್ಪೆಕ್ಷನ್ ಹತ್ತುನಿಮಿಷಕ್ಕೆ ಪೂರ್ಣವಿರಾಮವಾಯಿತು. ಏನು ಬರೆದರೋ ಗೊತ್ತಿಲ್ಲ. ಇವೆಲ್ಲ ನಾಟಕವೆಂದು ಅವರಿಗೂ ಗೊತ್ತಿರಬಹುದೇ? ಇಂದೂ ನನಗೆ ತಿಳಿದಿಲ್ಲ. ನೌಕರಿಗೆ ಬಡ್ತಿ ಬರಲಿಲ್ಲ.

ಇದು ಶಿಕ್ಷಕನ ಸ್ವಾನುಭವ. ಇನ್ನು ವಿದ್ಯಾರ್ಥಿಯ ಸ್ವಾನುಭವ ಹೇಳುತ್ತೇನೆ. ನಾನು ಮುಂಬೈಯ ಐ.ಐ.ಟಿಯಲ್ಲಿ ಇರುವಾಗ, ಫ್ರೆಂಚ್ ಭಾಷೆ ಕಲಿಯುವ ಮನಸ್ಸಾಯಿತು. ಅಲಿಯಾನ್ಸ್ ಫ್ರಾನ್ಸೆಸ್ ಅನುಭವವುಳ್ಳ ಶಿಕ್ಷಕರು. ಫ್ರೆಂಚ್ ಭಾಷೆ ಕಲಿಸುವದಕ್ಕಾಗಿ ಒಂದು ತಿಂಗಳು ಬರುತ್ತಿದ್ದರು. ಆಫ್ರಿಕಾ ಮುಂತಾದ ಖಂಡಗಳಲ್ಲಿ ಫ್ರೆಂಚ್ ಭಾಷೆಯನ್ನು ಡೈರೆಕ್ಟ್ ಮೆಥಡ್‌ನಿಂದ ಕಲಿಸಿ ಬಂದಿದ್ದರೆಂದು ಕೀರ್ತಿ ಇತ್ತು. ಬೋರ್ಡ್ ಮೇಲೆ ಒಂದು ಚಿತ್ರ ತೂಗು ಹಾಕಿ ಕಲಿಸುತ್ತಿದ್ದರು. ಒಂದು ಮನೆ. ಕೆಳಗೆ ಬಾಗಿಲು. ಮೇಲೆ ಮೂಲೆಯಲ್ಲಿ ಒಂದು ಕಿಟಕಿ. ನಾಲ್ಕು ಉಪನ್ಯಾಸಗಳನ್ನು ಕೇಳಿದೆ. ಶಿಕ್ಷಕರು ತುಂಬಾ ಉತ್ಸಾಹದ ಮೂರ್ತಿ. ಕ್ಲಾಸಿನ ತುಂಬಾ ಕುಣಿದಾಡುತ್ತಿದ್ದರು. ಅವರ ಉತ್ಸಾಹ ಚಟುವಟಿಕೆ ನೋಡುವದೇ ತುಂಬಾ ಸಂತೋಷ. ನಾಲ್ಕನೆಯ ವ್ಯಾಖ್ಯಾನ ಮುಗಿಯಿತು. ನನ್ನ ಜೊತೆ ಕೂಡುತ್ತಿದ್ದ, ತುಸು ಫ್ರೆಂಚ್ ಬಲ್ಲ ಇನ್ನೊಬ್ಬನಿಗೆ ಶಬ್ದಾರ್ಥ ಕೇಳಿದೆ. ನಾನು ಬರೆಸಿಟ್ಟುಕೊಂಡ ಶಬ್ದಗಳ ಅರ್ಥವೇನು ? ಯಾವ ಶಬ್ದಗಳನ್ನು ನಾನು 'ಬಾಗಿಲು' ಮತ್ತು 'ಕಿಟಕಿ' ಎಂದು ತಿಳಿದುಕೊಂಡಿದ್ದೆನೋ, ಅವುಗಳ ಅರ್ಥ 'ಮೇಲೆ' ಮತ್ತು 'ಕೆಳಗೆ' ನಂತರ ವ್ಯಾಖ್ಯಾನಗಳಿಗೆ ಹೋಗುವದನ್ನು ನಿಲ್ಲಿಸಿದೆ.

ಯಾ ಭಾಷೆಯನ್ನು ಕಲಿಸುತ್ತಾರೋ ಅದೇ ಭಾಷೆಯಲ್ಲೇ ಕಲಿಸುವದು ಇತ್ತೀಚಿನ ಶಿಕ್ಷಣ ಶಾಸ್ತ್ರದ ಒಂದು ಭ್ರಮೆಯಾಗಿದೆ. ಮಾತೃಭಾಷೆ ಅಥವಾ ಪೂರ್ವಾಭ್ಯಾಸದ ಭಾಷೆಯನ್ನು ಬಳಕೆಮಾಡಿದರೆ ಶಬ್ದಗಳ ನಿಶ್ಚಿತ ಅರ್ಥ ತಿಳಿಯುತ್ತದೆ ಮಾಧ್ಯಮವೇ ಹೊಸ ಭಾಷೆಯಾದರೆ, ವಿದ್ಯಾರ್ಥಿ ತಾನು ಕಲ್ಪಿಸಿದ ಅರ್ಥವೇ ನಿಶ್ಚಿತಾರ್ಥವೆಂದು ತಿಳಿದುಕೊಳ್ಳುತ್ತಾನೆ. ಡೈರೆಕ್ಟ ಮೆಥಡದ ಮೂಲ ದೋಷವೇ ಇದು. ಈ ಗಾಗಲೇ ಗೊತ್ತಿದ್ದ ಭಾಷೆಯನ್ನು ಬಳಸದೆ, ತನ್ನ ಆಂಗಿಕ ಚಲನ ವಲನದಿಂದ ಸೂಚಿಸಿ ಸೂಚಿಸಿ ದಣಿದು ಕೊನೆಗೆ ಯತ್ನ ವಿಫಲವಾಗುತ್ತದೆ. This is my head. Show me your head ? ಎಂದು ತಲೆ ತಲೆ ಚಚ್ಚಿಕೊಂಡರೂ Headದ ಅರ್ಥ Hair ಎಂಬ ವಿಕಲ್ಪವನ್ನು ತಪ್ಪಿಸಲಾಗುವುದಿಲ್ಲ. Head 'ಹೆಡ್' ಎಂದರೆ 'ತಲೆ' ಇಷ್ಟು ಹೇಳಿದರೆ ಯಾವ ನಿಶ್ಚಯಾರ್ಥ ತಿಳಿಯುವುದೊ ಅದು ಡೈರೆಕ್ಟ ಮೆಥಡ್‌ದಿಂದ ಸಾಧ್ಯವಾಗುವುದಿಲ್ಲ. ಭಾಷಾಂತರ ಪದ್ಧತಿಯಿಂದ From the known to the unknown, ಈ ಶಿಕ್ಷಣ ಶಾಸ್ತ್ರದ ಮೊದಲ

ತತ್ವ ನಾವು ಪಾಲಿಸಿದಂತೆ ಆಗುತ್ತದೆ. ಈ ತತ್ವವನ್ನು ಬಿಟ್ಟೀ Direct Method ಕಲಿಸುವ ಎಲ್ಲ ಹೊಣೆಯನ್ನೂ ಶಿಕ್ಷಕನ ವ್ಯಕ್ತಿತ್ವದ ಮೇಲೆ ಹೇರಿ, ಪೂರ್ವಾಭ್ಯಾಸದ ಲಾಭವನ್ನು ವಿದ್ಯಾರ್ಥಿಗಳಿಗೆ ನಿರಾಕರಿಸಲಾಗುತ್ತದೆ.

ಹಾಗಾದರೆ, ಭಾಷಾ ಬೋಧನೆಯಲ್ಲಿ ಡೈರೆಕ್ಟ್ ಮೆಥಡ್ (ನೇರ ಪದ್ಧತಿ) ಯಾವಾಗ, ಎಲ್ಲಿ, ಏಕೆ, ಶಿಕ್ಷಣ ವ್ಯವಸ್ಥೆಯಲ್ಲಿ ಬಂದಿತು ? ಹೇಗೆ ಕಾರ್ಯಗತವಾಯಿತು ? ಯಾವ ರಾಕ್ಷಸ ರೂಪದ ಸರ್ವಭಕ್ಷಕ ಪದ್ಧತಿಯಾಗಿ ಭಾರತಕ್ಕೆ ಬಂದಿತು ? ಇಂಗ್ಲೀಷ್ ಭಾಷೆ ಇಂಗ್ಲೀಷಿನಲ್ಲೇ ಕಲಿಸುವದು : ಹಿಂದೀ ಹಿಂದೀಯಲ್ಲೇ ಕಲಿಸುವದು ; ಸಂಸ್ಕೃತ ಪಾಲಿಗಳನ್ನು ಸಂಸ್ಕೃತ ಪಾಲಿಗಳಲ್ಲೇ ಕಲಿಸುವದು ಅನನ್ಯ ಅಗತ್ಯ ಬೋಧನಾಕ್ರಮವೆಂದು ಇನ್ಸಪೆಕ್ಸರ್ ದಿನ ಒಂದೇ ದಿವಸ. ಈ ರಾಕ್ಷಸನಿಗೆ ಭಯ ಭಕ್ತಿಯಿಂದ ಎಡೆ ನೀಡುವ ಪದ್ಧತಿ ಭಾರತದಲ್ಲಿ ಏಕೆ ರೂಢಮೂಲವಾಯಿತು ? ಅದರ ಲೋಪ ದೋಷಗಳನ್ನು ದಿನಾಲು ನೋಡುತ್ತ ಬಂದ ಸೆಕೆಂಡರಿ ಶಿಕ್ಷಕರು ಯಾಕೆ ಸಹನೆ ತೆಗೆದುಕೊಂಡರು ? ಇಂದಿಗೂ ಯಾಕೆ ಸಹನಶೀಲರಾಗಿದ್ದಾರೆ ? ಭಾಷಾ ಬೋಧನೆಯಲ್ಲಿ 'ಡೈರೆಕ್ಟ ಮೆಥಡ್' ವ್ಯರ್ಥ ಹೊರೆ ಎಂಬುದು ಅವರಿಗೂ ಗೊತ್ತಿದೆ. ಕೇಳಿ ನೋಡಿರಿ ! ಹಾಗೆ ಪ್ರೈರೆಕ್ಟ್ ಆಗಿ ಹೇಳಲು ಯಾರೂ ಒಪ್ಪುವುದಿಲ್ಲ. ಏಕೆಂದರೆ......ಅವರಿಗೆ ಅವರ ಬಿ.ಇಡಿ. ಟ್ರೈನಿಂಗದಲ್ಲಿ ಹಾಗೆ ನಂಬಿಸಿದ್ದಾರೆ

3

1930 ರ ಸುಮಾರಿಗೆ ಇಂಗ್ಲೆಂಡಿನಲ್ಲಿ ಡೈರೆಕ್ಟ ಮೆಥಡ್ ಹೊಸ ಪದ್ಧತಿಯೆಂದು ಪ್ರಚಾರಕ್ಕೆ ಬಂತು. Descriptive Linguistics ಅಪತ್ಯಕ್ಷ ಪರಿಣಾಮವೋ ಏನೋ, ಈ ಹೊಸ ಪದ್ಧತಿ ನೇರವಾಗಿ ಇಂಗ್ಲೆಂಡಿನ ಶಿಕ್ಷಣ ಶಾಸ್ತ್ರಿಗಳಿಗೆ ಪ್ರಿಯವಾಯಿತು. 1930ರ ಸುಮಾರಿಗೆ 'ಇದೊಂದೇ ಸರಿ' ಎಂದು ತಿಳಿಯತೊಡಗಿದರು. ಇದೇ ಸುಮಾರಿಗೆ ಭಾರತದಲ್ಲಿ ಬಳಕೆಗೆ ಬಂದ Grammer Translation ಪದ್ಧತಿ ಬಹಳ ಕೆಟ್ಟದೆಂದು, ಇದರಿಂದ ಭಾರತದ ಇಂಗ್ಲಿಷ್ ಶಿಕ್ಷಣವೇ ಕೆಡುತ್ತಿದೆಯೆಂದೂ ಈ ಶಾಸ್ತ್ರಿಗಳು ಇಂಗ್ಲೆಂಡಿನಲ್ಲಿ ಪ್ರಚಾರ ಮಾಡತೊಡಗಿದರು. ಇದೇ ಸುಮಾರಿಗೆ ನರೂಲಾ, ಖಾನ್, ಮುಂತಾದ ಶಿಕ್ಷಕರು ಸರಕಾರದ ಖರ್ಚಿನಲ್ಲಿ ಇಂಗ್ಲಂಡಿಗೆ ಹೋಗಿ ಡೈರೆಕ್ಟ್ ಮೆಥಡ್ ಕಲಿತುಬಂದರು. ಇವರೇ ಡೈರೆಕ್ಟರ್ ಆಫ್ ಎಜುಕೇಶನ್ ಆದರು. ಹೊಸ ಕಸಬರಿಗೆಗಳು ಸ್ವಚ್ಛ ಉಡುಗುವಂತೆ ಇವರು 1938ರ ವರೆಗೆ ಹಳೆಯ Grammer-Translation ಪದ್ಧತಿಯನ್ನು ನಿರ್ಮೂಲಗೊಳಿಸಲು ಯತ್ನ ಶುರುಮಾಡಿದರು. ಬಿಇಡ್ ಕಾಲೇಜುಗಳಲ್ಲಿ ಪದವಿಗಾಗಿ, ಕೊನೆಗೆ, 1940ರ ಸುಮಾರಿಗೆ ಶಾಲೆ ಶಾಲೆಗಳಿಗೆ

ಭೇಟಿನೀಡಿ, ತರ್ಖಡಕರ-ಸ.ಮು. ಅಂಕಲಿಯುವರ ಭಾಷಾಂತರ ಗ್ರಂಥಗಳನ್ನು ಶಾಲಿಗಳಲ್ಲಿ ನೋಡಲಿಕ್ಕೂ ಸಿಕ್ಕದಂತೆ ಮಾಡುವ ಡೈರೆಕ್ಟ ಆಕ್ಶನ್ ತೆಗೆದುಕೊಂಡರು ಯಾವ ಪದ್ಧತಿ ಭಾರತಕ್ಕೆ ಲಾಲಾ ಲಜಪತರಾಯ, ಗೋಖಲೆ, ಗಾಂಧಿಗಳನ್ನು ಕೊಟ್ಟಿತೋ ಆ ಪದ್ಧತಿಯ ಹೆಸರು ಎತ್ತುವದು ಘೋರ ಪಾಪವೆಂದು ಪರಿಗಣಿಸಲಿಕ್ಕೆ ಮೊದಲಾಯಿತು. ಆವಾಗಿನಿಂದ 'This is my head. Show me your head'. ಎಂದು ತಲೆ ತಲೆ ಚಚ್ಚಿಕೊಳ್ಳುತ್ತ ಕ್ಲಾಸಿನ ತುಂಬೆಲ್ಲ ಭರತನಾಟ್ಯ ಮಾಡುವ ವ್ಯಥೆ ಶುರುವಾಯಿತು. ಭಾರತದಲ್ಲಿ Head ಹೆಡ್ ಎಂದರೆ ತಲೆ, ಹೇಳುವುದೆಂದರೆ ನೌಕರಿ ಕಳಕೊಳ್ಳುವುದು, ಅಥವಾ ಶಾಲೆಗೆ ಗ್ರ್ಯಾಂಟ್ ಬಂದಾಗುವದು, ಎಂಬ ಭಾವನೆ ಬೆಳೆಯಿತು. ಏಕೆಂದರೆ, Head ಎಂದರೆ ತಲೆ, ಎಂದು ಹೇಳುವದು ಕಡಿಮೆ ಶ್ರಮ. ಹೆಚ್ಚು ಶ್ರಮದ ಭರತನಾಟ್ಯಂ ಮಾಡಿ ಶಿಕ್ಷಕನು ಜೋರನೇ ಬೆವೆತು ಶ್ರಮಪಡದ ಹೊರತು ಅವನಿಗೆ ಘಾಟೇ-ಪರುಳೇಕರ ಸಂಬಳ ಕೊಡುವದು ವ್ಯರ್ಥ, ಎಂಬ ಭಾವನೆ ಬಂದು ಬಿಟ್ಟಿತು. ಕಾಲಕಾಲಕ್ಕೆ ಶಿಕ್ಷಣ ಸುಧಾರಣೆಯ ಮೂಲಕ, ಎಸ್ಎಸ್ಸಿ ಪರೀಕ್ಷೆಯಲ್ಲಿ ಈ "ಶ್ರಮಬಟ್ಟು" ಕಲಿಸುವ ಡೈರೆಕ್ಟ ಮೆಥಡ್‌ದ ಅನುಸಾರವಾಗಿ, ನಮ್ಮ ಜ್ಞಾನದ ವಿಸ್ತಾರವನ್ನು ಮೊಟಕುಗೊಳಿಸಲಾಯಿತು. ಹಾಸಿಗೆ ಇದ್ದಷ್ಟು ಕಾಲು ಚಾಚು, ಎಂಬ ಗಾದೆ ಇದೆ. ಹಾಸಿಗೆಯನ್ನು ಸಣ್ಣದು ಮಾಡಿಬಿಟ್ಟರೆ ಕಾಲು ಚಾಚುವ ಶ್ರಮ ಉಳಿತಾಯವಾದಂತಲ್ಲವೇ ? ಎಸ್.ಎಸ್.ಸಿ. ಪರೀಕ್ಷೆಗಾಗಿ 5000 ಶಬ್ದಸಂಗ್ರಹ, ನಂತರ 3000 ನಂತರ 2000 ಶಬ್ದಗಳ ಸಂಪತ್ತು ಗೊತ್ತು ಮಾಡಲಾಯಿತು. ಏಕೆಂದರೆ, ಪ್ರತಿಶಬ್ದ ಕಲಿಸಲಿಕ್ಕೆ ಮಾಡುವ ಭರತನಾಟ್ಯದ ಶ್ರಮದ ಸರಾಸರಿಯಂತೆ ನಮ್ಮ ಶಬ್ದ ಸಂಪತ್ತೂ ಬದಲಾಗಬೇಕಲ್ಲ ! ಒಂದು ವರ್ಷ(ನನಗೆ ನೆನಪಿಲ್ಲ) 600 ಶಬ್ದಗಳ ಅಗಾಧ ಸಂಪತ್ತು ಎಸ್.ಎಸ್.ಸಿ ಪರೀಕ್ಷೆಗೆ ಗೊತ್ತುಮಾಡಿದ್ದುಂಟು.

ಇಂಗ್ಲೀಷನ್ನೂ ಇಂಗ್ಲೀಷಿನಲ್ಲೇ, ಹಿಂದಿಯನ್ನು ಹಿಂದಿಯಲ್ಲೇ, ಸಂಸ್ಕೃತವನ್ನು ಸಂಸ್ಕೃತದಲ್ಲೇ ಕಲಿಸುವ ಹಟವೇಕೆ? ಅದರ ಮೂಲ ತತ್ವವೇನು?

ಮಾತೃಭಾಷೆಯ ಭಾಷಾ ರಚನೆಗಳು ಆಯಾ ಬೋಧನ ಭಾಷೆಯಲ್ಲಿ ಸೇರ್ಪಡೆಯಾಗಬಹುದೆಂಬInterference ಎಂಬ Phenomenon ತಪ್ಪಿಸುವುದಕ್ಕಾಗಿ, ಎಂದು ಹೇಳುತ್ತಾರೆ. ಇದಕ್ಕೆ ಮುಖ್ಯ ಉದಾಹರಣೆ. Did you wind your watch? ಬದಲು Did you give key to your watch? ಎಂದು ಆಕಸ್ಮಾತ್ತಾಗಿ ಆ ಸಂದರ್ಭದಲ್ಲಿ ಕೆಲವು ಭಾರತೀಯರು ಮಾತಾಡಿದ್ದನ್ನು ಸ ಧಾರಿಸುವುದಕ್ಕಾಗಿ. ಇಂಥ ನಿರ್ಮಲ, ಘನ ಉದ್ದೇಶಗಳಿಗಾಗಿ ಬ್ರಿಟಿಷ್ ಮಹಾಪಂಡಿತರು Direct Method ಗೂ ಹಲವಾರು ಸುಧಾರಣೆಗಳನ್ನು ತಂದರು. ಐ. ಎ. ರಿಚರ್ಡ್ಸ್ ತನ್ನ ಜಪಾನಿನಲ್ಲಿ ಇಂಗ್ಲಿಷ ಕಲಿಸುವ ಅನುಭವದಿಂದ 1500ರ ಶಬ್ದ ಸಂಪತ್ತಿನಿಂದ ಪರಿಪೂರ್ಣವಾದ

Basic English ಪ್ರಚಾರದಲ್ಲಿ ತಂದನು. ನಮ್ಮ ಎಸ್. ಎಸ್. ಸಿ. ಆದರ್ಶಗಳೂ ಬದಲಾದವು. ಪಾಮರ್ ಎಂಬ ಪಾಮರನು Elementary English, Spoken English ಮುಂತಾದ ತಮ್ಮ ಜಪಾನಿನ ಅನುಭವದಿಂದ ಹುಟ್ಟಿಸಿಕೊಂಡ ಆದರ್ಶ ನಮ್ಮಲ್ಲಿ 600 ಶಬ್ದ ಸಂಪತ್ತಿಗೆ ಕಾರಣವಾಯಿತು. ಇನ್ನಾರೋ ತಮ್ಮ ಜಪಾನಿನ ಅನುಭವ ಆಧರಿಸಿ 'ಸ್ಟ್ರಕ್ಚರ್ ಪದ್ಧತಿ' ತಂದರು. ಅದೂ ನಮಗೆ ಬೇಕಾಯಿತು. to wind ones watch ಎಂಬ ಸ್ಟ್ರಕ್ಚರ್ ಮೊದಲು ವಿವರಿಸಿ. Did you wind your watch? ಎಂಬ Structure ಮಾಡಬಹುದೆಂದು ಹೇಳಿದರು. ನಮ್ಮ ಆದರ್ಶಗಳೂ ಹಾಗೇ ರೂಪುಗೊಂಡವು ಈ ವರ್ಷ ಸ್ವೀಕರಿಸಿದ ಆದರ್ಶ ಇನ್ನೆರಡು ವರ್ಷಗಳಲ್ಲಿ ಲೋಪಗೊಂಡವು. see and say, ಎಂಬ ಪದ್ಧತಿಯೂ ಬಂದಿತು. ಎಲ್ಲವುಗಳ ಉದ್ದೇಶ ಒಂದೇ ಮಾತೃ ಭಾಷೆಯ ನೆರವು ಪಡೆಯದೇನೇ ಇಂಗ್ಲಿಷ್ ಕಲಿಸುವುದು ; ಕಲಿಯುವುದು.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹುಟ್ಟಿಸಿದ ಹೊಸ ಹೊಸ ಬೇನೆಗಳಿಗೆ ತುತ್ತಾದವರು ಭಾರತೀಯರು. ಇದ್ದದ್ದನ್ನು ಕೈಬಿಟ್ಟು ಇಲ್ಲದ್ದಕ್ಕಾಗಿ ತೊಳಲಾಡುತ್ತಿದ್ದೇವೆ. ಮೆಕಾಲೆ ಸಾಹೇಬರು ಭಾರತೀಯರನ್ನು ಕಾರಕೂನರನ್ನಾಗಿ ಮಾಡಲೆಂದು ಇಂಗ್ಲಿಷ ಶಿಕ್ಷಣ ಶುರುಮಾಡಿದನಂತೆ. ಅವನ ಕಾಲಕ್ಕೆ ಕನಿಷ್ಟ ಕಾರಕೂನನಾದರೂ ಇರುತ್ತಿದ್ದರು. ಈಗ ರಜಾಚೀಟಿ ಬರೆಯಲಿಕ್ಕೂ ನಮ್ಮ ಪದವೀಧರರು ಇನ್ನೊಬ್ಬರಿಗೆ ಕೇಳಬೇಕಾಗಿದೆ.

ಹಿಂದಿನ ಭಾಷಾಂತರ ಪದ್ಧತಿಯು ಏಕಕಾಲದಲ್ಲೇ ಮಾತೃಭಾಷೆ–ಬೇರೆ ಭಾಷೆಗಳ ನಡುವೆ ಸೇತುವೆ ರಚಿಸುತ್ತಿತ್ತು. ಬೇರೆ ಭಾಷೆಯನ್ನು ಮಾತೃಭಾಷೆಯನ್ನಾಗಿ ಮಾಡಿಕೊಳ್ಳುವ ಕೃತ್ರಿಮ ಸಂದಿಗ್ಧವನ್ನು ತಪ್ಪಿಸುತ್ತಿತ್ತು. ಯಾವಾಗಲೂ ನಮ್ಮ ಮಾತೃಭಾಷೆ ಮಾತೃಭಾಷೆಯೇ ಎಂಬ ಅರಿವನ್ನು ಜಾಗೃತಿಗೊಳಿಸುತ್ತಿತ್ತು. ಅಲ್ಲೊಮ್ಮೆ ಇಲ್ಲೊಮ್ಮೆ Interference ಮೂಲಕ ತಪ್ಪುತಡೆಗಳಾದರೂ, ಅನುಭವದ ಮೂಲಕ ಅವುಗಳ ಸುಧಾರಣೆ ಶಕ್ಯವಿತ್ತು. ಬೇರೆ ಭಾಷೆಯ ಶಬ್ದ ಸಂಪತ್ತು ಮಾತೃಭಾಷೆಯ ಸಹಾಯದಿಂದ ಸಮೃದ್ಧಗೊಳ್ಳುತ್ತಿತ್ತು. ಶಬ್ದಗಳ ಸರಿಯಾದ ಅರ್ಥ ತಿಳಿಯುತ್ತಿತ್ತು. ಭಾಷಾಬೋಧನೆಯಲ್ಲಿ ಹೊರಭಾಷೆಯನ್ನು ಮಾತೃಭಾಷೆಯೆಂದಾಗಿ ಕಲ್ಪಿಸಿಕೊಳ್ಳುವ ಗುಲಾಮ ಮನೋವೃತ್ತಿ ಅಗತ್ಯ ಬೀಳುತ್ತಿದ್ದಿಲ್ಲ. ಸ್ವಾತಂತ್ರ್ಯ ಬಂದ ನಂತರ, ನಮ್ಮ ಸುಧಾರಣೆಗಳ ಮೂಲಕ ಇನ್ನಷ್ಟು ಕ್ಷುದ್ರ ಗುಲಾಮರಾಗಿದ್ದೇವೆ. ಇದಕ್ಕೆ ಒಂದೇ ಉಪಾಯ–ಮತ್ತೆ, ನಮ್ಮ ಹಳೆಯ Grammar Translation ಪದ್ಧತಿಗೆ ಮರಳಬೇಕು. ಅದು ಇನ್ನಷ್ಟು ಸುಧಾರಿತ

ಪಾಠ್ಯ ಪುಸ್ತಕಗಳ ಮೇಲೆ ಆಧರಿಸಿರಬೇಕು. ಏನೇ ಆದರೂ ಭಾಷಾಂತರ ಪದ್ಧತಿಗೆ ನಾವು ಮರಳದ ಹೊರತು ಯಾವ ಶಿಕ್ಷಣ ಸುಧಾರಣೆಯೂ ಶಕ್ಯವಿಲ್ಲ. ಸೆಲವೇ ಪೊಳ್ಳುದಾಗ ಅದರ ಮೇಲೆ ಮನೆ ಕಟ್ಟುವ ಹವ್ಯಾಸ ಬೇಡ.

ಬೆಲ್ಜಿಯಂ, ಹಾಲಂಡಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿ ನಾಲ್ಕು ಭಾಷೆ ಕಲಿಯುತ್ತಾನೆ. ಭಾರತೀಯರು ಅಷ್ಟು ಬುದ್ಧಿವಂತರಿರಲಿಕ್ಕಿಲ್ಲವೆಂದು ಒಪ್ಪಬೇಕಾಗಿಲ್ಲ. ಒಪ್ಪಿದರೂ, ನಮ್ಮ ಶಿಕ್ಷಣಕ್ಕಾಗಿ ಎರಡು ಭಾಷೆಯಂತೂ ಬೇಕೇ ಬೇಕು. ಶಿಕ್ಷಣ ಮಾಧ್ಯಮ ಕನ್ನಡವೇ ಆದರೆ ಹೇಗೆ ನಮ್ಮ ಗುರಿ ಸಾಧಿಸಬಲ್ಲೆವೆಂದು ಮುಂದಿನ ಭಾಷಣದಲ್ಲಿ ತೋರಿಸುತ್ತೇನೆ.

ಸದ್ಯಕ್ಕೆ ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕೆಂದು ಬೇಡುತ್ತೇನೆ.

'ಗದಾಯುದ್ಧ'ದ ಒಂದು ಪಾಠ ವಿಚಾರ

ರನ್ನನ 'ಗದಾಯುದ್ಧ'ದಲ್ಲಿ, ಮಡಿದ ಕರ್ಣನನ್ನು ಕುರಿತು ದುರ್ಯೋಧನ ದುಃಖಿಸುವ ಸಂದರ್ಭದ ಒಂದು ಪದ್ಯವಿದು :

ತರಣಿಯ ತನಯನ ನೆನೆದಾ
ಸ್ಮರಣದೆ ಕಯ್ಗಣ್ಮುವೆನ್ನ ಶೋಕಮಹಾಸಾ
ಗರಮಂ ತವೆ ಪೀರ್ದುದು ಭೀ
ಕರ ಮತ್ಕೋಪಾಗ್ನಿ ಬಾಡಬಾಗ್ನಿಯ ತೆಱದಿಂ (೫.೩೭)

ಈ ಪಾಠ ಮಂ. ಅ. ರಾಮಾನುಜಯ್ಯಂಗಾರ್ ಅವರ ಸಂಪಾದನದ್ದು (೧೯೨೫). ಈ ಪದ್ಯದ ಪ್ರಥಮ ಪಾದಕ್ಕೆ ಕೆಲವು ಪಾಠಾಂತರಗಳಿವೆ : "ತರಣಿತನಯನ ಗುಣೌಘ", "ತರಣಿ ತನೂಜ ಗುಣೌಘ", ಮತ್ತು "ಅರುಣತನಯನ ಗುಣೌಘ". ತೀ.ನಂ. ಶ್ರೀಕಂಠಯ್ಯನವರು ತಮ್ಮ 'ಗದಾಯುದ್ಧ ಸಂಗ್ರಹ'ದಲ್ಲಿ 'ತರಣಿತನಯನ ಗುಣೌಘ' ಎಂಬ ಪಾಠವನ್ನು ಸ್ವೀಕರಿಸಿದ್ದಾರೆ; ಅದನ್ನೆ ಬಿ. ಎಸ್. ಸಣ್ಣಯ್ಯ ಮತ್ತು ರಾಮೇಗೌಡರು ತಮ್ಮ ಇತ್ತೀಚಿನ ಸಂಪಾದನದಲ್ಲಿ ಅನುಸರಿಸಿದ್ದಾರೆ. ಆದರೆ ಕೆ. ವಿ. ಕೃಷ್ಣಭಟ್ಟರು ತಮ್ಮ ಸಂಪಾದನದಲ್ಲಿ "[ತರಣಿತನಯಾನನೇಂದು]" ಎಂಬುದಾಗಿ ಊಹಾತ್ಮಕ ಪರಿಷ್ಕರಣ ಮಾಡಿದ್ದಾರೆ; ಅದನ್ನು ಆರ್. ವಿ. ಕುಲಕರ್ಣಿಯವರೂ ತಮ್ಮ ಗದ್ಯಾನುವಾದಸಹಿತ ಆವೃತ್ತಿಯಲ್ಲಿ ಇಟ್ಟುಕೊಂಡಿದ್ದಾರೆ.

ಈ ವಿವಿಧ ಪಾಠಗಳಲ್ಲಿ ಕೆ. ವಿ. ಕೃಷ್ಣಭಟ್ಟರ ಊಹಾತ್ಮಕ ಪಾಠವೆ ಸರಿಯಾದ ಪಾಠವೆಂದು ಹೇಳಬೇಕಾಗುತ್ತದೆ. ಇದಕ್ಕೆ "ತರಣಿತನಯನ ನೆನೆದಾ" ಎಂಬ ಪಾಠದ ಬೆಂಬಲವೂ ಉಂಟು : "ತರಣಿತನಯಾನನೇಂದು" ಎಂಬುದು "ತರಣಿ ತನಯನ ನೆನೆದಾ" ಎಂಬ ಅಪಪಾಠವಾಗುವುದು ಸಂಭಾವ್ಯ. ಇನ್ನೂ ಮುಖ್ಯವಾದ ಬಾಹ್ಯ ಸಾಕ್ಷ್ಯವೊಂದು 'ತರಣಿತನಯಾನನೇಂದು'ವನ್ನು ಸಮರ್ಥಿಸುತ್ತದೆ. ರನ್ನನ ಪ್ರಕೃತ ಪದ್ಯಕ್ಕೆ ಮೂಲ ಭಟ್ಟನಾರಾಯಣನ 'ವೇಣೀಸಂಹಾರ'ದ ಈ ಪದ್ಯ :

ತರಣಿತನಯಾನನೇಂದು ಸ್ಮರಣಾತ್ ಕ್ಷುಭಿತಃ ಶೋಕಸಾಗರಃ ।
ಬಾಡವೇನೇವ ಶಿಖಿನಾ ಪೀಯತೇ ಕ್ರೋಧಜೇನ ಮೇ ॥ (೫.೧೯)

ದುರ್ಯೋಧನನ ಶೋಕಸಾಗರ ಉಕ್ಕೇರಬೇಕಾದರೆ ಕರ್ಣನ ಮುಖಚಂದ್ರನ ಸ್ಮೃತಿ ಬೇಕೇ ಬೇಕೆಂಬುದು ಗಮನಾರ್ಹ. ಚಂದ್ರನಿಲ್ಲದ ಸಮುದ್ರದ ಉಬ್ಬರ ಶಕ್ಯವಿಲ್ಲ ;

'ಗುಣೌಘ' ಇಲ್ಲಿ ಅಪ್ರಯೋಜಕ. ಆದ್ದರಿಂದ, ರನ್ನನದು ಯಥಾಪತ್ಪಾದ ಅನುವಾದವಷ್ಟೆ.

"ಒಂದೆರಡು ಕಡೆ, ಭಟ್ಟನಾರಾಯಣ ವಿರಚಿತ ವೇಣೀಸಂಹಾರ ನಾಟಕ (ಸಂಸ್ಕೃತ)ದ ಶ್ಲೋಕಗಳ ಪಾಠವನ್ನಾಧರಿಸಿ ತಿದ್ದಿಕೊಂಡಿರುತ್ತೇನೆ" ಎಂದು ಕೆ.ವಿ. ಕೃಷ್ಣಭಟ್ಟರು ತಮ್ಮ 'ಮುನ್ನುಡಿ'ಯಲ್ಲಿ ಹೇಳಿಕೊಂಡಿರುವುದರಿಂದ, ಭಟ್ಟನಾರಾಯಣನ ಪದ್ಯದ ಆಧಾರದಿಂದಲೆ ಅವರು ಮೇಲ್ಕಂಡ ಪದ್ಯಭಾಗವನ್ನು ಪರಿಷ್ಕರಿಸಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ.

ಸ್ವಾರಸ್ಯವೆಂದರೆ, ರನ್ನನ ಪ್ರಸಕ್ತ ಪದ್ಯಕ್ಕೆ ಆಕರ 'ವೇಣೀ ಸಂಹಾರ'ವೆಂಬುದು ತೀ.ನಂ ಶ್ರೀ. ಅವರಿಗೂ ತಿಳಿದಿತ್ತು[1] ಆದರೂ ಅವರು "ತರಣಿತನಯನ ಗುಣೌಘ" ಎಂಬ ಪಾಠವನ್ನು ಸ್ವೀಕರಿಸಿದ್ದು ಆಶ್ಚರ್ಯದ ಸಂಗತಿ. "ತರಣಿತನಯಾಸನೇಂದು" ಎಂಬ ತಿದ್ದುಪಡಿಯನ್ನು ಅವರೇ ಮಾಡಬಹುದಿತ್ತು.[2]

ಇನ್ನೊಂದು ಮಾತು. ಕೆ.ವಿ.ಕೃಷ್ಣಭಟ್ಟರ ಸಂಸ್ಕರಣವನ್ನು ಕುರಿತು ಬಿ.ಎಸ್. ಸಣ್ಣಯ್ಯನವರು "...ಈ ಆವೃತ್ತಿಯಿಂದ ರನ್ನನ ಗದಾಯುದ್ಧದ ಪೂರ್ಣಪಾಠದ ಪುಸ್ತಕ ದೊರೆತ ಸಮಾಧಾನವಾಯಿತೆ ಹೊರತು ಉಳಿದಂತೆ ಯಾವ ರೀತಿಯಲ್ಲಿಯೂ ಹಿಂದಿನದಕ್ಕಿಂತ ಉತ್ತಮವಾಗಲಿಲ್ಲ"[3] ಎಂದು ಅಭಿಪ್ರಾಯಿಸಿರುವುದು ಸಾಧುವಲ್ಲ. ಭಟ್ಟರ ಆವೃತ್ತಿ ಉಳಿದ ಆವೃತ್ತಿಗಳಿಗಿಂತ ಕೆಲವಂಶಗಳಲ್ಲಾದರೂ ಮೇಲೆಂಬುದಕ್ಕೆ "ತರಣಿತನಯಾಸನೇಂದು" ಎಂಬ ಪರಿಷ್ಕೃತ ಪಾಠವೇ ಸಾಕ್ಷಿ.[4]

ಡಾ. ಪಿ. ಪಿ. ಕೃಷ್ಣಕುಮಾರ್

---

1 ಅವರು 'ರನ್ನಕವಿ ಪ್ರಶಸ್ತಿ' (ದ್ವಿ.ಮು.೧೯೭೮) ಯಲ್ಲಿರುವ ತಮ್ಮ 'ಗದಾಯುದ್ಧವೂ ಸ್ವೀಕರಣ ವಿಚಾರವೂ' ಎಂಬ ಲೇಖನದಲ್ಲಿ—ಈಚೆಗೆ ಇದು ಅವರ 'ಕಾವ್ಯಾನುಭವ'ದಲ್ಲೂ ಸೇರಿದೆ– "ಕರ್ಣನನ್ನು ನೆನೆದು ದುರ್ಯೋಧನನು ಗೋಳಾಡುವ ಸಂದರ್ಭದ ಒಂದು ಪದ್ಯದ ಛಾಯೆ ಮಾತ್ರ 'ಗದಾಯುದ್ಧ'ದಲ್ಲಿ ಬರುತ್ತದೆ" ಎಂದು ಹೇಳಿ (ಪು.೭೯). ಅಡಿಟಿಪ್ಪಣಿಯಲ್ಲಿ ಆ ಪದ್ಯಗಳ ಸಂಖ್ಯೆಗಳನ್ನೂ ಉಲ್ಲೇಖಿಸಿದ್ದಾರೆ

2 "ಕುರುಭೂಭೃದ್ವಲ ಕೂಲತೂಲಪವನಂ" ಎಂಬುದನ್ನು ಅವರು 'ವೇಣೀಸಂಹಾರ'ದ ಆಧಾರದಿಂದ "ತೂಲಕಾಲಪವನಂ" ಎಂದು ತಿದ್ದಿರುವುದನ್ನು ನೆನೆಯಬಹುದು. ತೀನಂಶ್ರೀ, ಕೃಷ್ಣಭಟ್ಟ ಇಬ್ಬರ ಆವೃತ್ತಿಗಳೂ ಒಂದೇ ವರ್ಷ (೧೯೪೯) ಪ್ರಕಟವಾದುವು ಎಂಬುದೂ ಗಮನಾರ್ಹ.

3 ರಾಗೌ ಅವರೊಡನೆ ಮಾಡಿರುವ ಸಂಪಾದನದ ಪೀಠಿಕಾಭಾಗ.ಪು xlix.

4 ಈ ಪಾಠಕ್ಕೆ ಒಂದು ಸಣ್ಣ ಪ್ರತಿಬಂಧಕವಿದೆ. "—ಗುಣೌಘ" ಎಂಬುದು ತುಸು ಕಠಿಣವಾದ ಪಾಠ ಅಲ್ಲದೆ, ಅನೇಕ ಹಸ್ತಪ್ರತಿಗಳಲ್ಲಿದೆ. ಆದ್ದರಿಂದ ಅದೇ ಮೂಲ ಪಾಠವಿದ್ದಿರಬಹುದೆ? ಹಾಗಿದ್ದಲ್ಲಿ, ಭಟ್ಟನಾರಾಯಣನ ಪದ್ಯದ ಸುಸಂಬದ್ಧತೆ ರನ್ನನ ಪದ್ಯದಲ್ಲಿಲ್ಲ ಎನ್ನಬೇಕಾಗುತ್ತದೆ. (ಇಲ್ಲಿ ಪಾಠವಿಮರ್ಶೆ, ಸಾಹಿತ್ಯ ವಿಮರ್ಶೆ ಎರಡರ ಪ್ರಶ್ನೆಯೂ ಇದೆ ಎಂಬುದನ್ನು ಸೂಚಿಸುವುದು ಈ ಟಿಪ್ಪಣಿಯ ಆಶಯ)

ಹಸ್ತಪ್ರತಿಯೊಂದರಲ್ಲಿ ಹರದೇಶಿ-ನಾಗೇಶಿ ಹಾಡು

ಹೊಸಪೇಟೆ ತಾಲೂಕಿನಲ್ಲಿ ನಾನು ಸಂಚರಿಸುತ್ತಿದ್ದಾಗ ಸುಮಾರು ನೂರೈವತ್ತು ವರ್ಷಗಳಷ್ಟು ಹಿಂದಿನ ಒಂದು ಕಾಗದದ ಪ್ರತಿಯ ಕೊನೆಯ ಹಾಳೆಯಲ್ಲಿ ಶೃಂಗಾರದ ಹಾಡೊಂದನ್ನು ಬರೆದಿದ್ದುದನ್ನು ಗಮನಿಸಿದೆ. ಆ ಲಿಪಿಯನ್ನು ಓದುವುದು ಅಲ್ಲಲ್ಲಿ ತೊಡಕುಂಟು ಮಾಡಿತು: ಭಾಷೆ ತೀರ ಅಶುದ್ಧ—ಎರಡು ಮೂರು ಬಾರಿ ಅದನ್ನು ಓದುವ ಹೊತ್ತಿಗೆ ಅದೊಂದು ಲಾವಣಿಯೆಂದೂ ಹರದೇಶಿ-ನಾಗೇಶಿ ಹಾಡಿನ ಭಾಗವೆಂದೂ ತಿಳಿಯಿತು. ಲಾವಣಿಗಳ ಅಧ್ಯಯನ ಮಾಡುವ ವಿದ್ವಾಂಸರಿಗೆ ಉಪಯುಕ್ತವಾದೀತೆಂದು ಒಂದು ಹಾಳೆಯ ಎರಡು ಪುಟಗಳಲ್ಲಿ ಬರೆದಿರುವ ಆ ಅಪೂರ್ಣ ಲಾವಣಿ ಭಾಗವನ್ನು ಇಲ್ಲಿ ಕೊಡುತ್ತಿದ್ದೇನೆ. ಟಿಪ್ಪಣಿರೂಪವಾಗಿ ನಾನು ಹೇಳಬೇಕಾದ ಮಾತುಗಳನ್ನು ಕೊನೆಯಲ್ಲಿ ಹೇಳಿದ್ದೇನೆ.

॥ ಶ್ರೀ ಗುರುಭ್ಯೋ ನಮಃ ॥
॥ ಟಬಿನೆ ಪದ ಬರಿವದಕ್ಕೆ ಶುಭಮಸ್ತು ॥

ಕೇಳಲೆ ನಾರಿ ತಿರವೂ ಬೇಡೆ ನಿನ ಮಾರಿ
ಗ್ಯಣಿಯ ನಿಂತು ನೋಡತಾನೆ ನಿನ್ನ ಮಾರಿ
ಕಣ್ಣು ಮೂಗು ಮುರಿಯಬೇಡೆ ನಾರಿ
ಒಂದು ಯೊಳೆದ ವ್ಯಾಲೆ ಆಗುತಿದಿ ಕೈಶರಿ ॥
ಹೊತರೆ ಮುಂಜಾನೆ ಎಳುತಾನೆ
ದಿನ್ನಮ್ಮ ಸಂಜಿಲಿ ಬರುತಾನೆ
ಕೈವಳಗೆ ತಂಬಿಗಿ ನದಿ ಕಡೆಗೆ ಹೋಗುತಾನೆ
ಕೈ ಕಾಲು ಮೂರಿ ತೊಳುವುತಾನೆ
ಕಿವಿ ವಳಗೆ ಚಂಡುಹೂವು ವಾರಿ ಮುಂಡಸ ಯಿಡುತಾನೆ
ಕಣ್ಣು ಕೀರಿಸಿ ರಪ್ಪಿ ಜರ ಹೊಡಿತಾನೆ
ಆಸಬಾಸು ಶೋಕಿಲಿ ಬಂದಾನೆ
ದಿವಾಂಸಕಟದು ಯಲ ಮುರಿಸಿಗೆಂತಾನೆ ॥
ಯೆಂತಾ ರೂಪು ಹೇಳಲಿ ಹೆಂಣೆ
ಆ ಹೆಣ್ಣಿನ ಮೆಯಿ ಮ್ಯೇಲೆ ಕಾರ್ತಿ ಕುಸಂಬಿಯ ಬಣ್ಣೆ
ತಲೆ ಟೆಂಗಿಕಾಯಿ ಯೆದಿ ಸಣ್ಣೆ
ಅವಳ ದ್ಯಾರ ಮ್ಯೇಲೆ ಜೋಡು ದಾಳಿಂಬರ ಹಣ್ಣೆ ॥
ಗೊಂಬಿ ನಡಿಗಿ ನಡವೂತಾಳೆ ಜಾಣ
ಅವಳಿದಿರಿಗೆ ಬಂದರೆ ಹೋಗುತ್ತೈತೆ ನಿನ ಪ್ರಾಣ
ವಳಿ ವಳಿ ಶಾಯಿ ರಂಬತಾನೆ
ಅಕಾಡದೊಳಿ ತಾನು ಪದವ ಮಾಡ್ಯಾನೆ
ಶಿವ ಗ್ಯೇನ ದೊಡ್ಡದು ಕೊಟ್ಟಾನೆ
ನಾಗೇಸಿಗೆ ಭೇದ ಹೇಳಂಬತಾನೆ ॥

ನಾಗೇಸಿಂದೆ ಪೊರಿ ಕೆಟ ಹರದಾಸಿಂದೆ ಹೊರಿ ಮತೆ
ಹಾರಿದಾರೆ ರಿಂದಕೆ ಬಾರೆ
ನಮ್ಮದು ಸಮನ ಕಾಲಗೆ ಬೆಡಿ
ವಂದು ಯೂಳೆದವ್ಯಾಲೆ ಆಗುತೀದಿ ಕೈಯಿ ಶ್ಯರಿ
ನಮ್ಮ ಟಬಿನ ಮ್ಯೇಲೆ ಮುತ್ತಿನ ತುರಾಯು
ಸಿವಾನ ಜರತಾರ ನಾಗೇಸ ಲವುಡಿ ಕೇಳಿ ಲಿಕಾಸಿ ಹೂಡುತಾಳೆ ದೂರ ॥ ೧ ॥

ನಿನ್ನ ಹಶರ (ಹೆಸರ) ಕೇಳಿ ನಾ ಬಂದೆ ದೂರಲಿಂದ ನಾರಿ
ಯೆನುತಾರಿವು ಹೊಳಲಿ ಜಗದೊಳಗೆ ಬಾಳ ಸುಂದರಿ
ಮನಿಲಿದ ಹೊಂಟಳು ನೋಡತ ಗಂಡು
ವೊಂಟುಳು ನೀರಿಗೆ ವಾರಿಗೆ ಗೆಣತೇರಕೂಡ
ನಾಡುತ ಬ್ಯಾಗಬ್ಯಾಗೆ ಮುತ್ತಿನ ಸಿಂಬಿ ರತ್ನದ ಕೊಡ.
...ಕೈಯಿ ಬೀಸುತ ಬೀಸುತ ನಡದಾಳ ಬ್ಯಾಗ ಬ್ಯಾಗೆ ।
ಅವ ಸಿಕಾರವ ನಿಂತಿದ ಬಾವಿಯು ಮ್ಯೇಲೆ
ಕಂಡು ಸಂಣ. ವುದಾಳು, ಮನದಾಗೆ
ಹ್ಯಾಗೆ ಮಾತಾಡಸಲಿ ಅಂಬುತಾಳೆ ಅವನಿಗೆ ।
ಯೆಲ್ಲಿದ ಬಂದೆ ಸಾಜನ ಕುದಿರಿಯೇರಿ
ತೇಜಿಯನೇರಿ ಜಿಲ ನಿನ್ನ ಹೆಸರ ಕೇಳಿ ನಾ ಬಂದೆ
ದೂರಲಿಂದ ನಾರಿ ಯನುತಾರಿ ಮಹೆಳಿಲಿ
ಜಗದೊಳಗೆ ಬಾಳ ಸುಂದರಿ
ಯಿರುವದು ಡಿಳಿ ಪಟ್ಟಣ ದೊರಿ ತಾಂನಂದೆ
ಮನಿಮೂರನಂದೆ ಯಿದಾರ ನಿಮಗೆ
ಆಸರಯಿಲ್ಲಂದೆ ನಂಬಿದ ನಿನಗೆ ಗಾಳಿ ಮಾಡುಬ್ಯಾಡಂದೆ ॥ ಜೀ ॥

ಆ ದೀಪವ ನೋಡಿ ಪತಂಗ ರಿ ಕೊಕ ಮಿರಿ
ಆರುಗಳಿ ಮೋಹಕೆ ಸುಟು ಹೋದಿ ಕೊಕ ಮಿರಿ
ಕುಂನಗಿರಿ ಸಿವಪುರಿದಾಯದಿಂದಾ ಮೇಲಾದ ರಾಣಗೆ
ಪಟ್ಟವ ಕೊಂಡು ಮೊರುಳಾದಾ
ಅಲ್ಲಿ ಶೇಕುಶಾನಿ ತಿಪ್ಪಂಣಗೆ ಹೇಳಿದಾಗ
ದುವಾಲುಗ ದೂತಗೆ ಶಾಲ್ಲು ಪದ ಮಾಡಿದಾ ॥ ಜೀ ॥

ಅಲ್ಲಿ ತೂರಾಯು ದವನು ನಿಂತು ಮೋಜು ಮಾ ಡ ಪಚಮುಸಿಂಗು
ಕಲ್ಯಾಣ ಸವಾಯಿ ಮಾಡೀದಾ ।
ತುರಾಯುದವನು ನಿಂತು ಮೋಜು ಮಾಡಿದಾ ॥ ಜೀ ॥

ಅತ್ತೇರು ಮಾವ ಬಾಭವ ಮ್ಯೆದುನಾದಾರು ಸೇರುದಿಲ್ಲ
ಬಂದು ಹೇಳುತಾಳೊ ಗ್ಯಣಗೆ ನಡಿರಿ ನಾಡು ಮ್ಯಾಲೆ ॥ ಜೀ ॥

ಅತ್ತೇರು ಮಾವ ಮ್ಯೆದುನ ಗಂಡ ಶೇರದಿಲ್ಲ
ಬಂದು ಹೇಳುತಾಳೊ ಗೆಣ್ಯಗೆ ನಡಿತನಿ
ಕೇಳಿ ಜರಾ ಕುಂತೂ ॥ ಜೀ ॥

ನನ್ನ ಮೊನ್ನೇಗೆ ಬಹಳ ಕಾಟ ನೀ ಕೇಳಿರಿ ಗುಣವಂತ ॥ ಜೀ ॥

ನಾಡಿನ ವ್ಯಾಗೆ ... ಹೇಳುತ ನಿ ಕೇಳಿ ಜರಾ ಕುಂತು ।
ಆ ಸಿಯು ಕೊಬರಿ ಬೆಲ್ಲ ... ಕಸಿರೆ ವಡಿಯಿಲ್ಲ ಯಿದರ ಹೊಡತಾ ॥ ಜೀ ॥

ಯೆಲೆರಡಿಕೆ......... (ಅಪೂರ್ಣ)

ಕೈ ಬರಹವನ್ನು ನೋಡಿದರೆ ಒಂದು ನೂರು ವರ್ಷದ ಹಿಂದೆ ಇದು ಲಿಖಿತವಾಗಿದ್ದಿರಬಹುದು. ಎಷ್ಟೋ ಕಡೆ ಹೇಗೆ ಎಲ್ಲಿ ಬಿಡಿಸಿಕೊಂಡು ಸರಿಪಡಿಸಿಕೊಂಡು ಓದಬೇಕೆಂದು ಗೊತ್ತಾಗುವುದಿಲ್ಲ. ಲಭ್ಯ ಪಾಠದ ಮಿತಿಗಳು ಸ್ಪಷ್ಟ.

ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಹರದೇಶಿ-ನಾಗೇಶಿ ಹಾಡುಗಳು ಬಹು ಪ್ರಸಿದ್ಧವಾಗಿವೆ. ಈ ಹೆಸರಿನ ಲಾವಣಿಗಳನ್ನು 'ದಪ್ಪಿನ ಹಾಡು', 'ಗೀಗೀಪದ', 'ಜೀಪದ', 'ಹಾಡಕ್ಕಿ' ಎಂದೂ ಕರೆಯುತ್ತಾರೆ. ಕೆಲವೊಮ್ಮೆ ಇವನ್ನು 'ಶಾಹಿರಿ' ಎಂದೂ ಕರೆಯುತ್ತಾರೆ.[1] 'ಕಲ್ಗಿ-ತುರಾಯಿ' ಹಾಡುಗಳೆಂದೂ ಕರೆಯುತ್ತಾರೆ. ಈ ಹಾಡುಗಳಲ್ಲಿ 'ಹರದೇಶಿ' ಹಾಡುಗಳು ಗಂಡಿನ ಮೇಲ್ಮೆಯನ್ನು ಎತ್ತಿ ಹಿಡಿದರೆ, 'ನಾಗೇಶಿ' ಹಾಡುಗಳು ಹೆಣ್ಣಿನ ಮಹಿಮೆಯನ್ನು ಕೊಂಡಾಡುತ್ತವೆ. ಆ ಕಾರಣದಿಂದ "ಹೆಣ್ಣು-ಗಂಡಿನ ಹಾಡು" ಎಂಬ ಹೆಸರೂ ಇವಕ್ಕುಂಟು.[2] ಹರದೇಶಿ ಹಾಡುಗಳು ಶಿವಪರವಾಗಿದ್ದರೆ ನಾಗೇಶಿ ಹಾಡುಗಳು ಶಕ್ತಿಪರ. ಹಾಡುಗಾರರು ಶಿವನ (ಗಂಡಿನ), ಶಕ್ತಿಯ (ಹೆಣ್ಣಿನ) ಶ್ರೇಷ್ಠತೆಯನ್ನು ಬೇರೆ ಬೇರೆ ರೀತಿಗಳಲ್ಲಿ ಸ್ಪರ್ಧಾರೂಪವಾದ ಹಾಡುಗಳನ್ನು ಹೇಳುತ್ತ ಜನರನ್ನು ರಂಜಿಸುತ್ತಾರೆ. ಅಂತಿಮವಾಗಿ ಶಿವ-ಶಕ್ತಿಯರು ಬೇರೆ ಅಲ್ಲ ಎಂಬ ಸಮನ್ವಯದೊಡನೆ ಹಾಡುಗಳು ಮುಕ್ತಾಯವಾಗುತ್ತವೆ.

ಮೇಲೆ ಪ್ರಕಟವಾಗಿರುವ ಹಾಡಿನಲ್ಲಿ ಶಾಯಿರಿ, ನಾಗೇಶಿ, ಹರದೇಶಿ, ತುರಾಯಿ ಪದಗಳು ಬಂದಿದೆ. 'ಕಲ್ಗಿ' ಪದವು ಹಾಡಿನ ಉಳಿದ ಭಾಗದಲ್ಲಿ ಬಂದಿರಬಹುದು. ಈ ಹಾಡನ್ನು ಬರೆದ ಶಿಪ್ಪಣ್ಣನು ಹರದೇಶಿ (ಅಥವಾ ತುರಾಯಿ) ಪಕ್ಷದವನು. ಹೆಣ್ಣನ್ನು ಧಿಕ್ಕರಿಸುತ್ತ, ಹೆಣ್ಣು ಹೇಗೆ ಗಂಡನ್ನು ತನ್ನತ್ತ ತನ್ನ ವೈಯಾರದಿಂದ ಸೆಳೆದುಕೊಂಡು ಪಾಪಕಾರ್ಯಕ್ಕೆ ಎಳೆಯುತ್ತಾಳೆ ಎಂಬುದರ ಚಿತ್ರ ಮೇಲಿನ ಹಾಡಿನಲ್ಲಿದೆ. ಈ ಹರದೇಶಿ (ತುರಾಯಿ) ಹಾಡಿಗೆ ಸವಾಲಾಗಬಲ್ಲ ನಾಗೇಶಿ (ಕಲ್ಗಿ) ಹಾಡು ಬೇರೆ ಹಾಳೆಗಳಲ್ಲಿದ್ದಿರಬಹುದು. ಆ ಹಾಳೆಗಳು ಸಿಕ್ಕಿಲ್ಲ. 'ಟಬಿನೆ ಪದ' ಮಾತಿನ ಅರ್ಥ ತಿಳಿಯದು ('ಟಬಿನೆ' ಎಂಬುದು 'ಡಪ್ಪಿನ-ದಪ್ಪಿನ'

---

1. (ಸಂ.) ಬಿ. ಬಿ. ಹೆಂಡಿ, ಎಂ. ಜಿ. ಬಿರಾದಾರ, ಎಂ. ಎಸ್. ಲಠ್ಠೆ : ಹರದೇಶಿ–ನಾಗೇಶಿ (ಗುಲ್ಬರ್ಗಾ ವಿಶ್ವವಿದ್ಯಾಲಯ. 1983) ಪ್ರಸ್ತಾವನೆ, ಪು. viii.
2. ಅದೇ.

ಎಂಬುದರ ಅಪಲಿಖಿತವೇ? ತಿಳಿಯದು. 'ದಪ್ಪಿನ' ಪದ ಹರದೇಶಿ-ನಾಗೇಶಿ ಹಾಡನ್ನು ಸೂಚಿಸುತ್ತದೆ)

ಹರದೇಶಿ-ನಾಗೇಶಿ ಹಾಡುಗಳು ಈಗಾಗಲೇ ಸಾಕಷ್ಟು ಪ್ರಕಟವಾಗಿರುವುದಲ್ಲದೆ ಆ ಬಗ್ಗೆ ಲೇಖನಗಳೂ ಬಂದಿವೆ.[3] ಹೆಚ್ಚಿನ ಅಧ್ಯಯನ ಮಾಡುವವರಿಗಾಗಿ ಮೇಲಿನ ಪದ್ಯಭಾಗವನ್ನು ಪ್ರಕಟಿಸಿದ್ದೇನೆ.

ಡಾ|| ಎಂ. ಚಿದಾನಂದಮೂರ್ತಿ

ಇಮ್ಮಡಿ ಮುರಿಗಾ ಗುರುಸಿದ್ಧಸ್ವಾಮಿಗಳ 'ಸ್ಕಂದ ಕಲ್ಯಾಣಾ'ಂತರ್ಗತ ಕಗ್ಗದ ವೀರಮಾಸ್ತೇರ ದ್ವಿಪದಿ ಸ್ತೋತ್ರ

ಚಿತ್ರದುರ್ಗದಲ್ಲಿನ ಬೃಹನ್ಮಠದ ದ್ವಿತೀಯ ಪೀಠಾಧೀಶರಾದ ಇಮ್ಮಡಿ ಗುರುಸಿದ್ಧಸ್ವಾಮಿಗಳು ಶ್ರೀ ಮುರಿಗಾಶಾಂತವೀರ ಸ್ವಾಮಿಗಳ (?–1703) ಕರಕಂಜಾತರು. ಕನ್ನಡ–ಸಂಸ್ಕೃತಗಳೆರಡರಲ್ಲೂ ಪ್ರಗಲ್ಭ ಪಾಂಡಿತ್ಯವನ್ನು ಗಳಿಸಿ ಉಭಯ ಭಾಷೆಗಳಲ್ಲೂ ಕೃತಿರಚನೆ ಮಾಡಿದ್ದಾರೆ.[1] ಇವರ ಅಪ್ರಕಟಿತ ಕನ್ನಡ ಕೃತಿಗಳಲ್ಲಿ ಚೌಪದಿಯಲ್ಲಿನ 'ಸ್ಕಂದ ಕಲ್ಯಾಣ' ಒಂದಾಗಿದ್ದು[2] ಇದರಲ್ಲಿನ 'ಕಗ್ಗದ ವೀರಮಾಸ್ತೇರ ದ್ವಿಪದಿ ಸ್ತೋತ್ರ' ಭಾಗವನ್ನು[3] ಈ ಮುಂದೆ ಪರಿಷ್ಕರಿಸಿ ಕೊಡಲಾಗಿದೆ. ಇದರಲ್ಲಿ 11 ತ್ರಿಪದಿಗಳಿವೆ. ಪ್ರಸ್ತುತ ಕೃತಿ ಹುಬ್ಬಳ್ಳಿಯ 3000 ಮಠದ ಸಂಗ್ರಹದಲ್ಲಿನ 65ನೆಯ ಕ್ರಮಾಂಕದ ಓಲೆ ಕಟ್ಟಿನಲ್ಲಿದೆ. (ಗರಿ : 104 ಹಿಂ–105ಮುಂ) ಇದನ್ನು ಪ್ರಕಟಿಸಲು ಒಪ್ಪಿಗೆ ನೀಡಿದ ಶ್ರೀಗಳಾದ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರಿಗೆ ನಾನು ಚಿರಋಣಿ

– ಅಡಿಟಿಪ್ಪಣಿಗಳು –

(1) ಇಮ್ಮಡಿ ಗುರುಸಿದ್ಧರ ಇತಿ-ವೃತ್ತ, ಕೃತಿಗಳು ಇತ್ಯಾದಿಗಳ ವಿವರಣೆಯ ಬಗೆಗೆ ಡಾ. ವಿದ್ಯಾಶಂಕರರಿಂದ ಸಂಪಾದಿತವಾದ 'ಇಮ್ಮಡಿ ಮುರಿಗಾ ಗುರುಸಿದ್ಧ ಶಿವಯೋಗಿಯ ಕೃತಿಗಳು (ಸಂಪುಟ–೧)ರಲ್ಲಿನ 'ಪೀಠಿಕೆ' ನೋಡಿ. ಚಿತ್ರದುರ್ಗ, 1978.

(2) ಇದರ ಮೊದಲಸಂಧಿ "ಚಿನ್ಮೂಲಾದ್ರಿ ಚೇತನ" (ಚಿತ್ರದುರ್ಗ ಬೃಹನ್ಮಠ, ಚಿತ್ರದುರ್ಗ, 1989) ದಲ್ಲಿ ಅಚ್ಚಾಗಿದೆ.

(3) ಕಗ್ಗದ ನಿಷ್ಪತ್ತಿ, ಪ್ರಯೋಗಗಳು ಇವುಗಳ ಬಗೆಗೆ ಡಾ|| ಎಂ. ಚಿದಾನಂದಮೂರ್ತಿಯವರ 'ಕಗ್ಗ'; ಪದದ ವ್ಯುತ್ಪತ್ತಿ ಮತ್ತು ಅರ್ಥ ವ್ಯತ್ಯಾಸ (ಸಾಧನೆ 17. 3–4, 1988, ಪು. 281–85) ನೋಡಿ.

---

3. ಉದಾಹರಣೆಗೆ, ಬಸವರಾಜ ಪೋಲಿಸ ಪಾಟೀಲ: 'ಹರದೇಶಿ ನಾಗೇಶಿ' ಜಾನಪದ ಭಾರತಿ, (ಗುಲ್ಬರ್ಗಾ. 198೯) ಪು. 19-45.

ಶ್ರೀ ಸ್ವಾಮಿಯುವರು ನಿರೂಪಿಸಿದ 'ಸ್ಕಂದಕಲ್ಯಾಣ' ದೊಳಗಣ
ಕಗ್ಗದ ವೀರಮಾಸ್ತೀರ

ದ್ವಿಪದಿ ಸ್ತೋತ್ರವಂ ಬರೆವುದಕ್ಕೆ ಶುಭಮಸ್ತು
ಬಾಳು ಬಾಳು ಬಾಳು ಬಾಳು ರಕ್ಕಸರಾಯು
ಕಾಳಗದೊಳಗೆಯುಸುಗಳೆದು ಸಗ್ಗದೊಳು
ಪಾಳೆಯು ಬಿಟ್ಟು ಸುಖಿಯಾಗಿ ॥ ೧ ॥

ನಲ್ಲನೆ ನೀನೆನ್ನ ಸೊಲ್ಲನಾಲಿಸು ಬೇಗ
ಮಲ್ಲಿಕಾರ್ಜುನನ ಮಗನೊಡನೆ
ಮಲ್ಲಿಕಾರ್ಜುನನ ಮಗನೊಡನೆ ಸೆಣಸುತ್ತ
ನಿಲ್ಲದೆ ಸಗ್ಗಕ್ಕೆ ಗಮಿಸುವರೆ ॥ ೨ ॥

ಅತ್ತೆ ಮಾವಂದಿರ ಗೊತ್ತ ನಾವರಿವೆವು
ಚಿತ್ರವಲ್ಲಭನೆ ದಯದಿಂದ
ಚಿತ್ರವಲ್ಲಭನೆ ದಯದಿಂದ ನಿನ್ನತ್ತ
ಎತ್ತಿಕೊಂಡೊಯ್ದು ಬಿಡದಿರು ॥ ೩ ॥

ನಂಟರ ನಾಲ್ವರ ನಂಬಿ ಜೀವಿವರಲ್ಲ
ಬಂಟತನದಿ ನೀವು ಕದನದಿ
ಬಂಟತನದಿ ನೀವು ಕದನದಿ ಮಡಿಯೆ । ನಾ
೧ ೧
ಉಂ [ಟಿ] ಲ್ಲ ನೀವೆ ತಿಳಿವುದು ॥ ೪ ॥

ತಂದೆ ತಾಯ್ಗಳ ಹಂಗುವೆಂದುವುವೆಮಗಿಲ್ಲ
ಸಂದಿಲ್ಲದೆ ನಿಮ್ಮ ಕೈವಿಡಿದ
ಸಂದಿಲ್ಲದೆ ನಿಮ್ಮ ಕೈವಿಡಿದ ದಿನತೊಡಗಿ
ನಿಂದೆವು ವೀರಸಗ್ಗದ ನಡುವೆ ॥ ೫ ॥

ಸೊಕ್ಕಿದ ದಿವಿಜರ ಉಕ್ಕನೊಂದೇವೇಳೆ
ಬೊಕ್ಕ ಬೋರಗೆ ಹಾಕಿ ರಣದಲ್ಲಿ
ಬೊಕ್ಕ ಬೋರಗೆ ಹಾಕಿ ರಣದಲ್ಲಿ ಜಯಿಸಿದ
ಚಿಕ್ಕ ಹರೆಯದ ನಲ್ಲ ಸುಖಿಬಾಳು ॥ ೬ ॥

ಆಱುಮೊಗನ ವೈರಿಯು ನೆಱೆ ಜಯಿಸಲಿಲ್ಲೆಂಬ
ಮಱೆಯು ಮಾತೇಕೆ ಜಗದಲ್ಲಿ
ಮಱೆಯು ಮಾತೇಕೆ ಜಗದಲ್ಲಿ ಸಗ್ಗದೊಳು
ಮೆಱೆವುದೆ ಸಾಕ್ಷಿ ಸಟೆಯಲ್ಲ ॥ ೭ ॥

ತಿದ್ದಿದ ಮೀಸೆಯು ಮುದ್ದುವೊಗದ ಚತುರ
ಸುದ್ದಿಯು ಹೇಳದೆ ಸಗ್ಗಕ್ಕೆ
ಸುದ್ದಿಯು ಹೇಳದೆ ಸಗ್ಗಕ್ಕೆ ಹೋದರೆ
ಎದ್ದು ಬಾರದೆ ನಿನ್ನ ಬಿಡುವೆನೆ ॥ ೮ ॥

೧ ೧
ತೊಂಬೆಗಡುಕಿನ ಕಿವಿಯು ತಂಬುಲದ ಬಾಯ್ದೆರೆ [ಯು]
ಬೆಂಬಿಡದೆ ಬೇವಿನ ಕುರುಳುಗಳ
ಬೆಂಬಿಡದೆ ಬೇವಿನ ಕುರುಳುಗಳ ನಲ್ಲನ
ಹಂಬಲಿಂದಗ್ಗಿಯು ಹೊಗುವೆ ॥ ೯ ॥

ಬಾಳು ಬಾಳೆಲೆ ಕತ್ತಿ ಬಾಳು ನಿಂಬೆಯು ಹಣ್ಣೆ
ಬಾಳೆನ್ನ ಕೈಯ್ಯ ಕೈಪಿಡಿಯೆ
ಬಾಳೆನ್ನ ಕೈಯ್ಯ ಕೈಪಿಡಿಯೆ ಮಾವನಮಗನೆ
ಬಾಳು ಸಗ್ಗದಲಿ ಬರುತ್ತೈದೇನೆ ॥ ೧೦ ॥

ಗಂಡರ ಮೀಟಿದ ತುಂಡು ತೊಂಡು ತೊತ್ತೇರ ಮೂಗ
ಖಂಡಿಸಿ ಸಗ್ಗವನು ಪೊಕ್ಕು
ಖಂಡಿಸಿ ಸಗ್ಗವನು ಪೊಕ್ಕುವೆಮ್ಮಯು
ಗಂಡರ ಕೂಡಿ ಸುಖಿಸುವೆವು ॥ ೧೧ ॥

ಕಗ್ಗದ ತ್ರಿಪದಿ ಸಂಪೂರ್ಣ ಮಂಗಳ ಮಹಾ ಶ್ರೀ

(ಸಂ) ಎಸ್. ಶಿವಣ್ಣ

---

೧ ದು ೧

ಪ್ರಧಾನ ಸಂಪಾದಕರ ಮಾತು

'ಸಾಧನೆ' ತ್ರೈಮಾಸಿಕ ನಿಯತಕಾಲಿಕದ 18ನೇ ಸಂಪುಟದ ಸಂಚಿಕೆಗಳು ಪ್ರಕಟವಾಗುತ್ತಿರುವುದು ಅನಿವಾರ್ಯ ಕಾರಣಗಳಿಂದಾಗಿ ತಡವಾಗಿದೆಯಾದ್ದರಿಂದ ಈ ಬಾರಿ ಮೊದಲನೇ ಹಾಗೂ ಎರಡನೇ ಸಂಚಿಕೆಗಳನ್ನು (ಜನವರಿ–ಜೂನ್ 1989) ಒಟ್ಟಾಗಿ 'ಸಂಯುಕ್ತ ಸಂಚಿಕೆ' ಯಾಗಿ ತರುತ್ತಿದ್ದೇವೆ. ಹಾಗೂ ಇದೇ ಸಂಪುಟದ ಮುಂದಿನ ಎರಡು ಸಂಚಿಕೆಗಳನ್ನೂ (ಜುಲೈ–ಡಿಸೆಂಬರ್ 1989) ಸಂಯುಕ್ತ ಸಂಚಿಕೆಯಾಗಿಯೇ ತರಲಾಗುವುದು. ಅನಂತರದ ಸಂಚಿಕೆಗಳನ್ನು ಪ್ರತ್ಯೇಕವಾಗಿ ನಿಗದಿತ ಅವಧಿಯೊಳಗೆ ಪ್ರಕಟಿಸುತ್ತೇವೆ ಎಂಬ ನಂಬಿಕೆ ನಮಗಿದೆ. ಓದುಗರು ಇದನ್ನು ಗಮನಿಸಬೇಕಾಗಿ ವಿನಂತಿ.

ಕಳೆದ ಜುಲೈ 1986 ರಿಂದ ಡಿಸೆಂಬರ್ 88ರ ವರೆಗೆ ಸಂಪಾದಕ ಮಂಡಲಿಯ ಸದಸ್ಯರಾಗಿದ್ದು 'ಸಾಧನೆ' ಯು ಅಚ್ಚುಕಟ್ಟಾಗಿ ಹೊರಬರುವಂತೆ ಶ್ರಮವಹಿಸಿದ ಶ್ರೀ ಎಸ್. ಶಿವಣ್ಣ, ಡಾ: ಎನ್.ವಿ.ವಿಮಲ ಹಾಗೂ ಡಾ: ಎಸ್. ಚಂದ್ರಶೇಖರ್ ಈ ಮೂವರು ಸಂಪಾದಕರಿಗೂ ವಿಶ್ವವಿದ್ಯಾಲಯದ ಪರವಾಗಿ ನಮ್ಮ ಕೃತಜ್ಞತೆಗಳು. ಹಾಗೆಯೇ, ಈ ಸಂಪುಟದಿಂದ ಮುಂದಕ್ಕೆ ಡಾ: ಕೆ.ಪಿ. ಭಟ್, ಡಾ: ಬಸವರಾಜ ಸಿ. ಕಲ್ಗುಡಿ ಹಾಗೂ ಡಾ: ಎಂ. ಎಸ್. ತಿಮ್ಮಪ್ಪ–ಅವರುಗಳು ಸಂಪಾದಕತ್ವದ ಹೊಣೆ ವಹಿಸಿಕೊಳ್ಳಲು ಒಪ್ಪಿಕೊಂಡಿರುವುದು ಸಂತೋಷದ ಸಂಗತಿ.

ಈ ಸಂಚಿಕೆಯ ಲೇಖಕರು

ಡಾ॥ ಬಿ. ಆರ್. ಹಿರೇಮಠ ಮತ್ತು ಡಾ॥ ಎಸ್. ಪಿ. ಪಾಟೀಲ್	ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ–3
ಡಾ॥ ಎಂ. ಚಿದಾನಂದಮೂರ್ತಿ	ಪ್ರಾಧ್ಯಾಪಕರು ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ
ಡಾ॥ ಬಸವರಾಜ ಸಬರದ	ಅಧ್ಯಾಪಕರು ಕನ್ನಡ ಅಧ್ಯಯನ ಸಂಸ್ಥೆ ಗುಲ್ಬರ್ಗಾ ವಿಶ್ವವಿದ್ಯಾಲಯ ಗುಲ್ಬರ್ಗಾ–585 106
ಡಾ॥ ಕೆ. ಕೇಶವ ಶರ್ಮ	ಕನ್ನಡ ಅಧ್ಯಯನ ವಿಭಾಗ ಕುವೆಂಪು ವಿಶ್ವವಿದ್ಯಾಲಯ ಬಿ. ಆರ್. ಪ್ರಾಜೆಕ್ಟ್–577 115
ಡಾ॥ ವಿಲಿಯಂ ಮಾಡ್ತ	ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ–3
ಡಾ॥ ಚಂದ್ರಮೌಳಿ ನಾಯ್ಕರ	ಸಂಸ್ಕೃತ–ಪ್ರಾಕೃತ ವಿಭಾಗ ಕರ್ನಾಟಕ ಕಲಾ ಮಹಾ ವಿದ್ಯಾಲಯ ಧಾರವಾಡ
ಡಾ॥ ವಿ. ಜಿ. ಪೂಜಾರ	ಕನ್ನಡ ಅಧ್ಯಯನ ಸಂಸ್ಥೆ ಗುಲ್ಬರ್ಗಾ ವಿಶ್ವವಿದ್ಯಾಲಯ ಗುಲ್ಬರ್ಗಾ–585 106
ಡಾ॥ ಹಂಪ ನಾಗರಾಜಯ್ಯ	ಪ್ರಾಧ್ಯಾಪಕರು ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ

ಡಾ॥ ಟಿ. ಶ್ರೀವೆಂಕಟರಮಣ	ಸಂಖ್ಯಾಕಲನ ವಿಜ್ಞಾನ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ
ಡಾ॥ ಮಂಸು ಕೃಷ್ಣಮೂರ್ತಿ	ಹಿಂದಿ ಅಧ್ಯಯನ ಹಾಗೂ ಸಂಶೋಧನ ವಿಭಾಗ ಮಾನಸಗಂಗೋತ್ರಿ, ಮೈಸೂರು-6
ಡಾ॥ ಎಂ. ಎ. ಜಯಚಂದ್ರ	ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿಜಯನಗರ ಬಡಾವಣೆ ಬೆಂಗಳೂರು-560 044
ಶ್ರೀ ಶಿವರಾಮಯ್ಯ	ಕನ್ನಡ ವಿಭಾಗ ಆರ್. ಸಿ. ಕಾಲೇಜು, ಬೆಂಗಳೂರು-560 001
ಡಾ॥ ಜೆ. ಎಂ. ನಾಗಯ್ಯ	ಕೇರಾಫ್ ಡಾ॥ ಎಂ. ಎಂ. ಕಲಬುರ್ಗಿ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ-3
ಡಾ॥ ಶಂಕರ ಮೊಕಾಶಿ ಪುಣೇಕರ್	ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ ಮೈಸೂರು-6
ಡಾ॥ ಸಿ. ಪಿ. ಕೃಷ್ಣಕುಮಾರ್	ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ ಮೈಸೂರು-6
ಡಾ॥ ಎಂ. ಚಿದಾನಂದಮೂರ್ತಿ	ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-560 056
ಶ್ರೀ ಎಸ್. ಶಿವಣ್ಣ	ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-560 056